ಭಾನುವಾರ, ಡಿಸೆಂಬರ್ 15, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 346 | ಪುಟ 18
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಕನ್ನಡ ಸಾಹಿತ್ಯ ಸಮ್ಮೇಳನ ಮತ್ತು ಕಸಾಪ ಸ್ವರೂಪ ಕುರಿತಾದ ಒಳನೋಟ

'ರಾತ್ರಿ ಇಡೀ ಜೈಲು: ಕಾನೂನು ಕ್ರಮ' 9
ದತ್ತ ಜಯಂತಿ: ಪಾದುಕೆ ದರ್ಶನ ಪಡೆದ ಭಕ್ತ ಸಾಗರ
'ಒಂದೇ ಚುನಾವಣೆ': ಮಸೂದೆ ಮಂಡನೆ ನಾಳೆ 9
'ಅಧಿಕ ಕೆಲಸದ ಒತ್ತಡ –ಸರ್ಕಾರವನ್ನು ಪ್ರಶ್ನಿಸಿ' 7

ಸದನದಲ್ಲಿ 'ಸಂವಿಧಾನ ಸಮರ'

ಲೋಕಸಭೆಯಲ್ಲಿ 'ಭಾರತದ ಸಂವಿಧಾನದ 75 ವರ್ಷಗಳ ವೈಭವಯುತ ಪ್ರಯಾಣ' ಕುರಿತ ಚರ್ಚೆಯಲ್ಲಿ ಪಾಲ್ಗೊಂಡ ರಾಹುಲ್ ಗಾಂಧಿ, ಬಿಜೆಪಿ ವಿರುದ್ಧ ತೀಕ್ಷ್ಣ ವಾಗ್ದಾಳಿ ನಡೆಸಿದರು. ನೆಹರೂ ಕುಟುಂಬದಿಂದಲೇ ಸಂವಿಧಾನವನ್ನು ದುರ್ಬಲಗೊಳಿಸುವ ಪ್ರಯತ್ನ ನಡೆದಿದೆ ಎಂದು ಮೋದಿ ಪ್ರತಿ ದಾಳಿ ನಡೆಸಿದರು

'ಸಂವಿಧಾನದ ಮೇಲೆ ಕಾಂಗ್ರೆಸ್ ಪ್ರಹಾರ'

ಪ್ರಜಾವಾಣಿ ವಾರ್ತೆ

ನವದೆಹಲಿ: ನೆಹರೂ ಕುಟುಂಬ ಹಾಗೂ ಕಾಂಗ್ರೆಸ್ ವಿರುದ್ಧ ಟೀಕಾಪ್ರಹಾರ ಮುಂದುವರಿಸಿದ ಪ್ರಧಾನಿ ನರೇಂದ್ರ ಮೋದಿ, 'ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ಸಂವಿಧಾನವನ್ನು ಬಲಪಡಿಸಿದೆ. ಆದರೆ, ರಕ್ತದ ರುಚಿ ಕಂಡಿರುವ ಕಾಂಗ್ರೆಸ್ ಪಕ್ಷವು ಸಂವಿಧಾನದ ಮೇಲೆ ನಿರಂತರ ಪ್ರಹಾರ ನಡೆಸಿ ಗಾಯಗೊಳಿಸಿದೆ' ಎಂದು ವಾಗ್ದಾಳಿ ನಡೆಸಿದರು.

ಲೋಕಸಭೆಯಲ್ಲಿ 'ಭಾರತದ ಸಂವಿಧಾನದ 75 ವರ್ಷಗಳ ವೈಭವಯುತ ಪ್ರಯಾಣ' ಕುರಿತು ಎರಡು ದಿನಗಳ ಕಾಲ ನಡೆದ ಚರ್ಚೆಗೆ ಪ್ರಧಾನಿ ಅವರು ಶನಿವಾರ ಸಂಜೆ ಉತ್ತರ ನೀಡಿದರು. ಸುಮಾರು 110 ನಿಮಿಷಗಳ ಭಾಷಣದಲ್ಲಿ ಅವರು ತಮ್ಮ ಸರ್ಕಾರದ ಸಾಧನೆಗಳು ಹಾಗೂ ಕಾಂಗ್ರೆಸ್ ವಿರುದ್ಧ ಟೀಕೆಗೆ ಬಹುತೇಕ ಸಮಯ ಮೀಸಲಿಟ್ಟರು. ಮೋದಿ ಭಾಷಣದ ಉದ್ದಕ್ಕೂ ಇಂಡಿಯಾ ಮೈತ್ರಿಕೂಟದ ಸದಸ್ಯರು ಗದ್ದಲ ಎಬ್ಬಿಸಿದರು.

'ಕಾಂಗ್ರೆಸ್‌ನ ನೆಹರೂ–ಗಾಂಧಿ ಕುಟುಂಬವು ಪ್ರತಿ ಹಂತದಲ್ಲೂ ಸಂವಿಧಾನದ ಮೇಲೆ ದಾಳಿ ನಡೆಸಿದೆ. ಅಂತಹ ಒಂದು ಅವಕಾಶವನ್ನೂ ಅದು ಬಿಡಲಿಲ್ಲ' ಎಂದು ಮೋದಿ ಕಿಡಿಕಾರಿದರು.



9

'ಕೆಟ್ಟ ಪರಂಪರೆಗೆ ನೆಹರೂ ನಾಂದಿ'

'ಆರು ದಶಕಗಳಲ್ಲಿ 75 ಬಾರಿ ಸಂವಿಧಾನಕ್ಕೆ ತಿದ್ದುಪಡಿ ತರಲಾಗಿದೆ. ಇದರ ಬೀಜವನ್ನು ನೆಟ್ಟವರು ಮೊದಲ ಪ್ರಧಾನಿ. ಈ ಕೆಟ್ಟ ಪರಂಪರೆಯನ್ನು ಇಂದಿರಾ ಗಾಂಧಿ ಮುಂದುವರಿಸಿದರು. 1971ರ ಸುಪ್ರೀಂ ಕೋರ್ಟ್ ತೀರ್ಪನ್ನು ಕಡೆಗಣಿಸಿ, ಸಂಸತ್ತಿಗೆ ಸಂಪೂರ್ಣ ಅಧಿಕಾರ ನೀಡಲು ನ್ಯಾಯಾಂಗದ ರೆಕ್ಕೆಗಳನ್ನು ಕತ್ತರಿಸಿದರು. ಜನರಿಂದ ತಿರಸ್ಕೃತರಾದ ಸಂದರ್ಭದಲ್ಲಿ ಕುರ್ಚಿ ಉಳಿಸಿಕೊಳ್ಳಲು 1975ರಲ್ಲಿ ತುರ್ತು ಪರಿಸ್ಥಿತಿ ಹೇರಿದರು. ಶಾ ಬಾನೋ ಪರವಾಗಿ ನೀಡಿದ ಸುಪ್ರೀಂ ಕೋರ್ಟ್‌ನ ಆದೇಶವನ್ನು ರಾಜೀವ್ ಗಾಂಧಿ ತಿರಸ್ಕರಿಸಿದರು. ಬದಲಿಗೆ ಅವರು ಮತ ಬ್ಯಾಂಕ್ ರಾಜಕೀಯವನ್ನು ಅನುಸರಿಸಿದರು' ಎಂದು ಟೀಕಿಸಿದರು.

ಆ ಕುಟುಂಬದ ಮುಂದಿನ ಪೀಳಿಗೆ ಕೂಡ ಅದೇ ಆಟದಲ್ಲಿದೆ ಎಂದು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮತ್ತು ಅವರ ಸಹೋದರಿ ಪ್ರಿಯಾಂಕಾ ಗಾಂಧಿ ವಾದ್ರಾ ವಿರುದ್ಧ ವಾಗ್ದಾಳಿ ನಡೆಸಿದರು. ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಅಹಂಕಾರಿ ವ್ಯಕ್ತಿಯೊಬ್ಬರು ಸಂಪುಟದ ನಿರ್ಧಾರ ಪ್ರತಿ ಹರಿದು ಹಾಕಿದರು ಎಂದು ರಾಹುಲ್ ಗಾಂಧಿ ಅವರನ್ನು ಹೆಸರಿಸದೆ ಪ್ರಧಾನಿ ಟೀಕಿಸಿದರು.

'ಸಾವರ್ಕರ್‌ಗೆ ಬಿಜೆಪಿಯಿಂದಲೇ ಅಪಹಾಸ್ಯ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ಸಂವಿಧಾನದಲ್ಲಿ ಭಾರತೀಯತೆ ಏನೂ ಇಲ್ಲ' ಎಂಬ ವೀರ ಸಾವರ್ಕರ್ ಅವರ ಹೇಳಿಕೆಯನ್ನು ಉಲ್ಲೇಖಿಸಿದ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು, 'ಸಂವಿಧಾನವನ್ನು ರಕ್ಷಿಸುವಂತಹ ಮಾತುಗಳನ್ನಾಡುವ ಮೂಲಕ ಬಿಜೆಪಿಯು ಸೈದ್ಧಾಂತಿಕ ಮಾರ್ಗದರ್ಶಕ ಸಾವರ್ಕರ್ ಅವರನ್ನೇ ನಿಂದಿಸುತ್ತಿದೆ ಹಾಗೂ ಅಪಹಾಸ್ಯ ಮಾಡುತ್ತಿದೆ' ಎಂದು ವ್ಯಂಗ್ಯವಾಡಿದರು.

ಲೋಕಸಭೆಯಲ್ಲಿ 'ಸಂವಿಧಾನದ ಕುರಿತು ನಡೆದ ಚರ್ಚೆಯಲ್ಲಿ ಶನಿವಾರ ಪಾಲ್ಗೊಂಡು 26 ನಿಮಿಷ ಕಾಲ ಮಾತನಾಡಿದರು.

'ಸಂವಿಧಾನದಲ್ಲಿ ಭಾರತೀಯತೆ ಏನೂ ಇಲ್ಲ. ಇದರ ಬದಲು ಹಿಂದೂ ಸಂಸ್ಕೃತಿಯ ಮನುಸ್ಮೃತಿಯನ್ನು ಆಯ್ಕೆ ಮಾಡಿಕೊಳ್ಳುತ್ತೇನೆ. ವೇದದ ನಂತರ ಮನುಸ್ಮೃತಿಯನ್ನು ಹೆಚ್ಚಾಗಿ ಹಿಂದೂಗಳು ಆರಾಧಿಸುತ್ತಾರೆ' ಎಂದು ಸಾವರ್ಕರ್ ಹೇಳಿದ್ದರು.



9

'ಹೆಬ್ಬೆರಳು ಕಿತ್ತ ಮೋದಿ ಸರ್ಕಾರ'

ಏಕಲವ್ಯ ತನ್ನ ಬಲಗೈ ಹೆಬ್ಬೆರಳನ್ನು ಪ್ರಬಲ ವರ್ಗದ ದ್ರೋಣಾಚಾರ್ಯರಿಗೆ ತ್ಯಾಗ ಮಾಡಿರುವ ಕಥೆಯನ್ನು ಉಲ್ಲೇಖಿಸಿದ ರಾಹುಲ್, 'ಭಾರತದ ಯುವಕರು, ರೈತರು ಮತ್ತು ಬಡವರ ವಿರುದ್ಧ ಲಾಠಿ ಬೀಸಿ ಹೆಬ್ಬೆರಳು ತ್ಯಾಗ ಮಾಡುವಂತೆ ಬಿಜೆಪಿ ಮಾಡುತ್ತಿದೆ' ಎಂದು ವಾಗ್ದಾಳಿ ನಡೆಸಿದರು.

'ನೀವು ಅದಾನಿ ಅವರಿಗೆ ಧಾರಾವಿಯನ್ನು ನೀಡಿದಾಗ, ನೀವು ಅಲ್ಲಿನ ಸಣ್ಣ ಹಾಗೂ ಮಧ್ಯಮ ಉದ್ಯಮಿಗಳ ಹೆಬ್ಬೆರಳನ್ನು ಕತ್ತರಿಸಿದ್ದೀರಿ. ನೀವು ಅಗ್ನಿವೀರ್ ಯೋಜನೆಯನ್ನು ಕಾರ್ಯಗತಗೊಳಿಸಿದಾಗ, ಮುಂಜಾನೆ ನಾಲ್ಕು ಗಂಟೆಗೆ ಎದ್ದು ಪರೀಕ್ಷೆಗೆ ಸಿದ್ಧತೆ ನಡೆಸಿದ ಬಡ ಯುವಜನರ ಹೆಬ್ಬೆರಳನ್ನು ಕತ್ತರಿಸಿದ್ದೀರಿ. ನೀವು ಇವತ್ತು ದೆಹಲಿಯ ಹೊರಗೆ ರೈತರ ಮೇಲೆ ಅಶ್ರುವಾಯು ಶೆಲ್‌ಗಳನ್ನು ಪ್ರಯೋಗ ಮಾಡಿದ್ದೀರಿ, ಅವರ ಮೇಲೆ ಲಾಠಿಚಾರ್ಜ್ ಮಾಡಿದ್ದೀರಿ. ರೈತರು ನಿಮ್ಮಿಂದ ಎಂಎಸ್‌ಪಿಯನ್ನು ಕೇಳುತ್ತಾರೆ. ಆದರೆ, ನೀವು ಅದಾನಿ ಮತ್ತು ಅಂಬಾನಿಗೆ ಲಾಭ ಮಾಡಿಕೊಡುತ್ತೀರಿ ಮತ್ತು ರೈತರ ಹೆಬ್ಬೆರಳನ್ನು ಕತ್ತರಿಸುತ್ತಿದ್ದೀರಿ' ಎಂದು ಟೀಕಾಪ್ರಹಾರ ನಡೆಸಿದರು.

ಭದ್ರತೆರಹಿತ ಸಾಲ: ₹2 ಲಕ್ಷಕ್ಕೆ ಏರಿಕೆ

ನವದೆಹಲಿ (ಪಿಟಿಐ): ಬ್ಯಾಂಕ್‌ಗಳಲ್ಲಿ ಕೃಷಿ ಹಾಗೂ ಅದಕ್ಕೆ ಸಂಬಂಧಿತ ಚಟುವಟಿಕೆಗಳಿಗೆ ಯಾವುದೇ ಭದ್ರತೆ ಇಲ್ಲದೆ (ಅಡಮಾನರಹಿತ) ರೈತರಿಗೆ ನೀಡುವ ಸಾಲದ ಮಿತಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ₹2 ಲಕ್ಷಕ್ಕೆ ಹೆಚ್ಚಿಸಿದೆ. ಈ ಆದೇಶವು ಜನವರಿ 1ರಿಂದ ಜಾರಿಗೆ ಬರಲಿದೆ.

ಈ ಮೊದಲು ಅಡಮಾನರಹಿತ ಸಾಲದ ಮಿತಿಯು ₹1.60 ಲಕ್ಷ ಇತ್ತು. ಪ್ರಸ್ತುತ ಕೃಷಿ ಉತ್ಪಾದನಾ ವೆಚ್ಚದಲ್ಲಿ ಏರಿಕೆಯಾಗಿದೆ. ಇದರಿಂದ ಅತಿಸಣ್ಣ ಮತ್ತು ಸಣ್ಣ ರೈತರಿಗೆ ಅನುಕೂಲ ಕಲ್ಪಿಸಲು ಸಾಲದ ಮಿತಿಯನ್ನು ಹೆಚ್ಚಿಸಲಾಗಿದೆ ಎಂದು ಆರ್‌ಬಿಐ ತಿಳಿಸಿದೆ.

ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ನಿಗದಿಪಡಿಸಿರುವ ಈ ಸಾಲವನ್ನು ಯಾವುದೇ ಭದ್ರತೆ ಇಲ್ಲದೆ ನೀಡಬೇಕು ಎಂದು ಎಲ್ಲಾ ಬ್ಯಾಂಕ್‌ಗಳಿಗೆ ನಿರ್ದೇಶನ ನೀಡಿದೆ.

ಕೃಷಿ ವೆಚ್ಚದ ಹೆಚ್ಚಳದಿಂದ ಶೇ 86ರಷ್ಟು ಅತಿಸಣ್ಣ ಮತ್ತು ಸಣ್ಣ ರೈತರು ಸಕಾಲದಲ್ಲಿ ಕೃಷಿ ಚಟುವಟಿಕೆ ಕೈಗೊಳ್ಳಲು ಸಂಕಷ್ಟ ಅನುಭವಿಸುವಂತಾಗಿದೆ. ಹಾಗಾಗಿ, ಕೃಷಿ ಸಾಲ ನೀಡಿಕೆಯಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಆರ್‌ಬಿಐ ಕೈಗೊಂಡಿರುವ ಈ ಕ್ರಮವು ರೈತರಿಗೆ ವರದಾನವಾಗಿದೆ ಎಂದು ಕೇಂದ್ರ ಕೃಷಿ ಸಚಿವಾಲಯ ಹೇಳಿದೆ.

ಕೋವಿಡ್ ನಿರ್ವಹಣೆಯ ವೇಳೆ ಅವ್ಯವಹಾರ: ಶೀಘ್ರವೇ ಎಸ್‌ಐಟಿ ರಚನೆ ಸಾಧ್ಯತೆ

₹167 ಕೋಟಿ ಅಕ್ರಮ: ಸಿಐಡಿಗೆ ವರ್ಗ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್–19 ಸಾಂಕ್ರಾಮಿದ ನಿರ್ವಹಣೆ ವೇಳೆ ಎನ್–95 ಮಾಸ್ಕ್, ಪಿಪಿಇ ಕಿಟ್ ಹಾಗೂ ಇತರೆ ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ನಡೆದಿರುವ ಅಕ್ರಮ ಪ್ರಕರಣದ ತನಿಖೆಯು ಸದ್ಯದಲ್ಲೇ ಅಪರಾಧ ತನಿಖಾ ದಳಕ್ಕೆ (ಸಿಐಡಿ) ವರ್ಗಾವಣೆ ಆಗುವ ಸಾಧ್ಯತೆಯಿದೆ ಎಂದು ಮೂಲಗಳು ಖಚಿತಪಡಿಸಿವೆ.

'ವೈದ್ಯಕೀಯಉಪಕರಣಗಳಖರೀದಿಯಲ್ಲಿ ₹167 ಕೋಟಿ ಅಕ್ರಮ ನಡೆದಿದೆ' ಎಂದು ಆರೋಪಿಸಿ, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ(ಡಿಎಂಇ) ಮುಖ್ಯ ಲೆಕ್ಕಪತ್ರಾಧಿಕಾರಿ ಹಾಗೂ ಆರ್ಥಿಕ ಸಲಹೆಗಾರ ಎಂ.ವಿಷ್ಣು ಪ್ರಸಾದ್ ಅವರು ನೀಡಿದ ದೂರು ಆಧರಿಸಿ, ವಿಧಾನಸೌಧ ಠಾಣೆಯಲ್ಲಿ ಶುಕ್ರವಾರ ರಾತ್ರಿ ಎಫ್‌ಐಆರ್ ದಾಖಲಾಗಿತ್ತು.

'ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ. ಸದ್ಯ ವಿಧಾನಸೌಧ ಠಾಣೆ ಪೊಲೀಸರೇ ಪ್ರಕರಣದ ಪ್ರಾಥಮಿಕ ಮಾಹಿತಿ ಕಲೆ ಹಾಕುತ್ತಿದ್ದಾರೆ. ಪ್ರಕರಣದ ತನಿಖೆಯನ್ನು ಸಿಐಡಿಗೆ ವರ್ಗಾವಣೆ ಮಾಡಿ, ಆದೇಶಿಸಿದ ನಂತರ ಅವರೇ ತನಿಖೆ ಮುಂದುವರೆಸ-ಲಿದ್ದಾರೆ' ಎಂದು ಮೂಲಗಳು ಹೇಳಿವೆ.

ಎಸ್‌ಐಟಿ ರಚನೆ: 'ಸಿಐಡಿಗೆ ವರ್ಗಾವಣೆಯಾದ ಮೇಲೆ ವಿಶೇಷ ತನಿಖಾ ದಳ (ಎಸ್‌ಐಟಿ) ರಚನೆಆಗಲಿದೆ. ನಂತರ ಆರೋಪಿಗಳಿಗೆ ನೋಟಿಸ್ ಜಾರಿಗೊಳಿಸಿ, ವಿಚಾರಣೆಗೆ ಬರುವಂತೆ ಸೂಚಿಸಲಾಗುವುದು. ಅಗತ್ಯಬಿದ್ದರೆ ವಶಕ್ಕೆ ಪಡೆದು ಬಂಧಿಸಲಾಗುವುದು' ಎಂದು ಸಿಐಡಿ ಮೂಲಗಳು ಹೇಳಿವೆ. ಅಕ್ರಮ ಪ್ರಕರಣದ ಸಂಬಂಧ ಡಿಎಂಇಯ ಅಂದಿನ ನಿರ್ದೇಶಕ ಪಿ.ಜಿ.ಗಿರೀಶ್, ಲೆಕ್ಕಪತ್ರ ಇಲಾಖೆ ಜಂಟಿ ನಿಯಂತ್ರಕ ಜಿ.ಪಿ. ರಘು, ಆರೋಗ್ಯ ಸಲಕರಣಾಧಿಕಾರಿ ಮುನಿರಾಜು, ಲಾಜ್ ಎಕ್ಸ್‌ಪೋರ್ಟ್, ಎಂಎಸ್ ಪ್ರೂಡೆಂಟ್ ಮ್ಯಾನೇಜ್‌ಮೆಂಟ್ ಸಲ್ಯೂಷನ್, ರಾಜ್ಯದ ಜನಪ್ರತಿನಿಧಿಗಳು, ಸರ್ಕಾರದ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

5ನೇ ಪುಟ ನೋಡಿ

ರಾಜಕಾರಣಿಗಳ ಹೆಸರು ಉಲ್ಲೇಖಿಸಿಲ್ಲ

'ಕೋವಿಡ್ ಸಾಂಕ್ರಾಮಿಕ ಬಾಧಿಸಿದ್ದ ವೇಳೆ ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಇತ್ತು. ಸದ್ಯ ದಾಖಲಾಗಿರುವ ಎಫ್‌ಐಆರ್‌ನಲ್ಲಿ ಯಾವುದೇ ರಾಜಕಾರಣಿಗಳ ಹೆಸರು ಉಲ್ಲೇಖಿಸಿಲ್ಲ. 'ಕರ್ನಾಟಕ ರಾಜ್ಯದ ಜನಪ್ರತಿನಿಧಿಗಳು' ಎಂದಷ್ಟೇ ಪ್ರಸ್ತಾಪಿಸಲಾಗಿದೆ. ಎಸ್‌ಐಟಿ ತನಿಖೆ ವೇಳೆ ರಾಜಕಾರಣಿಗಳ ಪಾತ್ರ ಕಂಡುಬಂದರೆ ಅವರನ್ನೂ ವಿಚಾರಣೆಗೆ ಬರುವಂತೆ ಸೂಚಿಸಲಾಗುವುದು' ಎಂದು ಮೂಲಗಳು ಹೇಳಿವೆ.

ಒಳನೋಟ

ಕಬಿನಿಯಲ್ಲಿ ಮದ್ಯದ 'ಹೊಳೆ'

6

₹150 ಕೋಟಿ ಆಮಿಷ ಸಿಬಿಐ ತನಿಖೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಸಿದ್ದರಾಮಯ್ಯ

ಬೆಂಗಳೂರು: ವಕ್ಫ್ ಮಂಡಳಿ ಆಸ್ತಿ ಕಬಳಿಕೆ ಕುರಿತಂತೆ ಮೌನ ವಹಿಸಲು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷರೂ ಆಗಿರುವ ಶಾಸಕ ಬಿ.ವೈ. ವಿಜಯೇಂದ್ರ ತಮಗೆ ₹150 ಕೋಟಿ ಕೊಡುವುದಾಗಿ ಆಮಿಷ ಒಡ್ಡಿದ್ದರು ಎಂದು ಅದೇ ಪಕ್ಷದ ಮುಖಂಡ ಅನ್ವರ್ ಮಾಣಿಪ್ಪಾಡಿ ಮಾಡಿರುವ ಆರೋಪದ ಕುರಿತು ಸಿಬಿಐ ತನಿಖೆಗೆ ಆದೇಶಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಗ್ರಹಿಸಿದ್ದಾರೆ.

ಈ ಕುರಿತು ಶನಿವಾರ ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿರುವ ಅವರು, 'ಅನ್ವರ್ ಮಾಣಿಪ್ಪಾಡಿ ಅವರು ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಇದ್ದಾಗ ರಾಜ್ಯ ಅಲ್ಪಸಂಖ್ಯಾತರ ಆಯೋಗದ ಅಧ್ಯಕ್ಷರಾಗಿದ್ದರು. ಅವರೇ ನೇರವಾಗಿ ಪ್ರಧಾನಿಯವರಿಗೆ ಪತ್ರ ಬರೆದು ಆರೋಪ ಮಾಡಿರುವುದು ಬಹಿರಂಗವಾಗಿದೆ. ಈ ಆರೋಪವನ್ನು ಗಂಭೀರವಾಗಿ ಪರಿಗಣಿಸಿ ಸಿಬಿಐ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದ್ದಾರೆ.

'ಬಿ.ಎಸ್ ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದ ಕಾಲದಲ್ಲೇ ವಿಜಯೇಂದ್ರ ನಮ್ಮ ಮನೆಗೆ ಬಂದು ವಕ್ಫ್ ಆಸ್ತಿ ಕಬಳಿಕೆಯ ತನಿಖೆ ನಡೆಸಿ ನೀಡಿರುವ ವರದಿ ಬಗ್ಗೆ ಮೌನವಹಿಸುವಂತೆ ಕೇಳಿಕೊಂಡಿದ್ದರು. ಇದಕ್ಕಾಗಿ ₹150 ಕೋಟಿ ಆಮಿಷವೊಡ್ಡಿದ್ದರು. ನಾನು ಅವರಿಗೆ ಗದರಿಸಿ ಮನೆಯಿಂದ ಓಡಿಸಿದ್ದೆ. ಈ ಕುರಿತು ಪ್ರಧಾನಿ ಮತ್ತು ಪಕ್ಷದ ರಾಷ್ಟ್ರೀಯ ಅಧ್ಯಕ್ಷರಿಗೆ ಪತ್ರ ಬರೆದಿದ್ದೆ ಎಂದು ಅನ್ವರ್ ಮಾಣಿಪ್ಪಾಡಿಯವರೇ ಮಾಧ್ಯಮದ ಮುಂದೆ ಹೇಳಿಕೊಂಡಿದ್ದರು. 'ನಾನು ತಿನ್ನುವುದಿಲ್ಲ, ತಿನ್ನುವುದಕ್ಕೂ ಬಿಡುವುದಿಲ್ಲ' ಎಂದು ಊರೆಲ್ಲ ಡಂಗೂರ ಹೊಡೆದುಕೊಂಡು ತಿರುಗಾಡುವ ನರೇಂದ್ರ ಮೋದಿಯವರು ಈ ಆರೋಪದ ಬಗ್ಗೆ ಮೌನ ವಹಿಸಿರುವುದು ಸಂಶಯ ಮೂಡಿಸುತ್ತಿದೆ. ಅನೇಕ ಪ್ರಶ್ನೆಗಳನ್ನೂ ಹುಟ್ಟುಹಾಕಿದೆ' ಎಂದಿದ್ದಾರೆ.

5ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಮತ್ತೆ ಐಸಿಯುನಲ್ಲಿ ಲಾಲ್‌ಕೃಷ್ಣ ಅಡ್ವಾಣಿ

ನವದೆಹಲಿ (ಪಿಟಿಐ): ಬಿಜೆಪಿ ಮುಖಂಡ ಲಾಲ್ ಕೃಷ್ಣ ಅಡ್ವಾಣಿ ಅವರನ್ನು ಮತ್ತೆ ಇಂದ್ರಪ್ರಸ್ಥ ಅಪೋಲೊ ಆಸ್ಪತ್ರೆಗೆ ಸೇರಿಸಲಾಗಿದ್ದು, ಐಸಿಯುನಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಎಲ್‌.ಕೆ. ಅಡ್ವಾಣಿ

ನರರೋಗ ತಜ್ಞ ಡಾ. ವಿನೀತ್ ಸೂರಿ ಅವರು ಅಡ್ವಾಣಿ ಅವರ ಚಿಕಿತ್ಸೆಯ ಉಸ್ತುವಾರಿ ವಹಿಸಿದ್ದಾರೆ.

ಎರಡು ದಿನಗಳ ಹಿಂದೆಯೇ ಅಡ್ವಾಣಿ ಅವರನ್ನು ಮತ್ತೆ ಆಸ್ಪತ್ರೆಗೆ ಸೇರಿಸಲಾಯಿತು ಎಂದು ಮೂಲಗಳು ತಿಳಿಸಿವೆ. ಆದರೆ, ಅವರನ್ನು ಯಾವ ಕಾರಣಕ್ಕೆ ಆಸ್ಪತ್ರೆಗೆ ಸೇರಿಸಲಾಗಿದೆ ಎಂಬ ಮಾಹಿತಿಯನ್ನು ವೈದ್ಯರು ನೀಡಿಲ್ಲ.

ಸುಧಾ, ಮಯೂರ ಓದಿ

ವಿಶೇಷ ರೈಲು ಸಂಚಾರ ರದ್ದು

ಬೆಂಗಳೂರು: ಇಲ್ಲಿನ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ (ಎಸ್‌ಎಂವಿಟಿ) ಮತ್ತು ಬಿಹಾರದ ದಾನಾಪುರ ನಿಲ್ದಾಣಗಳ ನಡುವೆ ವಾರಕ್ಕೆರಡು ಬಾರಿ ಸಂಚರಿಸುವ ವಿಶೇಷ ಎಕ್ಸ್‌ಪ್ರೆಸ್ ರೈಲು ರದ್ದುಗೊಳಿಸಲಾಗಿದೆ. ಬಿಹಾರದ ದಾನಾಪುರದಿಂದ ಬೆಂಗಳೂರಿನ ಎಸ್‌ಎಂವಿಟಿಗೆ ಡಿ.15ರಿಂದ 30ರವರೆಗೆ ಸಂಚರಿಸುವ ವಿಶೇಷ ಎಕ್ಸ್‌ಪ್ರೆಸ್ ರೈಲುಗಳ 6 ಟ್ರಿಪ್ ಹಾಗೂ ಎಸ್‌ಎಂವಿಟಿಯಿಂದ ದಾನಾಪುರಕ್ಕೆ ಡಿ.17ರಿಂದ ಜ.1ರವರೆಗೆ ಸಂಚರಿಸುವ 6 ಟ್ರಿಪ್ ರದ್ದಾಗಿವೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಸಿಎಓ/ಸಿಎನ್/ಬಿಎನ್‌ಸಿ/39/2024
ದಿನಾಂಕ : 09-12-2024

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆ / ನಿರ್ಮಾಣ ಘಟಕದ ಹಲವಾರು ಯೋಜನೆಗಳಲ್ಲಿ ಆರ್‌ಡಿಎಸ್‌ಓ ಕಾರ್ಯವಿಧಾನ ಕ್ರಮದಲ್ಲಿ ಇರುವ ಇತ್ತೀಚಿನ ಸೂಚನೆಗಳಂತೆ ಎಲ್ಲಾ ವಿಧದ ರೈಲುಗಳಲ್ಲಿ ಫ್ಲಾಷ್ ಬಟ್ ವೆಲ್ಡ್‌ಗಳ ಫೇಸ್ಡ್ ಆರೇ ಅಲ್ಟ್ರಾಸೋನಿಕ್ ಪರೀಕ್ಷೆಯನ್ನು ನಡೆಸುವುದು (ಟೆಂಡರ್ ಉಲ್ಲೇಖ ಸಂ. ಪಿಎಯುಟಿ-ಯುಎಸ್‌ಎಫ್‌ಡಿ-ಎಸ್‌ಡಬ್ಲ್ಯುಆರ್-ಸಿಎನ್-2024)	ರೂ. 3,46,08,630/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 31-12-2024 ರಂದು 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ದಂಡು

ಪಿಯುಬಿ/623/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಟೆಂಡರ್ ಪ್ರಕಟಣೆ ಸಂ. ಆರ್‌ಇಎಸ್‌ಬಿಸಿಇಎಲ್-ಟಿಆರ್‌ಎಎನ್‌ಎಸ್‌ಪಿ-ಎಸ್‌ಬಿಸಿ
ದಿನಾಂಕ : 07-12-2024

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ ಹಾನಿಗೊಂಡ ಡ್ರಮ್‌ಗಳಿಂದ ಕಾಂಟ್ಯಾಕ್ಟ್ ಮತ್ತು ಕ್ಯಾಟೆನರಿ ವೈರ್‌ನ ರಿ-ರೋಲಿಂಗ್‌ನಿಂದ ಸುಸ್ಥಿತಿಗೊಳಿಸಿ ಡ್ರಮ್‌ಗಳನ್ನು ಬಿಡುಗಡೆಗೊಳಿಸುವುದನ್ನು ಒಳಗೊಂಡಂತೆ ಸಿಇಇ/ಯೋಜನೆ/ನೈಋತ್ಯ ರೈಲ್ವೆಯ ವಿವಿಧ ಆರ್‌ಇ ಡಿಪೋಗಳಿಂದ ಹಲವಾರು ಡಿಪೋಗಳಿಗೆ ಕಾಪರ್ ಡ್ರಮ್‌ಗಳು / ಓಹೆಚ್‌ಇ ಸಾಮಗ್ರಿಗಳ ಲೋಡಿಂಗ್ / ಅನ್‌ಲೋಡಿಂಗ್ ಮತ್ತು ಸಾಗಾಣಿಕೆ.	ರೂ. 44,47,569.08

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 30-12-2024 ರಂದು 15:00 ಗಂಟೆಯವರೆಗೆ

ಟೆಂಡರ್ ಪ್ರಕಟಣೆ ಸಂ. ಆರ್‌ಇಎಸ್‌ಬಿಸಿಇಎಲ್-ಟಿಆರ್‌ಎಎನ್‌ಎಸ್‌ಪಿ-ಎಂವೈಎಸ್
ದಿನಾಂಕ : 09-12-2024

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಮೈಸೂರು ವಿಭಾಗದಲ್ಲಿ ಹಾನಿಗೊಂಡ ಡ್ರಮ್‌ಗಳಿಂದ ಕಾಂಟ್ಯಾಕ್ಟ್ ಮತ್ತು ಕ್ಯಾಟೆನರಿ ವೈರ್‌ನ ರಿ-ರೋಲಿಂಗ್‌ನಿಂದ ಸುಸ್ಥಿತಿಗೊಳಿಸಿ ಡ್ರಮ್‌ಗಳನ್ನು ಬಿಡುಗಡೆಗೊಳಿಸುವುದನ್ನು ಒಳಗೊಂಡಂತೆ ಸಿಇಇ/ಯೋಜನೆ/ನೈಋತ್ಯ ರೈಲ್ವೆಯ ವಿವಿಧ ಆರ್‌ಇ ಡಿಪೋಗಳಿಂದ ಹಲವಾರು ಡಿಪೋಗಳಿಗೆ ಕಾಪರ್ ಡ್ರಮ್‌ಗಳು / ಓಹೆಚ್‌ಇ ಸಾಮಗ್ರಿಗಳ ಲೋಡಿಂಗ್ / ಅನ್‌ಲೋಡಿಂಗ್ ಮತ್ತು ಸಾಗಾಣಿಕೆ.	ರೂ. 41,30,352.53

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 04-01-2025 ರಂದು 13:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಮುಕ್ತಾಯದ ದಿನಾಂಕದವರೆಗೆ ಯಾವುದೇ ತಿದ್ದುಪಡಿಗಾಗಿ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.

ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ಪಿ&ಪಿ / ಆರ್‌ಇ ಬೆಂಗಳೂರು

ಪಿಯುಬಿ/628/ಎಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2024-25

South Western Railway - SWR | SWRRLY | SWRRLY

Madhya Pradesh Govt. Emporium
Mrignayanee
Art from the heart

Venue: Chitrakala Parishath, Gallery No. 7, Basement, Kumarakrupa Road, Bengaluru-01
Ph.: 7353857787

- The Development Commissioner (Handloom), Ministry of Textiles, Govt. of India
- Commissioner, Handloom and Handicrafts M.P. Govt
- Sant Ravidas M.P. Hastshilp Evam Hathkargha Vikas Nigam Ltd. (A Govt. of M.P. Undertaking)

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ನಿವೃತ್ತ ನೌಕರರ ಸಂಘ (ರಿ.)

ಕೊಠಡಿ ಸಂಖ್ಯೆ: 911, 9ನೇ ಮಹಡಿ, ಕಾವೇರಿ ಭವನ, ಕೆಂಪೇಗೌಡ ರಸ್ತೆ, ಬೆಂಗಳೂರು – 560 009 ಫೋನ್ : 9845444010

ಚುನಾವಣೆ ಪ್ರಕಟಣೆ ದಿನಾಂಕ: 13-12-2024

ಮೇಲ್ಕಂಡ ಸಂಘದ ಸದಸ್ಯರ ಗಮನಕ್ಕೆ ತರುವುದೇನೆಂದರೆ, ಸಂಘದ ನಿಯಮ ಸಂಖ್ಯೆ 10(ಅ) ಪ್ರಕಾರ 11 (ಹನ್ನೊಂದು) ಜನ ಕಾರ್ಯಕಾರಿ ಸಮಿತಿ ಸದಸ್ಯರುಗಳ ಸ್ಥಾನಗಳಿಗೆ ದಿನಾಂಕ:28-12-2024ನೇ ಶನಿವಾರ ಮಧ್ಯಾಹ್ನ 12.00 ರಿಂದ ಸಂಜೆ 4.30ರ ಗಂಟೆಯವರೆಗೆ ಬೆಂಗಳೂರು ಜಲಮಂಡಳಿ ರಜತ ಭವನ, 8ನೇ ಮುಖ್ಯರಸ್ತೆ, 19ನೇ ಅಡ್ಡರಸ್ತೆ, ಮಲ್ಲೇಶ್ವರಂ ಪಶ್ಚಿಮ, ಬೆಂಗಳೂರು-560055 ಇಲ್ಲಿ ಚುನಾವಣೆ ನಡೆಯುತ್ತದೆ. ನಾಮಪತ್ರ ಸಲ್ಲಿಸಲು ದಿನಾಂಕ: 17-12-2024ರಂದು ಪ್ರಾರಂಭವಾಗಿ ದಿನಾಂಕ: 19-12-2024ರಂದು ಕೊನೆಗೊಳ್ಳುತ್ತದೆ, ನಾಮಪತ್ರ ಪರಿಶೀಲನೆ ದಿನಾಂಕ :20-12-2024 ಮತ್ತು ನಾಮಪತ್ರಗಳ ವಾಪಸಾತಿ ಕಾರ್ಯ ದಿನಾಂಕ:21-12-2024ರಂದು ನಡೆಯಲಿದೆ.

ಮಾನ್ಯ ಸದಸ್ಯರುಗಳ ವಿಳಾಸಕ್ಕೆ ಈ ಚುನಾವಣಾ ವೇಳಾಪಟ್ಟಿ ಮತ್ತು ಸೂಚನೆಗಳನ್ನು ಸಂಘದವರು ರವಾನಿಸಿದ್ದು, ಒಂದು ವೇಳೆ, ವೇಳಾಪಟ್ಟಿ ಮತ್ತು ಸೂಚನೆಗಳ ತಿಳುವಳಿಕೆ ಪತ್ರ ನಿಗದಿತ ಅವಧಿಯಲ್ಲಿ ತಲುಪದೆ ಇದ್ದಲ್ಲಿ, ಇದನ್ನೇ ಚುನಾವಣಾ ಸೂಚನಾ ಪತ್ರವೆಂದು ಪರಿಗಣಿಸಿ ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಲು ಕೋರಿದೆ.

ಸಂಘದ ನಿಯಮ 5(5)(ಆ)ರಂತೆ ಮತದಾನಕ್ಕೆ ಸಂಘವು ವಿತರಿಸಿರುವ ಗುರುತಿನ ಕಾರ್ಡ್ ಕಡ್ಡಾಯವಾಗಿರುತ್ತದೆ.

ಅರ್ಹ ಸದಸ್ಯರು ಸಂಘವು ವಿತರಿಸಿರುವ ಗುರುತಿನ ಕಾರ್ಡ್‌ನ್ನು ಸಂಘದ ಕಾರ್ಯದರ್ಶಿ ಅಥವಾ ಅವರಿಂದ ಅಧಿಕಾರ ಪಡೆದವರಿಗೆ ಹಾಜರುಪಡಿಸಿ, ಗುರುತಿನ ಚೀಟಿಯನ್ನು ಪಡೆದು ಚುನಾವಣಾ ಸಿಬ್ಬಂದಿಗೆ ಹಾಜರುಪಡಿಸುವುದು. ದಯವಿಟ್ಟು ಸಹಕರಿಸಿ.

ಸಹಿ/– ಕಾರ್ಯದರ್ಶಿ | ಸಹಿ/– ಚುನಾವಣಾಧಿಕಾರಿಗಳು

4 ತಾಲ್ಲೂಕುಗಳಲ್ಲಿ ಪ್ರಾಯೋಗಿಕ ಜಾರಿಗೆ ಸಿದ್ಧತೆ

ಆಸ್ತಿ ನೋಂದಣಿಗೆ ಜಿಐಎಸ್ ತಂತ್ರಾಂಶ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ತೆರಿಗೆ ವಂಚನೆ ಪ್ರಕರಣಗಳಿಗೆ ಕಡಿವಾಣ ಉದ್ದೇಶ
- ಸ್ವಯಂಚಾಲಿತವಾಗಿ ಮುದ್ರಾಂಕ ಶುಲ್ಕ ದರ ನಿಗದಿ
- ತೆರಿಗೆ ಸಂಗ್ರಹ ಹೆಚ್ಚಳ ನಿರೀಕ್ಷೆ

ಬೆಂಗಳೂರು: ನಗರ ಹಾಗೂ ಗ್ರಾಮೀಣ ಪ್ರದೇಶಗಳ ಆಸ್ತಿ ನೋಂದಣಿಯಲ್ಲಿನ ಅಕ್ರಮಗಳಿಗೆ ಸಂಪೂರ್ಣ ಕಡಿವಾಣ ಹಾಕಲು ನಿರ್ಧರಿಸಿರುವ ಕಂದಾಯ ಇಲಾಖೆ, ಅದಕ್ಕಾಗಿ ಭೌಗೋಳಿಕ ದತ್ತಾಂಶ ಆಧಾರಿತ ತಂತ್ರಾಂಶ (ಜಿಐಎಸ್) ರೂಪಿಸುತ್ತಿದೆ.

ಜಿಐಎಸ್ ತಂತ್ರಾಂಶ ಸಿದ್ಧಪಡಿಸುವ ಕಾರ್ಯ ಅಂತಿಮ ಹಂತಕ್ಕೆ ಬಂದಿದ್ದು, ಕಲಬುರಗಿ, ಚಾಮರಾಜನಗರ ಜಿಲ್ಲೆಯ ತಲಾ ಒಂದು ತಾಲ್ಲೂಕು ಹಾಗೂ ನೆಲಮಂಗಲ, ಹೊಸದುರ್ಗದಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಲು ಸಿದ್ಧತೆ ನಡೆದಿದೆ.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ದತ್ತಾಂಶ ಬಳಸಿಕೊಂಡು ಇ-ಆಡಳಿತ, ಕಂದಾಯ, ನೋಂದಣಿ ಮತ್ತು ಮುದ್ರಾಂಕ ಇಲಾಖೆ ಜಂಟಿಯಾಗಿ ಹೊಸ ನೋಂದಣಿ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಿವೆ. ಭೌಗೋಳಿಕ ದತ್ತಾಂಶ ಬಳಸಿಕೊಂಡು ಜಮೀನು, ಕಟ್ಟಡ, ನಿವೇಶನ, ರಸ್ತೆಗಳನ್ನು ಖಚಿತವಾಗಿ ನಮೂದಿಸಿ, ಆಸ್ತಿಗಳ ನೋಂದಣಿ ಮಾಡಲಾಗುತ್ತದೆ.

ಈಗ ಇರುವ ವ್ಯವಸ್ಥೆಯಲ್ಲಿ ನೋಂದಣಿ ಮಾಡುವಾಗ ಕೆಲವರು ಅಧಿಕಾರಿಗಳ ಜತೆ ಶಾಮೀಲಾಗಿ ತೆರಿಗೆ ವಂಚಿಸುತ್ತಿರುವ ಪ್ರಕರಣಗಳು ಕಂಡುಬಂದಿವೆ. ಕಟ್ಟಡ ಇರುವ ಜಾಗವನ್ನು ಖಾಲಿ ನಿವೇಶನವೆಂದು, ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿಗೆ ಹೊಂದಿಕೊಂಡಂತೆ ಇದ್ದರೂ, ಒಳ ರಸ್ತೆ ಎಂದು ನಮೂದಿಸಿ ಆಸ್ತಿ ಮೌಲ್ಯವನ್ನು ಕಡಿಮೆ ಮಾಡಿಕೊಂಡು ನೋಂದಣಿ ಮಾಡಿಸುತ್ತಿರುವ ನೂರಾರು ಪ್ರಕರಣಗಳು ಪತ್ತೆಯಾಗಿವೆ. ಹೊಸ ತಂತ್ರಾಂಶ ಅಂತಹ ವಂಚನೆಗಳನ್ನು ತಡೆಯಲಿದೆ. ತಂತ್ರಾಂಶದಲ್ಲೇ ಸರ್ವೆ ನಂಬರ್, ಆಸ್ತಿ ಸಂಖ್ಯೆ ನಮೂದಿಸಿದರೆ ಸ್ವಯಂಚಾಲಿತವಾಗಿ ಮುದ್ರಾಂಕ ಶುಲ್ಕದ ದರ ನಿಗದಿಯಾಗುತ್ತದೆ. ಆಸ್ತಿಗಳ ನಿಖರ ಮೌಲ್ಯ ದೊರಕುವ ಜತೆಗೆ, ವಂಚನೆಗೂ ಕಡಿವಾಣ ಹಾಕಬಹುದು. ತೆರಿಗೆ ಸಂಗ್ರಹವೂ ಗಣನೀಯವಾಗಿ ಹೆಚ್ಚಳವಾಗಲಿದೆ ಎಂದು ಕಂದಾಯ ಇಲಾಖೆಯ ಅಧಿಕಾರಿಗಳು ಹೇಳಿದ್ದಾರೆ.

ಮೊದಲ ಹಂತದಲ್ಲಿ ನಾಲ್ಕು ತಾಲ್ಲೂಕುಗಳಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಿದ ನಂತರ ಉಳಿದ ಗ್ರಾಮೀಣ ಪ್ರದೇಶಗಳಿಗೂ ವಿಸ್ತರಿಸಲಾಗುತ್ತದೆ. ಮುಂದಿನ ಹಂತಗಳಲ್ಲಿ ನಗರ ಪ್ರದೇಶಗಳಲ್ಲೂ ಅನುಷ್ಠಾನಗೊಳಿಸಲಾಗುತ್ತಿದೆ ಎನ್ನುವುದು ಅಧಿಕಾರಿಗಳ ವಿವರಣೆ.

ಎಸ್‌ವಿಎನ್ ಪ್ರಶಸ್ತಿಗೆ 20 ಮಂದಿ ಆಯ್ಕೆ

ಬೆಂಗಳೂರು: ಶ್ರೀ ರಾಮಸೇವಾ ಮಂಡಳಿ ಟ್ರಸ್ಟ್ ನೀಡುವ 'ಎಸ್.ವಿ. ನಾರಾಯಣಸ್ವಾಮಿ ರಾವ್ ಜನ್ಮಶತ ಮಾನೋತ್ಸವ ಜೀವಮಾನ ಸಾಧನೆ ಪ್ರಶಸ್ತಿ'ಗೆ 20 ಮಂದಿ ಆಯ್ಕೆಯಾಗಿದ್ದಾರೆ.

ಕೊಳಲು ವಾದಕ ಎಂ.ಎಸ್. ಶ್ರೀನಿವಾಸಮೂರ್ತಿ, ಮೃದಂಗ ವಾದಕ ಗುರುವಾಯೂರ್ ದೊರೈ, ಪಿಟೀಲು ವಾದಕ ಎಸ್. ಶೇಷಗಿರಿ ರಾವ್, ಬೆಂಗಳೂರು ಗಣೇಶ ಉತ್ಸವದ ಸಂಸ್ಥಾಪಕ ಎ. ಮರಿಯಪ್ಪ, ಗಾಯಕರಾದ ನಾಗಮಣಿ ಶ್ರೀನಾಥ್, ಎಂ.ಎಸ್. ಶೀಲಾ, ಆರ್.ಕೆ. ಪದ್ಮನಾಭ, ರಾಜ್‌ಕುಮಾರ್ ಭಾರತಿ, ಪತ್ರಕರ್ತೆ ಆರ್. ಪೂರ್ಣಿಮಾ, ವೀಣಾ ವಾದಕರಾದ ಸುಮಾ ಸುಧೀಂದ್ರ, ಡಿ. ಬಾಲಕೃಷ್ಣ, 'ಅನನ್ಯ' ಸಂಸ್ಥೆ ಸ್ಥಾಪಕ ಆರ್.ವಿ. ರಾಘವೇಂದ್ರ, ಗಮಕಿ ಎಂ.ಆರ್. ಸತ್ಯನಾರಾಯಣ, ಸಂಗೀತ ವಿಮರ್ಶಕ ಎಂ. ಸೂರ್ಯಪ್ರಸಾದ್, ಬೆಂಗಳೂರು ಮುದ್ರಣಾಲಯದ ಎಚ್.ಆರ್. ಅನಂತ್, ಪತ್ರಕರ್ತೆ ಚೂಡಿ ಶಿವರಾಂ, ಪ್ರಭಾತ್ ಕಲಾವಿದರು ಶ್ರೀನಿವಾಸ್ ಟಿ.ಡಿ., ರಾಜೇಂದ್ರ ಟಿ.ಡಿ., ಸಂಗೀತ ತಜ್ಞರಾದ ಶಿವರಾಮಯ್ಯ, ವಿನಾಯಕ ಅಕುನೂರಿ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಟ್ರಸ್ಟ್ 21ರಂದು ಬೆಳಿಗ್ಗೆ 9.45ಕ್ಕೆ ಸೋಮನಹಳ್ಳಿಯ ನೆಟ್ಟಿಗೆರೆ ಗ್ರಾಮದಲ್ಲಿ ಎಸ್.ವಿ. ನಾರಾಯಣಸ್ವಾಮಿ ರಾವ್ ಜನ್ಮಶತಮಾನೋತ್ಸವ ಸಮಾರಂಭ ಹಮ್ಮಿಕೊಂಡಿದ್ದು, ಅಂದು ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ದಲಿತ ಬಾಲಕಿ ಕೊಲೆ

ಕಾನ್ಪುರ (ಪಿಟಿಐ): ಇಲ್ಲಿನ ಶಿವರಾಜ್‌ಪುರದಲ್ಲಿ ದಲಿತ ಬಾಲಕಿ (17) ಮೇಲೆ ಲೈಂಗಿಕ ದೌರ್ಜನ್ಯ ಎಸಗಿ ಕೊಲೆ ಮಾಡಿರುವ ಘಟನೆ ನಡೆದಿದೆ.

ಪ್ರಕರಣ ಸಂಬಂಧ 18 ವರ್ಷದ ಯುವಕನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಪೋಷಕರು ಹೊರ ಹೋಗಿದ್ದು, ಮನೆಯಲ್ಲಿ ಬಾಲಕಿ ಒಬ್ಬಳೇ ಇದ್ದಾಗ ಈ ಕೃತ್ಯ ನಡೆದಿದೆ.

ಸುದ್ದಿ 2 ನಿಮಿಷ

ಮೆಟ್ರೊದಲ್ಲಿ ಭಿಕ್ಷಾಟನೆ ನಡೆಸಿ ಇಳಿದು ಹೋದ ಅಂಗವಿಕಲ

ಬೆಂಗಳೂರು: 'ನಮ್ಮ ಮೆಟ್ರೊ' ನೇರಳೆ ಮಾರ್ಗದಲ್ಲಿ ಶನಿವಾರ ಅಂಗವಿಕಲರೊಬ್ಬರು ಭಿಕ್ಷೆ ಬೇಡಿರುವ ಪ್ರಕರಣ ನಡೆದಿದೆ.

ಚಲ್ಲಘಟ್ಟ ನಿಲ್ದಾಣದಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಮೆಟ್ರೊ ರೈಲು ಹತ್ತಿರುವ ಅವರು ಕೆಂಗೇರಿ ನಿಲ್ದಾಣದವರೆಗೆ ಭಿಕ್ಷೆ ಬೇಡಿ ಇಳಿದು ಹೋಗಿದ್ದಾರೆ. ಭಿಕ್ಷೆ ಬೇಡಿರುವ ಬಗ್ಗೆ ಪ್ರಯಾಣಿಕರು ಬಿಎಂಆರ್‌ಸಿಎಲ್‌ಗೆ ಮಾಹಿತಿ ನೀಡಿದ್ದಾರೆ. ಸಿಸಿಟಿವಿ ಕ್ಯಾಮೆರಾದ ದೃಶ್ಯಾವಳಿಗಳನ್ನು ಮೆಟ್ರೊ ಸಿಬ್ಬಂದಿ ಪರಿಶೀಲಿಸಿದಾಗ ಭಿಕ್ಷೆ ಬೇಡಿ ಇಳಿದುಹೋಗಿರುವುದು ಪತ್ತೆಯಾಗಿದೆ.

ಮೆಟ್ರೊದಲ್ಲಿ ಭಿಕ್ಷೆ ಬೇಡಲು ಅವಕಾಶವಿಲ್ಲ. ಅಪರೂಪಕ್ಕೆ ಪ್ರಯಾಣಿಕರಂತೆ ಬಂದು ಭಿಕ್ಷೆ ಬೇಡಿದ ಘಟನೆ ನಡೆದಿದೆ ಎಂದು ಬಿಎಂಆರ್‌ಸಿಎಲ್ ಕಾರ್ಯ ನಿರ್ವಾಹಕ ನಿರ್ದೇಶಕ (ಕಾರ್ಯಾಚರಣೆ ಮತ್ತು ನಿರ್ವಹಣೆ) ಶಂಕರ್ ಎ.ಎಸ್. 'ಪ್ರಜಾವಾಣಿ'ಗೆ ತಿಳಿಸಿದರು.

2023ರ ನವೆಂಬರ್‌ನಲ್ಲಿ ಶ್ರವಣದೋಷವುಳ್ಳ ಯುವಕ ಹಸಿರು ಮಾರ್ಗದಲ್ಲಿ ಭಿಕ್ಷೆ ಬೇಡಿದ್ದು ಮೆಟ್ರೊದಲ್ಲಿ ಭಿಕ್ಷಾಟನೆ ನಡೆಸಿದ ಮೊದಲ ಪ್ರಕರಣವಾಗಿತ್ತು. ಶನಿವಾರ ನಡೆದ ಭಿಕ್ಷಾಟನೆ ಎರಡನೇಯದ್ದಾಗಿದೆ.

ಫ್ಲ್ಯಾಟ್ ಮೇಳಕ್ಕೆ ಸ್ಪಂದನೆ



ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಕಣಿಮಿಣಿಕೆಯಲ್ಲಿ ಶನಿವಾರ ಆಯೋಜಿಸಿದ್ದ ಫ್ಲ್ಯಾಟ್ ಮೇಳಕ್ಕೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ದೊರೆತಿದೆ.

ಮೇಳದಲ್ಲಿ ಸುಮಾರು 600ಕ್ಕೂ ಹೆಚ್ಚು ಸಾರ್ವಜನಿಕರು ಭಾಗವಹಿಸಿದ್ದು, ಸುಮಾರು 200 ಮಂದಿ ಫ್ಲ್ಯಾಟ್ ಖರೀದಿ ಸಂಬಂಧ ಠೇವಣಿಯನ್ನು ಸ್ಥಳದಲ್ಲಿಯೇ ಪಾವತಿಸಿ, ಹಂಚಿಕೆ ಪತ್ರ ಪಡೆದರು. 50 ಮಂದಿ ಚೆಕ್ ನೀಡಿದ್ದು, ಸೋಮವಾರ ಆರ್.ಟಿ.ಜಿ.ಎಸ್. ಮೂಲಕ ಉಳಿದ ಮೊತ್ತ ಪಾವತಿಸಿದ ನಂತರ ಹಂಚಿಕೆ ಪತ್ರ ನೀಡಲಾಗುವುದು ಎಂದು ಬಿಡಿಎ ಅಧಿಕಾರಿಗಳು ತಿಳಿಸಿದ್ದಾರೆ .

ಪ್ರಸ್ತುತ ಫ್ಲ್ಯಾಟ್ ದರವು ಹಳೆಯದಾಗಿದ್ದು, ಸದ್ಯದಲ್ಲಿಯೇ ಫ್ಲ್ಯಾಟ್ ಮೊತ್ತವನ್ನು ಪರಿಷ್ಕರಿಸಲಾಗುವುದು ಎಂದರು.

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಸೌತ್ ಇಂಡಿಯನ್ ಬ್ಯಾಂಕ್, ಆಕ್ಸಿಸ್ ಬ್ಯಾಂಕ್, ಕೆನರಾ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ, ಎಚ್ ಡಿ ಎಫ್ ಸಿ ಬ್ಯಾಂಕ್ ಮತ್ತು ಪಂಜಾಬ್ ನ್ಯಾಷನಲ್ ಬ್ಯಾಂಕ್‌ಗಳ ಪ್ರತಿನಿಧಿಗಳು ಸ್ಥಳದಲ್ಲಿ ಹಾಜರಿದ್ದರು. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆರ್ಥಿಕ ಸದಸ್ಯ ಎ.ಲೋಕೇಶ್, ಮುಖ್ಯ ಲೆಕ್ಕಾಧಿಕಾರಿ ಶ್ರೀನಿವಾಸಮೂರ್ತಿ, ಉಪ ಕಾರ್ಯದರ್ಶಿ ಕೃಷ್ಣಮೂರ್ತಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳಾದ ಇಂಬವಳ್ಳಿ, ಬಸವರೆಡ್ಡಿ ಹಾಗೂ ಇತರೆ ಅಧಿಕಾರಿಗಳು ಭಾಗವಹಿಸಿದ್ದರು.

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಲೆಕ್ಟ್ರಾನಿಕ್ಸ್ & ಇನ್ಫಾರ್ಮೇಶನ್ ಟೆಕ್ನಾಲಜಿ (ಎನ್‌ಐಇಎಲ್‌ಐಟಿ)

रा.इ.सू.प्रौ.सं NIELIT

ನಾಗರಿಕ ಸಬಲೀಕರಣ ಮೂಲಕ ದೇಶ ಸೇವೆ

ಇಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ಭಾರತ ಸರ್ಕಾರ

ಭಾರತ ಸರ್ಕಾರದ ವಿದ್ಯುನ್ಮಾನಗಳು ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯದ ಸ್ವಾಯತ್ತ ವೈಜ್ಞಾನಿಕ ಸಂಘಟನೆ

ಎನ್‌ಐಇಎಲ್‌ಐಟಿ: ಡಿಜಿಟಲ್ ಕಂದರ ನಿವಾರಿಸುವ ಸೇತುವೆ

ಎನ್‌ಐಇಎಲ್‌ಐಟಿ ಸಂಸ್ಥೆಯು, ಐಇಸಿಟಿ ಕ್ಷೇತ್ರದಲ್ಲಿ ತರಬೇತಿ, ಶಿಕ್ಷಣ, ಕೌಶಲ್ಯಾಭಿವೃದ್ಧಿ ಹಾಗೂ ಸಾಮರ್ಥ್ಯ ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರುತ್ತದೆ ಹಾಗೂ ಪರೀಕ್ಷೆ ಮತ್ತು ಪ್ರಮಾಣೀಕರಣ ಪ್ರಕ್ರಿಯೆಗಳಿಗೆ ಮಾನದಂಡಗಳನ್ನು ಸ್ಥಾಪಿಸುವ ಪ್ರಯತ್ನ ಮಾಡುತ್ತಲಿದೆ. ಇದು ಭಾರತದಾದ್ಯಂತ ಐಜ್ವಾ, ಅಜ್ಮೇರ್, ಔರಂಗಾಬಾದ್, ಭುವನೇಶ್ವರ, ಬಿಕಾನೇರ್, ಬಕ್ಸಾರ್, ಕ್ಯಾಲಿಕಟ್, ಚಂಡೀಗಢ್, ಚುಚುಯಿಮಲಾಂಗ್, ಚುರಚಂದಪುರ, ಚೆನ್ನೈ, ದಮನ್, ದೆಹಲಿ, ದಿಬ್ರುಗಢ್, ದಿಮಾಪುರ, ಪೂರ್ವ ದೆಹಲಿ, ಗ್ಯಾಂಗ್ಟಕ್, ಗೋರಖಪುರ, ಗುವಾಹಟಿ, ಹರಿದ್ವಾರ, ಹೈದರಾಬಾದ್, ಇಂಫಾಲ, ಇಟಾನಗರ, ಜಮ್ಮು, ಕಾರ್ಗಿಲ್, ಕೊಹಿಮಾ, ಕೊಕ್ರಾಜರ್, ಕೋಲ್ಕತಾ, ಕುರುಕ್ಷೇತ್ರ, ಲೇಹ್, ಲಕ್ನೋ, ಲುಂಗ್‌ಲೇಯ್, ಮಜುಲಿ, ಮಂಡಿ, ಮುಜಫ್ಫರಪುರ, ನೊಯ್ಡಾ, ಪಾಲಿ, ಪಾಸಿಘಾಟ್, ಪಾಟ್ನಾ, ರಾಂಚಿ, ರೊಪಾರ್, ಸೇನಾಪತಿ, ಶಿಲ್ಲಾಂಗ್, ಶಿಮ್ಲಾ, ಸಿಲ್ಚರ್, ನೈಋತ್ಯ ದೆಹಲಿ, ಶ್ರೀನಗರ, ತೇಜ್‌ಪುರ, ತೇಜು, ತುರಾ, ಜೊರಾತ್ ಮತ್ತು ತನ್ನ ದೆಹಲಿ ಪ್ರಧಾನ ಕಚೇರಿಗಳಲ್ಲಿ ಸೇರಿದಂತೆ 52 ಸ್ಥಳಗಳಲ್ಲಿ ತನ್ನ ಸ್ವಂತ ಕೇಂದ್ರಗಳ ಜಾಲವನ್ನು ಹೊಂದಿದೆ. ಸ್ವಂತ ಕೇಂದ್ರಗಳು ಅಷ್ಟೇ ಅಲ್ಲದೆ, ಎನ್‌ಐಇಎಲ್‌ಐಟಿ ಸಂಸ್ಥೆಯು ತರಬೇತಿ ಮತ್ತು ಕೌಶಲ್ಯಾಭಿವೃದ್ಧಿಗಾಗಿ 700ಕ್ಕೂ ಹೆಚ್ಚು ಮಾನ್ಯತೆಯುಳ್ಳ ಸಂಸ್ಥೆಗಳು ಮತ್ತು 9000ಕ್ಕೂ ಅಧಿಕ ಸೌಲಭ್ಯ ಕೇಂದ್ರಗಳ ಮುಖಾಂತರ ಕೂಡ ತನ್ನ ಜಾಲವನ್ನು ವಿಸ್ತರಿಸಿಕೊಂಡಿದೆ. ಕಳೆದ 11 ವರ್ಷಗಳಲ್ಲಿ, ಎನ್‌ಐಇಎಲ್‌ಐಟಿ ಸಂಸ್ಥೆಯು 86 ಲಕ್ಷಕ್ಕೂ ಅಧಿಕ ಅಭ್ಯರ್ಥಿಗಳಿಗೆ ತರಬೇತಿ/ಪ್ರಮಾಣಪತ್ರ ನೀಡಿದ್ದು, ಇದರ ಪ್ರಮಾಣವು ವಾರ್ಷಿಕ ಸರಾಸರಿ 7 ರಿಂದ 8 ಲಕ್ಷ ಆಗಿದೆ. ಎನ್‌ಐಇಎಲ್‌ಐಟಿ ಸಂಸ್ಥೆಯು ಮುಂಬರುವ 5 ವರ್ಷಗಳಲ್ಲಿ ಒಂದು ಕೋಟಿ ಕೌಶಲ್ಯಭರಿತ ಮಾನವ ಸಂಪನ್ಮೂಲ ಪಡೆಯನ್ನು ನಿರ್ಮಿಸುವ ದೂರದೃಷ್ಟಿ ಹೊಂದಿದೆ.

HQs – ನವದೆಹಲಿ; 52 – ಸ್ವಂತ ಕೇಂದ್ರಗಳು; 700+ – ಅಂಗೀಕೃತ ಸಂಸ್ಥೆಗಳು; 9000+ – ಸೌಲಭ್ಯ ಕೇಂದ್ರಗಳು

ಕೆಳಕಂಡ ಕಾರ್ಯಕ್ರಮಗಳಿಗೆ ಮಾನ್ಯತೆ ನೀಡಲಾಗಿದೆ

ದೀರ್ಘಾವಧಿ ಕೋರ್ಸ್‌ಗಳು

- ಎನ್‌ಐಇಎಲ್‌ಐಟಿ 'ಒ' ಲೆವೆಲ್ (ಐಟಿ) – ಲೆವೆಲ್ 4
- ಎನ್‌ಐಇಎಲ್‌ಐಟಿ 'ಎ' ಲೆವೆಲ್ (ಐಟಿ) – ಲೆವೆಲ್ 5
- ಎನ್‌ಐಇಎಲ್‌ಐಟಿ 'ಬಿ' ಲೆವೆಲ್ (ಐಟಿ) – ಲೆವೆಲ್ 6
- ಎನ್‌ಐಇಎಲ್‌ಐಟಿ 'ಸಿ' ಲೆವೆಲ್ (ಐಟಿ) – ಲೆವೆಲ್ 8
- ಡಿಪ್ಲೋಮ ಇನ್ ಕಂಪ್ಯೂಟರ್ ಹಾರ್ಡ್‌ವೇರ್ ಮೈಂಟೆನನ್ಸ್ ಟೆಕ್ನಿಷಿಯನ್ (ಸಿಎಚ್‌ಎಂ- ಟಿ 'ಒ' ಲೆವೆಲ್) ಕೋರ್ಸ್ – ಲೆವೆಲ್ 4

ಆನ್‌ಲೈನ್ ಅರ್ಜಿ ಸಲ್ಲಿಸಿ: http://onlineaccr.nielit.gov.in

APPROVED – ಎನ್‌ಸಿವಿಇಟಿ ಅನುಮೋದಿತ ಅವಾರ್ಡಿಂಗ್ ಬಾಡಿ ಮತ್ತು ಅಸೆಸ್‌ಮೆಂಟ್ ಏಜೆನ್ಸಿ

ಅಕ್ರೆಡಿಟೇಶನ್ ಪಾಲುದಾರರ ಯೋಜನೆಗಳು/ಪ್ರಾಜೆಕ್ಟ್‌ಗಳು

- ಡಿಜಿಇ: ಐಟಿ ಒ ಲೆವೆಲ್ ಮತ್ತು ಸಿಎಚ್‌ಎಂ-ಒ ಲೆವೆಲ್‌ನ ಎಸ್‌ಸಿ/ಎಸ್‌ಟಿ ಜಾಬ್ ಸೀಕರ್ಸ್
- ಸಮೂಹಗಳಿಗಾಗಿ ಐಟಿ
- ಭಾರತ ಸರ್ಕಾರದ ಎಂಇಐಟಿವೈ ರವರಿಗೆ ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆ
- ಎಐ, ಕ್ಲೌಡ್ ಕಂಪ್ಯೂಟಿಂಗ್, ಸೋಷಿಯಲ್ ಮೊಬೈಲ್ ಕುರಿತಾದ ಭವಿಷ್ಯದ ಕೌಶಲ್ಯಗಳ ಪ್ರಮುಖ ಯೋಜನೆ
- ಪ್ರಧಾನ ಮಂತ್ರಿ ಕೌಶಲ್ಯ ವಿಕಾಸ ಯೋಜನೆ (ಪಿಎಂಕೆವಿವೈ)
- ವರ್ಕ್ ಬೇಸ್ಡ್ ಲರ್ನಿಂಗ್ (ಡಬ್ಲ್ಯುಬಿಎಲ್)

ಪ್ರೋತ್ಸಾಹನ ಪುರಸ್ಕಾರ ಯೋಜನೆ

ಎಸ್‌ಸಿ/ಎಸ್‌ಟಿ/ದೈಹಿಕ ವಿಕಲಾಂಗ ಮತ್ತು ಮಹಿಳಾ ವಿದ್ಯಾರ್ಥಿಗಳಿಗೆ ಅಂಗೀಕೃತ ಸಂಸ್ಥೆಗಳಿಂದ ತರಬೇತಿ
ವಿವರಗಳಿಗಾಗಿ: www.nielit.gov.in/content/scholarship

ಅಂಗೀಕೃತ ಸಂಸ್ಥೆಗಳ ಪಟ್ಟಿ (ದೆಹಲಿ ಮತ್ತು ಉತ್ತರ ಪ್ರದೇಶ ಹೊರತುಪಡಿಸಿ)

NIELIT CENTRE GUWAHATI (ACCR-O1543) PH-9435526410. NIELIT SHIMLA (ACCR-O0776) PH-177- 2804216. NIELIT SRINAGAR (ACCR-O1283) PH-194-2300501, 2300949. TEZPUR CENTER, NIELIT GUWAHATI (ACCR-O1084) PIN-784001 PH-3712-233461, 233473. ELECTRONICS SERVICES & TRAINING CENTRE (ACCR-O0716) PIN-244715 PH-5947-251201. ESS DEE EDUCATION (EDES) SOCEITY (ACCR-O0967) PH-9419200507. EXEL MICRO SYSTEMS (ACCR-O1483) PH-9437052414. FACT COMPUTER INSTITUTE (UNIT OF FACT EDUCAION SOCIETY) (ACCR-O1762) PIN-176202 PH-9418425764. HILAL INSTITUTE (ACCR-O0944) PIN-192101 PH-9622545555. INDUSTRIAL TRAINING INSTITUTE (ACCR-O1185) PIN-788026 PH-9435176265. INFONET COMPUTERS (ACCR-O2020) PIN-190011, INTERACTIVE INSTITUTE OF INFORMATION TECHNOLOGY (ACCR-O1155) PIN-248001 PH-9411106542. PENTASYS COMPUTERS (ACCR-O1295) PIN-753001 PH-9238649324. PROFESSIONAL ACADEMY OF COMPUTER EDUCATION (ACCR-o0834) PIN-756001 PH-9437267606. RAJASTHAN COMPUTER EDUCATION INSTITUTE (ACCR-O1346) PIN-305001 PH-9828786637. REINZ INFORMATICS (ACCR-O0942) PIN-766001 PH-9437224260. SBS INFOSYSTEMS (ACCR-O1412) PH-9858555040. SCHOOL OF COMPUTER EDUCATION (ACCR-O0601). SHARP ACADEMY OF IT MANAGEMENT (ACCR-O1734) PIN-342010 PH-9414134616. SMT COMPUTER INSTITUTE (ACCR-O1191) PIN-249401 PH-9719174443. SUPERTECH (INDIA) COMPUTER EDUCATION (ACCR-O1309) PIN-180001 PH-9419191592. KARIMGANJ COLLEGE COMPUTER CENTRE (ACCR-O2066) PIN-788710. MASTERMIND INSTITUTE OF EDUCATION PVT. LTD. (ACCR-O2070) PIN-192124 PH-9797978497. TENDRIL INSTITUTE OF I. T. (ACCR-O2073) PH-9906703045. NIELIT CENTRE, AJMER (ACCR-O2074) PH-9096985835. NIELIT CENTRE, AJMER (ACCR-A2075) PH-9096985835. SUPER ADVANCED COMPUTER INSTITUTE (ACCR-O2080) PIN-190018 PH-9419550976. G-TECH COLLEGE OF COMPUTER EDUCATION (ACCR-O2085) PIN-192231 PH-9858419672. NIAT COMPUTER EDUCATION (ACCR-O2093) PH-9337035934. NIELIT GUWAHATI - JORHAT EXTENSION CENTRE (ACCR-O2096) PIN-785001 PH-9436891584. NIELIT GUWAHATI - JORHAT EXTENSION CENTRE (ACCR-A2097) PIN-785004 PH-9435081619. NIELIT GUWAHATI - SILCHAR EXTENSION CENTRE (ACCR-A2098) PH-9864264694. NIELIT GUWAHATI - SILCHAR EXTENSION CENTRE (ACCR-O2099) PH-9864264694. NIELIT GUWAHATI - CITY CENTRE (ACCR-O2109) PIN-781022 PH-9435143550. NIELIT GUWAHATI - CITY CENTRE (ACCR-A2110) PIN-781022 PH-9435143550. FLORIDA INSTITUTE OF IT PVT. LTD. (ACCR-O2117) PIN-192101 PH- 7006554134. K.G.N.T. MAHASANGH (KNOW HOT TO GRASS-ROOT NEW TECHNOLOGY) (ACCR-O2128) PIN-766105 PH-9437623938. CENTRE FOR IT & INTERACTIVE LEARNING (CIIL) (ACCR-O2144) PIN-770001 …

CBC 06102/12/0009/2425

ಬಯೋಕಾನ್ ಸಮೂಹದ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ ಅವರಿಗೆ ಐಎಸ್‌ಕ್ಯು ಅಧ್ಯಕ್ಷ ಜನಕ್ ಕುಮಾರ್ ಮೆಹ್ತಾ, ಟಿಕ್ಯುಎಂ ಅಂತರರಾಷ್ಟ್ರೀಯ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಬಿ.ಮುತ್ತುರಾಮನ್, ಆರ್.ವಿ. ಎಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲ ಕೆ.ಎನ್. ಸುಬ್ರಹ್ಮಣ್ಯ ಅವರು 'ಜೆಮ್ಶೆಡ್ ಜಿ ಟಾಟಾ ಪ್ರಶಸ್ತಿ' ಪ್ರದಾನ ಮಾಡಿದರು

ಕಿರಣ್ ಮಜುಂದಾರ್ ಶಾಗೆ ಪ್ರಶಸ್ತಿ ಪ್ರದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಯೋಕಾನ್ ಸಮೂಹದ ಅಧ್ಯಕ್ಷೆ ಕಿರಣ್ ಮಜುಂದಾರ್ ಶಾ ಭಾರತದಲ್ಲಿ ಜೈವಿಕ ವಿಜ್ಞಾನದ ಅಭಿವೃದ್ಧಿಗೆ ನೀಡಿರುವ ಕೊಡುಗೆಯನ್ನು ಪರಿಗಣಿಸಿ ಇಂಡಿಯನ್ ಸೊಸೈಟಿ ಫಾರ್ ಕ್ವಾಲಿಟಿ (ಐಎಸ್‌ಕ್ಯು) 'ಜೆಮ್ಶೆಡ್ ಜಿ ಟಾಟಾ ಪ್ರಶಸ್ತಿ' ನೀಡಿ ಗೌರವಿಸಿದೆ.

ಬೆಂಗಳೂರಿನಲ್ಲಿ ನಡೆದ ಐಎಸ್‌ಕ್ಯು ವಾರ್ಷಿಕ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಯಿತು.

'ಆಧುನಿಕ ಭಾರತೀಯ ಕೈಗಾರಿಕಾ ಪಿತಾಮಹ ಎಂದು ಹೆಸರಾಗಿರುವ ಜೆಮ್ಶೆಡ್ ನುಸ್ಸರ್‌ವಾನ್ ಜಿ ಟಾಟಾ ಅವರ ಹೆಸರಿನಲ್ಲಿರುವ ಈ ಪ್ರಶಸ್ತಿಯನ್ನು ಭಾರತೀಯ ಸಮಾಜಕ್ಕೆ ಗುಣಮಟ್ಟ, ಬದ್ಧತೆ ಮತ್ತು ತಮ್ಮ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ಉದ್ಯಮಿಗಳಿಗೆ ನೀಡಿ ಗೌರವಿಸಲಾಗುತ್ತದೆ.

ಐಎಸ್‌ಕ್ಯು ಅಧ್ಯಕ್ಷ ಜನಕ್ ಕುಮಾರ್ ಮೆಹ್ತಾ ಮಾತನಾಡಿ, '1978ರಿಂದ ಭಾರತದಲ್ಲಿ ಜೀವವಿಜ್ಞಾನ ಆಂದೋಲನದಲ್ಲಿ ಮುಂಚೂಣಿಯಲ್ಲಿರುವ ಕಿರಣ್ ಮಜುಂದಾರ್ ಶಾ ಅವರಿಗೆ ಈ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಲಾಗುತ್ತಿದೆ. ಭಾರತದಲ್ಲಿ ಮತ್ತು ಪ್ರಪಂಚದಾದ್ಯಂತ ಗ್ರಾಹಕರಿಗೆ ಸೇವೆ ಸಲ್ಲಿಸಲು ಬಯೋಕಾನ್ ಲಿಮಿಟೆಡ್ ಮತ್ತು ಸಂಬಂಧಿತ ಕಂಪನಿಗಳನ್ನು ಸ್ಥಾಪಿಸುವ ಮೂಲಕ ಸಮಾಜಕ್ಕೆ ಒಳಿತು ಮಾಡಿದ್ದಾರೆ' ಎಂದು ತಿಳಿಸಿದರು.

ನೆಲಮಂಗಲ: ಇಂದು ವಿದ್ಯುತ್ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೆಲಮಂಗಲ, ದಾಬಸ್‌ಪೇಟೆ ಉಪ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾರ್ಯ ಕೈಗೊಂಡಿರುವ ಕಾರಣ, ಭಾನುವಾರ ಬೆಳಿಗ್ಗೆ 10 ರಿಂದ ಸಂಜೆ 5 ಗಂಟೆವರೆಗೆ, ಎರಡು ಉಪಕೇಂದ್ರಗಳ ವ್ಯಾಪ್ತಿಯ ಪ್ರದೇಶಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ವಿದ್ಯುತ್ ಪೂರೈಕೆ ವ್ಯತ್ಯಯವಾಗುವ ಸ್ಥಳಗಳು: ನೆಲಮಂಗಲ ತಾಲ್ಲೂಕಿನ ದಾಬಸ್ ಪೇಟೆ, ತ್ಯಾಮಗೊಂಡ್ಲು, ಲಕ್ಕೂರು, ದೇವರಹೊಸಹಳ್ಳಿ, ಹಳೆ ನಿಜಗಲ್, ಹೊನ್ನೇನಹಳ್ಳಿ, ವೀರಸಾಗರ, ಕಾಮಲಪುರ, ಬೀರಗೊಂಡನಹಳ್ಳಿ, ಕೆಂಗಲ್ ಕೆಂಪೋಹಳ್ಳಿ, ಹೊಸಹಳ್ಳಿ, ಕುಲುವನಹಳ್ಳಿ, ಕೆರಕತ್ತಿಗನೂರು, ಮೇಳೆಕತ್ತಿಗನೂರು, ಲಕ್ಷ್ಮೀಪುರ ಕೈಗಾರಿಕಾ ಪ್ರದೇಶದ ಸುತ್ತಮುತ್ತಲಿನ ಸ್ಥಳಗಳು.

ಕಾರೇಹಳ್ಳಿ, ಮಣ್ಣೆ, ದೊಡ್ಡಬೆಲೆ, ಬಳೆಗೆರೆ, ಕಳಲುಘಟ್ಟ, ಧರ್ಮೇಗೌಡನಪಾಳ್ಯ, ಚನ್ನೋವಹಳ್ಳಿ, ಹಸಿರುವಳ್ಳಿ, ವರದನಾಯಕನಹಳ್ಳಿ, ಜಕ್ಕನಹಳ್ಳಿ, ಗೋಳ್ಳಾಪುರ, ಗುಡ್ಡೆಗೌಡನ ಚನ್ನೋಹಳ್ಳಿ, ಚಿಕ್ಕನಹಳ್ಳಿ, ಇಸುವನಹಳ್ಳಿ, ಲಕ್ಕೇನಹಳ್ಳಿ, ಬಿದಲೂರು, ಮರಳುಕುಂಟೆ, ದಾಸೇನಹಳ್ಳಿ, ತಾವರೆಕೆರೆ, ಗುಂಡೇನಹಳ್ಳಿ, ತೋಟನಹಳ್ಳಿ, ಕೈಗಾರಿಕಾ ಪ್ರದೇಶ, ಬಸವನಹಳ್ಳಿ, ನೆಲಮಂಗಲ ಪಟ್ಟಣ, ಜಕ್ಕಸಂದ್ರ, ಬಿನ್ನಮಂಗಲ, ಅರಿಶಿನಕುಂಟೆ, ದಾಸನಪುರ, ಗೋಪಾಲಪುರ, ಗೊಲ್ಲಹಳ್ಳಿ, ಮೈಲನಹಳ್ಳಿ, ಸೋಲ್ಲದೇವಹಳ್ಳಿ, ಹಂದಿಗುಡ್ಡ, ಮಂಚೆನಹಳ್ಳಿ, ಯಂಟಗಾನಹಳ್ಳಿ, ವಸಂತನಗರ, ದೊಡ್ಡಕರೇನಹಳ್ಳಿ ಸುತ್ತಮುತ್ತಲಿನ ಪ್ರದೇಶ.

ಕಾಡುಕರೇನಹಳ್ಳಿ, ಮಹದೇವಪುರ, ಮರಳುಸಿದ್ದಯ್ಯನಪಾಳ್ಯ, ಹೊನ್ನಸಂದ್ರ, ಗಾಂಧಿ ಗ್ರಾಮ, ಶ್ರೀನಿವಾಸಪುರ, ಕೆ.ಜಿ. ಶ್ರೀನಿವಾಸ್ ಪುರ, ಶಾಂತಿನಗರ, ಬಸವನಗರ, ಕೆಂಪಲಿಗನಹಳ್ಳಿ, ಹನುಮಂತಗೌಡನಪಾಳ್ಯ, ಚಿಕ್ಕಮಾರನಹಳ್ಳಿ, ಬೈರಸಂದ್ರ, ಹಾಜಿಪಾಳ್ಯ, ಹೊಸಪಾಳ್ಯ, ತೊರೆಪಾಳ್ಯ, ಯಲಚಗೆರೆ, ಬೆನಕ ಬಡಾವಣೆ, ಮದಲಕೋಟೆ, ಹೊರಳಿಹಳ್ಳಿ, ವೀರರಾಘವನಪಾಳ್ಯ ಸುತ್ತಮುತ್ತಲಿನ ಪ್ರದೇಶಗಳು.

ಬೊಮ್ಮನಹಳ್ಳಿ, ಅರಳಸಂದ್ರ, ಯರಮಂಚನಹಳ್ಳಿ, ಮಿಣ್ಣಾಪುರ, ಜಕ್ಕನಹಳ್ಳಿ, ಕೆ.ಆರ್. ಪಾಳ್ಯ, ಹಸಿರುವಳ್ಳಿ, ತಿಮ್ಮೇಗೌಡನಪಾಳ್ಯ, ಹೊಸೂರು, ಮಲ್ಲೋನಾಗತಿಹಳ್ಳಿ, ಭರನಹಳ್ಳಿ, ಕಂಬಯ್ಯನಪಾಳ್ಯ, ಟಿ.ಬೇಗೂರಿನ ಕೈಗಾರಿಕಾ ಪ್ರದೇಶ ಮತ್ತು ಸುತ್ತಮುತ್ತಲಿನ ಸ್ಥಳಗಳು.

ಕೋರಮಂಗಲ: 17, 18ರಂದು ವಿದ್ಯುತ್ ಇಲ್ಲ

ಬೆಂಗಳೂರು: ಕೋರಮಂಗಲ ವಿಭಾಗದ ಎರಡು ಉಪ ಕೇಂದ್ರಗಳಲ್ಲಿ ತುರ್ತು ನಿರ್ವಹಣಾ ಕಾರ್ಯ ನಡೆಯುತ್ತಿರುವ ಕಾರಣ, ಡಿ.17 ಮತ್ತು 18ರಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಗಂಟೆವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

ಸೇಂಟ್ ಜಾನ್ ವುಡ್ ಅಪಾರ್ಟ್‌ಮೆಂಟ್ ಆ್ಯಂಡ್ ಆಸ್ಪತ್ರೆ, ತಾವರೆಕೆರೆ, ಅಕ್ಸೆಂಚರ್, ಒರಕಲ್, ಕ್ರೈಸ್ಟ್ ಕಾಲೇಜು, ಬಿಟಿಎಂ ಲೇ ಔಟ್, ಮೆಜೆಸ್ಟಿಕ್ ಅಪಾರ್ಟ್‌ಮೆಂಟ್, ಆಕ್ಸಾ, ಆಸಿಸ್ ಭವನ್, ಸುದ್ದಗುಂಟೆ ಪಾಳ್ಯ, ಗುರಪ್ಪನ ಲೇಔಟ್, ವಿಕ್ಟೋರಿಯಾ ಲೇಔಟ್, ಪಾಮ್ ಗ್ರೂವ್ ರೋಡ್, ಬಾಲಾಜಿ ಥಿಯೇಟರ್, ಅಗ್ರಂ ವಿವೇಕಾನಗರ, ಸಣ್ಣೆನಹಳ್ಳಿ, ವೋನ್ನರ್ ಪೇಟೆ, ಆಂಜನೇಯ ಟೆಂಪಲ್ ಸ್ಟ್ರೀಟ್, ಕೆಎಸ್ ಆರ್ ಪಿ ಕ್ವಾಟ್ರಸ್, ಲಿಂಡನ್, ಯಲಗುಂಟೆ ಪಾಳ್ಯಮ್, ಏರ್ ಫೋರ್ಸ್, ಲೈಫ್ ಸ್ಟೈಲ್, ಕ್ಯಾಂಬಲ್ ರೋಡ್ ಜಂಕ್ಷನ್, ರಿಚ್ಮಂಡ್ ರೋಡ್, ರುದ್ರಪ್ಪ ಗಾರ್ಡನ್, ಎಂ.ಜಿ ಗಾರ್ಡನ್, ಆಸ್ಟಿನ್ ಟೌನ್, ನೀಲಸಂದ್ರ, ಬಜಾರ್ ಸ್ಟ್ರೀಟ್, ಆರ್ ಕೆ ಗಾರ್ಡನ್, ಬೆಂಗಳೂರು ಫರ್ನಿಚರ್, ರೋಸ್ ಗಾರ್ಡನ್, ಒ.ಆರ್.ಸಿ. ರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶಗಳು.

26ರಂದು ಪಕ್ಷದ ಕಾರ್ಯಕಾರಿ, 27ಕ್ಕೆ ಸಮಾವೇಶ: ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್

‘ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧೀಜಿ ಅವರು ಅಧ್ಯಕ್ಷರಾಗಿದ್ದ ಬೆಳಗಾವಿ ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಆಚರಣೆ ರಾಜ್ಯದಲ್ಲಿ ಹೊಸ ಅಧ್ಯಾಯ ಆರಂಭಿಸಲಿದೆ. 2028ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಗೆಲುವಿಗೆ ಮುನ್ನುಡಿ ಬರೆಯಲಿದೆ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಕೆಪಿಸಿಸಿ ಕಚೇರಿಯಲ್ಲಿ ಶನಿವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ‘ಗಾಂಧೀಜಿ ನೇತೃತ್ವ ವಹಿಸಿದ್ದ ಪಕ್ಷದ ಸಾರಥ್ಯವನ್ನು ಈಗ ನಮ್ಮ ರಾಜ್ಯದವರೇ ಆದ ಮಲ್ಲಿಕಾರ್ಜುನ ಖರ್ಗೆ ವಹಿಸಿದ್ದಾರೆ. ಇಂತಹ ಹೆಮ್ಮೆಯ ಕ್ಷಣವನ್ನು ಆಚರಿಸುವ ಅವಕಾಶ ಕನ್ನಡಿಗರಿಗೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಸಿಕ್ಕಿದೆ’ ಎಂದರು.

‘ಇದು ಪಕ್ಷ ಹಾಗೂ ಸರ್ಕಾರದ ಕಾರ್ಯಕ್ರಮ. ಸಚಿವ ಎಚ್.ಕೆ. ಪಾಟೀಲ, ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯಿಲಿ, ಬಿ.ಎಲ್. ಶಂಕರ್ ಅವರ ನೇತೃತ್ವದಲ್ಲಿ 60 ಸದಸ್ಯರ ಸಮಿತಿ ರಚಿಸಲಾಗಿದೆ. ಕಾರ್ಯಕ್ರಮ ಕುರಿತು ಈ ಸಮಿತಿ ರೂಪುರೇಷೆ ಸಿದ್ಧಪಡಿಸಲಿದೆ. ಬೆಳಗಾವಿಯಲ್ಲಿ ಗಾಂಧೀಜಿ ಅವರು ಕಾಂಗ್ರೆಸ್ ಅಧ್ಯಕ್ಷರಾಗಿ ಅಧಿಕಾರ ಸ್ವೀಕಾರ ಮಾಡಿದ ಜಾಗದಲ್ಲಿ ಇದೇ 26ರಂದು ಪಕ್ಷದ ಕಾರ್ಯಕಾರಿ ಸಮಿತಿ ಸಭೆ ನಡೆಸಲಾಗುವುದು’ ಎಂದು ಹೇಳಿದರು.

RAMRAJ
kirthanas
DEVOTIONAL DHOTIS • SHIRTS
Step Into Your Spiritual Journey with The Elegant Weave of Divinity.
Step into Spirituality and devotion with timeless elegance that's crafted to connect you to the divine. Ramraj Cotton's Devotional Dhotis are woven with care, blending tradition with comfort for a truly complete spiritual experience.
SCAN QR CODE FOR STORE LOCATION
www.ramrajcotton.in

RAMRAJ COTTON SHOWROOMS
BANGALORE : KG ROAD • SHIVAJI NAGAR • ULSOOR • GANDHI BAZAR • MALLESHWARAM • JAYANAGAR : 30TH CROSS ROAD SS PLAZA, 10TH B MAIN ROAD • KORAMANGALA • RAJAJI NAGAR • R.T. NAGAR • VIJAYANAGAR • BANASHANKARI • YESHWANTHPUR YELACHENAHALLI • UTTARAHALLI • HSR LAYOUT • RAMAMURTHY NAGAR • J.P. NAGAR • RR NAGAR • MARATHAHALLI • KR PURAM KENGERI • HESARAGATTA • YELHANKA • NELAMANGALA • DEVANAHALLI • CHINTAMANI • KANAKAPURA • RAMNAGARA • TUMKUR CHANDAPURA • CHAMBENAHALLI (SARJAPURA MAIN ROAD) • ATTIBELE • SINGANAIKANAHALLI • NEW THIPPASANDRA
Available at Ramraj Cotton Showrooms and All Leading Textile Shops | shop online @ www.ramrajcotton.in

Application Deadline: 10/01/2025
Applications are invited for
Ph.D. PROGRAMME 2025
GM UNIVERSITY Innovating Minds

1. Faculty of Engineering & Technology (CSE, ISE, AIML, ECE, EEE, ME, RA, BT & CE)
2. Faculty of Commerce & Management (Commerce & Management)
3. Faculty of Basic & Applied Science (Physics, Chemistry, Mathematics, Botany & Zoology)
4. Faculty of Computing and IT (Computer Applications)
Essential Qualification
- Relevant Master Degree from a recognized University/ Institutes under the affiliation of AICTE or UGC, with at least 55% aggregate marks for general category and 50% for SC/ST candidates
- The admission process involves GMU-SET-Ph.D. Entrance Test, followed by an interview
- The candidates who qualified in GATE, CSIR-UGC NET, SET will be preferred and are exempted from taking Entrance Test
GM UNIVERSITY
(Established under the Karnataka State Act No. 19 of 2023)
P. B. Road, Davanagere, Karnataka - 577 006
FOR MORE INFORMATION
98444 00397, 99168 22136
www.gmu.ac.in
admissions@gmu.ac.in

CAKE SHOW NOW AT PALACE GROUND
ವಾರ್ಷಿಕ ಕೇಕ್ ಉತ್ಸವ
ಈಗ ತ್ರಿಪುರ ವಾಸಿನಿ, ಅರಮನೆ ಮೈದಾನದಲ್ಲಿ
Millex presents
50th ANNUAL CAKE SHOW
Association with National Consumer Fair
IBCA
OVER 25+ CAKES
Dream Castle in Cake
13th Dec - 1st Jan 2025 | Daily : 11am - 9pm | Call: 8722200087
TRIPURA VASINI, PALACE GROUNDS, BENGALURU

Vi
ನಿಮ್ಮ ಪ್ರತಿಷ್ಠಿತ ಏರಿಯಾದಲ್ಲಿ Vi (ವೊಡಾಫೋನ್ ಐಡಿಯಾ) ಕಂಪನಿಯ ಶೋರೂಮ್‌ಗಾಗಿ ಪ್ರಾಪರ್ಟಿಯು ಬಾಡಿಗೆಗೆ ಬೇಕಾಗಿದೆ.
ಪ್ರಾಪರ್ಟಿ ವಿವರಗಳು: ನೆಲಮಹಡಿಯಲ್ಲಿ ಕನಿಷ್ಠ 10 ಅಡಿ ಉದ್ದದ, 400 Sq Ft & 700 Sq Ft ಪ್ರಾಪರ್ಟಿ ಯು ಈ ಕೆಳಗಿನ ಏರಿಯಾಗಳಲ್ಲಿ ಲಭ್ಯವಿದ್ದರೆ ನಮ್ಮನ್ನು ಸಂಪರ್ಕಿಸಿ: 9844315782
ದಾಸರಹಳ್ಳಿ, ನಾಗವಾರ, ಗುಬ್ಬಲಾಳ, ನಾಗರಭಾವಿ, ಯಲಚೇನಹಳ್ಳಿ, ಉತ್ತರಹಳ್ಳಿ, ಚಾಮರಾಜಪೇಟೆ, ಸರ್ಜಾಪುರ, ಕೆರ್‌ಪುರಂ, ಬ್ರೂಕ್ ಫೀಲ್ಡ್, ಕಾಡುಗೋಡಿ, ಯಲಹಂಕ, ಹೆಣ್ಣೂರ್, ಜೆಪಿ ನಗರ 7th ಫೇಸ್, ಹೊಸರೋಡ್, ಬೆಳ್ಳಂದೂರು, ಯಶವಂತಪುರ, ಥಣಿಸಂದ್ರ, ವರ್ತೂರು, ಹರಳೂರು, ಬನ್ನೇರುಘಟ್ಟ ರೋಡ್, ಎಚ್ ಎಸ್ ಆರ್ ಲೇಔಟ್, ಗಾಂಧಿ ಬಜಾರ್, ಮಹದೇವಪುರ.

ಹೊಸ ಅಮುಲ್ ಮೊಸರು
ಕೇವಲ ₹25* ರಲ್ಲಿ 500g ದೊರೆಯುತ್ತದೆ
Amul CURD CREAMY AND TASTY
*MRP (incl.of all taxes). Conditions apply.
1kgಗೆ ₹50* ರಲ್ಲಿ ಕೂಡ ಲಭ್ಯವಿದೆ

ರೈತರಿಗೆ ಪರಿಹಾರ ಸಂಸದ ಒತ್ತಾಯ

ನವದೆಹಲಿ: ಬೆಂಗಳೂರು ಗ್ರಾಮಾಂತರ ಲೋಕಸಭಾ ಸದಸ್ಯ ಡಾ. ಸಿ.ಎನ್. ಮಂಜುನಾಥ್ ಅವರು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರನ್ನು ಶನಿವಾರ ಭೇಟಿ ಮಾಡಿ, ಹವಾಮಾನ ವೈಪರೀತ್ಯದಿಂದ ತೆಂಗು, ಮಾವು ಬೆಳೆ ಕಳೆದುಕೊಂಡಿರುವ ರಾಮನಗರ ಜಿಲ್ಲೆಯ ರೈತರಿಗೆ ಪರಿಹಾರ ಬಿಡುಗಡೆ ಮಾಡುವಂತೆ ಒತ್ತಾಯಿಸಿದರು.

ಜಿಲ್ಲೆಯ 50 ಸಾವಿರಕ್ಕೂ ಹೆಚ್ಚು ರೈತರು ₹57.67 ಕೋಟಿ ಮೌಲ್ಯದ ಮಾವು ಬೆಳೆ ಹಾಗೂ ₹30.65 ಕೋಟಿ ಮೌಲ್ಯದ ತೆಂಗು ಬೆಳೆಗಳನ್ನು ಕಳೆದುಕೊಂಡಿದ್ದಾರೆ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಡಿ ಹಣ ಬಿಡುಗಡೆ ಮಾಡುವಂತೆ ಸಂಸದರು ಸಚಿವರಿಗೆ ಮನವಿ ಮಾಡಿದ್ದಾರೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಹೆಸರಘಟ್ಟದಲ್ಲಿರುವ ಭಾರತೀಯ ತೋಟಗಾರಿಕೆ ಸಂಶೋಧನಾ ಕೇಂದ್ರವನ್ನು ಡೀಮ್ಡ್ ವಿ.ವಿ.ಯನ್ನಾಗಿ ಮೇಲ್ದರ್ಜೆಗೇರಿಸಬೇಕು ಎಂದೂ ಸಚಿವರನ್ನು ಒತ್ತಾಯಿಸಿದರು.

ಕರ್ನಾಟಕ ಸರ್ಕಾರ
ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ
ನಿಧಾನಿಸಿ!
ಸುರಕ್ಷತೆಗಾಗಿ ವೇಗದ ಮಿತಿಯನ್ನು ಅನುಸರಿಸಿ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಈ ಕೆಳಕಂಡ ಅಂಕಿ-ಅಂಶಗಳಿಗೆ ಕರ್ನಾಟಕವು ಸಾಕ್ಷಿಯಾಗಿದೆ
- 2022ರಲ್ಲಿ ಭಾರತದಲ್ಲಿ ಸಂಭವಿಸಿದ ರಸ್ತೆ ಅಪಘಾತಗಳಲ್ಲಿ ರಾಜ್ಯವು 8.6%ರಷ್ಟು ಮರಣ ಪ್ರಮಾಣ ದಾಖಲಿಸಿದೆ
- 2021ಕ್ಕೆ ಹೋಲಿಸಿದರೆ 2022ರಲ್ಲಿ ಮರಣ ಪ್ರಮಾಣದಲ್ಲಿ 17%ರಷ್ಟು ಮತ್ತು ಗಾಯಾಳುಗಳ ಪ್ರಮಾಣದಲ್ಲಿ 18%ರಷ್ಟು ರಾಜ್ಯದಲ್ಲಿ ಏರಿಕೆಯಾಗಿದೆ.
- 2022ರಲ್ಲಿ ರಾಜ್ಯದಲ್ಲಿ 93% ರಷ್ಟು ಅಪಘಾತ ಮರಣಗಳು ಮತ್ತು 91%ರಷ್ಟು ಗಾಯಗಳು ಉಂಟಾಗಲು ಅತೀ ವೇಗದ ಚಾಲನೆ ಕಾರಣವಾಗಿರುತ್ತದೆ.

* ಕೃಪೆ ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯದ 2021,2022 ರ ವರದಿ.
ಕರ್ನಾಟಕ ರಾಜ್ಯ ಪೊಲೀಸ್ ವರದಿ : 2023

ವಾಹನಗಳ ಅತೀ ವೇಗದ ಚಾಲನೆಗೆ ಮೋಟಾರು ವಾಹನ ಕಾಯಿದೆ 1988ರ ಕಲಂ 183 ಅಡಿಯಲ್ಲಿ ದಂಡವನ್ನು ವಿಧಿಸಬಹುದಾಗಿರುತ್ತದೆ.

ನಿಮ್ಮ ವೇಗದಲ್ಲಾಗೋ ಸ್ವಲ್ಪವೇ ವ್ಯತ್ಯಾಸ, ಅಪಘಾತ ಆಗೋದನ್ನು, ಅದರ ತೀವ್ರತೆಯನ್ನು ಹಾಗೂ ನಿಮ್ಮ ಸಾವು ಬದುಕನ್ನು ನಿರ್ಧರಿಸುತ್ತದೆ.

ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ
ರಸ್ತೆ ಸುರಕ್ಷತೆ - ನಮ್ಮ ಆದ್ಯತೆ
ಡಾ|| ಎನ್.ವಿ. ಪ್ರಸಾದ್ ಐ.ಎ.ಎಸ್. ಕಾರ್ಯದರ್ಶಿಗಳು ಸಾರಿಗೆ ಇಲಾಖೆ
ಶ್ರೀ ಎ.ಎಂ. ಯೋಗೀಶ್ ಐ.ಎ.ಎಸ್. ಆಯುಕ್ತರು ಸಾರಿಗೆ ಮತ್ತು ರಸ್ತೆ ಸುರಕ್ಷತೆ
ಶ್ರೀ ಜಿ. ಪುರುಷೋತ್ತಮ್ ಅಪರ ಆಯುಕ್ತರು ಮತ್ತು ಸದಸ್ಯ ಕಾರ್ಯದರ್ಶಿ ಕರ್ನಾಟಕ ರಾಜ್ಯ ರಸ್ತೆ ಸುರಕ್ಷತಾ ಪ್ರಾಧಿಕಾರ

ವಧು–ವರರ ಸ್ನೇಹಿತರಿಗೆ ಸೈಬರ್ ವಂಚಕರ ಗಾಳ; ಬೆಂಗಳೂರಿನಲ್ಲೇ ಹೆಚ್ಚು ಪ್ರಕರಣ ದಾಖಲು

‘ಡಿಜಿಟಲ್ ಮದುವೆ ಕಾರ್ಡ್’ ತೆರೆದರೆ ಆಪತ್ತು

• ಆದಿತ್ಯ ಕೆ.ಎ.

ಬೆಂಗಳೂರು: ಸೈಬರ್ ಖದೀಮರು ವಂಚನೆ ಎಸಗಲು ಪ್ರತಿನಿತ್ಯ ಹೊಸ ಮಾರ್ಗಗಳನ್ನು ಕಂಡುಕೊಳ್ಳುತ್ತಿದ್ದಾರೆ. ಇದೀಗ ಮದುವೆ ಸಮಾರಂಭಗಳು ನಡೆಯುತ್ತಿರುವ ಕಾಲವನ್ನೇ ಬಂಡವಾಳ ಮಾಡಿಕೊಂಡು ಹಣ ದೋಚಲು ಆರಂಭಿಸಿದ್ದಾರೆ. ಸ್ನೇಹಿತರ ಸೋಗಿನಲ್ಲಿ ಡಿಜಿಟಲ್ ಮದುವೆ ಕಾರ್ಡ್ ಕಳುಹಿಸಿ ವಂಚಿಸುತ್ತಿದ್ದಾರೆ.

‘ಇದು ಡಿಜಿಟಲ್ ಯುಗ. ಸ್ನೇಹಿತರು ತಮ್ಮ ಮದುವೆಯ ‘ಡಿಜಿಟಲ್ ಆಹ್ವಾನ ಪತ್ರಿಕೆ’ಯನ್ನು ವಿಭಿನ್ನವಾಗಿ ಕಳುಹಿಸಿದ್ದಾರೆಂದು ನಂಬಿ ವಾಟ್ಸ್‌ಆ್ಯಪ್‌ಗೆ ಬಂದ ಸಂದೇಶ ತೆರೆದು ನೋಡಿದರೆ ಕ್ಷಣಾರ್ಧದಲ್ಲಿ ಬ್ಯಾಂಕ್ ಖಾತೆಯಿಂದ ಹಣ ಖಾಲಿ ಆಗುತ್ತಿದೆ. ಕಳೆದೆರಡು ತಿಂಗಳಿಂದ ಈ ರೀತಿಯ ಪ್ರಕರಣಗಳು ರಾಜ್ಯದಲ್ಲಿ ಹೆಚ್ಚಾಗಿವೆ. ಹಣ ಕಳೆದುಕೊಂಡವರು ಸೈಬರ್ ಪೊಲೀಸ್ ಠಾಣೆಗೆ ಬಂದು ಸೈಬರ್ ಕಳ್ಳರ ವಿರುದ್ಧ ಪ್ರಕರಣ ದಾಖಲು ಮಾಡುತ್ತಿದ್ದಾರೆ. ಈ ರೀತಿಯ ಪ್ರಕರಣಗಳು ಬೆಂಗಳೂರಿನಲ್ಲೇ ಹೆಚ್ಚು ನಡೆಯುತ್ತಿವೆ’ ಎಂದು ಪೊಲೀಸರು ತಿಳಿಸಿದರು.

ಡಿಜಿಟಲ್ ಮದುವೆ ಕಾರ್ಡ್‌ಗಳು ತಮ್ಮ ಮೊಬೈಲ್‌ಗೆ ಬಂದಲ್ಲಿ ಫೈಲ್‌ನ ಕೊನೆಯಲ್ಲಿ ಎಪಿಕೆ ಎಂದಿದ್ದರೆ ತೆರೆದು ವೀಕ್ಷಣೆ ಮಾಡುವುದು ಬೇಡ

ಅನೂಪ್ ಶೆಟ್ಟಿ
ಎಸ್‌ಪಿ, ಸೈಬರ್ ಕ್ರೈಂ ವಿಭಾಗ, ಸಿಐಡಿ



ವಂಚಕರು ಕಳುಹಿಸುತ್ತಿರುವ ಡಿಜಿಟಲ್ ಮದುವೆ ಕಾರ್ಡ್

ಮದುವೆ ನಿಶ್ಚಯ ಆಗಿರುವ ಯುವಕ, ಯುವತಿಯರ ವಿವರನ್ನು ಕಲೆಹಾಕುತ್ತಿರುವ ಸೈಬರ್ ಖದೀಮರು, ಅವರ ಸ್ನೇಹಿತರು, ಆತ್ಮೀಯರು, ಕುಟುಂಬಸ್ಥರಿಗೆ ಡಿಜಿಟಲ್ ಮದುವೆ ಕಾರ್ಡ್ ಕಳುಹಿಸುತ್ತಿದ್ದಾರೆ. ಡಿಜಿಟಲ್ ಕಾರ್ಡ್ ಹೆಸರಿನಲ್ಲಿ ವಾಟ್ಸ್‌ಆ್ಯಪ್‌ಗೆ ಎಪಿಕೆ ಫೈಲ್ಸ್ ಕಳುಹಿಸುತ್ತಾರೆ. ಅದನ್ನು ತೆರೆದ ತಕ್ಷಣವೇ ಮೊಬೈಲ್‌ನಲ್ಲಿ ಕುತಂತ್ರಾಂಶ ಸೇರುತ್ತಿದೆ. ನಂತರ ರಿಮೋಟ್ ಆಧಾರದಲ್ಲಿ ಮೊಬೈಲ್ ಸ್ಕ್ರೀನ್ ಅನ್ನು ಶೇರ್ ಮಾಡಿಕೊಂಡು ಎಲ್ಲ ಸಂದೇಶಗಳು, ಒಟಿಪಿ ವೀಕ್ಷಿಸುತ್ತಿದ್ದಾರೆ. ಮೊಬೈಲ್ ಫೋನ್ ವಂಚಕರ ಹಿಡಿತಕ್ಕೆ ಸಿಲುಕುತ್ತಿದ್ದಂತೆಯೇ ಅವರ ಜಾಲ ಸಕ್ರಿಯ ಆಗುತ್ತದೆ. ಒಟಿಪಿ ಬಳಸಿ ಕ್ಷಣಾರ್ಧದಲ್ಲಿ ಬ್ಯಾಂಕ್ ಖಾತೆಗಳಿಂದ ಹಣ ದೋಚುತ್ತಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

‘ಸೈಬರ್ ವಂಚಕರ ಜತೆಗೆ ಸ್ಥಳೀಯರೂ ಶಾಮೀಲಾಗಿರುವ ಸಾಧ್ಯತೆಯಿದೆ. ವಧು–ವರರು ಹಾಗೂ ಅವರ ಕುಟುಂಬಸ್ಥರ ಮಾಹಿತಿಯನ್ನು ಸ್ಥಳೀಯರೇ ರವಾನೆ ಮಾಡುತ್ತಿರುವ ಅನುಮಾನವಿದೆ. ಅದನ್ನು ಬಳಸಿಕೊಂಡು ಉತ್ತರ ಪ್ರದೇಶ, ಗುಜರಾತ್, ದೆಹಲಿ, ಪಂಜಾಬ್ ಹಾಗೂ ಕಾಂಬೋಡಿಯಾ, ಲಾವೋಸ್, ಮ್ಯಾನ್ಮಾರ್, ಥಾಯ್ಲೆಂಡ್‌ನಲ್ಲಿ ಕುಳಿತು ಕಳ್ಳರು ವಂಚನೆ ಎಸಗುತ್ತಿದ್ದಾರೆ ಎಂಬುದು ಗೊತ್ತಾಗಿದೆ’ ಎಂದು ಸೈಬರ್ ಠಾಣೆ ಪೊಲೀಸರು ಹೇಳಿದರು.

‘ಹಿಂದೆಯೂ ವಿವಿಧ ಬ್ಯಾಂಕ್‌ಗಳ ಹೆಸರಿನಲ್ಲಿ ಕಳ್ಳರು ಎಪಿಕೆ ಫೈಲ್‌ಗಳನ್ನು ಕಳುಹಿಸಿ, ಕೆವೈಸಿ ಅಪ್‌ಡೇಟ್ ಮಾಡಿಕೊಳ್ಳುವಂತೆ ಗ್ರಾಹಕರಿಗೆ ಸೂಚಿಸುತ್ತಿದ್ದರು. ಆ ಫೈಲ್ ತೆರೆದ ಮೇಲೆ ಯಾವುದೇ ಅನುಮತಿಯಿಲ್ಲದೇ ಕುತಂತ್ರಾಂಶ ಮೊಬೈಲ್‌ಗೆ ಸೇರ್ಪಡೆ ಆಗುತ್ತಿತ್ತು. ಮೊಬೈಲ್‌ನಲ್ಲಿರುವ ವೈಯಕ್ತಿಕ ಮಾಹಿತಿ, ಬ್ಯಾಂಕ್ ವಿವರ, ಪಾಸ್‌ವರ್ಡ್, ಒಟಿಪಿ ಪಡೆದುಕೊಳ್ಳುತ್ತಿದ್ದರು. ಇದಕ್ಕೆ ವಾಟ್ಸ್‌ಆ್ಯಪ್ ಗ್ರೂಪ್‌ಗಳನ್ನು ವಂಚಕರು ಬಳಸುತ್ತಿದ್ದರು. ಆದರೆ, ಇದೀಗ ಡಿಜಿಟಲ್ ಮದುವೆ ಕಾರ್ಡ್‌ಗಳನ್ನು ವೈಯಕ್ತಿಕವಾಗಿ ವಾಟ್ಸ್‌ಆ್ಯಪ್‌ಗೆ ಸಂಖ್ಯೆಗೆ ರವಾನೆ ಮಾಡುತ್ತಿದ್ದಾರೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘1930ಕ್ಕೆ ಮಾಹಿತಿ ನೀಡಿ’

‘ಸೈಬರ್ ವಂಚನೆ ಕುರಿತು ಪ್ರತಿ ಠಾಣಾ ವ್ಯಾಪ್ತಿಯಲ್ಲೂ ಜಾಗೃತಿ ಮೂಡಿಸಲಾಗುತ್ತಿದೆ. ಆದರೂ ಪ್ರಕರಣಗಳು ಕಡಿಮೆ ಆಗುತ್ತಿಲ್ಲ. ಜನರು ಹೆಚ್ಚು ಜಾಗೃತರಾದರೆ ಕಡಿವಾಣ ಹಾಕಲು ಸಾಧ್ಯ. ವಂಚಕರು ಸಾರ್ವಜನಿಕರನ್ನು ಬಲೆಗೆ ಬೀಳಿಸಿದರೆ ಧೈರ್ಯವಾಗಿ 1930ಗೆ ಕರೆ ಮಾಡಿ ಮಾಹಿತಿ ನೀಡಬಹುದು. ಪಾವತಿಗೆ ಸಂಬಂಧಿಸಿದಂತೆ ಅಪರಿಚಿತ ಲಿಂಕ್ ತೆರೆಯಬಾರದು’ ಎಂದು ಪೊಲೀಸರು ಹೇಳಿದರು.

ಸುದ್ದಿ 2 ನಿಮಿಷ

ಹೆಡ್‌ಕಾನ್‌ಸ್ಟೆಬಲ್ ಸಾವು

ದಾಬಸ್ ಪೇಟೆ: ಇಲ್ಲಿನ ಪೊಲೀಸ್ ಠಾಣೆಯ ಹೆಡ್‌ಕಾನ್‌ಸ್ಟೆಬಲ್ ಬಸವರಾಜು (39) ಅಪಘಾತದಲ್ಲಿ ಶುಕ್ರವಾರ ರಾತ್ರಿ ಮೃತರಾಗಿದ್ದಾರೆ.

ಕೆಲಸ ನಿಮಿತ್ತ (ಡಿ.13) ಶುಕ್ರವಾರ ಸಂಜೆ 7 ಗಂಟೆ ಸಮಯದಲ್ಲಿ ಮಧುಗಿರಿ ರಸ್ತೆಯಲ್ಲಿ ದ್ವಿಚಕ್ರ ವಾಹನದಲ್ಲಿ ನರಸೀಪುರಕ್ಕೆ ಹೋಗುವಾಗ ಮಾದೇನಹಳ್ಳಿ ಹತ್ತಿರ ಟ್ರ್ಯಾಕ್ಟರ್ ಡಿಕ್ಕಿಯಾಗಿ ತೀವ್ರವಾಗಿ ಗಾಯಗೊಂಡಿದ್ದರು. ಅವರನ್ನು ತುಮಕೂರಿನ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿತ್ತು.

ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕು, ಕಸಬಾ ಹೋಬಳಿ ಕಿತ್ತಲಗುಪ್ಪೆ ಗ್ರಾಮದ ಬಸವರಾಜು 2002ರಲ್ಲಿ ಪೊಲೀಸ್ ಇಲಾಖೆಗೆ ಸೇರಿ ಮಾದನಾಯಕನಹಳ್ಳಿ ಹಾಗೂ ದಾಬಸ್ ಪೇಟೆ ಪೊಲೀಸ್ ಠಾಣೆಯಲ್ಲಿ ಕೆಲಸ ನಿರ್ವಹಿಸಿದ್ದರು. ಅವರಿಗೆ, ಪತ್ನಿ, ಇಬ್ಬರು ಪುತ್ರಿಯರಿದ್ದಾರೆ.

ಸ್ವಾಮೀಜಿಗೆ ಬೆದರಿಕೆ: ದೂರು

ಬೆಂಗಳೂರು: ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರನ್ನು ನಿಂದಿಸಿ, ಜೀವಬೆದರಿಕೆ ಹಾಕಿದ್ದ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ಕೋರಿ ವಕೀಲೆ ರೇಖಾ ಅವರು ಹೈಗ್ರೌಂಡ್ಸ್ ಠಾಣೆಗೆ ದೂರು ನೀಡಿದ್ದಾರೆ.

ಮೈಸೂರಿನಲ್ಲಿ ನಡೆಯುತ್ತಿದ್ದ ಮಾಧ್ಯಮಗೋಷ್ಠಿ ವೇಳೆ ಸ್ವಾಮೀಜಿಗೆ ಕೆ.ಎಸ್.ಶಿವರಾಮು ಎಂಬಾತ ‘ಮೀಸಲಾತಿ ಕೇಳಿ ನಮ್ಮ ಅನ್ನದ ತಟ್ಟೆಗೆ ಕೈಹಾಕಬೇಡಿ; ಕೈಹಾಕಿದರೆ ನಿಮ್ಮ ಕೈಯನ್ನು ಕತ್ತರಿಸುತ್ತೇವೆ’ ಎಂದು ಬೆದರಿಕೆ ಹಾಕಿದ್ದಾರೆ. ಆ ವ್ಯಕ್ತಿಯ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಕೋರಲಾಗಿದೆ.

‘ಪಕ್ಷಾತೀತವಾಗಿ ಸ್ವಾಮೀಜಿ ಹೋರಾಟ ನಡೆಸುತ್ತಿದ್ದಾರೆ. ಆದರೆ, ಆ ವ್ಯಕ್ತಿ ಬಿಜೆಪಿ ಏಜೆಂಟ್ ಎಂದು ನಿಂದಿಸಿದ್ದಾನೆ. ಶಿವರಾಮು ಅವರ ಹೇಳಿಕೆಯ ಹಿಂದೆ ಜಾತಿ ಜಾತಿಗಳ ಮಧ್ಯೆ ಸಂಘರ್ಷ ಉಂಟು ಮಾಡಿ ಸಮಾಜದ ಸ್ವಾಸ್ಥ್ಯ ಹಾಳು ಮಾಡುವುದಾಗಿದೆ. ಶ್ರೀಗಳ ಲಕ್ಷಾಂತರ ಭಕ್ತರನ್ನು ಪ್ರಚೋದಿಸಿ ಗಲಭೆ ಎಬ್ಬಿಸುವ ವ್ಯವಸ್ಥಿತ ಹುನ್ನಾರ ಅಡಗಿದೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಬಹಿಷ್ಕಾರಕ್ಕೆ ಅವಕಾಶವಿಲ್ಲ’

ಚಾಮರಾಜನಗರ: ಉಪ್ಪಾರ ಸಮುದಾಯದ ಕುಟುಂಬಗಳಿಗೆ ಬಹಿಷ್ಕಾರ ಹಾಕಿದ ಘಟನೆ ಸಂಬಂಧ, ತಾಲ್ಲೂಕಿನ ಲಿಂಗರಾಜಪುರಕ್ಕೆ ಜಿಲ್ಲಾ ನ್ಯಾಯಾಧೀಶರಾದ ಬಿ.ಎಸ್.ಭಾರತಿ ಹಾಗೂ ಜಿಲ್ಲಾಧಿಕಾರಿ ಶಿಲ್ಪಾನಾಗ್ ಶುಕ್ರವಾರ ಭೇಟಿ ನೀಡಿ, ಸಂತ್ರಸ್ತರು ಹಾಗೂ 16 ಗ್ರಾಮಗಳ ಕಟ್ಟೆಗಡಿ ಯಜಮಾನರ ಜೊತೆಗೆ ಸಭೆ ನಡೆಸಿದರು.

‘ಸಾಮಾಜಿಕ ಬಹಿಷ್ಕಾರದಂತಹ ಅನಿಷ್ಟ ಪದ್ಧತಿ ಆಚರಣೆ ಕಾನೂನು ಪ್ರಕರಣ ಶಿಕ್ಷಾರ್ಹ ಅಪರಾಧ. ಇಂತಹ ಘಟನೆಗಳು ಮುಂದೆ ನಡೆಯಬಾರದು’ ಎಂದು ನ್ಯಾಯಾಧೀಶರಾದ ಬಿ.ಎಸ್. ಭಾರತಿ ಎಚ್ಚರಿಕೆ ನೀಡಿದರು.

‘ಮೂರು ತಿಂಗಳ ಗಡುವು ನೀಡಿದ ಅವರು, ಗ್ರಾಮಗಳ ಮುಖಂಡರು ಮನಸ್ಥಿತಿ ಬದಲಾಯಿಸಿಕೊಳ್ಳದಿದ್ದರೆ, ಬಹಿಷ್ಕಾರ ಆಚರಿಸುವುದು ಕಂಡುಬಂದರೆ ಕಠಿಣ ಕಾನೂನು ಕ್ರಮ ಜರುಗಿಸಬೇಕಾಗುತ್ತದೆ’ ಎಂದರು.

‘ಸಮಾಜದಲ್ಲಿ ಎಲ್ಲರೂ ಸಮಾನರು. ಸಂವಿಧಾನಕ್ಕೆ ವಿರುದ್ಧವಾಗಿ ಬಹಿಷ್ಕಾರ ಹಾಕುವುದು, ದಂಡ ವಿಧಿಸುವುದಕ್ಕೆ ಅವಕಾಶವಿಲ್ಲ. ಕಾನೂನಿನಡಿ ಎಲ್ಲರೂ ಬದುಕಬೇಕು’ ಎಂದರು.

‘ಬಹಿಷ್ಕಾರದಂತಹ ಘಟನೆಗಳು ಮರುಕಳಿಸುವುದಿಲ್ಲ, ಅನಿಷ್ಟ ಪದ್ಧತಿ ಆಚರಣೆಗೆ ಮುಂದಾಗುವುದಿಲ್ಲ ಎಂದು ಮುಖಂಡರು ಲಿಖಿತ ಹೇಳಿಕೆ ನೀಡಿದರು’ ಎಂದು ಸಂತ್ರಸ್ತರು ತಿಳಿಸಿದರು.

ರೈಲಿಗೆ ತಲೆಕೊಟ್ಟು ಹೆಡ್‌ಕಾನ್‌ಸ್ಟೆಬಲ್ ಆತ್ಮಹತ್ಯೆ

ಪತ್ನಿ, ಮಾವನಿಂದ ಕಿರುಕುಳ: ರೈಲ್ವೆ ಪೊಲೀಸ್ ಠಾಣೆಯಲ್ಲಿ ಮೂವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪತ್ನಿ ಮತ್ತು ಆಕೆಯ ಕುಟುಂಬಸ್ಥರು ಕಿರುಕುಳ ಹಾಗೂ ಜೀವ ಬೆದರಿಕೆ ಹಾಕಿದ್ದಾರೆ’ ಎಂದು ಮರಣ ಪತ್ರದಲ್ಲಿ ಆರೋಪಿಸಿ ಹೆಡ್ ಕಾನ್‌ಸ್ಟೆಬಲ್ ಚಲಿಸುತ್ತಿದ್ದ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಟೆಕಿ ಅತುಲ್ ಸುಭಾಷ್ ಆತ್ಮಹತ್ಯೆ ಪ್ರಕರಣ ಮಾಸುವ ಮುನ್ನವೇ ಆದೇ ಮಾದರಿಯ ಆತ್ಮಹತ್ಯೆ ಪ್ರಕರಣ ನಗರದಲ್ಲಿ ನಡೆದಿದೆ.



ತಿಪ್ಪಣ್ಣ

ಹುಳಿಮಾವು ಠಾಣೆಯ ಹೆಡ್ ಕಾನ್‌ಸ್ಟೆಬಲ್, ಪರಪ್ಪನ ಅಗ್ರಹಾರದ ನಾಗನಾಥಪುರ ನಿವಾಸಿ ತಿಪ್ಪಣ್ಣ(33) ಆತ್ಮಹತ್ಯೆ ಮಾಡಿಕೊಂಡವರು. ತಿಪ್ಪಣ್ಣ ವಿಜಯಪುರ ಜಿಲ್ಲೆ ಸಿಂದಗಿ ತಾಲ್ಲೂಕಿನ ಹಂದಿಗನೂರು ಗ್ರಾಮದವರು.

ಶುಕ್ರವಾರ ತಡರಾತ್ರಿ ಬೈಯಪ್ಪನಹಳ್ಳಿ ರೈಲ್ವೆ ಪೊಲೀಸ್ ಠಾಣಾ ವ್ಯಾಪ್ತಿಯ ಹಿಲಲಿಗೆ ಮತ್ತು ಕಾರ್ಮೆಲ್ ರಾವ್ ಹುಸ್ಕೂರು ರೈಲ್ವೆ ಗೇಟ್ ಸಮೀಪ ಚಲಿಸುತ್ತಿದ್ದ ರೈಲಿಗೆ ತಲೆಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ತಿಪ್ಪಣ್ಣ ಅವರ ತಾಯಿ ಬಸಮ್ಮ ನೀಡಿದ ದೂರಿನ ಮೇರೆಗೆ ತಿಪ್ಪಣ್ಣನ ಮಾವ ಯಮನಪ್ಪ(50), ಪತ್ನಿ ಪಾರ್ವತಿ(24), ಈಕೆಯ ಸಹೋದರ ಮಾಳಪ್ಪ(26) ವಿರುದ್ಧ ಬೈಯಪ್ಪನಹಳ್ಳಿ ರೈಲ್ವೆ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಸದ್ಯಕ್ಕೆ ಯಾರನ್ನೂ ಬಂಧಿಸಿಲ್ಲ. ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ತಿಪ್ಪಣ್ಣ 2016ನೇ ಬ್ಯಾಚ್‌ನ ಕಾನ್‌ಸ್ಟೆಬಲ್. ಮೊದಲು ಪರಪ್ಪನ ಅಗ್ರಹಾರ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಹೆಡ್‌ಕಾನ್‌ಸ್ಟೆಬಲ್ ಆಗಿ ಮುಂಬಡ್ತಿ ಪಡೆದು ಹುಳಿಮಾವು ಠಾಣೆಗೆ ವರ್ಗಾವಣೆಗೊಂಡಿದ್ದರು. ಶುಕ್ರವಾರ ಅರಕೆರೆಯ ದೇವಸ್ಥಾನದ ಬಳಿ ಕರ್ತವ್ಯಕ್ಕೆ ನಿಯೋಜಿಸಲಾಗಿತ್ತು. ರಾತ್ರಿ ಕೆಲಸ ಮುಗಿಸಿಕೊಂಡು, ಠಾಣೆಗೆ ಬಂದು ಸಹಿ ಹಾಕಿ, ಬಳಿಕ ಮನೆಗೆ ಹೋಗಿದ್ದರು. ನಂತರ, ಬಟ್ಟೆ ಬದಲಿಸಿಕೊಂಡು ಮರಣ ಪತ್ರ ಬರೆದಿಟ್ಟು ಚಲಿಸುತ್ತಿದ್ದ ರೈಲಿಗೆ ತಲೆ ಕೊಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ರೈಲ್ವೆ ಪೊಲೀಸರು ಮಾಹಿತಿ ನೀಡಿದರು.

ಯಾದಗಿರಿ ಜಿಲ್ಲೆಯ ಪಾರ್ವತಿ ಅವರನ್ನು 2022ರಲ್ಲಿ ತಿಪ್ಪಣ್ಣ ಮದುವೆ ಆಗಿದ್ದರು. ದಂಪತಿಗೆ ಮಕ್ಕಳು ಇರಲಿಲ್ಲ. ಮದುವೆಯಾದ ಕೆಲ ದಿನಗಳಲ್ಲೇ ಇಬ್ಬರ ನಡುವೆ ಕೌಟುಂಬಿಕ ವಿಚಾರಕ್ಕೆ ಜಗಳ ಆಗಿತ್ತು. ಹೀಗಾಗಿ ಪತ್ನಿ ಪಾರ್ವತಿ ತವರು ಮನೆಯಲ್ಲೇ ಇದ್ದರು. ಪತ್ನಿ ಮತ್ತು ಆಕೆಯ ತಂದೆ ಮಲ್ಲಪ್ಪ ಕಿರುಕುಳ ನೀಡುತ್ತಿದ್ದರು ಎಂದು ತಿಪ್ಪಣ್ಣ ಅವರು ಮರಣ ಪತ್ರದಲ್ಲಿ ಆರೋಪಿಸಿದ್ದಾರೆ.

ಮರಣ ಪತ್ರದಲ್ಲಿ ಏನಿದೆ?: ‘ಹೆಂಡತಿಯ ಕಾಟಕ್ಕೆ ಬೇಸತ್ತು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದೇನೆ. ನನ್ನ ಮಾವ ಯಮನಪ್ಪ ಜೀವ ಬೆದರಿಕೆ ಹಾಕಿದ್ದಾರೆ. ಡಿ.12ರಂದು ಬೆಳಿಗ್ಗೆ 7.16ಕ್ಕೆ ಕರೆ ಮಾಡಿದ್ದ ಯಮನಪ್ಪ ಅವರು ನೀನು ಸತ್ತು ಹೋಗು. ನನ್ನ ಮಗಳು ಚೆನ್ನಾಗಿರುತ್ತಾಳೆ ಎಂದು ನಿಂದಿಸಿದ್ದರು. ಅಲ್ಲದೇ ನಾನೇ ನಿನ್ನನ್ನು ಸಾಯಿಸುತ್ತೇನೆ ಎಂದೂ ಬೆದರಿಕೆ ಹಾಕಿದ್ದರು. ನನ್ನ ಸಾವಿಗೆ ಪತ್ನಿ ಹಾಗೂ ಮಾವ ಯಮನಪ್ಪ ಅವರೇ ಕಾರಣ’ ಎಂದು ಮರಣ ಪತ್ರದಲ್ಲಿ ತಿಪ್ಪಣ್ಣ ಉಲ್ಲೇಖಿಸಿದ್ದಾರೆ.

ಅಪಾರ್ಟ್‌ಮೆಂಟ್‌ನಿಂದ ಜಿಗಿದು ಆತ್ಮಹತ್ಯೆ

ಬೆಂಗಳೂರು: ಯಲಹಂಕದ ಅಪಾರ್ಟ್‌ಮೆಂಟ್‌ವೊಂದರ 16ನೇ ಮಹಡಿಯಿಂದ ವ್ಯಕ್ತಿಯೊಬ್ಬರು ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಬಿಹಾರದ ನಿವಾಸಿ ರವಿ ಕುಮಾರ್(34) ಆತ್ಮಹತ್ಯೆ ಮಾಡಿಕೊಂಡವರು.

‘ಯಲಹಂಕ ಪೊಲೀಸ್ ಠಾಣಾ ವ್ಯಾಪ್ತಿಯ ಆರ್‌ಎಂಝೆಡ್ ಗಲೇರಿಯಾ ಅಪಾರ್ಟ್‌ಮೆಂಟ್‌ನಲ್ಲಿ ಈ ಘಟನೆ ನಡೆದಿದೆ’ ಎಂದು ಮೂಲಗಳು ಹೇಳಿವೆ.

‘ರವಿಕುಮಾರ್ ಅವರು ಅಪಾರ್ಟ್‌ಮೆಂಟ್‌ನ ಫ್ಲ್ಯಾಟ್‌ವೊಂದಕ್ಕೆ ಅತಿಥಿಯಾಗಿ ಬಂದಿದ್ದರು. ಶನಿವಾರ ಬೆಳಿಗ್ಗೆ ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದು ಗೊತ್ತಾಗಿದೆ. ಸದ್ಯಕ್ಕೆ ಹೆಚ್ಚಿನ ಮಾಹಿತಿ ಇಲ್ಲ. ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಲಂಚ: ಐಎಎಸ್ ಅಧಿಕಾರಿಗೆ ನೋಟಿಸ್

ಭುವನೇಶ್ವರ (ಪಿಟಿಐ): ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ಒಡಿಶಾ ಕೇಡರ್‌ನ ಹಿರಿಯ ಐಎಎಸ್ ಅಧಿಕಾರಿ ಬಿಷ್ಣುಪಾದ ಸೇಠಿ ಅವರಿಗೆ ಸಿಬಿಐ ನೋಟಿಸ್ ನೀಡಿದ್ದು, ಅವರ ಕಾರು ಚಾಲಕನನ್ನು ತನಿಖೆಗೆ ಒಳಪಡಿಸಿದೆ ಎಂದು ಮೂಲಗಳು ಶನಿವಾರ ತಿಳಿಸಿವೆ.

ಸಿಬಿಐ ಕಚೇರಿಯಲ್ಲಿ ಶನಿವಾರ ಅಧಿಕಾರಿಯ ಇಬ್ಬರು ಕಾರು ಚಾಲಕರನ್ನು ವಿಚಾರಣೆಗೆ ಒಳಪಡಿಸಿ, ಅವರ ಹೇಳಿಕೆಯನ್ನು ದಾಖಲಿಸಿಕೊಂಡಿದೆ.

‘ಡಿ. 7ರಂದು ಸೇಠಿ ಅವರ ಚಟುವಟಿಕೆ ಹೇಗಿತ್ತು, ಅವರು ಯಾರು ಯಾರನ್ನು ಭೇಟಿ ಮಾಡಿದ್ದರು ಮತ್ತು ಯಾವ್ಯಾವ ಸ್ಥಳಗಳಿಗೆ ಹೋಗಿದ್ದರು ಎಂದು ಕೇಳಿದರು. ನನಗೆ ಗೊತ್ತಿರುವುದನ್ನೆಲ್ಲ ಅವರಿಗೆ ತಿಳಿಸಿದೆ. ಈ ಪ್ರಕರಣದಲ್ಲಿ ವೈಯಕ್ತಿಕವಾಗಿ ನಾನು ಭಾಗಿಯಾಗಿಲ್ಲ’ ಎಂದು ಕಾರು ಚಾಲಕರಲ್ಲಿ ಒಬ್ಬರಾದ ನೃಶಿಂಗ ಸತ್ಪತಿ ಅವರು ಸುದ್ದಿಗಾರರಿಗೆ ತಿಳಿಸಿದರು.

ರಬ್ಬನಕಲ್ ಗ್ರಾಮದ ಬಾಣಂತಿ ಸಾವು

ಪ್ರಜಾವಾಣಿ ವಾರ್ತೆ

ರಾಯಚೂರು: ತಾಲ್ಲೂಕಿನ ರಬ್ಬನಕಲ್ ಗ್ರಾಮದ ಬಾಣಂತಿ ಈಶ್ವರಿ (32) ಶುಕ್ರವಾರ ಮೃತಪಟ್ಟಿದ್ದಾರೆ.

ಸೋಮವಾರ ಬೆಳಗಿನ ಜಾವ 3 ಗಂಟೆ ಸುಮಾರು ತಾಲ್ಲೂಕಿನ ಮಟಮಾರಿ ಗ್ರಾಮದ ಸರ್ಕಾರಿ ಆಸ್ಪತ್ರೆಯಲ್ಲಿ ಈಶ್ವರಿ ಅವರಿಗೆ ಹೆರಿಗೆ ಆಗಿತ್ತು. ಬಳಿಕ ಬುಧವಾರ ಆಸ್ಪತ್ರೆಯಿಂದ ಬಿಡುಗಡೆ ಆಗಿದ್ದರು. ಮೂರು ದಿನದ ನಂತರ ಮನೆಯಲ್ಲಿ ರಕ್ತಸ್ರಾವ ಉಂಟಾಗಿದೆ ಎಂದು ಶುಕ್ರವಾರ ರಾಯಚೂರಿನ ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಕೆಲವೇ ಗಂಟೆಗಳಲ್ಲಿ ಅವರು ಮೃತರಾಗಿದ್ದಾರೆ.

‘ಮಟಮಾರಿ ಆಸ್ಪತ್ರೆಯಲ್ಲಿ ಸೋಮವಾರ ಬೆಳಿಗ್ಗೆ ಹೆರಿಗೆ ಆಗಿದೆ. ಎರಡು ದಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು ನಂತರ ಮನೆಗೆ ಹೋದೆವು. ಮನೆಗೆ ಹೋದಾಗ ರಕ್ತಸ್ರಾವ ಸಮಸ್ಯೆ ಕಾಣಿಸಿಕೊಂಡಿದೆ. ನಂತರ ಮತ್ತೆ ಮಟಮಾರಿ ಆಸ್ಪತ್ರೆಗೆ ಬಂದಾಗ ವೈದ್ಯರು ಇಲ್ಲದೆ ಸಮಸ್ಯೆ ಎದುರಾಯಿತು. ತಕ್ಷಣ ಆಂಬುಲೆನ್ಸ್ ಮೂಲಕ ರಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅಲ್ಲಿ ಮಹಿಳೆಯು ಪ್ರಜ್ಞಾಹೀನ ಸ್ಥಿತಿಯಲ್ಲಿ ಇದ್ದಾರೆ. ನಾವು ಏನೂ ಮಾಡೋಕೆ ಆಗಲ್ಲ ಎಂದು ಬರೆಸಿಕೊಂಡು ಚಿಕಿತ್ಸೆ ನೀಡಿದರು. ಸ್ವಲ್ಪ ಹೊತ್ತಲ್ಲೇ ಮೃತರಾಗಿದ್ದಾರೆ’ ಎಂದು ಮೃತ ಮಹಿಳೆಯ ಸಂಬಂಧಿ ಚರಣರಾಜ್ ತಿಳಿಸಿದರು.

ಪರದಾಟ... ಮೈಸೂರು ರಸ್ತೆಯ ಕಿಮ್ಕೊ ಜಂಕ್ಷನ್‌ನಲ್ಲಿ ಪ್ರತಿನಿತ್ಯವೂ ವಾಹನ ದಟ್ಟಣೆ ಉಂಟಾಗುತ್ತಿದೆ. ಜಂಕ್ಷನ್ ಅಭಿವೃದ್ಧಿ ಕಾರ್ಯದ ಜೊತೆಗೆ ನೈಸ್ ಲಿಂಕ್ ರಸ್ತೆಯ ಕಾಮಗಾರಿಯೂ ನಡೆಯುತ್ತಿದೆ. ಮೈಸೂರು ರಸ್ತೆಯಿಂದ ದೀಪಾಂಜಲಿನಗರದ ಕಡೆಗೆ, ಮೈಸೂರು ರಸ್ತೆಯಿಂದ ಬಾಪೂಜಿನಗರದ ಕಡೆಗೆ ಹೋಗುವ ವಾಹನಗಳ ಸವಾರರಿಗೆ ನಿತ್ಯವೂ ಕಿರಿಕಿರಿ ಉಂಟಾಗುತ್ತಿದೆ ಪ್ರಜಾವಾಣಿ ಚಿತ್ರ: ರಂಜು ಪಿ

‘ಪತ್ನಿಯ ದೈಹಿಕ ಅಂತರವೂ ಕ್ರೌರ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪತಿಯಿಂದ ಎಂಟು ವರ್ಷ ದೂರವಿದ್ದು ದೈಹಿಕ ಅಂತರ ಕಾಯ್ದುಕೊಳ್ಳುವ ಮೂಲಕ ಆತನನ್ನು ವೈವಾಹಿಕ ಸುಖದಿಂದ ವಂಚಿಸುವ ಪತ್ನಿಯ ನಡೆಯೂ ಕ್ರೌರ್ಯಕ್ಕೆ ಸಮಾನ’ ಎಂಬ ಅಭಿಪ್ರಾಯ ವ್ಯಕ್ತಪಡಿಸಿರುವ ಹೈಕೋರ್ಟ್, ಪತಿಯಿಂದ ದೂರ ಉಳಿದಿದ್ದ ಪತ್ನಿಗೆ ವಿಚ್ಛೇದನ ಮಂಜೂರು ಮಾಡಿದೆ.

ಈ ಸಂಬಂಧ 41 ವರ್ಷದ ಪತಿ ಸಲ್ಲಿಸಿದ್ದ ಮೊದಲ ಮೇಲ್ಮನವಿಯನ್ನು ನ್ಯಾಯಮೂರ್ತಿ ಅನು ಶಿವರಾಮನ್ ಮತ್ತು ನ್ಯಾಯಮೂರ್ತಿ ಉಮೇಶ್ ಎಂ.ಅಡಿಗ ಅವರಿದ್ದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

ಸ್ಥಳೀಯ ಕೌಟುಂಬಿಕ ನ್ಯಾಯಾಲಯ ದಂಪತಿಗೆ ವಿಚ್ಛೇದನ ಡಿಕ್ರಿ ಮಂಜೂರು ಮಾಡದೆ ಹೋದ ಆದೇಶವನ್ನು ರದ್ದುಪಡಿಸಿದೆ.

‘ಈ ಪ್ರಕರಣದಲ್ಲಿನ 38 ವರ್ಷದ ಪತ್ನಿಯು ತಮ್ಮ ಪತಿಗೆ ತಿಳಿಸದೇ ಸ್ವಇಚ್ಛೆಯಿಂದ ಮನೆ ಬಿಟ್ಟು ಹೋಗಿರುವುದು ಕ್ರೌರ್ಯಕ್ಕೆ ಸಮಾನವಾಗಿದ್ದು, ಈ ಆಧಾರದಲ್ಲಿ ವಿಚ್ಛೇದನ ಮಂಜೂರು ಮಾಡಲಾಗುತ್ತಿದೆ’ ಎಂದು ನ್ಯಾಯಪೀಠ ಹೇಳಿದೆ.

‘ಅರ್ಜಿದಾರರ ಪತ್ನಿಯು ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿ ಸೇವೆ ಸಲ್ಲಿಸುತ್ತಿದ್ದು ಅವರಿಗೆ ಸ್ವಂತ ಆದಾಯವಿದೆ. ಪ್ರಕರಣದಲ್ಲಿ ಅವರು ತಮ್ಮ ಆಕ್ಷೇಪಣೆ ಸಲ್ಲಿಸಲು ನ್ಯಾಯಾಲಯದ ಮುಂದೆಯೂ ಬಂದಿಲ್ಲ. ಹೀಗಾಗಿ, ಅವರಿಗೆ ಶಾಶ್ವತ ಜೀವನಾಂಶ ನೀಡಬೇಕಾದ ಅನಿವಾರ್ಯತೆ ಎದುರಾಗುವುದಿಲ್ಲ’ ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

‘ಅರ್ಜಿದಾರರು ತಮ್ಮ ಇಬ್ಬರೂ ಮಕ್ಕಳನ್ನು ನೋಡಿಕೊಳ್ಳಲು ಸಿದ್ಧರಿದ್ದಾರೆ. ಅದಕ್ಕಾಗಿ ನ್ಯಾಯಾಲಯ ನಿರ್ಧರಿಸಿರುವ ಮೊತ್ತವನ್ನು ಠೇವಣಿ ಇರಿಸುವುದಕ್ಕೂ ತಯಾರಿದ್ದಾರೆ. ಈ ಮೊತ್ತವನ್ನು ಮಕ್ಕಳ ಜೀವನಾಂಶ ಮತ್ತು ಅವರ ಭವಿಷ್ಯದ ಶಿಕ್ಷಣಕ್ಕೆ ಬಳಸಬಹುದಾಗಿದೆ. ಹೀಗಾಗಿ, ಇಬ್ಬರೂ ಮಕ್ಕಳ ಹೆಸರಿನಲ್ಲಿ ತಲಾ ₹10 ಲಕ್ಷ ಮೊತ್ತವನ್ನು ಕೌಟುಂಬಿಕ ನ್ಯಾಯಾಲಯದಲ್ಲಿ ಠೇವಣಿ ಇರಿಸಬೇಕು’ ಎಂದು ಮೇಲ್ಮನವಿದಾರ ಪತಿಗೆ ನಿರ್ದೇಶಿಸಿದೆ.

‘ಈ ಮೊತ್ತವನ್ನು ಮಕ್ಕಳು ತಾವು ಪ್ರೌಢಾವಸ್ಥೆಗೆ ತಲುಪಿದ ಬಳಿಕ ಪಡೆದುಕೊಳ್ಳಬಹುದಾಗಿದೆ’ ಎಂದೂ ನ್ಯಾಯಪೀಠ ವಿವರಿಸಿದೆ.

ಕಾರಿನಲ್ಲಿದ್ದ ₹ 50 ಲಕ್ಷ ಕಳ್ಳತನ: ಆರೋಪಿ ಸೆರೆ

ಬೆಂಗಳೂರು: ರಿಯಲ್ ಎಸ್ಟೇಟ್ ಉದ್ಯಮಿಯೊಬ್ಬರಿಗೆ ಸೇರಿದ ₹50 ಲಕ್ಷ ಕಳವು ಮಾಡಿ ಪರಾರಿಯಾಗಿದ್ದ ಕಾರು ಚಾಲಕನನ್ನು ಕೋರಮಂಗಲ ಪೊಲೀಸರು ಬಂಧಿಸಿದ್ದಾರೆ.

ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನ ರಕ್ಷಿತ್ ಕುಮಾರ್(35) ಬಂಧಿತ. ಆರೋಪಿಯಿಂದ ₹50 ಲಕ್ಷ ನಗದು ಜಪ್ತಿ ಮಾಡಲಾಗಿದೆ.

ಕೋರಮಂಗಲದ ನಿವಾಸಿ ರಿಯಲ್ ಎಸ್ಟೇಟ್ ಉದ್ಯಮಿ ಸುಬ್ಬಾರೆಡ್ಡಿ ಅವರು ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ಆರೋಪಿ ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಸುಬ್ಬಾರೆಡ್ಡಿ ಅವರು ಹಲವು ವರ್ಷಗಳಿಂದ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುತ್ತಿದ್ದಾರೆ. ಈ ಮಧ್ಯೆ ಪರಿಚಯಸ್ಥರ ಮೂಲಕ ರಕ್ಷಿತ್ ಕುಮಾರ್ ಎಂಟು ತಿಂಗಳ ಹಿಂದಷ್ಟೇ ಕಾರು ಚಾಲಕನಾಗಿ ಕೆಲಸಕ್ಕೆ ಸೇರಿಕೊಂಡಿದ್ದ. ಶುಕ್ರವಾರ ಬೆಳಿಗ್ಗೆ ಸುಬ್ಬಾರೆಡ್ಡಿ ವ್ಯವಹಾರದ ನಿಮಿತ್ತ ತಮ್ಮ ಸ್ನೇಹಿತರಿಂದ ಹಣ ಪಡೆದು ಕಾರಿನಲ್ಲಿ ಇಟ್ಟಿದ್ದರು. ಊಟಕ್ಕೆ ತೆರಳಿದ್ದರು. ಆಗ ಆರೋಪಿ ಹಣ ಕಳ್ಳತನ ಮಾಡಿದ್ದ ಎಂದು ಪೊಲೀಸರು ಹೇಳಿದರು.

ನಗರದಲ್ಲಿ ಮತ್ತೆ ಟೋಯಿಂಗ್ ವ್ಯವಸ್ಥೆ ಜಾರಿ?

ಬೆಂಗಳೂರು: ನಗರದಲ್ಲಿ ಮತ್ತೆ ಟೋಯಿಂಗ್ ವ್ಯವಸ್ಥೆ ಜಾರಿಗೆ ತರಲು ಪೊಲೀಸ್ ಇಲಾಖೆ ಮುಂದಾಗಿದೆ.

ಕೆಂಗೇರಿ ಉಪನಗರದಲ್ಲಿ ಶನಿವಾರ ನಡೆದ ಸಂಚಾರ ಸಂಪರ್ಕ ಸಭೆಯಲ್ಲಿ ಸಾರ್ವಜನಿಕರಿಂದ ಅಹವಾಲು ಆಲಿಸಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಾತನಾಡಿ, ನಗರದ ಹಲವು ಕಡೆ ಎಲ್ಲೆಂದರಲ್ಲಿ ವಾಹನಗಳನ್ನು ನಿಲುಗಡೆ ಮಾಡಲಾಗುತ್ತಿದೆ. ಸಂಚಾರ ದಟ್ಟಣೆ ಉಂಟಾಗುತ್ತಿದೆ. ಈ ಸಂಬಂಧ ದೂರುಗಳೂ ಬರುತ್ತಿವೆ. ಹೀಗಾಗಿ ಸುಗಮ ಸಂಚಾರಕ್ಕಾಗಿ ಮತ್ತೆ ಟೋಯಿಂಗ್ ವ್ಯವಸ್ಥೆ ಜಾರಿಗೆ ತರಲು ಚರ್ಚಿಸಲಾಗುತ್ತಿದೆ ಎಂದರು.

ಬಿ.ದಯಾನಂದ

ಈ ಹಿಂದೆ ಟೋಯಿಂಗ್ ವ್ಯವಸ್ಥೆ ಜಾರಿಯಲ್ಲಿದ್ದಾಗ ಈ ರೀತಿಯ ಅವ್ಯವಸ್ಥೆ ಇರಲಿಲ್ಲ ಎಂದರು.

ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್.ಅನುಚೇತ್, ಪಶ್ಚಿಮ ವಿಭಾಗದ ಡಿಸಿಪಿ ಬಿ.ಎಚ್.ಅನಿತಾ ಇದ್ದರು. ಹಲವು ವಿವಾದ ಹಾಗೂ ಸಾರ್ವಜನಿಕರಿಂದ ಭಾರಿ ಆಕ್ರೋಶ ವ್ಯಕ್ತವಾಗಿದ್ದರಿಂದ ಈ ಹಿಂದೆ ಟೋಯಿಂಗ್ ವ್ಯವಸ್ಥೆ ರದ್ದು ಮಾಡಲಾಗಿತ್ತು.

ಟೆಕಿ ಅತುಲ್ ಪತ್ನಿಯಿಂದ ಜಾಮೀನಿಗೆ ಮೊರೆ

ಪ್ರಯಾಗರಾಜ್ (ಪಿಟಿಐ): ಬೆಂಗಳೂರಿನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದ ಟೆಕಿ ಅತುಲ್ ಸುಭಾಷ್ ಅವರ ಪತ್ನಿ ಹಾಗೂ ಆಕೆಯ ಕುಟುಂಬದವರು ನಿರೀಕ್ಷಣಾ ಜಾಮೀನು ಕೋರಿ ಅಲಹಾಬಾದ್ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿದ್ದಾರೆ.

ಅತುಲ್

ಮೂರು ದಿನದೊಳಗೆ ವಿಚಾರಣೆಗೆ ಹಾಜರಾಗುವಂತೆ, ಸುಭಾಷ್ ಪತ್ನಿ ನಿಕಿತಾ ಸಿಂಘಾನಿಯಾಗೆ ಬೆಂಗಳೂರು ನಗರ ಪೊಲೀಸರು ಶುಕ್ರವಾರ ಸಮನ್ಸ್ ಜಾರಿ ಮಾಡಿದ್ದರು. ಹೀಗಾಗಿ, ನಿಕಿತಾ ಹಾಗೂ ಪ್ರಕರಣದ ಇತರ ಆರೋಪಿಗಳಾದ ನಿಕಿತಾ ತಾಯಿ ನಿಶಾ ಸಿಂಘಾನಿಯಾ, ಸಹೋದರ ಅನುರಾಗ್ ಸಿಂಘಾನಿಯಾ ಹಾಗೂ ಸಂಬಂಧಿ ಸುಶೀಲ್ ಸಿಂಘಾನಿಯಾ ಅವರು ನಿರೀಕ್ಷಣಾ ಜಾಮೀನಿನ ಮೊರೆಹೋಗಿದ್ದಾರೆ.

ಉತ್ತರ ಪ್ರದೇಶಕ್ಕೆ ತೆರಳಿರುವ ಮಾರತ್‌ಹಳ್ಳಿ ಠಾಣೆ ಪೊಲೀಸರ ತಂಡವು, ಆರೋಪಿಗಳ ಪತ್ತೆಗೆ ಕಾರ್ಯಾಚರಣೆ ಆರಂಭಿಸಿದೆ. ಆರೋಪಿಗಳು ತಮ್ಮ ನಿವಾಸವನ್ನು ತೊರೆದಿದ್ದು, ಅನ್ಯ ರಾಜ್ಯಗಳಲ್ಲಿ ತಲೆಮರೆಸಿಕೊಂಡಿರುವ ಸಾಧ್ಯತೆ ಇದೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದರು.

ಡಿಸಿಆರ್‌ಇ ನೌಕರನ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್

ಸಾಮಗ್ರಿ ಖರೀದಿ; ₹65 ಲಕ್ಷ ದುರ್ಬಳಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ (ಡಿಸಿಆರ್‌ಇ) ಸಂಗ್ರಹ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದ ನೌಕರರೊಬ್ಬರು ₹65 ಲಕ್ಷಕ್ಕೂ ಹೆಚ್ಚು ಅನುದಾನವನ್ನು ದುರ್ಬಳಕೆ ಮಾಡಿಕೊಂಡಿರುವ ಆರೋಪದಡಿ ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಸಂಗ್ರಹ ಶಾಖೆಯ ಪ್ರಥಮದರ್ಜೆ ಸಹಾಯಕ ಸಂತೋಷ್‌ಕುಮಾರ್ ಅವರ ವಿರುದ್ಧ ಪ್ರಕರಣ ದಾಖಲಾಗಿದೆ. ನೌಕರ ಕಚೇರಿಗೂ ಬಾರದೇ ತಲೆಮರೆಸಿಕೊಂಡಿದ್ದಾರೆ ಎಂದು ಮೂಲಗಳು ಹೇಳಿವೆ.

ಡಿಸಿಆರ್‌ಇ ಕಚೇರಿಯ ಪ್ರಭಾರ ಆಡಳಿತಾಧಿಕಾರಿ ಎಂ.ಕಿರಣ್ ಅವರು ನೀಡಿದ ದೂರು ಆಧರಿಸಿ ಶುಕ್ರವಾರ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

‘ಆರೋಪಿ ಸಂತೋಷ್ ಕುಮಾರ್ ಅವರು 2004ರಲ್ಲಿ ಡಿಸಿಆರ್‌ಇ ಘಟಕಕ್ಕೆ ದ್ವಿತೀಯ ದರ್ಜೆ ಸಹಾಯಕರಾಗಿ ನೇಮಕಗೊಂಡಿದ್ದರು. 2007ರಿಂದ ಡಿಸಿಆರ್‌ಇ ಕೇಂದ್ರ ಕಚೇರಿಯಲ್ಲಿ ಸಂಗ್ರಹ ಶಾಖೆಯಲ್ಲಿ ಕೆಲಸ ಮಾಡುತ್ತಿದ್ದರು. ಸಂತೋಷ್ ಅವರು ಇತರರ ಜತೆಗೆ ಸೇರಿಕೊಂಡು, ಒಳಸಂಚು ರೂಪಿಸಿ ₹65 ಲಕ್ಷಕ್ಕೂ ಮೇಲ್ಪಟ್ಟು ಹಣ ದುರುಪಯೋಗ ಮಾಡಿ ಇಲಾಖೆಗೆ ನಷ್ಟವುಂಟು ಮಾಡಿದ್ದಾರೆ’ ಎಂಬ ದೂರು ಆಧರಿಸಿ ಎಫ್‌ಐಆರ್ ದಾಖಲಾಗಿದೆ.

ಇಲಾಖೆಯ ವಿಚಾರಣೆಯಲ್ಲೂ ಅಕ್ರಮ ಪತ್ತೆ: ‘ತುಮಕೂರು ಡಿಸಿಆರ್‌ಇ ಘಟಕದ ಇನ್‌ಸ್ಪೆಕ್ಟರ್ ಎನ್.ಎನ್.ಜಯಲಕ್ಷ್ಮಮ್ಮ ಅವರು ನಡೆಸಿದ ಇಲಾಖೆಯ ಪ್ರಾಥಮಿಕ ತನಿಖೆಯಲ್ಲೂ ಸಂತೋಷ್ ಅವರು ಅಕ್ರಮ ಎಸಗಿರುವುದು ಸಾಬೀತಾಗಿದೆ. ತನಿಖೆ ವೇಳೆ 2017ರಿಂದ 2024ರ ಅಕ್ಟೋಬರ್‌ವರೆಗೆ ಸಂಗ್ರಹ ಶಾಖೆಯ ಕಡತ ಪರಿಶೀಲನೆ ನಡೆಸಲಾಗಿತ್ತು. ಸಂತೋಷ್ ಕುಮಾರ್ ಅವರು ಅಧಿಕಾರಿಗಳ ದಿಕ್ಕುತಪ್ಪಿಸುವ ಉದ್ದೇಶದಿಂದ ಒಂದೇ ಕಡತ ಸಂಖ್ಯೆಯಲ್ಲಿ ಬೇರೆ ಬೇರೆ ಸಾಮಗ್ರಿಗಳನ್ನು ಖರೀದಿಸಿ ಎರಡೆರಡು ಬಿಲ್ಲು ತಯಾರಿಸಿ ಒಂದು ಬಿಲ್ ಅನ್ನು ಕಡತದಲ್ಲಿ ಇರಿಸಿದ್ದರು. ನಕಲಿ ಬಿಲ್‌ಗೆ ಮಂಜೂರಾತಿ ಪಡೆದು ಹಣ ದುರ್ಬಳಕೆ ಮಾಡಿಕೊಂಡಿರುವುದು ಪತ್ತೆಯಾಗಿದೆ. ಸಂಗ್ರಹ ಶಾಖೆಯ ನೋಂದಣಿ ಪುಸ್ತಕ ಹಾಗೂ ದಾಖಲಾತಿಗಳನ್ನೂ ಸಮರ್ಪಕವಾಗಿ ನಿರ್ವಹಣೆ ಮಾಡದೇ ಇರುವುದು ಕಂಡುಬಂದಿದೆ’ ಎಂದು ಮೂಲಗಳು ಹೇಳಿವೆ.

ಕಟ್ಟಡದಿಂದ ಬಿದ್ದು ಕಾರ್ಮಿಕ ಸಾವು

ಬೆಂಗಳೂರು: ತಿಲಕನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಿರ್ಮಾಣ ಹಂತದ ಕಟ್ಟಡದಿಂದ ಬಿದ್ದು ಕಾರ್ಮಿಕರೊಬ್ಬರು ಶನಿವಾರ ಮಧ್ಯಾಹ್ನ ಮೃತಪಟ್ಟಿದ್ದಾರೆ.

ಕಲಬುರಗಿಯ ಶರಣಪ್ಪ ಮೃತ ಕಾರ್ಮಿಕ. ಚಂದ್ರಪ್ಪ ಅವರು ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ನವೀನ್ ಎಂಬುವರಿಗೆ ಸೇರಿದ ಕಟ್ಟಡದಲ್ಲಿ ಇಬ್ಬರು ಕೆಲಸ ಮಾಡುತ್ತಿದ್ದರು.

ತಿಲಕನಗರದ ಜಿಎನ್‌ಆರ್ ಕಲ್ಯಾಣ ಮಂಟಪ ಹತ್ತಿರದ ನಿರ್ಮಾಣ ಹಂತದ ಏಳನೇ ಮಹಡಿಯಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದರು. ಏಳನೇ ಅಂತಸ್ತಿನಲ್ಲಿ ಮರದ ಕಂಬಗಳನ್ನು ಹಗ್ಗದಿಂದ ಕಟ್ಟಿ ಅದರ ಮೇಲೆ ನಿಂತು ಕಾಂಕ್ರೀಟ್ ಕೆಲಸ ಮಾಡುತ್ತಿದ್ದರು. ಮರದ ಕಂಬಗಳು ಏಕಾಏಕಿ ಕುಸಿದುಬಿದ್ದ ಪರಿಣಾಮ ಏಳನೇ ಮಹಡಿಯಿಂದ ಇಬ್ಬರು ಕಾರ್ಮಿಕರು ಕೆಳಕ್ಕೆ ಬಿದ್ದಿದ್ದರು. ಶರಣಪ್ಪ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎಂದು ಮೂಲಗಳು ಹೇಳಿವೆ.

ಮಾಲೀಕನ ನಿರ್ಲಕ್ಷ್ಯವೇ ಘಟನೆಗೆ ಕಾರಣವಾಗಿದೆ. ಮಾಲೀಕ ನವೀನ್ ಅವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಪೊಲೀಸರು ಹೇಳಿದರು.

ವಾಸುದೇವಪುರದಲ್ಲಿರುವ ಜಮೀನಿಗೆ ಅತಿಕ್ರಮ ಪ್ರವೇಶ ಆರೋಪ

ಲಕ್ಕಿ ಅಲಿ ವಿರುದ್ಧದ ಪ್ರಕರಣಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಾಸುದೇವಪುರದಲ್ಲಿರುವ (ಕಂಚೇನಹಳ್ಳಿ) ನಮ್ಮ ಜಮೀನಿಗೆ ಅತಿಕ್ರಮವಾಗಿ ಪ್ರವೇಶಿಸಿ, ಕಾಂಪೌಂಡ್ ಒಡೆದು, ಗಿಡಗಳನ್ನು ನಾಶಪಡಿಸಿ ಸುಮಾರು ₹ 75 ಲಕ್ಷ ನಷ್ಟ ಉಂಟು ಮಾಡಿದ್ದಾರೆ’ ಎಂದು ಆರೋಪಿಸಿ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರ ಅತ್ತೆ, ಬಾಲಿವುಡ್ ಗಾಯಕ ಮಕ್ಸೂದ್ ಅಲಿ ಅಲಿಯಾಸ್ ಲಕ್ಕಿ ಅಲಿ ಮತ್ತು ಅವರ ಬೆಂಬಲಿಗರ ವಿರುದ್ಧ ದಾಖಲಿಸಿರುವ ಎಫ್‌ಐಆರ್ ಹಾಗೂ ಅದಕ್ಕೆ ಸಂಬಂಧಿಸಿದ ನ್ಯಾಯಿಕ ಪ್ರಕ್ರಿಯೆಗೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಗಾಯಕ ಲಕ್ಕಿ ಅಲಿ ಮತ್ತು ಮೈಲಪ್ಪನಹಳ್ಳಿ ಶ್ರೀನಿವಾಸ್ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ಶ್ರೀರಾಮ್ ತಿಮ್ಮಪ್ಪ ನಾಯಕ್ ಅವರು, ‘ಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ನೀಡಿರುವ ಬುಜ್ಜಮ್ಮ, ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ಅವರ ಅತ್ತೆಯಾಗಿದ್ದಾರೆ. ಹೀಗಾಗಿ, ಪೊಲೀಸರು ಲಕ್ಕಿ ಅಲಿ ಅವರಿಗೆ ಕಿರುಕುಳ ನೀಡುತ್ತಿದ್ದಾರೆ’ ಎಂದು ಆರೋಪಿಸಿದರು.

‘ಲಕ್ಕಿ ಅಲಿ ಅವರಿಗೆ ಸೇರಿದ ಟ್ರಸ್ಟ್ ಹೆಸರಿನಲ್ಲಿ 87 ಎಕರೆ ಆಸ್ತಿ ಇದೆ. ಇದರ ಸಮೀಪ ರೋಹಿಣಿ ಅವರ ಪತಿ ಜಿ.ಸುಧೀರ್ ರೆಡ್ಡಿ ಅವರು ಲಕ್ಕಿ ಅಲಿ ಸಹೋದರನಿಂದ ಆಸ್ತಿ ಖರೀದಿಸಿದ್ದೇವೆ ಎಂದು ಹೇಳುತ್ತಿದ್ದಾರೆ. ಈ ವಿಚಾರವಾಗಿ 2016ರಿಂದಲೂ ಜಿ.ಸುಧೀರ್ ರೆಡ್ಡಿ ಮತ್ತು ಲಕ್ಕಿ ಮಧ್ಯೆ ಸಿವಿಲ್ ದಾವೆ ನಡೆಯುತ್ತಿದೆ. ಹೀಗಾಗಿ, ರೋಹಿಣಿ ಸಿಂಧೂರಿ ತಮ್ಮ ಅಧಿಕಾರ ಬಳಸಿ ಕಿರುಕುಳ ನೀಡುತ್ತಿದ್ದಾರೆ’ ಎಂದರು.

‘ಖಾಸಗಿ ದಾರಿಯನ್ನು ಸಾರ್ವಜನಿಕ ಹಾದಿ ಎಂದು ಹೇಳುತ್ತಿರುವ ಅವರು, ಗೇಟ್ ಬೀಗ ತೆಗೆಯಬೇಕು ಎಂದು ಬೆದರಿಕೆ ಒಡ್ಡುತ್ತಿದ್ದಾರೆ. ಪೊಲೀಸರು ಖಾಸಗಿ ವಾಹನದಲ್ಲಿ ಬಂದು ಬೆದರಿಕೆ ಹಾಕುತ್ತಿದ್ದಾರೆ. ಈ ಸಂಬಂಧ ಸಿಸಿಟಿವಿ ಕ್ಯಾಮೆರಾ ವಿಡಿಯೊ ದೃಶ್ಯಾವಳಿಯೂ ನಮ್ಮ ಬಳಿ ಇದೆ’ ಎಂದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಹಿತಿ ಪಡೆದು ನ್ಯಾಯಾಲಯಕ್ಕೆ ಸಲ್ಲಿಸುವಂತೆ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ಅವರಿಗೆ ಸೂಚಿಸಿದ ನ್ಯಾಯಪೀಠ, ಲಕ್ಕಿ ಅಲಿ ಮತ್ತು ಇತರರ ವಿರುದ್ಧದ ಎಫ್‌ಐಆರ್ ಹಾಗೂ ಇದಕ್ಕೆ ಸಂಬಂಧಿಸಿದಂತೆ 7ನೇ ಹೆಚ್ಚುವರಿ ಮುಖ್ಯ ನ್ಯಾಯಾಂಗ ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿನ ವಿಚಾರಣಾ ಪ್ರಕ್ರಿಯೆಗೆ ತಡೆ ವಿಧಿಸಿ ಆದೇಶಿಸಿತು. ವಿಚಾರಣೆಯನ್ನು ಇದೇ 16ಕ್ಕೆ ಮುಂದೂಡಲಾಗಿದೆ.

ಪ್ರಕರಣವೇನು?: ‘ಲಕ್ಕಿ ಅಲಿ ಮತ್ತು ಅವರ ಕಡೆಯವರು ನಮ್ಮ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿ, ಕಾಂಪೌಂಡ್ ಒಡೆದು ಹಾಗೂ ಅಲ್ಲಿ ಬೆಳೆಸಿದ್ದ ಗಿಡಗಳನ್ನು ಹಾಳು ಮಾಡಿ ಸುಮಾರು ₹ 75 ಲಕ್ಷ ನಷ್ಟ ಉಂಟು ಮಾಡಿದ್ದಾರೆ. ನಮ್ಮ ಜಮೀನಿಗೆ ಹೋಗಲು ಇರುವ ಸಾರ್ವಜನಿಕ ರಸ್ತೆಗೆ ಭದ್ರತೆ ಒದಗಿಸಿ ಓಡಾಟಕ್ಕೆ ನಿರ್ಬಂಧ ವಿಧಿಸಿದ್ದಾರೆ’ ಎಂದು ಆರೋಪಿಸಿ ಬುಜ್ಜಮ್ಮ ಯಲಹಂಕ ನ್ಯೂ ಟೌನ್ ಪೊಲೀಸ್ ಠಾಣೆಗೆ 2024ರ ನವೆಂಬರ್ 19ರಂದು ದೂರು ನೀಡಿದ್ದರು.

ಈ ದೂರನ್ನು ಆಧರಿಸಿ ಪೊಲೀಸರು ಭಾರತೀಯ ನ್ಯಾಯ ಸಂಹಿತೆ–2023ರ ಕಲಂ 126(2) (ಅಕ್ರಮ ನಿರ್ಬಂಧ ವಿಧಿಸುವುದು), 3(5) (ಹಲವು ಮಂದಿಯಿಂದ ಪ್ರಯತ್ನ), 324(3) (ಸಾರ್ವಜನಿಕ ಆಸ್ತಿಗೆ ಹಾನಿ), 329(3) (ಅತಿಕ್ರಮ ಪ್ರವೇಶ) ಅಡಿ ಎಫ್‌ಐಆರ್ ದಾಖಲಿಸಿದ್ದರು.

सत्यमेव जयते

GOVERNMENT OF GUJARAT

Gujarat Tourism

Shri Narendra Modi
Hon'ble Prime Minister

"Absolutely thrilled to see Dhordo in Kutch being celebrated for its rich cultural heritage and natural beauty. This honour not only showcases the potential of Indian tourism but also the dedication of the people of Kutch in particular.

May Dhordo continue to shine and attract visitors from around the world!"

Shri Bhupendrabhai Patel
Hon'ble Chief Minister, Gujarat

rann utsav

01st DEC, 2024 to 28th FEB, 2025

Rann Ek Rang Anek

Imagine a place where the earth glows white under the moonlight and where every sunrise paints the desert in hues of gold. This is the magic of Rann Utsav - an unforgettable experience that will stay with you for a lifetime.



Stay in luxury tents or Kutchi Bhungas	Explore attractions with guided tours	Enjoy ziplines, ATVs & more	Savour culture, cuisine & crafts

Kutch Nahi Dekha Toh Kuch Nahi Dekha

TOURISM CORPORATION OF GUJARAT LIMITED
Udyog Bhavan, Block No. 16, 4th Floor, Sector - 11, Gandhinagar - 382 010, Gujarat
www.gujarattourism.com • Toll-Free Number: **1800 203 1111**

DHORDO BEST TOURISM VILLAGE 2023 BY UNWTO

UNWTO World Tourism Organization

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE BUYING

Commerical

Mysore Road

PROPERTY WANTED 8000- 15,000 sqft of property for outright purchase on any 80 FT road in central Mysore for corporate office. Direct Owners only respond. Brokers Excuse. Contact: 6361440655

Sites

Kanakapura Road

WANTED SITE 30x40 40x60 Anjanapura BDA, Banashankari 6th Stage, Narayan`Nagar BCCHS Layout, Gubblala, Agent Excuse. Call: 9008259222.

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

REAL ESTATE SELLING

Sites

Banashankari

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

FOR SALE Banashankari 6TH Stage,4th H'Block 30x40,North 2nd Block40x60,West 4th Block 40x60,North:9844216344

BTM Layout

BANNERGHATTAROAD BEHIND Shopper Stop 2000 sqft, 3500 Sqft, East And West, For Sale: 9845600007

Mysore Road

"30X40 WF RESIDENTIAL ITI LAYOUT NAYANDAHALLI, 30x50 KHB HAMPAPURA NEAR MYSORE ROAD SITES SALE- 9845143579"

Intl Airport Road

SADAHALLI Near Jade Gardens 17 Acre Agricultural Land For Sale, Genuine Buyers/ Brokers Call 9900001973

J P Nagar

SALE 30X40, 40X60 BDA Prime Corner Property J.P.Nagar 2nd Phase Near Innisfree House School Only Genuine Buyers Call:9986490019

SALE SECOND Phase site 20'x50' 2 floor, Four houses 'A' Khatha. Call:- 9886019240/ 080- 26623994.

BDA CORNER Plots for Sale at JP Nagar 8th & 9th Phase, Contact: Owner 9740019001.

SALE BDA SITE 20x30 South Facing 30 Feet Road JP-Nagar 9th Phase 4th Block: 8971799337

Kengeri

AVAILABLE 30X60 CORNER SITE 60FT ROAD BLUEJAY ARDLEY PHASE 2 [DODDABELE] NEAR MYSORE ROAD CHALLEGATTA METRO STATION: 8050908920/ 9986866661

Kanakapura Road

30X40 N/E CORNER SITE SALE Kendriya Nagara Opposite Shobha Forest Edge, 1.5Km Talaghattapura Metro. 9945724472.

Kempegowda Layout

BDA SITE FOR SALE @ Kempegowda Layout 40x60, 50x80 Good Location Contact: 9845555666

Mallathalli

SALE:40X60 SITE #398 MPM Layout Mallathalli near AIT Ring-road, 40feet-road, good location, Contact:9844040154/ 9844533371

Magadi Road

BYREGOWDA LAYOUT SITE NO. 290 BBMP A KHATA 30X40 S/F, RTO ROAD, MUDDINAPALYA 11000/ SFT DIRECT OWNER GENUINE BUYERS CONTACT: 9880311959

FOR SALE: 50X90 (4500 Sft) South facing site with oldbuilding at 1-A Main Road, Govindarajanagar (M.C. Layout) Near Hotel Swathi Green Land (Jaimunirao Circle) Bengaluru. Broker's excuse. Contact: 9343432456

R T Nagar

R.T.NAGAR East Facing Site 40 Feet Road BDA Top Location For Sale Call 9738111222

Sanjaynagar

30X50 EAST Facing Site in Sanjaynagar Jaladarsini Layout Near Sandepani School, Genuine Buyers Call 9900001973

Vishweshwariah Layout

"40X60 BDA East facing Site for Sale 40`feet Road Vishveshwariah 6th Block Near KLE College. Contract: 7892224597"

"BDA 30X40 South facing Site for sale Vishveshwaraiah Layout 2nd Block opposite Park, Ready to construct. 9611538786"

"VISHVESHWARAIAH LAYOUT Wanted BDA Sites 20x30,30x40, 40x60, 50x80 for Immediate Settlement, "Anugraha Construction"- 9886294610"

DIRECT OWNER 40x60 N/F BDA Site Sale VISHVESWARAIAH LAYOUT BLOCK-1 near KHB Platinum Apartment. 9742681666

30X40 1ST Block Vishveshwaraiah Layout Allotted Site Near BMTC Bus Stand 20x30 Corner Site Sale 3rd East North: 8310003509

BDA CORNER Plots for Sale at M. Vishveshwaraiah Layout 2nd Block, Contact: Owner 9740019001.

HSR Layout

HSR LAYOUT BDA Site for Sale 50x80 3rd Sector MM Layout Walkable Distance from`HSR`BDA Complex`Call: 9845010893

Sunkadakatte

MACHOHALLI GATE Industrial Site 100X60, Near Main Road East West 5000/- Negotiable 40ft Road: 9980409820

Uttarahalli

UTTARAHALLI PURNAPRAJNA Layout,30x50,Rupees 15000/- JPNagar 2nd Phase, BDA 30X43, Rupees 30000/- Contact:9845704509

House

Banashankari

30X52 E/S, CORNER VILLA HOUSE`SALE Banashankari 6th.Stage, 10th Block Attached, Gated Community, 2.5Cr. Full Cheque Payment 9799099699, 9740075563.

Jayanagar

"OLD-DEMLITION HOUSE 3rd Block 2540`Sft Corner`near South-End`& Metro`station for`Residential/ Semi-commercial ideal`for Charted Accountants/ Doctors/ Architects/ Builders, "Sri.Ganesh Estate" 9845286505"

JAYANAGAR 5TH Block Corner Site 65x35 Near Shalni-Park 40'Road, 9,10,00,000/-, 7th`Block 40x60 North, 2 unit`House 7,92,00000/- 9731775536

J P Nagar

J.P.NAGAR 4TH Dollars Layout 50x80, 4 unit house with Lift, 4,70,000/- Monthly Rental income, sale- 11,50,00000/- 9731775536

HOUSE SALE: J.P.Nagar, 6th Phase, BDA site, E/F, 4 bedroom, Separate car shed, eKhatha available. Contact: 9880402575.

J.P.NAGAR 30X40 old house, Excellent location BDA West facing clear titles. (Genuine Buyers only) Guptha- 9845232711

DUPLEX HOUSE For Sale Jpnagar 8th Phase 1st Block,Measurement 20x30,N/F,Built-Up Area 1300Sqft,2.5BHK 98L:9880676792

INDIA'S NO.1 TEACHERS TRAINING INSTITUTE

NIECCE® NATIONAL INSTITUTE OF EARLY CHILD CARE & EDUCATION
Regd. Govt. of India | Regd. No. KR03D0041831 - New Delhi
Affiliated to IAO, U.S.A | An ISO 9001 : 2015 Institute
EXPERTS IN EARLY CHILD CARE EDUCATION · SINCE 2004 · N.I.E.C.C.E

Nursery Teachers Training Course (NTT)
(Montessori Integrated)

Duration : 6 Months
Batches : Online & Offline
Eligibility : 10th / 12th / Degree

Placement Assistance
To Work in CBSE / ICSE / State / IGCSE Board Schools

Batches Starting Soon

AUTHORISED TRAINING CENTERS

Chandralayout: 80958 11112	T C Palya: 99003 71746
Rajajinagar: 91085 44922	Kittanahalli: 97404 49264
Jayanagar: 99010 61160	Bannerghatta Rd.: 95916 11009
Indiranagar: 70223 34402	Nagadevanahalli: 98800 99444
Yelahanka: 96116 61190	D. Bommasandra: 97311 97460
Electronic City: 84318 88784	Doddaballapura: 98456 06364
Ullal: 63666 99899	Mysore: 97404 08333
Matthikere: 70198 06668	Channapatna: 96633 11973
R R Nagar: 98800 75345	Tumkur: 87629 37081
M S Palya: 97412 33113	Kalburgi: 99009 75676
Laggere: 99455 51324	Hubli: 99451 60180
Haralur: 91087 53091	Guntakal (AP): 63000 26699
Marathahalli: 96111 68923	Krishnagiri (TN): 90036 56604
Navodayanagar: 95919 77740	And more coming soon...

Franchise : 9886855700 / www.niecce.com

SALE
CHAMRAJPET
COMMERCIAL BUILDING
18,000 SFT,
RENTAL INCOME 7.5 LACS
SALE PRICE 13.50 CRORES.
Call: 96322-37557/ 96069-07557

Vishweshwariah Layout

"30X40 NEW BUILT VASTU 1BHK, 2BHK FOUR HOUSES SALE 4TH BLOCK BDA VISHWESHWARAIH LAYOUT 9845143579"

Vijayanagar

19X43 CORNER Building WF Cholurpalya, Vijayanagar, Near Metro Tollgate, E Katha, Price 11000/- Owner 9740073482

BUILDING SALE Vijaynagar Pipe Line A Katha 55x65 3Floor Rental 1.30 Lack, SP 2.50Cr Owner: 6361579235

Commerical

HRBR Layout

HRBR COMMERCIAL 100 Feet Road BDA North Facing, Excellent Site 40x60 For Sale Call: 7829203369

Flat

Bannerghatta Road

BANNERGHATTA ROAD, Panduranganagar behind Fortis hospital 3 BHK New Flat, 2595sft. 2 Carparking, Italian marble flooring, 2,50,00,000/- 9740292904

Basavanagudi

BASAVANAGUDI SALE Flat Brand New 2050 Sft Near KR-Park OC-CC Rs. 3.4 Crores Negotiable Shivu: 9880004149/ 9035441234

Indiranagar

DEFENCE COLONY 4 BHK FLAT (3500 SQFT)WITH SERVANTROOM AND 2 CARPARKING FOR SALE, CALL: 9845004248

Jigani

2 BHK East Facing Semi furnished Flat at DLF WOODLAND HEIGHTS Sale Contact Owner 9740019001.

Jayanagar

SALE- ADARSH PALACE 4 BHK with Servant Quarters, Clubhouse, 5th Block Jayanagar, Bangalore. Dr. Swamy- 9342247637.

Nagarabhavi

'2BHK APARTMENT 932 Sqft with all Amenities, Car-parking Vidyagiri Layout, Nagarbhavi, ₹70 Lakhs Negotiable. 9900245082'

Farm House/ Land/ Resorts

Out-Station

BEAUTIFUL LOCATION Land for sale at Yelagiri Hills. Best suitable for Resorts & villas area. 3.26 Acres. Interested persons may contact:- 8610051071/ 9442894574.

Industrial & Factory

Mysore Road

INDUSTRIAL CONVERTED LAND AVILABLE FOR SALE AREA 10000 SQFT TO 20000 SQFT TO 1ACRE AT KUMBALGOD IND AREA MYSORE ROAD MOB:6366378781 /6366122699

Tumkur Road

SALE INDUSTRIAL 15,000sft with shed 40HP power KIADB Sale deed 40feet road East'facing Sompura Industrial Estate 1st Stage, Dabaspet. 8310719986/ 9448061555.

Joint Development

North

50 ACRES Belur, Hassan/ 45 Acres Gowribidanoor, Layouts J.D. at 50% Market Rate available. Vamshadhara Services, Dr. Swamy- 9342247637.

Residential/ Commercial

HSR Layout

BDA APPROVED Singasandra A Block 40x60 Plot Sale. 16000Rs Dollar/JPY Prefer. Whatsapp 8978282072/7892301457

Commercial Building

Koramangala

SALE: 55X60 COMMERCIAL Building 3 Floors, Getting 3 Lakhs Per Month. Koramangala 3rd Block. Call: 9611231481, 9611231490.

BUILDERS ESSENTIAL

Building Contractors

BUILDIYA PROJECTS Will Develop Well-Equipped Residential, Commercial Buildings and Complexes Beautifully By Using Planning and Designed By Skilled Architects and Engineers 30-Years Of-Experience Contact:9148691980

Doors & Windows

STEEL DOOR with hardware now available @13000 Contact 9482111666

Roofing Materials

***WE-FIX* LEAKING** ROOF, TANK, SUMP, BATHROOM, SKYLIGHT, HOUSE PAINTING, TILING, CARPENTRY, EPOXY, CIVIL WORKS. 9448572697

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

AVAILABLE FOR LEASE 300 Sft.Lalbagh Main Road East`Facing Ideal for Stationary/ Showrooms, Next to CMS Jain College. 9972208719.

OFFICE SPACE For Rent16,000 sqft HBR layout 4th Block Facing Ring Road 8861817913 / 9008025761

COMMERCIAL BUILDING available for Rent 1600sqft 1st Floor and 1600sqft 2nd Floor all amenities including at Goraguntepalya, Tumkur Road, Bengaluru. Mob-9448274566 / 8310105291

LONG TERM OFFICE Rental Old Airport Road VDB TOUCHDOWN Next to HAL Museum. 7447Sqft Fully Fitted Out Office with 96 Work Stations 5 Cabins 3 Meeting 1 Board, 1 MD Cabin, 1 Cafeteria. WhatsApp Msg Only: 9845031550

Farm House/Land/ Resorts

LAND FOR Rent 25000 Sqft Ullal Near 100ft Road SMVL 6th Block & 40×60 Site 100ft Road 2nd Block: 9980433004

Industrial And Factory

JOINT VENTURE/ RENT 2 acres of Industrial Converted Land on Doddaballapur-Bangalore Main Road, Near Railway Station. CALL: 9886703627

Villas/Bunglows

MYSORE EMERALD enclave 5500 sft Bungalow in 30000sft compound with garden, outhouse, borewell. Contact 9900093936

BUSINESS

Business to Business

Finance

UNSECURED LOANS, Secured, Business, Personal Loans Available from Bank and NBFC CIBIL Contact 8951240669

Finance

BUSINESS FUNDS FOR BUSINESS ENTREPRENEURS
SKY IS THE LIMIT
STARTS FROM 5 CRORES
ROI 6 % P.A. & ABOVE (FLOATING)
☑UNSECURED FUNDING
☑SECURED FUNDING
☑LOAN AGAINST PROPERTY
☑SME & MSME FUNDING
☑NPA ACCOUNTS
☑EDUCATIONAL FUNDING
☑PROJECT FUNDING
INSTANT APPROVAL
CIBIL Not Required
MORATORIUM 3 YEARS
NO INITIAL PAYMENT
CORSA GROWTH INVESTMENT
HOPE STARTS HERE
TRUST US TO MAKE IT HAPPEN
91765 38567
scope@corsagrowth.in

AASTHA INDUSTRIAL CITY
INDUSTRIAL PLOTS FOR SALE
Dabaspete
Bangalore-Mumbai Economic Corridor
Ready For Registration
Clear Title, Bank Loan Available
Call for more details :
7676343099, 9513142299

Business Offers

Finance

WE arrange Mortgage/ Purchase-Construction & Business loan, from Schedule Banks. Mrs Jyothi 8971132289/ 9380509779.

AUTOMOTIVE

Four Wheelers Selling

Toyota

EXCELLENT CONDITION Sparingly Used Corolla & Sonet For Sale. Contact: Prasad- 6366633192.

MATRIMONIAL

Brides Wanted

Muslim

MUSLIM BOY 1989/ Affluent Family/ Canada PR Software Eng is looking for match (080-69070635)

MUSLIM BOY 1991 Born MD/ UK / (PR) is looking for an educated girl (9743700029)

MUSLIM BOY 1994 Born 5'11' Surgeon/ is looking for a suitable Match (9743700029)

Telugu

HIGH NETWORTH Telugu family is looking for a suitable match for their only son '94 born (MBA, London) presently involved in family business. (080-69074927)

Grooms Wanted

Hindu

WANTED FORWARD HINDU GROOM
Beautiful Rich 5'.4"/ 1994/ MBBS+MD/ Constructing Own Hospital @ Bangalore/ Forward Hindu "Doctor Bride" Requires MBBS+ PG studing/ Working Forward Hindu "Doctor Groom" (Preferably Willing to Settle in Bangalore) Contact:
9743403900

Muslim

MUSLIM VERY Fair Beautiful Girl 2001 5'4' Not Working Graduate is looking for a suitable Match (080-69070635)

SC/ ST

WANTED GROOM
Looking bridegroom for a girl, 30 years, MSC Biotech. Madiga (sc).
9148833532 / 8050519100

Telugu

REDDY FAMILY (100cr) with multiple businesses is looking for Suitable Match for their only daughter'94 (MS, NYU) (080-69074927)

Matrimonial Bureaus

MANGALASUTRA FOUNDATION
Global Brahmin Foundation
57th INTER STATE LEVEL MEGA BRAHMINS MATRIMONY MEET & SRI SRINIVASA KALYANOTSAVA IN BENGALURU ON 22-12-24. SUNDAY.
Venue: SRI MANMADHWA SANGHA, CHAMARAJAPETE, BENGALURU.
For Details Call:9449425536 8217876335
Srinivas Bharadwaj

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds DECCAN HERALD More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DECCAN HERALD ALL KARNATAKA + PRAJAVANI BENGALURU CITY CLASSIFIED DISPLAY
@ 550/-* PER SQCM
SINGLE / DOUBLE / MULTIPLE COLUMN
www.dhclassifieds.com BOOK NOW
For more details contact:
+91 9901641752 | +91 9845114560 | +91 9900428036 |
+91 9731810277 | +91 9886213331 | 080- 45557163/164

ಬಹುಭಾಷಿಕ ಜಗತ್ತಿನ ಅನಾವರಣ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಸಾಹಿತ್ಯ ಉತ್ಸವದ 13ನೇ ಆವೃತ್ತಿಗೆ ಶನಿವಾರ ಚಾಲನೆ ದೊರೆತಿದ್ದು, ಐದು ವೇದಿಕೆಗಳಲ್ಲಿ ನಡೆದ ವಿಚಾರಗೋಷ್ಠಿಗಳು ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಲೋಕದ ಆಗುಹೋಗುಗಳ ಮೇಲೆ ಬೆಳಕು ಹರಿಸಿದವು.

ಕುಮಾರ ಕೃಪಾ ರಸ್ತೆಯಲ್ಲಿರುವ ಲಲಿತ್ ಅಶೋಕ್ ಹೋಟೆಲ್ ಆವರಣದಲ್ಲಿ ನಡೆದ ಈ ಉತ್ಸವವು ಬಹುಭಾಷಿಕ ಜಗತ್ತನ್ನು ಅನಾವರಣ ಮಾಡಿತು.

ನಗರದ ವಿವಿಧೆಡೆಯಿಂದ ಬಂದ ಸಾಹಿತ್ಯಾಸಕ್ತರು, ಬೆಳಿಗ್ಗೆಯಿಂದ ಸಂಜೆಯವರೆಗೆ ಉತ್ಸಾಹದಿಂದ ಗಹನವಾದ ಚರ್ಚೆಗಳನ್ನು ಆಲಿಸಿದರು. ದೇಶದ ವಿವಿಧೆಡೆಗಳಿಂದ ಬಂದಿದ್ದ ವಿದ್ವಾಂಸರು, ಲೇಖಕರು ಹಾಗೂ ವಿವಿಧ ಕ್ಷೇತ್ರಗಳ ಪ್ರಮುಖರು ಹಂಚಿಕೊಂಡ ಹೊಳಹುಗಳ ಬೆಳಕಿನೊಂದಿಗೆ ಈ ಉತ್ಸವ ಕಳೆಗಟ್ಟಿತು. ತಮ್ಮಿಷ್ಟದ ಸಾಹಿತಿಗಳ ಮಾತುಗಳನ್ನು ಆಲಿಸಿದ ಅಭಿಮಾನಿ ಬಳಗ, ಪುಸ್ತಕಗಳಿಗೆ ಅವರ ಹಸ್ತಾಕ್ಷರಗಳನ್ನು ಪಡೆದು ಸಂಭ್ರಮಿಸಿತು.

ಕನ್ನಡ ಸೇರಿ ವಿವಿಧ ಭಾಷೆಗಳ ಹೊಸ ಪುಸ್ತಕಗಳ ಖರೀದಿ ಭರಾಟೆಯೂ ಜೋರಾಗಿ ನಡೆಯಿತು. ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಕಲೆ, ಸಂಗೀತ, ಸಿನಿಮಾ, ಕ್ರೀಡೆಗೆ ಸಂಬಂಧಿಸಿದ ಗೋಷ್ಠಿಗಳಲ್ಲಿ ದೇಶದ ವಿವಿಧೆಡೆಯಿಂದ ಬಂದ ವಿದ್ವಾಂಸರು ವಿಷಯ ಮಂಡಿಸಿದರು.

ಸಾಹಿತ್ಯ ಹಾಗೂ ಸಾಂಸ್ಕೃತಿಕ ಲೋಕದ ಪ್ರಮುಖರು, ಓದುಗರು, ಪ್ರಕಾಶಕರು, ವಿದ್ಯಾರ್ಥಿಗಳು ಮತ್ತು ಯುವ ವೃತ್ತಿಪರರು ಒಂದೆಡೆ ಸೇರಿಸಿ, ವಿಚಾರ ವಿನಿಮಯ ಮಾಡಲು ಉತ್ಸವದ ವೇದಿಕೆ ಸಹಕಾರಿಯಾಯಿತು. ಮಕ್ಕಳಿಗೆ ಪ್ರತ್ಯೇಕವಾಗಿ ಮೂರು ವೇದಿಕೆಗಳನ್ನು ರೂಪಿಸಲಾಗಿತ್ತು. ಮಕ್ಕಳ ಜತೆಗೆ ಸಂಭಾಷಣೆ ನಡೆಸಿದ ಲೇಖಕರು, ಕಥೆಗಳನ್ನು ಹೇಳಿ ರಂಜಿಸಿದರು.

ಅಮರ ಚಿತ್ರಕಥಾ ರಸಪ್ರಶ್ನೆ, ಮನರಂಜನೆಯ ಕಾರ್ಯಕ್ರಮಗಳನ್ನೂ ಮಕ್ಕಳಿಗಾಗಿ ರೂಪಿಸಲಾಗಿತ್ತು. ಇದರಿಂದಾಗಿ ವಿವಿಧ ವಯೋಮಾನದ ಮಕ್ಕಳು ಆಟಗಳನ್ನು ಆಡಿ ಸಂಭ್ರಮಿಸಿದರು.

ಭಾನುವಾರ ಬೆಳಿಗ್ಗೆ 9 ಗಂಟೆಗೆ ಕರ್ನಾಟಕ ಸಂಗೀತ ಕಾರ್ಯಕ್ರಮ ನಡೆಯಲಿದೆ. ಬಳಿಕ ಐದು ವೇದಿಕೆಯಲ್ಲಿ ವಿಚಾರಗೋಷ್ಠಿಗಳು ನಡೆಯಲಿವೆ. ವಿವಿಧ ವಿಷಯಗಳ ಬಗ್ಗೆ ತಜ್ಞರು ಚರ್ಚಿಸಲಿದ್ದಾರೆ. ಪ್ರವೇಶ ಉಚಿತ ಇರಲಿದೆ.

ಸಾಹಿತ್ಯ ಪ್ರಿಯರು ಪುಸ್ತಕಗಳನ್ನು ಪರಿಶೀಲಿಸಿ ಖರೀದಿಸಿದರು

ಬೆಂಗಳೂರು ಸಾಹಿತ್ಯ ಉತ್ಸವ

ವಿಚಾರ ಗೋಷ್ಠಿಯಲ್ಲಿ ಪಾಲ್ಗೊಂಡಿದ್ದ ಸಾಹಿತ್ಯ ಪ್ರಿಯರು ಕುತೂಹಲದಿಂದ ವಿಷಯ ತಜ್ಞರ ಮಾತುಗಳನ್ನು ಆಲಿಸಿದರು
ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ.

‘ಹಿಂದುತ್ವಕ್ಕೆ ಸಿದ್ಧಾಂತದ ಚೌಕಟ್ಟಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಿಂದುತ್ವವು ವಿಶಾಲ ದೃಷ್ಟಿಕೋನವನ್ನು ಹೊಂದಿದ್ದು, ಎಲ್ಲರನ್ನೂ ಒಳಗೊಳ್ಳಲಿದೆ. ಆದರೆ, ಕೆಲವು ಪೂರ್ವಗ್ರಹ ಪೀಡಿತರು ದುರುದ್ದೇಶದಿಂದ ಇದನ್ನು ತಪ್ಪಾಗಿ ಅರ್ಥೈಸಿ, ‘ಹಿಂದೂಯಿಸಂ’ ಎಂಬ ಚೌಕಟ್ಟನ್ನು ನಿರ್ಮಿಸುತ್ತಿದ್ದಾರೆ’ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯ ಹಾಗೂ ಲೇಖಕ ರಾಮ್ ಮಾಧವ್ ಹೇಳಿದರು.

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಶನಿವಾರ ಹಮ್ಮಿಕೊಂಡಿದ್ದ ‘ದಿ ಹಿಂದುತ್ವ ಪ್ಯಾರಾಡಿಗ್ಮ್’ ಗೋಷ್ಠಿ ನಿರ್ವಹಿಸಿದ ಲೇಖಕಿ ಅಮಿ ಗಣತ್ರ, ‘ಹಿಂದುತ್ವದ ಬಗ್ಗೆ ದೇಶದಲ್ಲಿ ವಿವಿಧ ಪರಿಕಲ್ಪನೆಗಳಿವೆ. ಹಿಂದುತ್ವ ಎಂದೊಡನೆ ಸಾವರ್ಕರ್ ಮೊದಲಾದವರು ನಮ್ಮ ಕಣ್ಣ ಮುಂದೆ ಬರುತ್ತಾರೆ. ವಾಸ್ತವದಲ್ಲಿ ಹಿಂದುತ್ವ ಅಂದರೆ ಏನು’ ಎಂದು ಪ್ರಶ್ನಿಸಿದರು.

‘ಹಿಂದುತ್ವದ ಪ್ರತಿಪಾದಕರನ್ನು ಹಿಂದೆ ಉಗ್ರಗಾಮಿಗಳು ಎಂಬಂತೆ ಕಾಣಲಾಗುತ್ತಿತ್ತು. ಬದಲಾದ ಸನ್ನಿವೇಶದಲ್ಲಿ, ಇತ್ತೀಚಿನ ದಶಕಗಳಲ್ಲಿ ಹಿಂದುತ್ವದ ಬಗ್ಗೆ ಜನರಿಗೆ ಸತ್ಯದ ದರ್ಶನವಾಗುತ್ತಿದೆ. ಹಿಂದುತ್ವ ಎನ್ನುವುದು ನಮ್ಮ ಜೀವನ ವಿಧಾನ ಆಗಿದ್ದು, ಇದಕ್ಕೆ ಯಾವುದೇ ನಿರ್ದಿಷ್ಟ ಚೌಕಟ್ಟಿಲ್ಲ. ಎಲ್ಲ, ಜಾತಿ, ಧರ್ಮ, ಲಿಂಗದವರನ್ನು ಇದು ಒಳಗೊಳ್ಳಲಿದೆ. ಅದೇ, ‘ಹಿಂದೂಯಿಸಂ’ ಎನ್ನುವುದು ಸಿದ್ಧಾಂತ ಸೇರಿ ವಿವಿಧ ಚೌಕಟ್ಟುಗಳನ್ನು ಒಳಗೊಳ್ಳಲಿದೆ. ಹಿಂದುತ್ವದ ಬಗೆಗಿನ ತಪ್ಪು ಕಲ್ಪನೆಗಳಿಂದಲೇ ಅದನ್ನು ಸಂಕುಚಿತಗೊಳಿಸುವ ಪ್ರಯತ್ನಗಳು ನಡೆಯುತ್ತಿವೆ’ ಎಂದು ರಾಮ್ ಮಾಧವ್ ವಿವರಿಸಿದರು.

ರಾಮ್ ಮಾಧವ್

‘ಹಿಂದುತ್ವ ಎನ್ನುವುದು ಉಗ್ರವಾದವೂ ಅಲ್ಲ, ಪ್ರತ್ಯೇಕವಾದವೂ ಅಲ್ಲ. ಇದು ಮುಕ್ತ ಮತ್ತು ಅಂತರ್ಗತವಾಗಿದೆ. ತತ್ವಶಾಸ್ತ್ರ ಮತ್ತು ಸಿದ್ಧಾಂತಗಳ ನಡುವೆ ವ್ಯತ್ಯಾಸವಿದ್ದು, ಹಿಂದುತ್ವವು ಯಾವುದೇ ಸಿದ್ಧಾಂತವನ್ನು ಪ್ರತಿಪಾದಿಸುತ್ತಿಲ್ಲ. ಬದಲಾಗಿ, ಇಲ್ಲಿನ ಶ್ರೀಮಂತ ತತ್ವಶಾಸ್ತ್ರದ ಸಾರವನ್ನು ಎಲ್ಲರಿಗೂ ಉಣಬಡಿಸಲಿದೆ’ ಎಂದರು.

‘ಗುಂಪಿನೊಂದಿಗೆ ಗುರುತಿಸಿಕೊಳ್ಳುವುದು ಸರಿ ಎನಿಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬರಹಗಾರರು ಯಾವುದೇ ಗುಂಪಿನ ಜತೆ ಗುರುತಿಸಿಕೊಳ್ಳುವುದು ವೈಯಕ್ತಿಕವಾಗಿ ಸರಿ ಎನಿಸುವುದಿಲ್ಲ. ನಿರ್ದಿಷ್ಟ ಗುಂಪಿಗೆ ಸೇರಿದರೆ ಅದರ ಸಿದ್ಧಾಂತಕ್ಕೆ ಸೀಮಿತವಾಗುತ್ತೇವೆ’ ಎಂದು ಸಾಹಿತಿ ಶಾಂತಿ ಕೆ. ಅಪ್ಪಣ್ಣ ಹೇಳಿದರು.

ಬೆಂಗಳೂರು ಸಾಹಿತ್ಯ ಉತ್ಸವದಲ್ಲಿ ಶನಿವಾರ ‘ಹೊಸ ಬರಹ: ಇಂದಿನ ಕನ್ನಡ ಬರವಣಿಗೆ’ ಕುರಿತ ಗೋಷ್ಠಿಯಲ್ಲಿ ಅವರು ಮಾತನಾಡಿದರು.

‘ಎಡ ಪಂಥೀಯ, ಬಲ ಪಂಥೀಯ ಎಂಬ ನಿಲುವು ಇರುವುದು ಸಹಜ. ಆದರೆ, ನಮ್ಮ ನಿಲುವಿನ ಮೇಲೆ ಪಯಣಿಸಬೇಕು. ಯಾವುದೇ ಗುಂಪು ಪ್ರತಿನಿಧಿಸುವುದನ್ನು ನಾನು ಇಷ್ಟ ಪಡುವುದಿಲ್ಲ. ಬರಹಗಾರ ಸಂವೇದನಾಶೀಲನಾಗಿರಬೇಕು. ಮತ್ತೊಬ್ಬರ ಕಷ್ಟ ಅರ್ಥಮಾಡಿಕೊಳ್ಳುವ ಅಂತಃಕರಣ ಇರಬೇಕು’ ಎಂದು ತಿಳಿಸಿದರು.

ಶಾಂತಿ ಕೆ. ಅಪ್ಪಣ್ಣ

ಲೇಖಕಿ ಪಿ.ಕುಸುಮಾ ಆಯರಹಳ್ಳಿ ಮಾತನಾಡಿ, ‘ಬರಹಗಾರ, ಯಾವುದೇ ಗುಂಪಿನ ಜತೆ ಗುರುತಿಸಿಕೊಂಡರೆ ನಷ್ಟ. ಹಾಗಾಗಿ ಅಂತರ ಕಾಯ್ದುಕೊಳ್ಳುವುದು ಸರಿ‘ ಎಂದು ಅಭಿಪ್ರಾಯಪಟ್ಟರು.

ಲೇಖಕ ವೈ.ಎನ್. ಮಧು ಮಾತನಾಡಿ, ‘ಬರವಣಿಗೆಯ ಆರಂಭದ ದಿನಗಳಲ್ಲಿ ನಿರ್ದಿಷ್ಟ ಗುಂಪಿನ ಜತೆ ಗುರುತಿಸಿಕೊಂಡಿದ್ದೆ. ಆದರೆ ಅದರಿಂದ ಹೊರ ಬಂದು, ನನ್ನ ಬರವಣಿಗೆಯ ಮೂಲಕ ಗುರುತಿಸಿಕೊಂಡಿದ್ದೇನೆ. ಯುವ ಬರಹಗಾರರಿಗೆ ಕನ್ನಡದಲ್ಲಿ ಸಾಕಷ್ಟು ಅವಕಾಶ ಇದೆ. ಅದನ್ನು ಸದುಪಯೋಗಪಡಿಸಿಕೊಳ್ಳಬೇಕು’ ಎಂದು ಸಲಹೆ ನೀಡಿದರು.

ಗೀತಾ ವಸಂತಾ ಅವರು ಗೋಷ್ಠಿ ನಿರ್ವಹಣೆ ಮಾಡಿದರು.

‘ಸೃಜನಶೀಲತೆಗೆ ಎಐ ಮಾರಕವೇ?’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಲೆ, ಸಂಗೀತ, ಸಾಹಿತ್ಯಕ್ಕೂ ಕೃತಕ ಬುದ್ಧಿಮತ್ತೆ (ಎಐ) ಬಳಕೆಯಾದರೆ ಕಲಾವಿದರು ಮತ್ತು ಸಾಹಿತಿಗಳ ಅಸ್ತಿತ್ವಕ್ಕೆ ಧಕ್ಕೆಯಾಗುವುದಿಲ್ಲವೇ? ಸೃಜನಶೀಲ ಕ್ಷೇತ್ರಕ್ಕೆ ಎಐ ಮಾರಕ ವಾಗುವುದಿಲ್ಲವೇ...?’.

ಬೆಂಗಳೂರು ಸಾಹಿತ್ಯ ಉತ್ಸವದ ಮೊದಲ ದಿನದ, ‘ಎಐ ಫ್ಯಾಕ್ಟ್ ಟು ಎಐ ಫಿಕ್ಷನ್’ ಗೋಷ್ಠಿಯಲ್ಲಿ ಸಭಿಕರೊಬ್ಬರು ಎತ್ತಿದ ಪ್ರಶ್ನೆ ಇದು.

ವೇದಿಕೆಯಲ್ಲಿದ್ದ ಎಲ್ಲ ಸಂಪನ್ಮೂಲ ವ್ಯಕ್ತಿಗಳತ್ತಲೂ ಎಸೆದ ಈ ಪ್ರಶ್ನೆಗೆ, ಕಾದಂಬರಿಕಾರ್ತಿ ಲಾವಣ್ಯ ಲಕ್ಷ್ಮೀನಾರಾಯಣ್ ಉತ್ತರಿಸಿದರು. ‘ಸೃಜನಶೀಲ ಕ್ಷೇತ್ರಕ್ಕೆ ಎಐ ತಂದೊಡ್ಡಿರುವ ದೊಡ್ಡ ತೊಡಕು ಇದೆ. ಇದಕ್ಕೊಂದು ನಿಯಂತ್ರಣ ಇರಲೇಬೇಕು’ ಎಂದರು.

‘ಹಿಂದಿನ ಕಲಾಕೃತಿಗಳನ್ನು ಅಧ್ಯಯನ ಮಾಡಿದ್ದರೂ ಕಲಾವಿದರು ಮತ್ತು ಬರಹಗಾರರ ಕೃತಿಗಳಲ್ಲಿ ಅವರದ್ದೇ ಆದ ಒಂದು ವಿಶೇಷ ಇರುತ್ತದೆ. ಅಲ್ಲದೆ ಅವರ ದೈನಂದಿನ ಜೀವನದ ಹಲವು ಅಂಶಗಳು ಕೃತಿ ರಚನೆಯಲ್ಲಿ ಪ್ರಭಾವ ಬೀರಿರುತ್ತವೆ’ ಎಂದರು.

‘ಆದರೆ ಕೇವಲ ಹಿಂದಿನ ಕೃತಿಗಳ ಪರಿಶೀಲನೆಯಿಂದ ಎಐ ರಚಿಸುವ ಕೃತಿಯಲ್ಲಿ ಈ ಎಲ್ಲಾ ಅಂಶಗಳೂ ಪ್ರಭಾವ ಬೀರಿರುವುದಿಲ್ಲ. ಬದಲಿಗೆ ಅತ್ಯಂತ ತ್ವರಿತವಾಗಿ ಕೃತಿಯೊಂದನ್ನು ರಚಿಸಿಬಿಡುತ್ತದೆ. ಕಥಾ ಎಳೆಯನ್ನು ಸೂಚಿಸಿ ಒಂದು ರಾತ್ರಿಯೊಳಗೆ ಕಾದಂಬರಿ ಬರೆದುಕೊಡು ಎಂದು ಹೇಳಿದರೆ, ಬೆಳಗಾಗುವುದರೊಳಗೆ ಕಾದಂಬರಿ ರಚಿಸಿಕೊಡುತ್ತದೆ. ಎಲ್ಲರೂ ಇದನ್ನೇ ಅವಲಂಬಿಸತೊಡಗಿದರೆ ಖಂಡಿತವಾಗಿಯೂ ಕಲಾವಿದರಿಗೆ ಮತ್ತು ಬರಹಗಾರರ ಅಸ್ತಿತ್ವಕ್ಕೆ ಧಕ್ಕೆಯಾಗುತ್ತದೆ’ ಎಂದು ಕಳವಳ ವ್ಯಕ್ತಪಡಿಸಿದರು.

‘ಮನುಷ್ಯರಿಗಿಂತ ಹೇಗೆ ಭಿನ್ನ..’

‘ಎಐಗಳು ಕಂಪ್ಯೂಟರ್ ಡಾಟಾದಲ್ಲಿ ಲಭ್ಯವಿರುವ ಅಂಶಗಳನ್ನು ಆಧರಿಸಿ ಕೆಲಸ ಮಾಡುತ್ತವೆಯೇ ಹೊರತು, ನೈತಿಕತೆ ಅಥವಾ ಸಾಂಸ್ಕೃತಿಕ ಅಂಶಗಳು ಅವನ್ನು ಪ್ರಭಾವಿಸುವುದಿಲ್ಲ’ ಎಂದು ಪತ್ರಕರ್ತ ಅನಿಲ್ ಅನಂತಸ್ವಾಮಿ ಅಭಿಪ್ರಾಯಪಟ್ಟರು.

‘ಸಾಹಿತಿಗಳಿಗೂ, ಎಐಗೂ ಇರುವ ಅಂತರಗಳೇನು. ಮನುಷ್ಯರಿಗಿಂತ ಅವು ಹೇಗೆ ಭಿನ್ನ’ ಎಂದ, ‘ಮಿಂಟ್’ ಪತ್ರಿಕೆ ಸಂಪಾದಕಿ ಶ್ರವಂತಿ ಬಾಗ್ಚಿ ಅವರ ಪ್ರಶ್ನೆಗೆ ಅನಿಲ್ ಅವರು ನೀಡಿದ ಉತ್ತರವಿದು.

‘ಏನೆಲ್ಲಾ ಮಾಹಿತಿ, ದತ್ತಾಂಶ ಲಭ್ಯವಿದೆ ಎಂಬುದನ್ನು ಪರಿಶೀಲಿಸಿ ಏನನ್ನೋ ಒಂದನ್ನು ಸೃಷ್ಟಿಸುವ ಹಂತದಲ್ಲಷ್ಟೇ ಎಐ ಇವೆ. ಮನುಷ್ಯನಿಗಿರುವ ನೈತಿಕ ಅಥವಾ ಸಾಂಸ್ಕೃತಿಕ ಹಿನ್ನೆಲೆ ಮತ್ತು ಪ್ರಭಾವಗಳು ಎಐಗಳಿಗಿಲ್ಲ’ ಎಂದು ವಿವರಿಸಿದರು.

‘ಆರೋಗ್ಯ ಸೌಲಭ್ಯ: ಪ್ರತಿಯೊಬ್ಬರ ಹಕ್ಕು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆರೋಗ್ಯ ಸೇವೆ, ಸೌಲಭ್ಯ ಎಂಬುದು ಸವಲತ್ತು ಮಾತ್ರವಲ್ಲ, ಯಾವುದೇ ವ್ಯಕ್ತಿಯ ಪರಿಸ್ಥಿತಿಯನ್ನು ಪರಿಗಣಿಸಿದೆ ಪ್ರತಿಯೊಬ್ಬರಿಗೂ ಸಿಗಬೇಕಾದ ಹಕ್ಕು’ ಎಂದು ನಟ ಡಾಲಿ ಧನಂಜಯ ಅಭಿಪ್ರಾಯಪಟ್ಟರು.

‘ಎಲ್ಲರಿಗೂ ಆರೋಗ್ಯ’ ಶೀರ್ಷಿಕೆಯಡಿ ಒಪನ್ ಟೆಕ್ಸ್ಟ್ ಆಯೋಜಿಸಿದ್ದ ‘ಸಮರ್ಥನಂ ಬೆಂಗಳೂರು ವಾಕಥಾನ್’ನ 18ನೇ ಆವೃತ್ತಿಗೆ ಶನಿವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಯಾವುದೇ ನಾಗರಿಕ ಆರೋಗ್ಯ ಆರೈಕೆ ಸೌಲಭ್ಯದಿಂದ ದೂರ ಉಳಿಯದಂತೆ ನಾವೆಲ್ಲರೂ ಹೆಜ್ಜೆ ಇರಿಸಬೇಕು. ಪ್ರತಿಯೊಬ್ಬರೂ ಘನತೆಯಿಂದ ಜೀವಿಸುವಂತಾಗಬೇಕು. ನಾವೆಲ್ಲರೂ ಒಟ್ಟಾದರೆ ಎಲ್ಲ ರೀತಿಯ ಅಡೆತಡೆಗಳನ್ನು ಮುರಿಯಬಹುದು’ ಎಂದು ಅಭಿಪ್ರಾಯಪಟ್ಟರು.

‘ಅಂಗವಿಕಲರಿಗೆ ಆರೋಗ್ಯ ಸೇವೆ ಅತ್ಯಂತ ಪ್ರಮುಖವಾದದ್ದು’ ಎಂದು ಶಾಸಕ ಸಿ.ಕೆ. ರಾಮಮೂರ್ತಿ ಹೇಳಿದರು.

ಸಮರ್ಥನಂ ಸಂಸ್ಥಾಪಕ ಡಾ.ಮಹಾಂತೇಶ್ ಜಿ. ಕಿವಡಸನ್ನವರ್ ಮಾತನಾಡಿ, ‘ಕಳೆದ ಹಲವು ವರ್ಷಗಳಿಂದ ನಡೆಯುತ್ತಿರುವ ವಾಕಥಾನ್ ಸ್ಫೂರ್ತಿಯುತವಾಗಿ ಮುಂದುವರಿದಿದೆ. ಈ ವರ್ಷ ‘ಎಲ್ಲರಿಗೂ ಆರೋಗ್ಯ’ ಶೀರ್ಷಿಕೆಯಡಿ ಆರೋಗ್ಯ ಸೇವೆಗಳ ಅಗತ್ಯ ಮತ್ತು ಅವುಗಳ ಲಭ್ಯತೆ ಬಗ್ಗೆ ಸಮರ್ಥನಂ ವತಿಯಿಂದ ಅರಿವು ಮೂಡಿಸಲಾಗುತ್ತಿದೆ. ಆರೋಗ್ಯ ವಿಷಯದಲ್ಲಿನ ನಿರ್ಲಕ್ಷ್ಯದಿಂದ ಕುಟುಂಬದವರನ್ನು ಹಲವರು ಕಳೆದುಕೊಂಡಿದ್ದಾರೆ. ಆದ್ದರಿಂದ ಆರೋಗ್ಯ ಸೇವೆಗಳು ಎಲ್ಲರಿಗೂ ಲಭ್ಯವಾಗುವುದು ಅತಿಮುಖ್ಯವಾದದ್ದು’ ಎಂದು ಹೇಳಿದರು.

ಒಪನ್‌ಟೆಕ್ಸ್ಟ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಮನೋಜ್ ನಾಗ್‌ಪಾಲ್, ಉಪಾಧ್ಯಕ್ಷ ಎಸ್. ಗುರುಪ್ರಸಾದ್, ಬ್ಲ್ಯೂಯಾಂಡರ್‌ನ ಸತೀಶ್ ಕುಮಾರ್, ಸಿಎಸ್‌ಸಿ ಐಟಿ ಗ್ಲೋಬಲ್ ಫಂಡ್ ಸಲ್ಯೂಷನ್‌ನ ಆನಂದ್ ಕೈಲಾಶ್, ಬಿಬಿಎಂಪಿ ಮಾಜಿ ಸದಸ್ಯ ಎನ್. ನಾಗರಾಜು ಭಾಗವಹಿಸಿದ್ದರು.

‘ಸ್ವಿಫ್ಟ್ ಸಿಟಿ’ ತಾಣವಾಗಲಿದೆ ಸರ್ಜಾಪುರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಕೈಗಾರಿಕಾ ಬೆಳವಣಿಗೆಗೆ ಉತ್ತೇಜನ ನೀಡಲು ಸರ್ಜಾಪುರದಲ್ಲಿ ‘ಸ್ವಿಫ್ಟ್ ಸಿಟಿ’ (ಸ್ಟಾರ್ಟಪ್, ವರ್ಕ್‌-ಸ್ಪೇಸ್, ಇಂಟಲಿಜೆನ್ಸ್, ಫೈನಾನ್ಸ್ ಮತ್ತು ಟೆಕ್ನಾಲಜಿ) ನಿರ್ಮಿಸಲಾಗುತ್ತಿದೆ.

‘ಇದು ಎಲೆಕ್ಟ್ರಾನಿಕ್ ಸಿಟಿ, ಐಟಿಪಿಎಲ್ ನಂತರ ಸರ್ಕಾರವೇ ಸ್ಥಾಪಿಸುತ್ತಿರುವ ಯೋಜಿತ ನಗರವಾಗಲಿದೆ. ನವೋದ್ಯಮಗಳು, ಕೆಲಸದ ಸ್ಥಳಗಳು, ಹಣಕಾಸು ಮತ್ತು ತಂತ್ರಜ್ಞಾನ ಈ ಐದೂ ಔದ್ಯಮಿಕ ಧಾರೆಗಳನ್ನು ಮುಖ್ಯವಾಗಿ ಪರಿಗಣಿಸಿದೆ. ಇದನ್ನು ಸಾಧಿಸಲು ಸರ್ಜಾಪುರ ಕೈಗಾರಿಕಾ ಪ್ರದೇಶದಲ್ಲಿ ಒಂದು ಸಾವಿರ ಎಕರೆಗೂ ಹೆಚ್ಚು ಜಮೀನನ್ನು ಮೀಸಲಿಡಲಾಗುತ್ತಿದೆ’ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

‘ಬೆಂಗಳೂರಿನಲ್ಲಿನ ಕಂಪನಿಗಳಿಗೆ ಯೋಜಿತ ಮತ್ತು ವ್ಯವಸ್ಥಿತ ತಾಣಗಳಿಲ್ಲ ಎನ್ನುವ ಅಸಮಾಧಾನ ಹಲವರಲ್ಲಿದೆ. ಅಂತಹ ಕೊರತೆಯನ್ನು ‘ಸ್ವಿಫ್ಟ್ ಸಿಟಿ’ ನೀಗಿಸಲಿದೆ

ಎಂ.ಬಿ. ಪಾಟೀಲ, ಕೈಗಾರಿಕಾ ಸಚಿವ

ಉದ್ದೇಶಿತ ‘ಸ್ವಿಫ್ಟ್ ಸಿಟಿ’ಯಲ್ಲಿ 150 ಮೀಟರ್ ಅಗಲದ ಸಂಪರ್ಕ ರಸ್ತೆ ಒಳಗೊಂಡ ವಿಶ್ವದರ್ಜೆಯ ಸೌಲಭ್ಯಗಳು, ವಸತಿ ವ್ಯವಸ್ಥೆ, ಶಾಲೆಗಳು ಇರುವಂತೆ ಅಭಿವೃದ್ಧಿಪಡಿಸಲಾಗುವುದು‘ ಎಂದಿದ್ದಾರೆ.

‘ಸರ್ಜಾಪುರ ಪ್ರದೇಶ ರಾಜಧಾನಿಯಲ್ಲಿರುವ ಐ.ಟಿ ತಾಣಗಳಿಗೆ ಹತ್ತಿರದಲ್ಲಿದೆ. ರಾಷ್ಟ್ರೀಯ ಹೆದ್ದಾರಿ 44 ಮತ್ತು 48ಕ್ಕೆ ಹತ್ತಿರದಲ್ಲಿದೆ. ಇದು ನವೋದ್ಯಮಗಳ ಹಬ್ ಆಗಲಿದ್ದು, ಒಂದೊಂದು ಸ್ಥಾವರಕ್ಕೂ 20ರಿಂದ 25 ಎಕರೆ ಜಮೀನು ಒದಗಿಸಲಾಗುವುದು. ಸುಸಜ್ಜಿತ ಕಚೇರಿಗಳು, ವಸತಿ ಪ್ರದೇಶಗಳು, ಕೆಲಸದ ತಾಣಗಳು ಎಲ್ಲವೂ ಇರಲಿವೆ’ ಎಂದು ವಿವರ ನೀಡಿದ್ದಾರೆ.

‘ಕರ್ನಾಟಕವನ್ನು ಹಂತಹಂತವಾಗಿ ಸಿಲಿಕಾನ್ ರಾಜ್ಯವನ್ನಾಗಿ ಮಾಡಲಾಗುವುದು. ವಿಜಯಪುರ, ಹುಬ್ಬಳ್ಳಿ-ಧಾರವಾಡ ಸೇರಿದಂತೆ ಐದು ನಗರಗಳಲ್ಲಿ ಕಿರು ‘ಕ್ವಿನ್ ಸಿಟಿ’ ಅಭಿವೃದ್ಧಿಪಡಿಸಲಾಗುವುದು. ಮಾಹಿತಿ ತಂತ್ರಜ್ಞಾನ ಇಲಾಖೆಯ ಸಹಕಾರವನ್ನೂ ಪಡೆಯಲಾಗುವುದು. ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಈ ಕುರಿತು ಹೆಚ್ಚಿನ ಮಾಹಿತಿ ನೀಡಲಾಗುವುದು’ ಎಂದಿದ್ದಾರೆ.

ಸಣ್ಣ ಮತ್ತು ಮಧ್ಯಮ ಸ್ತರದ ನವೋದ್ಯಮಗಳಿಗೆ ಕನಿಷ್ಠ 5,000 ಚದರ ಅಡಿಗಳಿಂದ ಗರಿಷ್ಠ 20,000 ಚದರ ಅಡಿಗಳಷ್ಟು ಜಾಗವನ್ನು ಭೋಗ್ಯ, ಕ್ರಯ ಅಥವಾ ಬಂಡವಾಳ ಆಧಾರಿತ ಹಂಚಿಕೆ ಮಾದರಿಯಲ್ಲಿ ಒದಗಿಸಲಾಗುವುದು. ಈ ಮೂಲಕ, ಪ್ರವರ್ಧಮಾನಕ್ಕೆ ಬರುತ್ತಿರುವ ಹೊಸ ಬಗೆಯ ಉದ್ಯಮಗಳ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗಲಿದೆ. ಮುಖ್ಯವಾಗಿ ಕೃತಕ ಬುದ್ಧಿಮತ್ತೆ, ದತ್ತಾಂಶ ವಿಶ್ಲೇಷಣೆ ಮತ್ತು ಫಿನ್-ಟೆಕ್ ನಾವೀನ್ಯತಾ ಕೇಂದ್ರವಾಗಿಯೂ ಮುಂಚೂಣಿಗೆ ಬರಲಿದೆ ಎಂದು ಹೇಳಿದ್ದಾರೆ.

ಆಸ್ಟರ್‌ನಲ್ಲಿ ‘ಪ್ರೆಸಿಷನ್ ಆಂಕಾಲಜಿ’ ಕ್ಲಿನಿಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡೇಟಾ ಚಾಲಿತ ಕ್ಯಾನ್ಸರ್ ಚಿಕಿತ್ಸೆ ಒದಗಿಸುವ ‘ಪ್ರೆಸಿಷನ್ ಆಂಕಾಲಜಿ’ ಕ್ಲಿನಿಕ್, ಆಸ್ಟರ್ ಕ್ಯಾನ್ಸರ್ ಗ್ರಿಡ್ ಮತ್ತು ಆಂಕೊ ಕಲೆಕ್ಟ್ ತಂತ್ರಾಂಶವನ್ನು ಆಸ್ಟರ್ ಡಿಎಂ ಹೆಲ್ತ್‌ಕೇರ್ ಪ್ರಾರಂಭಿಸಿದೆ.

ಸಂಸ್ಥೆಯು ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ ಆಸ್ಟರ್ ಕ್ಯಾನ್ಸರ್ ಸಮಾವೇಶದಲ್ಲಿ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಇದಕ್ಕೆ ಡಾ. ರಮೇಶ್ ನಿಮ್ಮಗಡ್ಡ ಫೌಂಡೇಷನ್ ಸಹಯೋಗವಿದೆ.

ಈ ಕ್ಲಿನಿಕ್ ರೋಗಿಯ ವಂಶವಾಹಿಗೆ ಹೊಂದಿಕೆಯಾಗುವ ಆರೈಕೆ ಒದಗಿಸಲಿದೆ. ಇದರಿಂದ ಪರಿಣಾಮಕಾರಿ ಚಿಕಿತ್ಸೆ ಸಾಧ್ಯವಾಗುತ್ತದೆ. ಕ್ಯಾನ್ಸರ್ ಗ್ರಿಡ್ ಸಂಶೋಧನೆಗಳಿಗೆ ಉತ್ತೇಜನ ನೀಡಲಿದೆ. ವಿವಿಧ ಔಷಧ ಕಂಪನಿಗಳು, ಸಂಶೋಧನಾ ಸಂಸ್ಥೆಗಳ ಜತೆಗೆ ಕೈಜೋಡಿಸಿ, ಕ್ಯಾನ್ಸರ್‌ಗೆ ಸಂಬಂಧಿಸಿದ ಸಂಶೋಧನೆಗಳಿಗೆ ನೆರವಾಗಲಿದೆ ಎಂದು ವೈದ್ಯರು ತಿಳಿಸಿದರು.

‘ಸಂಸ್ಥೆಯ ಎಲ್ಲ ಆಸ್ಪತ್ರೆಗಳಲ್ಲಿ ಆಂಕೊ ಕಲೆಕ್ಟ್ ತಂತ್ರಾಂಶ ಪ್ರಾರಂಭಿಸಲಾಗಿದೆ. ಇದರಿಂದ ರೋಗಿಗಳ ದತ್ತಾಂಶ ನಿರ್ವಹಣೆ ಸಾಧ್ಯವಾಗಲಿದ್ದು, ಸಮಗ್ರ ಚಿಕಿತ್ಸಾ ಫಲಿತಾಂಶದ ವಿಶ್ಲೇಷಣೆಗೂ ಸಹಕಾರಿಯಾಗಲಿದೆ’ ಎಂದು ಆಸ್ಟರ್ ಡಿಎಂ ಹೆಲ್ತ್‌ಕೇರ್ ಅಧ್ಯಕ್ಷ ಡಾ. ಆಜಾದ್ ಮೂಪೆನ್ ತಿಳಿಸಿದರು.

ಅಧ್ಯಕ್ಷರಾಗಿ ಲೋಕೇಶ್ ಆಯ್ಕೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ದೊಡ್ಡಬನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಎನ್.ಲೋಕೇಶ್ ಆಯ್ಕೆಯಾಗಿದ್ದಾರೆ. ಅನಿಲ್ ಕುಮಾರ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಸ್ಥಾನಕ್ಕೆ (ಸಾಮಾನ್ಯ) ಗುರುವಾರ ಚುನಾವಣೆ ನಡೆಯಿತು.

ಬಿಜೆಪಿ ಬೆಂಬಲಿತ ಅಭ್ಯರ್ಥಿಯಾಗಿ ಎನ್. ಲೋಕೇಶ್ ಹಾಗೂ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಎಲ್. ಜಯರಾಂ ನಾಮಪತ್ರ ಸಲ್ಲಿಸಿದ್ದರು. 33 ಸದಸ್ಯಬಲ ಹೊಂದಿರುವ ಪಂಚಾಯಿತಿಯಲ್ಲಿ ಲೋಕೇಶ್ 25 ಮತ್ತು ಎಲ್.ಜಯರಾಂ ಅವರು 8 ಮತಗಳನ್ನು ಪಡೆದಿದ್ದಾರೆ ಎಂದು ಚುನಾವಣಾ ಅಧಿಕಾರಿ ರಮೇಶ್ ತಿಳಿಸಿದರು.

ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಅನಿಲ್ ಕುಮಾರ್, ಬಿಜೆಪಿ ಮುಖಂಡರಾದ ನಟರಾಜ್, ಪಿಳ್ಳಪ್ಪ, ಮಂಜುನಾಥ್ ಇದ್ದರು.

ದೇಗುಲ ಉರುಳಿಸುವ ಆದೇಶ ಹಿಂಪಡೆದ ಕೇಂದ್ರ ರೈಲ್ವೆ

ಹನುಮಾನ್ ದೇಗುಲ ವಿವಾದದ ಕೇಂದ್ರ

ಪ್ರಜಾವಾಣಿ ವಾರ್ತೆ

ಮುಂಬೈ: ದಾದರ್ ರೈಲು ನಿಲ್ದಾಣದ ವಿಸ್ತರಣೆಗಾಗಿ ಭಗವಾನ್ ಹನುಮಾನ್ ದೇಗುಲವನ್ನು ಉರುಳಿಸಲು ಹೊರಡಿಸಿದ್ದ ಆದೇಶವು ರಾಜಕೀಯ ವಾಕ್ಸಮರಕ್ಕೆ ಎಡೆಮಾಡಿಕೊಡುತ್ತಿದ್ದಂತೆ, ಕೇಂದ್ರ ರೈಲ್ವೆ ತನ್ನ ಆದೇಶವನ್ನು ಹಿಂಪಡೆದಿದೆ.

ಸ್ವಾತಂತ್ರ್ಯ ಪೂರ್ವದಲ್ಲೇ ದಾದರ್‌ನ ಪೂರ್ವ ಭಾಗದಲ್ಲಿ ಹನುಮಾನ್ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿತ್ತು. ವರ್ಷಗಳು ಉರುಳಿದಂತೆ ಈ ಜಾಗದಲ್ಲೇ ದೇಗುಲ ನಿರ್ಮಾಣಗೊಂಡಿದೆ. ಇದರ ಪಕ್ಕದಲ್ಲೇ ಸಾಯಿಬಾಬಾ ಮಂದಿರವು ನಿರ್ಮಾಣವಾಗಿದೆ.

ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನೆಯು (ಯುಬಿಟಿ) ದೇಗುಲ ಉರುಳಿಸುವ ಆದೇಶವನ್ನು ವಿರೋಧಿಸಿದ್ದರೆ, ಈ ಕುರಿತಂತೆ ‘ರೈಲ್ವೆ ಸಚಿವಾಲಯದೊಂದಿಗೆ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುತ್ತೇವೆ’ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಹೇಳಿದ್ದಾರೆ.

ಮುಖ್ಯಾಂಶಗಳು

- ಬಿಜೆಪಿ ವಿರುದ್ಧ ಠಾಕ್ರೆ ಕಿಡಿ
- ಸಚಿವರೊಂದಿಗೆ ಶಾಸಕರ ಮಾತುಕತೆ
- ನೋಟಿಸ್ ನೀಡಲ್ಲ; ಕೇಂದ್ರ ರೈಲ್ವೆ

ಬಿಜೆಪಿ ಹಾಗೂ ಶಿವಸೇನೆಯ ಮುಖಂಡರು ದೇಗುಲಕ್ಕೆ ಭೇಟಿ ನೀಡುತ್ತಿರುವುದು ಸ್ಥಳದಲ್ಲಿ ಉದ್ವಿಗ್ನ ಸ್ಥಿತಿಯನ್ನು ನಿರ್ಮಿಸಿದೆ.

ವಿಶ್ವ ಹಿಂದೂ ಪರಿಷತ್ ಹಾಗೂ ಬಜರಂಗ ದಳದ ಪದಾಧಿಕಾರಿಗಳೊಂದಿಗೆ ಕೇಂದ್ರ ರೈಲ್ವೆ ಅಧಿಕಾರಿಗಳನ್ನು ಭೇಟಿ ಮಾಡಿದ ಬಳಿಕ ಮಾತನಾಡಿದ ಬಿಜೆಪಿ ಶಾಸಕ ಲೋಧಾ, ‘ಈ ವಿಷಯವನ್ನು ಬಗೆಹರಿಸುವಂತೆ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಅವರೊಟ್ಟಿಗೆ ಮಾತನಾಡಿದ್ದೇವೆ. ನಮ್ಮ ಪ್ರಯತ್ನ ಯಶಸ್ವಿಯಾಗಿದೆ. ದೇಗುಲ ಉರುಳಿಸುವ ಆದೇಶವು ರದ್ದುಗೊಳ್ಳಲಿದೆ’ ಎಂದು ಹೇಳಿದರು.

‘ಬಿಜೆಪಿಯ ಬೂಟಾಟಿಕೆ ಬಹಿರಂಗ’



ಆದಿತ್ಯ ಠಾಕ್ರೆ

ಶಿವಸೇನೆಯ (ಯುಬಿಟಿ) ಯುವ ನಾಯಕ, ವರ್ಲಿ ಶಾಸಕ ಆದಿತ್ಯ ಠಾಕ್ರೆ ದೇಗುಲಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದರು. ‘ಹಿಂದುತ್ವದ ಹೆಸರಿನಲ್ಲಿ ಮತ ಪಡೆದ ಬಿಜೆಪಿಯ ಬೂಟಾಟಿಕೆಯು ಬಹಿರಂಗಗೊಂಡಿದೆ. ರೈಲ್ವೆ ಸಚಿವಾಲಯದ ಮೂಲಕ ದೇಗುಲಗಳನ್ನು ಉರುಳಿಸಲು ಫತ್ವಾ ಹೊರಡಿಸುತ್ತಿದೆ’ ಎಂದು ಕಿಡಿಕಾರಿದರು.

ಉದ್ಧವ್ ಠಾಕ್ರೆ ಸಹ ಇದಕ್ಕೂ ಮುನ್ನ ಇದೇ ವಿಷಯದಲ್ಲಿ ಕಮಲ ಪಾಳಯದ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಮಲಬಾರ್ ಹಿಲ್‌ನ ಬಿಜೆಪಿ ಶಾಸಕ ಮಂಗಲ್ ಪ್ರಭಾತ್ ಲೋಧಾ ಹಾಗೂ ಮಾಜಿ ಸಂಸದ ಕಿರೀಟ್ ಸೋಮಯ್ಯ ದೇಗುಲಕ್ಕೆ ಭೇಟಿ ನೀಡಿ ಆರತಿ ಮಾಡಿದರು. ಮುಂಬೈ ಬಿಜೆಪಿ ಘಟಕದ ಅಧ್ಯಕ್ಷ, ಶಾಸಕ ಆಶೀಶ್ ಶೆಲಾರ್ ಈ ವಿಷಯಕ್ಕೆ ಸಂಬಂಧಿಸಿದಂತೆ ಅಧಿಕಾರಿಗಳೊಂದಿಗೆ ಚರ್ಚಿಸಿದರು.

‘ದೇಗುಲವನ್ನು ಉರುಳಿಸುವುದಿಲ್ಲ ಎಂಬ ವಿಶ್ವಾಸ ನನಗಿದೆ. ಈ ವಿಷಯಕ್ಕೆ ಸಂಬಂಧಿಸಿದಂತೆ ರೈಲ್ವೆ ಅಧಿಕಾರಿಗಳೇ ಸ್ಪಷ್ಟನೆ ನೀಡಲಿದ್ದಾರೆ’ ಎಂದು ಮಾಜಿ ಸಂಸದ ಕಿರೀಟ್ ಸೋಮಯ್ಯ ಹೇಳಿದರು.

‘ಶಾಸಕರಾದ ಆಶೀಶ್ ಶೆಲಾರ್, ಅಂಗಲ್ ಪ್ರಭಾತ್ ಲೋಧಾ ಅವರು ಕೇಂದ್ರ ರೈಲ್ವೆ ಅಧಿಕಾರಿಗಳ ತಂಡವನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ರೈಲ್ವೆ ಸಚಿವರೊಂದಿಗೆ ದೂರವಾಣಿ ಮೂಲಕ ಮಾತನಾಡಿ ದೇಗುಲ ಉರುಳಿಸುವ ಆದೇಶವನ್ನು ಹಿಂಪಡೆಯುವಂತೆ ಕೋರಿದರು. ಸಚಿವರ ಸೂಚನೆಯಂತೆ ನೋಟಿಸ್ ನೀಡುವುದನ್ನು ತಡೆಹಿಡಿದಿದ್ದೇವೆ’ ಎಂದು ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿಯು ತಿಳಿಸಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್**
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Drivers

DRIVER WANTED. Salary 20,000/- with Accommodation. BMS Aqua and Beverages P. Ltd. Rajarajeshwarinagara Mysore Road, Bangalore-59. Mobile: 8892002079. Send resume by whatsapp.

WANTED: DRIVERS staying around Hebbal & Yeshwanthpur, Basic English and Google Maps, minimum of 5+ yrs exp, for Japanese travels(company duty) Salary CTC-30000+ benefits, PF, ESIC, Bonus, Gratuity, and lunch* Call:9606968866/9606490968.

Teachers/ Professors

SVR DEGREE COLLEGE
HSR Layout, Bangalore 560102
www.svrinstitutions.com
ASST. PROFESSORS
Required for MBA/ B.Com / BCA courses in
1. Finance
2. Statistics
3. Computer Science
4. Management
Ph: 9743018787
Mail: svrfaculty@gmail.com

VIDYASHREE HIGH SCHOOL CBSE Anjananagar, Bengaluru-91.Required Trained and Experienced NTT,PRT,TGT and PGT Teachers for the Academic year 2025-26 to teach Mathematics, Science and English for Primary and High school.Walk-in between 9:30am to 4:30pm.Drop your CV @vidyashreehighschool@gmail.com Contact:9035858269

PRESTIGE GROUP OF INSTITUTIONS
ARKAWATHI LAYOUT | RAMPURA | GEDDALAHALLI
AFFILIATED TO CISCE
KINDERGARTEN | MONTESSORI | PRIMARY SECONDARY EDUCATION
Invite Applications For 2025- 26
Qualified & Experienced
- Principal,
- Coordinator,
- Teaching Faculty,
- Computer Instructor
- ART & CRAFT Teachers
- Dance & Music Teachers
- Physical Education Teachers

Interested Candidate apply
CALL : 9611745454 | 7899295545
prestigeschoolblr@gmail.com | info@pisrampura.edu.in
OUR BRANCHES
PRESTIGE SCHOOL Hennur-Baglur Main Road, Geddalahalli, Bengaluru-77
PRESTO KIDS Hennur-Baglur Main Road, Arkavathi Layout , Bengaluru -77
PRESTIGE INTERNATIONAL SCHOOL Avalahalli-Byrathi Main Road, Rampura, Bengaluru -49

Accounts & Finance

REPUTED CONSTRUCTION company Bangalore requires: B.Com Graduate 5 years experience in accounts. English business letter drafting. Contact: 9448083424 Email: pgiriraju@yahoo.com

Engg/ Production Technical

REPUTED CONSTRUCTION company Bangalore requiresQUANTITY SURVEYOR: Diploma/ B.E. Civil with 5 years experience.Contact: 9448083424 Email: pgiriraju@yahoo.com

General

WALKIN INTERVIEW Bus Captain-Intercity Smart Bus Interview Timings -4pm to 7pm10th, 12th, Graduate candidates can apply Salary-15K to 20K Whatsapp-9962345676

Hotel

WANTED RESTAURANT MANAGER, COOKS, ASSISTANT COOKS, WAITERS, CASHIERS. Good Salary + Accommodation. UNCLE'S KITCHEN, Bannerghatta Road. 99000-54468

Wanted

REQUIRED
Advocates with experience of 2 years with prompt timings, attending courts, reporting the case status and personality development in the courts for presentation of case are hereby called upon to be appointed in the Office of the undersigned.
V.B.SHIVAKUMAR
Advocate & Solicitor
VBS LAW INC. No.230, First Floor, 4th Main Road, Chamrajpet, Bengaluru-560018
Ph: 080-26678443, 22426644
Mobile: 9886117443
Email: vbshivakumar_adv@yahoo.com

URGENTLY REQUIRED, English Faculty and Office Administrator @ Snehadeep Trust. Location: Lingarajapuram. Contact:- 9945170149/ 9449021997. Apply now!.

PERSONAL ASSISTANT FEMALE WANTED Experienced. Salary Rs. 50,000 + Incentive. Bangalore. Contact: 8660118916.

A REPUTED FOOD INDUSTRY AT HUBLI
Looking: Qualified,experienced & Result Oriented personnel
ISO (HOD-1 + Fresher-1) 8-10 Years thorough experience.
ELECTRICIANS DME.with 5-10 Years Good experience.
SUPERVISORS PACKING DIV: 2 MIXING DIV: 2
DME/DEE 5-10 Years experience, to work in all shifts.
CHEMISTS B.Sc.(Chem) 2-10 Years experience. (3 Posts)
Forward your Detail Resume to, HRD.
ELVEETY PRODUCTS PVT. LTD.
(Beside Jio B.P Petrol Pump) P.B.Road, Post:AGADI, HUBBALLI - 581128
Whatsapp:9481880663*elveetyproducts@gmail.com

Walk-in

LOOKING FOR Sales Male/ Female, Walk-in 16/12/24, 11-00 to 6-00pm, at Pamadi Silver Palace, Pamadi Chambers 1st Floor. Minimum SSLC with English fluency and Computers Basics, Preferably in and around Basavanagudi. Contact 9945382308

PERSONAL

Change of Name

I, ANUSILA SHARMA, Residing at #C-111, 1st floor, 'C' Block 13/2, Premier Grihalakshmi Apartment, Subrotto Mukherjee Road Jalahalli West, Bengaluru-15 have changed my name as ANUSHILA SHARMA vide affidavit dated 14/12/2024 before Notary V.Anjanappa, Bengaluru

CHANGE OF NAME
I, **MANJUNATH C.K** Residing at # 7/8, 6th Cross, Govindarajnagar, Bengaluru-560040 have changed my minor son's name from **ASHITH KAVAN RENUK** to **ABHAY M** vide affidavit dated 12.12.2024 before Notary Deepa M, Bengaluru.

CHANGE OF NAME
I, **ANANTHA LAKSHMI T S** alias **ANANTHA LAKSHMI THOGULUVA SURESH KUMAR** alias **C K K ANANTHALAKSHMI** the names belong to me only. Flat No.1307, 13th Floor, 'B' Block, Janhavi Enclave, Sy No. 35/3, 1st Main, BTM 3rd Stage, Bengaluru-560076 vide affidavit dated 14.12.2024 before notary Uday Kumar K, Bengaluru. Henceforth I shall be known as **ANANTHA LAKSHMI THOGULUVA SURESH KUMAR** only, for all purposes

I, NAYANA BALLAL W/o N B HARISH BALLAL have changed my name to NAYANA HARISH BALLAL vide affidavit dated: 14/12/2024 Before Notary Shreeshail B.Gobbani Bangalore.

I, PRATIBHA W/o Sangappa Hadapad have changed my name to PRATIBHA G HADAPAD vide affidavit dated: 14/12/2024 Before Notary Shreeshail B.Gobbani Bangalore.

DH DECCAN HERALD Classifieds More value, more impact | ಪ್ರಜಾವಾಣಿ
NAME CHANGE
Book your Name Change Ad in DH All Karnataka + Prajavani Bengaluru City All Days
@50/-* PER WORDS
www.dhclassifieds.com
BOOK NOW
For more details contact:
+91 7795158424 | +91 9901641752
+91 9731810277 | +91 9900428036
*Conditions apply

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಯೋಗ ಶೃಂಗಸಭೆಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: 'ಬಹುರಾಷ್ಟ್ರಗಳಲ್ಲಿ ಮನುಕುಲದ ಒಳಿತಿಗಾಗಿ ಯೋಗ ಅಳವಡಿಸಿಕೊಂಡಿದ್ದರೂ, ನಮ್ಮ ದೇಶದಲ್ಲಿ ಯೋಗವಿದ್ಯೆಯನ್ನು ಮಕ್ಕಳಿಗೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದೇವೆಯೇ ಎಂಬ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು' ಎಂದು ಮೇಘಾಲಯದ ರಾಜ್ಯಪಾಲ ಸಿ.ಎಚ್. ವಿಜಯಶಂಕರ್ ಹೇಳಿದರು.

ರೋಟರಿ ಬೆಂಗಳೂರು ಗ್ಲೋಬಲ್ ಯೋಗ ಕ್ಲಬ್, ಸ್ವಾಮಿ ವಿವೇಕಾನಂದ ಯೋಗ ರಿಸರ್ಚ್ ಅಂಡ್ ಹೋಲಿಸ್ಟಿಕ್ ಹೆಲ್ತ್ ಟ್ರಸ್ಟ್ ಹಾಗೂ ಅಮೆರಿಕದ ಯೋಗ ವಿಶ್ವವಿದ್ಯಾಲಯ, ಮಿಯಾಮಿ, ಫ್ಲಾರಿಡಾದ ಸಹಯೋಗದಲ್ಲಿ ಜಿಕೆವಿಕೆಯಲ್ಲಿ ಆಯೋಜಿಸಿರುವ ಮೂರನೇ ಜಾಗತಿಕ ಯೋಗ ಶೃಂಗಸಭೆ-2024 ಅನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಈ ಭೂ ಮಂಡಲದಲ್ಲಿ ಭಗವಂತನು ನಮಗಾಗಿ ಸೃಷ್ಟಿಮಾಡಿರುವ ಗಾಳಿ, ನೀರು ಅಶುದ್ಧವಾಗಿದ್ದು, ತಿನ್ನುವ ಆಹಾರ ವಿಷವಾಗಿದೆ. ಇಂತಹ ಕಾಲಘಟ್ಟದಲ್ಲಿ ನಾವು ಬದುಕಲು ಇರುವ ಏಕೈಕ ಮಾರ್ಗ ಯೋಗವಿದ್ಯೆ ಮಾತ್ರ' ಎಂದರು.

ಯೋಗ ಶೃಂಗಸಭೆಯ ಅಧ್ಯಕ್ಷ ಯೋಗಿ ದೇವರಾಜ ಗುರೂಜಿ ಮಾತನಾಡಿ, 'ಈ ಶೃಂಗಸಭೆಯು ಯೋಗಾಭ್ಯಾಸಿ ಗಳು, ಸಂಶೋಧಕರು ಹಾಗೂ ವೃತ್ತಿಪರರು ಒಗ್ಗೂಡಲು ಮತ್ತು ಆವಿಷ್ಕಾರ ಕೈಗೊಳ್ಳಲು ಕ್ರಿಯಾತ್ಮಕ ವೇದಿಕೆಯಾಗಿ ಕಾರ್ಯನಿರ್ವಹಿಸಲಿದೆ' ಎಂದು ತಿಳಿಸಿದರು.

ತ್ರಿಯೋಗ ಸಂಸ್ಥಾಪಕಿ ಯೋಗಿನಿ ಕಾಳಿ ಅವರ ನೇತೃತ್ವದಲ್ಲಿ ನಡೆದ ಅಂತರ ರಾಷ್ಟ್ರೀಯ ಪೂರ್ಣ ಅಧಿವೇಶನದಲ್ಲಿ ಫ್ರಾನ್ಸ್, ಇಂಗ್ಲೆಂಡ್, ಬಹ್ರೇನ್, ಆಸ್ಟ್ರೇಲಿಯಾ, ಡೆನ್ಮಾರ್ಕ್, ಬೆಲ್ಜಿಯಂ, ಹಾಂಗ್ ಕಾಂಗ್, ರಷ್ಯಾ, ಮಲೇಷ್ಯಾ, ಇಂಡೋನೇಷ್ಯಾ, ನೇಪಾಳ ಮತ್ತಿತರ ದೇಶಗಳ ಯೋಗ ಸಂಶೋಧಕರು ಮತ್ತು ವಿದ್ವಾಂಸರು ಪಾಲ್ಗೊಂಡಿದ್ದರು.

ಕಾಗಿನೆಲೆ ಕನಕಗುರು ಪೀಠದ ನಿರಂಜನಾನಂದ ಪುರಿ ಸ್ವಾಮೀಜಿ, ಬೇಬಿ ಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ, ವಿದ್ವಾಂಸ ಅರಳುಮಲ್ಲಿಗೆ ಪಾರ್ಥಸಾರಥಿ, ಆದಿಚುಂಚನಗಿರಿಯ ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ, ಅವಧೂತ ವಿನಯ್ ಗುರೂಜಿ ಉಪಸ್ಥಿತರಿದ್ದರು.

ಬಿಬಿಎಂಪಿ: ಟಿಡಿಆರ್ ಯೋಜನೆಗಳು ಹೆಚ್ಚಾಗುತ್ತಿದ್ದರೂ ಆನ್‌ಲೈನ್ ವ್ಯವಸ್ಥೆಯ ಕೊರತೆ

ಭೂಸ್ವಾಧೀನ: ನಗದು ಬದಲು ಟಿಡಿಆರ್

• ನವೀನ್ ಮಿನೇಜಸ್

ಬೆಂಗಳೂರು: ನಗರದ ಬೃಹತ್ ಯೋಜನೆಗಳಿಗೆ ಭೂಸ್ವಾಧೀನದ ಸಂದರ್ಭದಲ್ಲಿ ನಗದು ಪರಿಹಾರ ನೀಡುವ ಬದಲು 'ಅಭಿವೃದ್ಧಿ ಹಕ್ಕು ಪ್ರಮಾಣಪತ್ರಗಳನ್ನು (ಡಿಆರ್‌ಸಿ) ನೀಡಲು ಮುಂದಾಗಿದೆ.

ಮುಂಬಯಿ, ಪುಣೆ ಮತ್ತು ಹೈದರಾಬಾದ್‌ಗಳಲ್ಲಿ, ಅರ್ಜಿ ಸಲ್ಲಿಸುವುದರಿಂದ ಹಿಡಿದು ಡಿಜಿಟಲ್ ಪ್ರಮಾಣಪತ್ರ ಪಡೆಯುವ ಡಿಆರ್‌ಸಿಯ ಎಲ್ಲ ಪ್ರಕ್ರಿಯೆಗಳೂ ಆನ್‌ಲೈನ್‌ನಲ್ಲಿ ನಡೆಯುತ್ತವೆ. ಆದರೆ ಈ ಬಗ್ಗೆ ಬಿಬಿಎಂಪಿಯಲ್ಲಿ ಯಾವುದೇ ಸಿದ್ಧತೆಗಳು ನಡೆದಿಲ್ಲ. ಇದರಿಂದ ಪಾರದರ್ಶಕ ಪ್ರಕ್ರಿಯೆಯ ಕೊರತೆ ಎದುರಾಗಲಿದ್ದು, ದುರುಪಯೋಗವಾಗುವ ಸಂಭವವಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ಏಳು ವರ್ಷದ ನಂತರ ಬೆಂಗಳೂರಿನಲ್ಲಿ ಡಿಆರ್‌ಸಿ ಅಥವಾ ಅಭಿವೃದ್ಧಿ ಹಕ್ಕು ವರ್ಗಾವಣೆ (ಟಿಡಿಆರ್) ಯೋಜನೆ ಹೆಚ್ಚು ಪ್ರವರ್ಧಮಾನಕ್ಕೆ ಬರುತ್ತಿದೆ. ಹಲವು ವರ್ಷಗಳ ಹಿಂದೆ ನೀಡಲಾಗಿದ್ದ ₹2 ಸಾವಿರ ಕೋಟಿ ಮೌಲ್ಯದ 1,179 ಡಿಆರ್‌ಸಿಗಳನ್ನು ಮರುಮೌಲ್ಯಮಾಪನ ಮಾಡುವ ಪ್ರಕ್ರಿಯೆಯನ್ನು ಪಾಲಿಕೆ ಆರಂಭಿಸಿದೆ. ಇನ್ನೊಂದೆಡೆ, ವರ್ತೂರು ರಸ್ತೆ, ಕೊತ್ತನೂರು ರಸ್ತೆ, ಎಸ್.ವಿ ರಸ್ತೆಗಳ ವಿಸ್ತರಣೆ ಯೋಜನೆಗಳನ್ನು ಆರಂಭಿಸಿದ್ದು, ಟಿಡಿಆರ್ ಯೋಜನೆಯಡಿ ಭೂಸ್ವಾಧೀನ ಮಾಡಿಕೊಳ್ಳಲು ನಿರ್ಧರಿಸಿದೆ.

ನಗರದಲ್ಲಿ ಡಿಸಿಆರ್‌ಗಳು ಅತಿಹೆಚ್ಚಾಗಲಿದ್ದು, ಡೆವಲಪರ್‌ಗಳುಅನುಮತಿನೀಡಲಾಗಿರುವ ಫ್ಲೋರ್ ಏರಿಯಾ ಅನುಪಾತಕ್ಕಿಂತ (ಎಫ್‌ಎಆರ್) ಹೆಚ್ಚು ಅಂತಸ್ತುಗಳನ್ನು ಅತಿಹೆಚ್ಚು ಜನಸಂಖ್ಯೆಯಿರುವ ಪ್ರದೇಶ ಗಳಲ್ಲಿ ನಿರ್ಮಿಸಲಿದ್ದಾರೆ. ಡಿಆರ್‌ಸಿಗಳ ಲಭ್ಯತೆ ಬಗ್ಗೆ ಆನ್‌ಲೈನ್‌ನಲ್ಲಿ ಮಾಹಿತಿ ಲಭ್ಯವಾಗದ್ದರಿಂದ, ಭೂಮಿ ಕಳೆದುಕೊಳ್ಳುವವರಿಂದ ಬಿಲ್ಡರ್‌ಗಳು ನೇರವಾಗಿ ಡಿಆರ್‌ಸಿಗಳನ್ನು ಖರೀದಿಸಲು ಸಾಧ್ಯವಾಗುತ್ತಿಲ್ಲ. ಇದರಿಂದ ಭೂಮಿ ಕಳೆದುಕೊಂಡವರಿಗೆ ವಾಸ್ತವದ ಮೌಲ್ಯ ಲಭ್ಯವಾಗುವುದಿಲ್ಲ.

ಮುಂಬಯಿ, ಪುಣೆ ಮತ್ತು ಹೈದರಾಬಾದ್‌ಗಳ ವೆಬ್‌ಸೈಟ್‌ಗಳಲ್ಲಿ ಡಿಆರ್‌ಸಿಗಳಲಭ್ಯತೆಸೇರಿದಂತೆ ಎಲ್ಲ ಮಾಹಿತಿಗಳೂ ಲಭ್ಯವಿದೆ. ಹೈದರಾಬಾದ್‌ನಲ್ಲಿ, ಟಿಡಿಆರ್ ಬ್ಯಾಂಕ್, ವರ್ಗಾವಣೆಯ ಸಂಕ್ಷಿಪ್ತ ಮಾಹಿತಿಯ ಟಿಡಿಆರ್ ಲೆಡ್ಜರ್, ಡಿಆರ್‌ಸಿಗಳನ್ನು ನಾಗರಿಕರು ಎಲ್ಲಿಂದ ಖರೀದಿಸಬಹುದು ಎಂಬ ಮಾಹಿತಿ ಇದೆ. ಮುಂಬಯಿ ವೆಬ್‌ಸೈಟ್‌ನಲ್ಲಿ ಡಿಆರ್‌ಸಿ ವಿತರಣೆ, ಉಪಯೋಗ ಮತ್ತು ಲಭ್ಯತೆಯ ನೈಜ ಅವಧಿಯ ದತ್ತಾಂಶ ಲಭ್ಯವಿದೆ. ಪುಣೆ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಡಿಸಿಆರ್‌ಗಳು, ಅದರ ವರ್ಗ, ಹೊಂದಿರುವವ ಹೆಸರು, ಒಟ್ಟು ಪ್ರದೇಶ ಮತ್ತು ಸಂಪರ್ಕಿಸುವ ಮಾಹಿತಿಗಳಿವೆ. ಬಿಬಿಎಂಪಿ ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಇಂತಹ ಯಾವುದೇ ಮಾಹಿತಿಯನ್ನು ಹೊಂದಿಲ್ಲ.

'ಭೂಮಿ ಕಳೆದುಕೊಳ್ಳುವವರು ಟಿಡಿಆರ್ ಪಡೆದುಕೊಳ್ಳಲು ಒಪ್ಪದಿರುವುದರಿಂದ ಬಿಬಿಎಂಪಿ ವ್ಯಾಪ್ತಿಯಲ್ಲಿ ಹಲವು ರಸ್ತೆಗಳ ವಿಸ್ತರಣೆ ಯೋಜನೆಗಳು ಸ್ಥಗಿತಗೊಂಡಿವೆ. ಟಿಡಿಆರ್ ಅತ್ಯಂತ ಆಕರ್ಷಕ ಪರಿಹಾರವಾಗಿದೆ. ಆದರೆ ಬೆಂಗಳೂರಿನಲ್ಲಿ ಇದು ಅಸಂಘಟಿತ ವಾಗಿದ್ದು, ಒಂದೇ ಕೂಟದ ನಿಯಂತ್ರಣದಲ್ಲಿದೆ. ಟಿಡಿಆರ್‌ಗೆ ಇರುವ ಬೇಡಿಕೆಯ ಬಗ್ಗೆ ಭೂಮಿ ಕಳೆದುಕೊಳ್ಳುವವರಿಗೆ ಮಾಹಿತಿ ಇಲ್ಲದಿರುವುದರಿಂದ, ಅವರಿಗೆ ನೈಜ ಮೌಲ್ಯ ಸಿಗುತ್ತಿಲ್ಲ' ಎಂದು ಮೂಲಗಳು ತಿಳಿಸಿವೆ.

'ಡಿಜಿಟಲ್ ಟಿಡಿಆರ್ ಜೊತೆಗೆ ಇತರೆ ಸೌಲಭ್ಯಗಳ ಡಿಜಿಟಲೀಕರಣದ ಬಗ್ಗೆ ಚರ್ಚೆಗಳು ನಡೆಯುತ್ತಿವೆ. ಶೀಘ್ರದಲ್ಲಿಯೇ ಹೊಸ ವ್ಯವಸ್ಥೆ ಜಾರಿಯಾಗಲಿದೆ' ಎಂದು ಬಿಬಿಎಂಪಿಯ ಭೂ ಸ್ವಾಧೀನ ಮತ್ತು ಟಿಡಿಆರ್ ವಿಭಾಗದ ಉಪ ಆಯುಕ್ತ ಕರೀಗೌಡ ತಿಳಿಸಿದರು.

ಬಿಡಿಎ ಆಯುಕ್ತ ಎನ್. ಜಯರಾಂ ಅವರು ಪ್ರತಿಕ್ರಿಯೆಗೆ ಲಭ್ಯರಾಗಲಿಲ್ಲ.

ಸುದ್ದಿ 2 ನಿಮಿಷ

ದೆಹಲಿ: 6 ಶಾಲೆಗೆ ಬಾಂಬ್ ಬೆದರಿಕೆ

ನವದೆಹಲಿ (ಪಿಟಿಐ): ದೆಹಲಿಯ ಆರು ಶಾಲೆಗಳಿಗೆ ಶನಿವಾರ ಬೆಳಿಗ್ಗೆ ಬಾಂಬ್ ಬೆದರಿಕೆ ಸಂದೇಶ ಕಳುಹಿಸಲಾಗಿದೆ. ವಾರದಲ್ಲಿ ರಾಷ್ಟ್ರ ರಾಜಧಾನಿಯ ವಿವಿಧ ಶಾಲೆಗಳಿಗೆ ಬೆದರಿಕೆ ಸಂದೇಶ ಕಳುಹಿಸಿದ ಮೂರನೇ ಪ್ರಕರಣ ಇದಾಗಿದೆ.

'ಆರ್.ಕೆ.ಪುರಂನಲ್ಲಿರುವ ದೆಹಲಿ ಪಬ್ಲಿಕ್ ಸ್ಕೂಲ್‌ಗೆ ಬಾಂಬ್ ಬೆದರಿಕೆ ಸಂದೇಶ ಬಂದ ಕುರಿತು ಬೆಳಿಗ್ಗೆ 6 ಗಂಟೆಗೆ ಮಾಹಿತಿ ನೀಡಿದರು. ತಕ್ಷಣವೇ ಅಗ್ನಿಶಾಮಕ ಇಲಾಖೆ, ಸ್ಥಳೀಯ ಪೊಲೀಸರು, ಶ್ವಾನಪಡೆ, ಬಾಂಬ್ ನಿಗ್ರಹ ತಂಡಗಳು ಸ್ಥಳಕ್ಕೆ ಧಾವಿಸಿ ಶೋಧ ನಡೆಸಲಾಯಿತು. ಶೋಧದ ವೇಳೆ ಯಾವುದೇ ಅನುಮಾನಾಸ್ಪದ ವಸ್ತುಗಳು ಪತ್ತೆಯಾಗಿಲ್ಲ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಳಿದಂತೆ, ವಸಂತ್‌ಕುಂಜ್‌ನ ರಾಯನ್ ಇಂಟರ್‌ನ್ಯಾಷನಲ್ ಸ್ಕೂಲ್, ಸಾಕೇತ್‌ನ ಗ್ಯಾನ ಭಾರತಿ ಸ್ಕೂಲ್‌ಗೂ ಇದೇ ಇ-ಮೇಲ್‌ನಿಂದ ಬೆದರಿಕೆ ಸಂದೇಶ ಕಳುಹಿಸಲಾಗಿತ್ತು.

ಒಂದೇ ಮೇಲ್‌ನಿಂದ ಬೆದರಿಕೆ: ಶುಕ್ರವಾರ ರಾತ್ರಿ 1.47ರ ಸುಮಾರಿಗೆ childrenofallah@outlook.com ಇ-ಮೇಲ್‌ನಿಂದಲೇ ಸಂದೇಶ ಕಳುಹಿಸಿದ್ದರು. ಕಳೆದ ಶುಕ್ರವಾರ ಕೂಡ ದೆಹಲಿಯ 30 ಶಾಲೆ, ಸೋಮವಾರ 44 ಶಾಲೆಗಳಿಗೆ ಬೆದರಿಕೆ ಸಂದೇಶ ಕಳುಹಿಸಲಾಗಿತ್ತು. ಪೂರ್ಣ ಶೋಧ ನಡೆಸಿದ ಬಳಿಕ ಹುಸಿ ಸಂದೇಶ ಎಂಬುದನ್ನು ಪೊಲೀಸರು ದೃಢಪಡಿಸಿದ್ದರು.

ಬಾಲಕನ ಬಂಧನ: ದಕ್ಷಿಣ ದೆಹಲಿಯ ವಸಂತ್ ವಿಹಾರ್‌ನಲ್ಲಿರುವ ತನ್ನದೇ ಶಾಲೆಗೆ ಬಾಂಬ್ ಬೆದರಿಕೆ ಸಂದೇಶ ಕಳುಹಿಸಿದ ಆರೋಪದ ಮೇಲೆ ಕಾನೂನು ಸಂಘರ್ಷಕ್ಕೆ ಸಿಲುಕಿದ 12 ವರ್ಷದ ಬಾಲಕನನ್ನು ವಶಕ್ಕೆ ಪಡೆದ ಪೊಲೀಸರು, ನಂತರ ಎಚ್ಚರಿಕೆ ನೀಡಿ ಬಿಡುಗಡೆಗೊಳಿಸಿದ್ದಾರೆ.

ಚಲನಚಿತ್ರ ವಾಣಿಜ್ಯ ಮಂಡಳಿ ಅಧ್ಯಕ್ಷರಾಗಿ ನರಸಿಂಹಲು ಆಯ್ಕೆ

ಬೆಂಗಳೂರು: ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಚುನಾವಣೆ ಶನಿವಾರ ಮುಕ್ತಾಯಗೊಂಡಿದ್ದು, ಅಧ್ಯಕ್ಷರಾಗಿ ವೈಭವಿ ಚಿತ್ರಮಂದಿರದ ಮಾಲೀಕ ನರಸಿಂಹಲು ಎಂ. ಆಯ್ಕೆಗೊಂಡಿದ್ದಾರೆ. ಇವರು, ತಮ್ಮ ಪ್ರತಿಸ್ಪರ್ಧಿ ವಜ್ರೇಶ್ವರಿ ಚಿತ್ರಮಂದಿರದ ಮಾಲೀಕ ಸುಂದರ್ ರಾಜು .ಆರ್ ಅವರನ್ನು ಮಣಿಸಿದರು.

ನಿರ್ಮಾಪಕ, ವಿತರಕ ಮತ್ತು ಪ್ರದರ್ಶಕ ವಲಯಗಳಿಂದ ವಿವಿಧ ಸ್ಥಾನಗಳಿಗಾಗಿ ಒಟ್ಟು 104 ಅಭ್ಯರ್ಥಿಗಳು ಕಣದಲ್ಲಿದ್ದರು. ಈ ಸಲ ಪ್ರದರ್ಶಕ ವಲಯಕ್ಕೆ ಅಧ್ಯಕ್ಷ ಸ್ಥಾನ ಮೀಸಲಾಗಿತ್ತು. ಉಪಾಧ್ಯಕ್ಷರಾಗಿ ನಿರ್ಮಾಪಕರ ವಲಯದಿಂದ ಸಫೈರ್ ವೆಂಕಟೇಶ್, ಪ್ರದರ್ಶಕರ ವಲಯದಿಂದ ರಂಗಪ್ಪ ಕೆ.ಓ, ವಿತರಕರ ವಲಯದಿಂದ ಶಿಲ್ಪಾ ಶ್ರೀನಿವಾಸ್ ಆಯ್ಕೆಗೊಂಡರು. ಗೌರವ ಕಾರ್ಯದರ್ಶಿಯಾಗಿ ಪ್ರದರ್ಶಕರ ವಲಯದಿಂದ ವೀರೇಶ್ ಚಿತ್ರಮಂದಿರದ ಮಾಲೀಕ ಕುಶಾಲ್ ಎಲ್.ಸಿ, ನಿರ್ಮಾಪಕರ ವಲಯದಿಂದ ಪ್ರವೀಣ್ ಕುಮಾರ್, ವಿತರಕರ ವಲಯದಿಂದ ಎಂ.ಎನ್.ಕುಮಾರ್ ಆಯ್ಕೆಗೊಂಡರು.

ಮನೆಯ ಹಂತದಲ್ಲಿಯೇ ಸಮಸ್ಯೆ ಇರುವವರನ್ನು ಗುರುತಿಸಿ ಚಿಕಿತ್ಸೆಗೆ ವ್ಯವಸ್ಥೆ

'ಗೃಹ ಆರೋಗ್ಯ'ದಡಿ ಮರೆಗುಳಿತನ ಪತ್ತೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಮರೆಗುಳಿತನಕ್ಕೆ (ಡಿಮೆನ್ಶಿಯಾ) ಒಳಪಡುವವರ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಆರೋಗ್ಯ ಇಲಾಖೆಯು 'ಗೃಹ ಆರೋಗ್ಯ' ಯೋಜನೆಯಡಿ ಈ ಕಾಯಿಲೆಗೆ ಒಳಗಾದವರನ್ನು ಗುರುತಿಸಿ, ಚಿಕಿತ್ಸೆ ಒದಗಿಸಲು ಮುಂದಾಗಿದೆ.

ಮಿದುಳಿನ ನರಕೋಶ ನಶಿಸುವಿಕೆಯಿಂದ ಈ ಕಾಯಿಲೆ ಕಾಣಿಸಿಕೊಳ್ಳುತ್ತದೆ. ಕಾಯಿಲೆಗೆ ಒಳಗಾದವರಿಗೆ ನೆನಪಿನ ಶಕ್ತಿ ಕುಂದುವ ಜತೆಗೆ ಇನ್ನಿತರ ಕ್ಷಮತೆಗಳಲ್ಲಿಯೂ ಮಹತ್ತರವಾದ ಬದಲಾವಣೆ ಆಗುತ್ತದೆ. ಸಂವಹನ ತೊಂದರೆ ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಳ್ಳುತ್ತವೆ. ಇದು ಕುಟುಂಬದ ಮೇಲೂ ಪರಿಣಾಮ ಬೀರಲಿದೆ. 60 ವರ್ಷಕ್ಕಿಂತ ಹೆಚ್ಚು ವಯಸ್ಸಾದವರಿಗೆ ಈ ಸಮಸ್ಯೆ ಹೆಚ್ಚಾಗಿ ಕಾಡುತ್ತಿದೆ. ಇಲಾಖೆಯ ಮಾಹಿತಿ ಪ್ರಕಾರ ರಾಜ್ಯದಲ್ಲಿರುವ ಒಟ್ಟು ಪ್ರಕರಣಗಳಲ್ಲಿ ಶೇ10ಕ್ಕಿಂತ ಕಡಿಮೆ ಮಂದಿಯಲ್ಲಿ ಮಾತ್ರ ಈ ಸಮಸ್ಯೆ ಗುರುತಿಸಲಾಗುತ್ತಿದೆ. ಈಗ ರಾಜ್ಯದಲ್ಲಿ ಅಂದಾಜು 5 ಲಕ್ಷದಷ್ಟು ಪ್ರಕರಣಗಳಿವೆ. ಮನೆಯ ಮಟ್ಟದಲ್ಲಿಯೇ

ಸವಾಲಾದ ರೋಗಿಗಳ ಆರೈಕೆ

ಡಿಮೆನ್ಶಿಯಾ ರೋಗಿಗಳಿಗೆ ದೀರ್ಘಾವಧಿ ಆರೈಕೆ ಅಗತ್ಯವಿದೆ. ತರಬೇತಿ ಹೊಂದಿದ ಆರೈಕೆದಾರರು ಇಲ್ಲದಿರುವುದರಿಂದ ಅವರಿಗೆ ಆರೈಕೆ ಒದಗಿಸುವುದು ಸವಾಲಾಗಿದೆ. ಡಿಮೆನ್ಶಿಯಾ ಆರೈಕೆ, ಸಂಶೋಧನೆಗೆ ಸಂಬಂಧಿಸಿದಂತೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಮತ್ತು ಡಿಮೆನ್ಶಿಯಾ ಇಂಡಿಯಾ ಅಲಯನ್ಸ್ (ಡಿಐಎ) ಒಪ್ಪಂದ ಮಾಡಿಕೊಂಡಿವೆ.

'ಡಿಮೆನ್ಶಿಯಾ ರೋಗಿಗಳು ಗೊಂದಲಕ್ಕೆ ಒಳಗಾಗಿರುತ್ತಾರೆ. ಅವರಿಗೆ ಕುಟುಂಬದಿಂದ ನೆರವು ಬೇಕಾಗುತ್ತದೆ. ಈ ಸಮಸ್ಯೆ ಇರುವವರಿಗೆ ಡೇ ಕೇರ್ ಸೌಲಭ್ಯವಿಲ್ಲ. ಆರೈಕೆದಾರರು ಮನೆಯ ಮಟ್ಟದಲ್ಲಿ ಸಿಗುತ್ತಿಲ್ಲ. ಈ ರೋಗಿಗಳನ್ನು ನೋಡಿಕೊಳ್ಳುವವರಿಗೆ ಯಾವುದೇ ಭತ್ಯೆಗಳೂ ಸಿಗುತ್ತಿಲ್ಲ. ರೋಗದ ಬಗ್ಗೆ ಸರ್ಕಾರ ಜಾಗೃತಿ ಮೂಡಿಸಬೇಕಿದೆ. ತಪಾಸಣೆ ಹಾಗೂ ಚಿಕಿತ್ಸೆಗೆ ಆದ್ಯತೆ ನೀಡಬೇಕು. ಆರೈಕೆದಾರರಿಗೆ ಸೂಕ್ತ ತರಬೇತಿ ಅಗತ್ಯ' ಎಂದು ಡಿಮೆನ್ಶಿಯಾ ಇಂಡಿಯಾ ಅಲಯನ್ಸ್ ಅಧ್ಯಕ್ಷೆ ರಾಧಾ ಎಸ್. ಮೂರ್ತಿ ತಿಳಿಸಿದರು.



ಹೆಚ್ಚಿನ ರೋಗಿಗಳು ಇರುವುದರಿಂದ ರೋಗ ನಿರ್ಣಯ ಹಾಗೂ ಚಿಕಿತ್ಸೆಗೆ ಇಲಾಖೆಗೆ ಕ್ರಮ ಕೈಗೊಂಡಿದೆ.

ಮನೆ ಬಾಗಿಲಿನಲ್ಲಿಯೇ ಆರೋಗ್ಯ ತಪಾಸಣೆ ನಡೆಸಿ, ಮಾತ್ರೆಗಳನ್ನು ವಿತರಿಸುವ 'ಗೃಹ ಆರೋಗ್ಯ' ಯೋಜನೆಗೆ ಅಕ್ಟೋಬರ್‌ನಲ್ಲಿ ಚಾಲನೆ ದೊರೆತಿದೆ. ಮೊದಲ ಹಂತದಲ್ಲಿ ಕೋಲಾರದಲ್ಲಿ ಯೋಜನೆ ಪ್ರಾರಂಭವಾಗಿದ್ದು, ಜನವರಿಯಲ್ಲಿ ರಾಜ್ಯದಾದ್ಯಂತ ಅನುಷ್ಠಾನ ಮಾಡಲು ಇಲಾಖೆ ಮುಂದಾಗಿದೆ. ಯೋಜನೆಯಡಿ ಪ್ರತಿ ಮನೆಗೂ ತೆರಳಿ, 30 ವರ್ಷ ಮೇಲ್ಪಟ್ಟವರಿಗೆ ತಪಾಸಣೆ ಮಾಡಲಾಗುತ್ತದೆ. ಮಧುಮೇಹ ಮತ್ತು ಅಧಿಕ ರಕ್ತದೊತ್ತಡಕ್ಕೆ ಒಂದು ತಿಂಗಳಿಗೆ ಸಾಕಾಗುವಷ್ಟು ಮಾತ್ರೆಗಳನ್ನೂ ನೀಡಲಾಗುತ್ತದೆ. ಈಗ ಯೋಜನೆಯಡಿ ಡಿಮೆನ್ಶಿಯಾ ಪತ್ತೆಗೂ ಆರೋಗ್ಯ ಇಲಾಖೆ ಕ್ರಮವಹಿಸಿದೆ. ಮರೆವು ಕಾಯಿಲೆಯ ಬಗ್ಗೆಯೂ ಪ್ರಶ್ನಿಸಿ, ಪ್ರಾರಂಭಿಕ ಹಂತದಲ್ಲಿಯೇ ಸಮಸ್ಯೆ ಗುರುತಿಸಲಾಗುತ್ತದೆ.

ಚಿಕಿತ್ಸೆಗೆ ವ್ಯವಸ್ಥೆ: ಸಮುದಾಯ ಆರೋಗ್ಯಾಧಿಕಾರಿ, ಪ್ರಾಥಮಿಕ ಸುರಕ್ಷಾಣಾಧಿಕಾರಿ, ಆಶಾ ಕಾರ್ಯಕರ್ತೆಯರನ್ನು ಒಳಗೊಂಡ ತಂಡಗಳು ಮನೆಗಳಿಗೆ ಭೇಟಿ ನೀಡಲಿವೆ. ಅವರಿಗೆ ಡಿಮೆನ್ಶಿಯಾ ಪತ್ತೆಗೆ ಸಂಬಂಧಿಸಿದಂತೆಯೂ ತರಬೇತಿ ಒದಗಿಸಲಾಗುತ್ತಿದೆ. ಈ ತಂಡವು ಮನೆಗಳಿಗೆ ಭೇಟಿ ನೀಡಿದ ವೇಳೆ ಡಿಮೆನ್ಶಿಯಾ ಕಾಯಿಲೆಗೆ ಸಂಬಂಧಿಸಿದಂತೆಯೂ ಪ್ರಶ್ನಿಸಲಿದೆ. ರೋಗ ಲಕ್ಷಣ ಇರುವವರಿಗೆ ತಾಲ್ಲೂಕು ಆಸ್ಪತ್ರೆ ಅಥವಾ ಜಿಲ್ಲಾ ಆಸ್ಪತ್ರೆಗೆ ಕಳಿಸಿ, ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗುತ್ತದೆ.

ಮರೆವು ಕಾಯಿಲೆ ಗಂಭೀರ ಸ್ವರೂಪ ಪಡೆಯುತ್ತಿದೆ. ಆದ್ದರಿಂದ ಗೃಹ ಆರೋಗ್ಯ ಯೋಜನೆಯಡಿ ಈ ಕಾಯಿಲೆ ಪತ್ತೆ ಮಾಡಿ, ಚಿಕಿತ್ಸೆಗೆ ಕ್ರಮವಹಿಸಲಾಗುವುದು

ದಿನೇಶ್ ಗುಂಡೂರಾವ್
ಆರೋಗ್ಯ ಸಚಿವ

'ಸಾಂಕ್ರಾಮಿಕವಲ್ಲದ ರೋಗಗಳನ್ನ ಹತೋಟಿಗೆ ತರುವುದು ಯೋಜನೆಯ ಮುಖ್ಯ ಗುರಿಯಾಗಿದೆ. ಮಧುಮೇಹ, ರಕ್ತದೊತ್ತಡದಂತಹ ಸಮಸ್ಯೆಗಳ ಜತೆಗೆ ಮಾನಸಿಕ ಸಮಸ್ಯೆಗಳ ಪತ್ತೆಗೂ ಯೋಜನೆಯಡಿ ಆದ್ಯತೆ ನೀಡಲಾಗುತ್ತಿದೆ. ಮರೆವು ಕಾಯಿಲೆಯ ಬಗ್ಗೆಯೂ ಪ್ರಶ್ನಿಸಿ, ಸಮಸ್ಯೆ ಇರುವವರನ್ನು ಗುರುತಿಸುತ್ತೇವೆ' ಎಂದು ಇಲಾಖೆಯ ಸಾಂಕ್ರಾಮಿಕವಲ್ಲದ ರೋಗಗಳ ವಿಭಾಗದ ಉಪ ನಿರ್ದೇಶಕ ಡಾ.ಜಿ. ಶ್ರೀನಿವಾಸ್ ತಿಳಿಸಿದರು.

'ಕನ್ನಡದಲ್ಲೇ ಹೈಕೋರ್ಟ್ ತೀರ್ಪು ಹೊಸ ಪರಂಪರೆಯ ಆರಂಭ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹೈಕೋರ್ಟ್ ವಿಭಾಗೀಯ ಪೀಠವು ಕನ್ನಡದಲ್ಲಿಯೇ ತೀರ್ಪು ಪ್ರಕಟಿಸುವ ಮೂಲಕ ಹೊಸ ಪರಂಪರೆಯನ್ನು ಆರಂಭಿಸಿದೆ. 'ನ್ಯಾಯಾಲಯದಲ್ಲಿ ಕನ್ನಡ ತೀರ್ಪು' ಎಂಬ ವಿಷಯದ ಬಗ್ಗೆ ಮಂಡ್ಯದಲ್ಲಿ ನಡೆಯಲಿರುವ ಸಾಹಿತ್ಯ ಸಮ್ಮೇಳನ ದಲ್ಲಿಯೂ ಚರ್ಚೆ ನಡೆಯಲಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಮತ್ತು ನ್ಯಾಯಮೂರ್ತಿ ಸಿ.ಎಂ.ಜೋಶಿ ಅವರನ್ನೊಳಗೊಂಡ ವಿಭಾಗೀಯ ಪೀಠವು ಕನ್ನಡದಲ್ಲಿ ತೀರ್ಪು ಪ್ರಕಟಿಸಿ ರುವುದನ್ನು ಅವರು ಸ್ವಾಗತಿಸಿದ್ದು, 'ಕನ್ನಡದಲ್ಲಿ ತೀರ್ಪು ಪ್ರಕಟಿಸಿರುವುದ ರಿಂದ ಕನ್ನಡವು ನಿತ್ಯ ಜೀವನದ ಎಲ್ಲ ರಂಗದಲ್ಲಿಯೂ ಪರಿಣಾಮಕಾರಿ ಆಗಿ ಬಳಕೆಯಾಗಬೇಕೆಂಬ ಪರಿಷತ್ತಿನ ಆಶಯಕ್ಕೆ ಇಂಬು ಸಿಕ್ಕಂತಾಗಿದೆ. ಈ ಹಿಂದೆ ನ್ಯಾಯಮೂರ್ತಿ ಅರಳಿ ನಾಗರಾಜು ಅವರು ಕನ್ನಡ-ದಲ್ಲಿಯೇ ತೀರ್ಪನ್ನು ಪ್ರಕಟಿಸಿ, ಹೊಸ ಪರಂಪರೆಯನ್ನು ಆರಂಭಿಸಿದ್ದರು. ಈಗ ಆ ಪರಂಪರೆಗೆ ಮರು ಚಾಲನೆ ಸಿಕ್ಕಂತಾಗಿದೆ' ಎಂದು ಹೇಳಿದ್ದಾರೆ.

'ಮಾದರಿ ನಡೆ'

'ಕನ್ನಡದಲ್ಲಿಯೇ ಸಂಪೂರ್ಣ ಆದೇಶ ಹೊರಡಿಸಿರುವುದು ರಾಜ್ಯದ ಇತರೆ ನ್ಯಾಯಾಧೀಶರಿಗೆ ಹಾಗೂ ನ್ಯಾಯಾಲಯಗಳಿಗೆ ಮಾದರಿಯಾಗಿದ್ದು, ಭವಿಷ್ಯದಲ್ಲಿ ಎಲ್ಲರೂ ಕನ್ನಡದಲ್ಲಿಯೇ ಆದೇಶ ಹೊರಡಿಸುವಂತೆ ಪ್ರೇರೇಪಿಸ ಲಿದೆ' ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ್ ತಿಳಿಸಿದ್ದಾರೆ. 'ಬಹು ಸಂಸ್ಕೃತಿ, ಬಹು ಭಾಷೆ ಗಳನ್ನು ಹೊಂದಿರುವ ಭಾರತದ ಒಕ್ಕೂಟಕ್ಕೆ ಇಂತಹ ನಡೆ ಅನುಕರಣೀಯ' ಎಂದಿದ್ದಾರೆ.

'ಮಂಡ್ಯದಲ್ಲಿ ಆಯೋಜನೆಗೊಂಡಿ ರುವ ಸಾಹಿತ್ಯ ಸಮ್ಮೇಳನದಲ್ಲಿ 'ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ-2022: ಪರಿಣಾಮಕಾರಿ ಅನುಷ್ಠಾನ' ಎಂಬ ವಿಷಯದ ಬಗ್ಗೆ ಗೋಷ್ಠಿ ನಡೆಯ ಲಿದ್ದು, ನ್ಯಾಯಮೂರ್ತಿ ಅಶೋಕ ನಿಜಗ-ಣ್ಣನವರ ಅವರು ಅಧ್ಯಕ್ಷತೆ ವಹಿಸುತ್ತಾರೆ. ನ್ಯಾ.ಬಿ.ಶಿವಲಿಂಗೇಗೌಡ ಅವರು 'ನ್ಯಾಯಾಲಯದಲ್ಲಿ ಕನ್ನಡ ತೀರ್ಪುಗಳು' ಎಂಬ ವಿಷಯದ ಬಗ್ಗೆ ಪ್ರಬಂಧ ಮಂಡಿಸಲಿದ್ದಾರೆ' ಎಂದು ತಿಳಿಸಿದ್ದಾರೆ.

ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ಹಾಗೂ ಕೇರಳದ ಸಂಸದರು ವಯನಾಡ್ ಸಂತ್ರಸ್ತರಿಗೆ ಪರಿಹಾರಕ್ಕಾಗಿ ಆಗ್ರಹಿಸಿ ಶನಿವಾರ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

'ವಯನಾಡ್ ಸಂತ್ರಸ್ತರಿಗೆ ಪರಿಹಾರ–ರಾಜಕೀಯ ಸಲ್ಲ'

ನವದೆಹಲಿ (ಪಿಟಿಐ): ವಯನಾಡ್ ಭೂಕುಸಿತ ಸಂತ್ರಸ್ತರಿಗೆ ರಾಜಕೀಯ ಉದ್ದೇಶದಿಂದ ಕೇಂದ್ರ ಸರ್ಕಾರವು ಪರಿಹಾರ ನೀಡಿಲ್ಲ. ಪ್ರಕೃತಿ ವಿಕೋಪದ ಸಂದರ್ಭದಲ್ಲಿ ಹೀಗೆ ತಾರತಮ್ಯ ಮಾಡುವುದು ತರವಲ್ಲ ಎಂದು ಕಾಂಗ್ರೆಸ್ ಸಂಸದೆ ಪ್ರಿಯಾಂಕಾ ಗಾಂಧಿ ಟೀಕಿಸಿದರು.

ಸಂತ್ರಸ್ತರಿಗೆ ಪರಿಹಾರಕ್ಕಾಗಿ ಒತ್ತಾಯಿಸಿ ಕೇರಳ ಸಂಸದರು ಸಂಸತ್ ಆವರಣದಲ್ಲಿ ಶನಿವಾರ ಪ್ರತಿಭಟನೆ ನಡೆಸಿದ ಸಂದರ್ಭದಲ್ಲಿ ಪ್ರಿಯಾಂಕಾ ಮಾತನಾಡಿದರು.

'ವಯನಾಡ್‌ಗೆ ನ್ಯಾಯ ಬೇಕು', 'ವಯನಾಡ್ ಸಂತ್ರಸ್ತರಿಗೆ ಪರಿಹಾರ ನೀಡಿ' ಎಂಬದರ್ಥದ ಬರಹಗಳಿದ್ದ ಫಲಕಗಳನ್ನು ಹಿಡಿದು ಸಂಸತ್‌ನ ಮಕರ ದ್ವಾರದ ಬಳಿಯ ಮೆಟ್ಟಿಲುಗಳ ಮೇಲೆ ಸಂಸದರು ಪ್ರತಿಭಟನೆ ನಡೆಸಿದರು.

'ವಯನಾಡ್ ಸಂತ್ರಸ್ತರಿಗೆ ಪರಿಹಾರ ನೀಡುವಂತೆ ಗೃಹ ಮಂತ್ರಿ ಅವರಿಗೆ ಮನವಿ ಸಲ್ಲಿಸಿದೆವು. ಪ್ರಧಾನಿ ನರೇಂದ್ರ ಮೋದಿ ಅವರಿಗೂ ಪತ್ರ ಬರೆದೆವು. ಸಂಬಂಧಪಟ್ಟ ಎಲ್ಲರಿಗೂ ಮನವಿ ಸಲ್ಲಿಸಿದೆವು. ಆದರೂ ಸಂತ್ರಸ್ತರಿಗೆ ನೆರವಿನ ವಿಶೇಷ ಪ್ಯಾಕೇಜ್ ಬಿಡುಗಡೆ ಮಾಡಲೇ ಇಲ್ಲ. ವಯನಾಡ್ ಭೂಕುಸಿತದಿಂದ ಅಂದಾಜು ₹2000 ಕೋಟಿ ಹಾನಿ ಉಂಟಾಗಿದೆ. ಮಾನವೀಯತೆಯಿಂದ ಸಂತ್ರಸ್ತರಿಗೆ ಪರಿಹಾರ ನೀಡಬೇಕು. ಇದರಲ್ಲಿ ರಾಜಕೀಯ ಮಾಡಕೂಡದು' ಎಂದು ಪ್ರಿಯಾಂಕಾ ಹೇಳಿದರು.

ಹಿಮಾಚಲ ಪ್ರದೇಶದಲ್ಲೂ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದೆ. ಅಲ್ಲಿಯೂ ಪ್ರಕೃತಿ ವಿಕೋಪದ ಸಂತ್ರಸ್ತರಿಗೆ ಪರಿಹಾರ ಬಿಡುಗಡೆ ಮಾಡುವಲ್ಲಿ ವಿಳಂಬ ಧೋರಣೆ ತಳೆದಿರುವ ಉದಾಹರಣೆ ಇದೆ ಎಂದರು.

ಚಾಕಹಳ್ಳಿ: ಹುಲಿ ಕಳೇಬರ ಪತ್ತೆ

ಪ್ರಜಾವಾಣಿ ವಾರ್ತೆ

ಎಚ್.ಡಿ.ಕೋಟೆ: ಪಟ್ಟಣದ ಚಾಕಹಳ್ಳಿ ಬಳಿ ರೈತ ಶಿವಣ್ಣ ಅವರ ಮುಸುಕಿನ ಜೋಳದ ಜಮೀನಿನಲ್ಲಿ ಸುಮಾರು ಒಂದೂವರೆ ವರ್ಷದ ಹುಲಿಯ ಕಳೇಬರ ಶನಿವಾರ ಪತ್ತೆಯಾಗಿದೆ. 'ಮತ್ತೊಂದು ಹುಲಿಯೊಂದಿಗೆ ಕಾದಾಟದಲ್ಲಿ ಮೃತಪಟ್ಟಿರಬಹುದು' ಎಂದು ಅರಣ್ಯಾಧಿಕಾರಿಗಳು ಶಂಕಿಸಿದ್ದಾರೆ. ದೇಹದ ಹಿಂಭಾಗ ಇಲ್ಲದಿರುವುದರಿಂದ ಲಿಂಗ ಗೊತ್ತಾಗಿಲ್ಲ.

'ಹುಲಿ ಮರಿಗಳನ್ನು ಹುಲಿಗಳೇ ತಿನ್ನುತ್ತವೆ. ಸ್ಥಳದಲ್ಲಿ ನಾಲ್ಕು ಕ್ಯಾಮೆರಾಗಳನ್ನು ಅಳವಡಿಸಲಾಗಿದ್ದು, ಪರಿಶೀಲನೆ ನಂತರ ಕ್ರಮ ವಹಿಸಲಾಗುವುದು' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಹಲವು ದಿನಗಳಿಂದ ಪಟ್ಟಣ ಹಾಗೂ ಅಕ್ಕಪಕ್ಕದ ಹಳ್ಳಿಗಳಲ್ಲಿ ಹುಲಿ ಮತ್ತು ಮರಿಹುಲಿಗಳು ನಿರಂತರವಾಗಿ ಕಾಣಿಸಿಕೊಂಡು ರೈತರಲ್ಲಿ ಆತಂಕ ಮೂಡಿಸಿದ್ದವು. ವೈದ್ಯಾಧಿ ಕಾರಿಗಳಾದ ಡಾ. ಮುಜಿಬ್, ಡಾ. ರಮೇಶ್, ಡಿಸಿಎಫ್ ಬಸವರಾಜು, ಎಸಿಎಫ್ ಅಭಿಷೇಕ್, ಆರ್‌ಎಫ್‌ಒ ಹನುಮಂತರಾಜು ಸ್ಥಳ ಪರಿಶೀಲಿಸಿದರು.

ಮುಂಬೈ ರೇಸ್

ಎಕ್ಸಲೆಂಟ್ ಲಾಸ್ ಗೆಲ್ಲುವ ನಿರೀಕ್ಷೆ

ಜೆಎಸ್‌ಕೆ 1 ಇಂಡಿಯನ್ 1000 ಗಿನ್ನೀಸ್ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎಕ್ಸಲೆಂಟ್ ಲಾಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ :

1ನೇ ರೇಸ್: **ಗಾಡೆಸ್ ಆಫ್ ಡಾನ್ 4, ಟರ್ನ್ ಅಂಡ್ ಬರ್ನ್ 3, ಫಾಸ್ಟ್ ಅಪ್ರೋಚ್ 5**
2ನೇ ರೇಸ್: **ಕಾರ್ಡೇಲಿಯಾ 2, ಅರ್ಡಕನ್ 1, ಗಿರಾರ್ಡೆಲ್ಲಿ 3**
3ನೇ ರೇಸ್: **ಬೂಸ್ಟರ್ ಶಾಟ್ 4, ಏಂಜೆಲೊ 3, ಜರಾಕ್ 5**
4ನೇ ರೇಸ್: **ಸ್ನೋ ಫಾಲ್ 8, ಮಿಸ್ ಅಮೆರಿಕನ್ ಪೀ 2, ಡ್ರೀಮ್ ಸೆಲ್ಲರ್ 5**
5ನೇ ರೇಸ್: **ಗೋಲ್ಡನ್ ಡ್ಯಾನ್ಸರ್ 10, ಓಲಿವರ್ 4, ಬಿಜಾಲೆಲ್ 2**
6ನೇ ರೇಸ್: **ಎಕ್ಸಲೆಂಟ್ ಲಾಸ್ 3, ಸೈಕಿಕ್ ಸ್ಟಾರ್ 10, ಸ್ಟಾರ್ ಆಫ್ ನೈಟ್ 13**
7ನೇ ರೇಸ್: **ಅಮೇಡಿಯೊ 3, ಕ್ವಿಕರ್ 4, ಮಾನ್ಸ ಮೂಸ 1**
8ನೇ ರೇಸ್: **ಕ್ಯಾಲಿಫ್ 1, ಮಾರ್ಲ್‌ಬೊರೊ ಮ್ಯಾನ್ 2, ಕ್ಯಾಸ್ಕೇಡ್ 5**

ಉತ್ತಮ ಬೆಟ್: ಬೂಸ್ಟರ್ ಶಾಟ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	5,6,7

ಸುಗ್ಗಿ ಹಬ್ಬದಲ್ಲಿ ಮಿಂದೆದ್ದ ಕೊಡಗು

ಮಡಿಕೇರಿ: ಹಾಲು ಚೆಲ್ಲಿದಂತೆ ಹರಡಿದ್ದ ಬೆಳದಿಂಗಳಲ್ಲಿ ಬೀಸುತ್ತಿದ್ದ ಕುಳಿರ್ಗಾಳಿಯ ನಡುವೆ ಜಿಲ್ಲೆಯಾದ್ಯಂತ ಶನಿವಾರ ರಾತ್ರಿ ಸುಗ್ಗಿ ಹಬ್ಬ 'ಪುತ್ತರಿ' (ಹುತ್ತರಿ) ಆಚರಣೆ ಆರಂಭವಾಯಿತು.

'ಪೊಲಿ ಪೊಲಿಯೇ ದೇವ' ಎಂಬ ಉದ್ಘೋಷಗಳು ಮುಗಿಲು ಮುಟ್ಟುತ್ತಿದ್ದಂತೆ ಗದ್ದೆಯಲ್ಲಿ ಸೇರಿದ್ದ ಜನ ಭತ್ತದ ಕದಿರು (ತೆನೆ) ತೆಗೆದು ಸಂಭ್ರಮಿಸಿದರು. ಅದೇ ವೇಳೆ, ಯುವಕರು, ಮಕ್ಕಳು ಬಾಣಬಿರುಸುಗಳನ್ನು ಹಾರಿ ಬಿಟ್ಟು ಬೆಳಕಿನ ರಂಗೋಲಿಯನ್ನು ಕಣ್ತುಂಬಿಕೊಂಡರು.

ನಗರದಲ್ಲಿ ಇಂದು

ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ನೂತನ ಪಟ್ಟಾಧಿಕಾರ ಮಹೋತ್ಸವ: ಸಾನ್ನಿಧ್ಯ: ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ಅಧ್ಯಕ್ಷತೆ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಆಶಯ ನುಡಿ: ಶಿವರುದ್ರ ಸ್ವಾಮೀಜಿ, ಆಯೋಜನೆ ಮತ್ತು ಸ್ಥಳ: ವಿಶ್ವ ಒಕ್ಕಲಿಗರ ಸಂಸ್ಥಾನ ಮಠ, ಮೈಸೂರು ರಸ್ತೆ, ಕೆಂಗೇರಿ, ಬೆಳಿಗ್ಗೆ 6ರಿಂದ

ಆರನೇ ವರ್ಷದ ಗುರುವಂದನಾ ಕಾರ್ಯಕ್ರಮ: ತಬಲಾ ತರಂಗ: ನಾಗರಾಜ ಹೆಗಡೆ ಮತ್ತು ಶಿಷ್ಯರು, ಗಾಯನ: ಪರಮೇಶ್ವರ ಹೆಗಡೆ, ಅನಂತ್ ಭಾಗವತ್, ಶ್ರೀನಿವಾಸ್ ಭಾಗವತ್, ಆಯೋಜನೆ: ಅನಂತಾನುಗ್ರಹ ಸಂಗೀತ ವಿದ್ಯಾಲಯ, ಸ್ಥಳ: ಇಂದಿರಾಕೃಷ್ಣ ವಿದ್ಯಾಶಾಲೆ, ಶಾರದಾನಗರ ಬಿಕಾಸಿಪುರ, ಬೆಳಿಗ್ಗೆ 8.30ರಿಂದ

'ರಾಷ್ಟ್ರಕವಿ ಕುವೆಂಪು ಅವರ ವಿಚಾರ ಕ್ರಾಂತಿಗೆ ಆಹ್ವಾನ ಭಾಷಣದ 50ರ ಸಂಭ್ರಮ' ನಗರದ 15 ಸ್ಥಳಗಳಲ್ಲಿರುವ ಕುವೆಂಪು ಪ್ರತಿಮೆಗೆ ಮಾಲಾರ್ಪಣೆ: ಚಾಲನೆ: ಅಪ್ಪಗೆರೆ ತಿಮ್ಮರಾಜು, ಅತಿಥಿಗಳು: ಸಂತೋಷ್ ಹಾನಗಲ್, ನಾ. ಶ್ರೀಧರ್, ಎಂ. ಶಿವಕುಮಾರ್, ಆಯೋಜನೆ: ಕರ್ನಾಟಕ ಜ್ಞಾನ ವಿಜ್ಞಾನ ಸಮಿತಿ, ಸ್ಥಳ: ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 9

ದೇವಲ ಮಹರ್ಷಿ ಜಯಂತಿ, 'ದೇವಾಂಗ ರತ್ನ ರಾಜ್ಯ ಪ್ರಶಸ್ತಿ', 'ರತ್ನಾಮೃತ ನಿತ್ಯ ಅನ್ನದಾಸೋಹ ಸನ್ನಿಧಿ' ಉದ್ಘಾಟನೆ: ಸಾನ್ನಿಧ್ಯ: ದಯಾನಂದಪುರಿ ಸ್ವಾಮೀಜಿ, ಉದ್ಘಾಟಕ: ಕೆ. ನಾರಾಯಣ, ಅಧ್ಯಕ್ಷತೆ: ರವೀಂದ್ರ ಪಿ. ಕಲಬುರ್ಗಿ, ಉಪಸ್ಥಿತಿ: ಪಿ.ಆರ್. ಗಿರಿಯಪ್ಪ, ಆಯೋಜನೆ: ಕರ್ನಾಟಕ ರಾಜ್ಯ ದೇವಾಂಗ ಸಂಘ, ಸ್ಥಳ: ದೇವಾಂಗ ಭವನ, ಗಾಯತ್ರಿಪೀಠದ ಮಹಾಸಂಸ್ಥಾನ ಮಠ, ಕೆಂಪಲಿಂಗನಹಳ್ಳಿ, ನೆಲಮಂಗಲ, ಬೆಳಿಗ್ಗೆ 9.30

ಪುಸ್ತಕಗಳ ಅನಾವರಣ, ಕ್ರಿಯೇಟಿವ್ ಪುಸ್ತಕ ಪ್ರಶಸ್ತಿ ಪ್ರದಾನ: ಅತಿಥಿಗಳು: ಜೋಗಿ, ಬಿ.ಆರ್. ಲಕ್ಷ್ಮಣರಾವ್, ಉಪಸ್ಥಿತಿ: ಕೆ. ಸತ್ಯನಾರಾಯಣ, ಬಾಳಾಸಾಹೇಬ ಲೋಕಾಪುರ, ಡಿ.ಎಸ್. ಚೌಗಲೆ, ನರೇಂದ್ರ ಪೈ, ನರೇಂದ್ರ ರೈ ದೇರ್ಲ, ಲಕ್ಷ್ಮಣ ವಿ.ಎ., ಆಯೋಜನೆ: ಕ್ರಿಯೇಟಿವ್ ಪುಸ್ತಕ ಮನೆ ಪ್ರಕಾಶನ, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಳಿಗ್ಗೆ 10

ಬಿಜಿಎಲ್ ಸ್ವಾಮಿ ಅವರ 'ಹಸುರು ಹೊನ್ನು', ಡಿವಿಜಿ ಅವರ 'ಮಂಕುತಿಮ್ಮನ ಕಗ್ಗ' ಪುಸ್ತಕಗಳ ಅಂಗ್ಲ ಅನುವಾದ ಪುಸ್ತಕಗಳ ಬಿಡುಗಡೆ: ಅತಿಥಿಗಳು: ಸಿ.ಆರ್. ನಾಗೇಂದ್ರನ್, ಅಧ್ಯಕ್ಷತೆ: ಎಚ್.ಆರ್. ನಾಗೇಂದ್ರ, ಉಪಸ್ಥಿತಿ: ಜ್ಯೋತಿ ನಟರಾಜನ್, ಕೆ. ನಟರಾಜನ್, ಸಿ. ಕನಕರಾಜು, ಆಯೋಜನೆ: ಡಿವಿಜಿ ಬಳಗ ಪ್ರತಿಷ್ಠಾನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10ರಿಂದ

ಆರನೇ ವಾರ್ಷಿಕ ಸಮ್ಮಿಟ್: ಅತಿಥಿಗಳು: ಕೆ.ಎಚ್. ಮುನಿಯಪ್ಪ, ಕೃಷ್ಣಮೂರ್ತಿ ಬಿ. ಹೊನ್ನಾವರ್, ಅನಂತಲಕ್ಷ್ಮಿ, ಸೌಮ್ಯ, ಸುಧಾಂಶು ಕುಮಾರ್, ರವಿಶಂಕರ್, ಸವಿತಕ್ಕ, ಅಧ್ಯಕ್ಷತೆ: ಹಬೀಬ್ ಸುಲ್ತಾನ್ ಅಲಿ, ಆಯೋಜನೆ: ಅಡ್ವೊಕೇಟ್ಸ್ ಅಸೋಸಿಯೇಷನ್ ಫಾರ್ ಸೋಶಿಯಲ್ ರೆಸ್ಪಾನ್ಸಿಬಿಲಿಟಿ ಆ್ಯಂಡ್ ಅವೇರ್ನೆಸ್, ಸ್ಥಳ: ಬಸವ ಭವನ, ಬಸವೇಶ್ವರ ವೃತ್ತ, ಬೆಳಿಗ್ಗೆ 10

35ನೇ ಜಂಟಿ ದ್ವೈವಾರ್ಷಿಕ ಅಧಿವೇಶನ: ಉದ್ಘಾಟನೆ: ಪರ್ವಿನ್ ರಘಭೀರ್ ಸಿಂಗ್, ಅತಿಥಿಗಳು: ರಾಜೇಶ್ ಪಿ. ಸಾರಂಗ, ಜಿ. ಜಾನಕಿರಾಂ, ಚಂದ್ರಸ್ವಾಮಿ, ಪಿ. ಮಲ್ಲಿಕಾರ್ಜುನ, ರವಿ ಬಿ. ಪಾಟೀಲ್, ಎಚ್.ಎಂ. ರಾಜು, ಅಧ್ಯಕ್ಷತೆ: ಸುಮನ, ರಾಜೇಶ್ ಭಾಸ್ಕರ್ ಎಲ್., ಶ್ರೀಶೈಲ ಗೌಡ, ಆಯೋಜನೆ: ಅಖಿಲ ಭಾರತ ಅಂಚೆ ನೌಕರರ ಸಂಘ ಗ್ರೂಪ್-ಸಿ ಪೋಸ್ಟ್‌ಮೆನ್ ಆ್ಯಂಡ್ ಎಂಟಿಎಸ್ ಹಾಗೂ ಎಐಜಿಡಿಎಸ್‌ಯು ಬೆಂಗಳೂರು ದಕ್ಷಿಣ ವಿಭಾಗ, ಸ್ಥಳ: ಹೋಟೆಲ್ ಕೃಷ್ಣ ಗ್ರ್ಯಾಂಡ್, ಬನಶಂಕರಿ ಎರಡನೇ ಹಂತ, ಬೆಳಿಗ್ಗೆ 10ರಿಂದ

ಕಾ.ವೆಂ. ಶ್ರೀನಿವಾಸಮೂರ್ತಿ ಅವರ ಗೀತೆಗಳ ಗಾಯನ, 'ಪರ್ವತಗಳು ಹಾಡಿವೆ' ಪುಸ್ತಕ ಬಿಡುಗಡೆ: ಅತಿಥಿಗಳು: ವಿಶ್ವನಾಥ್ ನಾಕೋಡ್, ಹಂ.ಪ. ನಾಗರಾಜಯ್ಯ, ಉಪಸ್ಥಿತಿ: ವಿ. ಮಹೇಶ್, ಪೂರ್ವಿ ಪುರಸ್ಕಾರ ಪುರಸ್ಕೃತರು: ಕಾ.ವೆಂ. ಶ್ರೀನಿವಾಸಮೂರ್ತಿ, ಆಯೋಜನೆ: ಪೂರ್ವಿ ಸಂಗೀತ ಅಕಾಡೆಮಿ, ಸ್ಥಳ: ಸೇವಾ ಸದನ, 14ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 10

ವೀರೇಶ ಬಡಿಗೇರ ಅವರ 'ಹೂ ಹೂವಿನೊಳಗೊಂದು ಕೈಲಾಸವರಳಿ', ಮಿತ್ರಾ ವೆಂಕಟ್ರಾಜ ಅವರ 'ನನ್ನಕ್ಕ ನಿಲೂಫರ್', ವಿಕ್ರಂ ಚದುರಂಗ ಅವರ 'ಟಿಕೆಟ್ ಪ್ಲೀಸ್', ದೀಪಾ ಜೋಶಿ ಅವರ 'ತತ್ರಾಣಿ' ಪುಸ್ತಕಗಳ ಬಿಡುಗಡೆ: ಬಸವರಾಜ ಕಲ್ಗುಡಿ, ಅತಿಥಿಗಳು: ಗಿರಿಜಾ ಶಾಸ್ತ್ರಿ, ಸಿಂಧೂರಾವ್, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಬಿ.ಎಂ.ಶ್ರೀ ಪ್ರತಿಷ್ಠಾನ, ಎನ್. ಆರ್. ಕಾಲೊನಿ, ಬೆಳಿಗ್ಗೆ 10.30

ಕರ್ನಾಟಕ ಶಾಸ್ತ್ರೀಯ ಸಂಗೀತ: ಉದ್ಘಾಟನೆ: ಎಚ್.ಎಸ್. ವೇಣುಗೋಪಾಲ್, ಅಧ್ಯಕ್ಷತೆ: ಕೆ. ವೆಂಕಟೇಶ್, ಅತಿಥಿಗಳು: ಮಧುಕರಂ ಪ್ರಶಾಂತ್ ಅಯ್ಯಂಗಾರ್, ಶೃಂಗೇರಿ ಎಚ್.ಎಸ್. ನಾಗರಾಜ್, ಆಯೋಜನೆ: ಗುರುಗುಹ ಗಾನಸಭಾ, ಸ್ಥಳ: ಶ್ರೀಲಕ್ಷ್ಮಿವೆಂಕಟರಮಣ ಸ್ವಾಮಿ ದೇವಸ್ಥಾನ, ಪದ್ಮನಾಭನಗರ, ಸಂಜೆ 4

'ಕಲಾ ಸಂಸ್ಕೃತಿ' ಸಂಗೀತ, ನೃತ್ಯ ಕಾರ್ಯಕ್ರಮ: ಅತಿಥಿಗಳು: ಶುಭಾ ಧನಂಜಯ, ಜಿ.ಎ. ಬ್ರಹ್ಮದೇವ, ಕೇಶವಗೋಪಾಲ ಅಯ್ಯಂಗಾರ್, ಕೆ.ಕೆ. ಗಂಗಾಧರನ್, ಆಯೋಜನೆ: ಎ.ಜೀಸ್ ಕಲಾಶ್ರೀ ಪಬ್ಲಿಕ್ ಚಾರಿಟಬಲ್ ಟ್ರಸ್ಟ್, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5

ಸ್ವರ-ಧಾರ: ಕೊಳಲು: ಧ್ರುವ ಹಾನಗಲ್, ತಬಲಾ: ಕಿರಣ ಯಾವಗಲ್, ಗಾಯನ: ವಿನಾಯಕ ಹೆಗಡೆ, ತಬಲಾ: ಸಂತೋಷ್ ಹೆಗಡೆ, ಹಾರ್ಮೋನಿಯಂ: ಅಜಯ ಹೆಗಡೆ, ಆಯೋಜನೆ: ಸಪ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

ಬಸವರಾಜ ಕಲ್ಗುಡಿ

ಹನುಮ ಜಯಂತಿ, ದತ್ತಾತ್ರೇಯ ಜಯಂತಿ: ಸಾಮೂಹಿಕ ಸತ್ಯನಾರಾಯಣ ಪೂಜೆ, ಕೀ-ಬೋರ್ಡ್: ಅನಿರುದ್ಧ, 'ರಾಮದರ್ಶನ ಮತ್ತು ಶಾಸ್ತ್ರೀಯ ನೃತ್ಯ' ಪ್ರದರ್ಶನ: ಸೂರ್ಯ ಆರ್ಟ್ಸ್ ಇಂಟರ್ ನ್ಯಾಷನಲ್, ಸ್ಥಳ: ಚಾಮರಾಜಪೇಟೆ ಕನ್ನಡ ಸಾಂಸ್ಕೃತಿಕ ಕಲಾ ಸೇವಾ ಸಮಿತಿ, ಚಾಮರಾಜಪೇಟೆ, ಬೆಳಿಗ್ಗೆ 11ರಿಂದ

'ವಿದೇಶಿ ಭಾರತೀಯರ ಮೇಲೆ ಗುರೂಜಿಯವರ ಪ್ರಭಾವ': ಉಪನ್ಯಾಸ: ರವಿಕುಮಾರ್ ಅಯ್ಯರ್, ಅಧ್ಯಕ್ಷತೆ: ಮಿಲಿಂದ್ ಗೋಖಲೆ, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11

49ನೇ ವಾರ್ಷಿಕೋತ್ಸವ ಹಾಗೂ ಬಿಲ್ಲವ ಯುವಹಬ್ಬದ ಉದ್ಘಾಟನೆ: ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ನೆಕ್ಕಿದಪುಣಿ ಗೋಪಾಲಕೃಷ್ಣ, ಅತಿಥಿ: ಅಜಿತ್ ರೈ, ಸನ್ಮಾನಿತರು: ತಿಮ್ಮೇಗೌಡ, ಯೋಗೇಶ್ ಕುಮಾರ್ ಯು.ಎಸ್., ಹರ್ಷಿತಾ ವಿ., ಆಯೋಜನೆ: ಬಿಲ್ಲವ ಅಸೋಸಿಯೇಷನ್, ಸ್ಥಳ: ದೇವಕಿ ಆನಂದ ಸುವರ್ಣ ಕನ್ವೆನ್ಷನ್ ಹಾಲ್, ಬಿಲ್ಲವ ಭವನ, ಬನ್ನೇರುಘಟ್ಟ ರಸ್ತೆ, ಬೆಳಿಗ್ಗೆ 11.30

'ಮಕರಂದ-ಕನ್ನಡ ಕಲಿಕಾ ಅಭಿಯಾನ' ಮುಕ್ತಾಯ ಸಮಾರಂಭ: ಅಧ್ಯಕ್ಷತೆ: ಸಂತೋಷ್ ಹಾನಗಲ್, ಅತಿಥಿಗಳು: ಚಿರಂಜೀವಿ ಸಿಂಘ್, ದೇವರಾಜಪ್ಪ, ಪ್ರಸನ್ನ ರೈ, ಶಿವರಾಮ ಶೆಟ್ಟಿ, ಮಹೇಶ್ವರಯ್ಯ, ಆಯೋಜನೆ: ಬೆಂಗಳೂರು ಅಪಾರ್ಟ್‌ಮೆಂಟ್ ಫೆಡರೇಶನ್, ಮಕರಂದ, ಮನೆ-ಮನೆಗಳಲ್ಲಿ ಕನಡನ ರಂಗವಲ್ಲಿಯ ದರ್ಪಣ, ಸ್ಥಳ: ದೇವ್-ಇನ್ ನ್ಯಾಷನಲ್ ಶಾಲೆ, ಸಹಕಾರನಗರ, ಮಧ್ಯಾಹ್ನ 1

ಲಕ್ಷ್ಮೀಸಾಗರ ಸ್ವಾಮಿಗೌಡ ಅವರ 'ಗಾಡಿಜಾಡು' ಪುಸ್ತಕ ಬಿಡುಗಡೆ: ಬಿ.ಸಿ. ಶಿವಾನಂದಮೂರ್ತಿ, ಉದ್ಘಾಟನೆ: ಶಿವಾನಂದ ಕಲಕೇರಿ, ಅಧ್ಯಕ್ಷತೆ: ಜಾಣಗೆರೆ ವೆಂಕಟರಾಮಯ್ಯ, ಪುಸ್ತಕದ ಕುರಿತು: ತಲಕಾಡು ಚಿಕ್ಕರಂಗೇಗೌಡ, ವಡ್ಡಗೆರೆ ನಾಗರಾಜಯ್ಯ, ಆಯೋಜನೆ: ಸಿಂಚನ ಪ್ರಕಾಶನ, ಸ್ಥಳ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಮಧ್ಯಾಹ್ನ 2

ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ

ಸಂಗೀತಧಾಮ 21ರ ಸಂಭ್ರಮ, ಸಂಗೀತ ಕೌಸ್ತುಭ ಪ್ರಶಸ್ತಿ ಪ್ರದಾನ: ಉದ್ಘಾಟನೆ: ಮನು ಬಳಿಗಾರ್, ಪ್ರಶಸ್ತಿ ಪ್ರದಾನ: ಡಾ. ವಿಜಯಲಕ್ಷ್ಮಿ ಬಾಳೆಕುಂದ್ರಿ, ಪ್ರಶಸ್ತಿ ಪುರಸ್ಕೃತರು: ಎನ್.ಎಸ್. ಪ್ರಸಾದ್, ಅಧ್ಯಕ್ಷತೆ: ಸತೀಶ್ ಹಂಪಿಹೊಳಿ, ಅತಿಥಿ: ಕಶ್ಯಪ್, ಆಯೋಜನೆ: ಸಂಗೀತಧಾಮ, ಸ್ಥಳ: ಬಿ.ವಿ. ರತ್ನಯ್ಯ ಶೆಟ್ಟಿ ಸಭಾಂಗಣ, ವಿ.ಇ.ಟಿ. ಕಾಲೇಜು, 14ನೇ ಮುಖ್ಯರಸ್ತೆ, ಜೆ.ಪಿ. ನಗರ ಎರಡನೇ ಹಂತ, ಸಂಜೆ 4

'ಕುವೆಂಪು ನಾಟಕಗಳ ವೈಚಾರಿಕತೆ' ಉಪನ್ಯಾಸ: ಬೇಲೂರು ರಘುನಂದನ್, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ವಿನಾಯಕ ದೇವಸ್ಥಾನದ ಸಭಾಂಗಣ, ಆರ್.ಟಿ. ನಗರ, ಸಂಜೆ 4

'ವಿಸ್ಮಯ-2024' ವಾರ್ಷಿಕೋತ್ಸವ: ಅತಿಥಿಗಳು: ಬಾಲಕೃಷ್ಣ ಪಿ. ಶೆಟ್ಟಿ, ಗುರುಕಿರಣ್, ಅಧ್ಯಕ್ಷತೆ: ಅಶೋಕ್ ಶೆಟ್ಟಿ ಎಂ., ಆಯೋಜನೆ ಮತ್ತು ಸ್ಥಳ: ಬಂಟ್ಸ್ ಸಂಘ ಆರ್.ಎನ್.ಎಸ್., ವಿದ್ಯಾನಿಕೇತನ ಪಿಯು ಕಾಲೇಜು, ಯಲಚಗುಪ್ಪೆ, ತಾವರೆಕೆರೆ, ಸಂಜೆ 4

ಗೀತಾಜಯಂತಿ ಆಚರಣೆ: ಉದ್ಘಾಟನೆ: ಶೋಭಾ ಕರಂದ್ಲಾಜೆ, ಸಾನ್ನಿಧ್ಯ: ವಿಧುಶೇಖರ ಭಾರತೀ ಸ್ವಾಮೀಜಿ, ಸುಗುಣೇಂದ್ರ ತೀರ್ಥ ಶ್ರೀಪಾದ ಸ್ವಾಮೀಜಿ, 'ಭಗವದ್ಗೀತೆ' ಉಪನ್ಯಾಸ: ಪಾವಗಡ ಪ್ರಕಾಶ್‌ರಾವ್, ಅಧ್ಯಕ್ಷತೆ: ರಘುನಾಥ್ ಎಸ್., ಅತಿಥಿಗಳು: ಅಸಗೋಡು ಜಯಸಿಂಹ, ರೋಹಿಣಿ ಚಕ್ರವರ್ತಿ, ಅನೂಪ್ ಅಯ್ಯಂಗಾರ್, ಆಯೋಜನೆ: ಮಲ್ಲೇಶರಂ ಬ್ರಾಹ್ಮಣ ಸಭಾ ಟ್ರಸ್ಟ್, ಸ್ಥಳ: ಹಿಮಾಂಶು ಜ್ಯೋತಿಕಲಾಪೀಠ, ನಾಲ್ಕನೇ ಮುಖ್ಯರಸ್ತೆ, ಮಲ್ಲೇಶ್ವರ, ಸಂಜೆ 4ರಿಂದ

ಧ್ಯಾನದ ಜೊತೆಗೆ ಭಾರತೀಯ ಸಂಗೀತ, ನೃತ್ಯ: ಅತಿಥಿಗಳು: ಸಿ.ಆರ್. ಗೀತಾ, ರೂಪಾ ಅಯ್ಯರ್, ಮಾನಸ ಹೊಳ್ಳ, ರಾಧಿಕಾ ನಾರಾಯಣ್, ಆಯೋಜನೆ: ಸಹಜ ಯೋಗ ಸಂಸ್ಥೆ, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ಸಭಾಂಗಣ, ಅರಮನೆ ರಸ್ತೆ, ಸಂಜೆ 4.30

'ಮಹಿಳೆಯರಲ್ಲಿನ ಹೃದಯ ಕಾಯಿಲೆ' ಉಪನ್ಯಾಸ: ಡಾ. ಅನುಸೂಯ ಎಸ್., 'ಸಾಮಾನ್ಯ ಜನರಲ್ಲಿ ಕಾಣುವ ರೋಗ ಲಕ್ಷಣಗಳು ಮತ್ತು ಚಿಕಿತ್ಸೆ' ಉಪನ್ಯಾಸ: ಡಾ.ಟಿ. ಎಚ್. ಆಂಜನಪ್ಪ, ಅಧ್ಯಕ್ಷತೆ: ಡಾ. ವಿಜಯಾನಂದ್ ಎಸ್., ಆಯೋಜನೆ ಮತ್ತು ಸ್ಥಳ: ಐಎಂಎ ಬೆಂಗಳೂರು ಶಾಖೆ, ಚಾಮರಾಜಪೇಟೆ, ಸಂಜೆ 4.30

'ಶ್ರೀ ಸಿದ್ಧಗಂಗಾ ಸಿರಿ' ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಉದ್ಘಾಟನೆ: ಎಲ್. ರೇವಣಸಿದ್ಧಯ್ಯ, ಪ್ರಶಸ್ತಿ ಪ್ರದಾನ: ಗೊ.ರು. ಚನ್ನಬಸಪ್ಪ, ಪ್ರಶಸ್ತಿ ಪುರಸ್ಕೃತರು: ಕುಂ. ವೀರಭದ್ರಪ್ಪ, ಅತಿಥಿ: ಬಿ.ಎಲ್. ಶಂಕರ್, ಅಧ್ಯಕ್ಷತೆ: ಎಸ್. ಮಹಾದೇವಯ್ಯ, ಪ್ರಾಸ್ತಾವಿಕ ನುಡಿ: ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಬಸವ ಅಂತರರಾಷ್ಟ್ರೀಯ ಪ್ರತಿಷ್ಠಾನ ಲಂಡನ್, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5.30

ಕುಂ.ವೀರಭದ್ರಪ್ಪ

'ಕರ್ಣಪರ್ವ' ಯಕ್ಷಗಾನ ಪ್ರದರ್ಶನ: ಭಾಗವತರು: ವಿನಯ್ ಆರ್. ಶೆಟ್ಟಿ, ಮದ್ದಳೆ: ಸಂಪತ್ ಆಚಾರ್, ಚಂಡೆ: ಮನೋಜ್ ಆಚಾರ್, ಆಯೋಜನೆ: ಪ್ರಸನ್ನ ಆಂಜನೇಯ ಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಸ್ಥಳ: ರಾಗಿಗುಡ್ಡ ದೇವಸ್ಥಾನ, ಸಂಜೆ 6

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಮಧುರಾ ಜೆ. ಶೇಠ್, ಉಪಸ್ಥಿತಿ: ಸೀತಾ ಗುರುಪ್ರಸಾದ್, ಪುಲಿಕೇಶಿ ಕಸ್ತೂರಿ, ಸುಂದರ್ ವೆಂಕಟೇಶ್ ಮಹಾದೇಶಿಕನ್, ಆಯೋಜನೆ: ಶ್ರೀ ಭಾರತಿ ನೃತ್ಯಾಲಯ ಟ್ರಸ್ಟ್, ಸ್ಥಳ: ವಿವೇಕ ಸಭಾಂಗಣ, ಯುವಕ ಸಂಘ, ನಾಲ್ಕನೇ ಟಿ ಬ್ಲಾಕ್, ಜಯನಗರ, ಸಂಜೆ 6

ಮಧುರಾ ಮೂರ್ತಿ 'ನೀರ ಮೇಲಣ ನೆರಳು' ಪುಸ್ತಕ ಬಿಡುಗಡೆ: ಸತ್ಯೇಶ್ ಎನ್. ಬೆಳ್ಳೂರ್, ಅತಿಥಿ: ಗುರುರಾಜ್ ಎಸ್. ದಾವಣಗೆರೆ, ಅಧ್ಯಕ್ಷತೆ: ಕಂನಾಡಿಗಾ ನಾರಾಯಣ, ಆಯೋಜನೆ ಮತ್ತು ಸ್ಥಳ: ಮಾತಿನ ಮನೆ, ಚಾಮರಾಜಪೇಟೆ, ಸಂಜೆ 6

ಹುಣ್ಣಿಮೆ ಹಾಡು 'ಬೆಳದಿಂಗಳ ಸ್ವರ ಸಂಗಮ': ಗಾಯನ: ನೌಶಾದ್ ಹರ್ಲಾಪುರ್, ನಿಶಾದ್ ಹರ್ಲಾಪುರ್, ತಬಲಾ: ಪ್ರಶಾಂತ್ ಹಾರೋಗಿರಿ, ಡಾಲ್ ತಬಲಾ: ಪ್ರಮೋದ್ ಮಠದ, ಹಾರ್ಮೋನಿಯಂ: ವಿಘ್ನೇಶ್ವರ ಭಾಗವತ್, ಕೊಳಲು: ಶುಭೋದ್ ಪಿ. ರಾವ್, ಅತಿಥಿಗಳು: ಧರ್ಮೇಂದ್ರ ಕುಮಾರ್ ಅರೇನಹಳ್ಳಿ, ಆಯೋಜನೆ ಮತ್ತು ಸ್ಥಳ: ಕಾಡುಮಲ್ಲೇಶ್ವರ ಗೆಳೆಯರ ಬಳಗ, ಕಾಡುಮಲ್ಲೇಶ್ವರ ಬಯಲು ರಂಗ ಮಂಟಪ, ಮಲ್ಲೇಶ್ವರ, ಸಂಜೆ 6.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಗ್ರಾಮೀಣ ಭಾಗದಲ್ಲಿನ ಕೈಗಾರಿಕಾ ಆಸ್ತಿಗಳ ಸಮೀಕ್ಷೆ, ತೆರಿಗೆ ನಿಗದಿಯಲ್ಲಿ ಲೋಪ: ಸಿಎಜಿ ವರದಿ

ಅಕ್ರಮವಾಗಿ ಆಸ್ತಿ ತೆರಿಗೆ ಸಂಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು (ಕೆಐಎಡಿಬಿ) ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಗೆ ವಿರುದ್ಧವಾಗಿ ಗ್ರಾಮೀಣ ಪ್ರದೇಶದಲ್ಲಿನ ಕೈಗಾರಿಕಾ ಘಟಕಗಳಿಗೆ ಸಂಬಂಧಿಸಿದ ಆಸ್ತಿ ತೆರಿಗೆ ಸಂಗ್ರಹಿಸುತ್ತಿದೆ. ಕೈಗಾರಿಕಾ ಆಸ್ತಿಗಳ ಸಮೀಕ್ಷೆ, ತೆರಿಗೆ ದರ ನಿರ್ಧರಣೆ, ಬೇಡಿಕೆ ಮತ್ತು ವಸೂಲಾತಿಯನ್ನೂ ಅಕ್ರಮವಾಗಿ ಮಾಡುತ್ತಿದೆ ಎಂದು ಮಹಾಲೇಖಪಾಲರ (ಸಿಎಜಿ) ವರದಿ ಹೇಳಿದೆ.

'ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯ ಪ್ರಕಾರ, ಗ್ರಾಮೀಣ ಪ್ರದೇಶದಲ್ಲಿನ ಕೈಗಾರಿಕಾ ಘಟಕಗಳ ಆಸ್ತಿ ತೆರಿಗೆಯನ್ನು ಸಂಗ್ರಹಿಸುವ ಅಧಿಕಾರ ಗ್ರಾಮ ಪಂಚಾಯಿತಿಗಳಿಗೆ ಇದೆ. ಆದರೆ, ಗ್ರಾಮೀಣ ಪ್ರದೇಶದಲ್ಲಿನ ಕೈಗಾರಿಕಾ ಘಟಕಗಳ ಆಸ್ತಿ ತೆರಿಗೆಯನ್ನು ಕೆಐಎಡಿಬಿ ಸಂಗ್ರಹಿಸಿ, ಗ್ರಾಮ ಪಂಚಾಯಿತಿಗಳಿಗೆ ವರ್ಗಾಯಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು 2020ರ ಮಾರ್ಚ್‌ನಲ್ಲಿ ಕಾಯ್ದೆಗೆ ವಿರುದ್ಧವಾಗಿ ನಿರ್ದೇಶನ ನೀಡಿದೆ' ಎಂದು ಸಿಎಜಿ ಆಕ್ಷೇಪಿಸಿದೆ.

ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ನಡೆಯುತ್ತಿರುವ ವಿಧಾನಮಂಡಲದ ಚಳಿಗಾಲದ ಅಧಿವೇಶನದಲ್ಲಿ ಮಂಡಿಸಿರುವ 73ನೇ ಸಂವಿಧಾನ ತಿದ್ದುಪಡಿಯ ಅನುಷ್ಠಾನದ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಸಿಎಜಿ ವರದಿಯು ಕೈಗಾರಿಕಾ ಆಸ್ತಿಗಳಿಗೆ ಸಂಬಂಧಿಸಿದ ತೆರಿಗೆ ಸೋರಿಕೆ ವ್ಯಾಪಕವಾಗಿರುವುದನ್ನು ಬಹಿರಂಗಪಡಿಸಿದೆ. 2017-18ರಿಂದ 2021-22ರ ಅವಧಿಯಲ್ಲಿ ಗ್ರಾಮ ಪಂಚಾಯಿತಿಗಳಲ್ಲಿ ಆಸ್ತಿ ತೆರಿಗೆ ನಿರ್ಧರಣೆ, ಬೇಡಿಕೆ, ವಸೂಲಿ ಮತ್ತು ಅಕ್ರಮಗಳ ಕುರಿತು ತೆರಿಗೆ ವ್ಯಾಪ್ತಿ ತರಲು ನಡೆಸಿದ ಸಮೀಕ್ಷೆಗಳ ಕುರಿತು ಸಿಎಜಿ ಪರಿಶೀಲನೆ ನಡೆಸಿತ್ತು.

ರಾಜ್ಯದ 23 ಜಿಲ್ಲೆಗಳ ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಕೆಐಎಡಿಬಿಯು 10,025 ಕೈಗಾರಿಕಾ ಘಟಕಗಳಿಗೆ ಜಮೀನು ಮಂಜೂರು ಮಾಡಿತ್ತು. 2022ರ ಮಾರ್ಚ್ ಅಂತ್ಯದವರೆಗೂ ಗ್ರಾಮ ಪಂಚಾಯಿತಿಗಳು ತಮ್ಮ ವ್ಯಾಪ್ತಿಯಲ್ಲಿನ ಕೈಗಾರಿಕಾ ಆಸ್ತಿಗಳ ಕುರಿತು ಕೆಐಎಡಿಬಿ ಜೊತೆ ಸೇರಿ ಜಂಟಿ ಸಮೀಕ್ಷೆಯನ್ನೇ ನಡೆಸಿರಲಿಲ್ಲ. ಕೈಗಾರಿಕಾ ಆಸ್ತಿಗಳಿಗೆ ಸಂಬಂಧಿಸಿದಂತೆ ದತ್ತಾಂಶವೇ ಗ್ರಾಮ ಪಂಚಾಯಿತಿಗಳ ಬಳಿ ಇರಲಿಲ್ಲ ಎಂಬ ಉಲ್ಲೇಖ ವರದಿಯಲ್ಲಿದೆ.

2022ರಲ್ಲಿ ಕೆಐಎಡಿಬಿಯು ₹ 19.65 ಕೋಟಿ ಮೊತ್ತದ ತೆರಿಗೆಯನ್ನು ಕೈಗಾರಿಕಾ ಘಟಕಗಳಿಂದ ಸಂಗ್ರಹಿಸಿದ್ದರೂ, ಸಂಬಂಧಿಸಿದ ಗ್ರಾಮ ಪಂಚಾಯಿತಿಗಳಿಗೆ ವರ್ಗಾವಣೆ ಮಾಡಿರಲಿಲ್ಲ. ಕೆಐಎಡಿಬಿಯಿಂದ ಆಸ್ತಿ ತೆರಿಗೆ ಮೊತ್ತವು ಗ್ರಾಮ ಪಂಚಾಯಿತಿಗಳಿಗೆ ಜಮೆ ಆಗುವುದನ್ನು ಖಾತರಿಪಡಿಸಿಕೊಳ್ಳಲು ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳು ಮತ್ತು ಇಲಾಖೆಯ ಕೇಂದ್ರ ಕಚೇರಿಯ ಅಧಿಕಾರಿಗಳು ಪ್ರಯತ್ನವನ್ನೇ ಮಾಡಿರಲಿಲ್ಲ ಎಂದು ವರದಿ ಹೇಳಿದೆ.

ಅಧಿಕಾರದ ಅತಿಕ್ರಮಣ: ಗ್ರಾಮೀಣ ಪ್ರದೇಶದ ವ್ಯಾಪ್ತಿಯಲ್ಲಿ 776 ಕೈಗಾರಿಕಾ ಕಟ್ಟಡಗಳ ನಿರ್ಮಾಣಕ್ಕೆ ಗ್ರಾಮ ಪಂಚಾಯಿತಿಗಳ ಬದಲಿಗೆ ಕೆಐಎಡಿಬಿಯೇ ಪರವಾನಗಿ ನೀಡಿದೆ. ಇದರಿಂದ ಗ್ರಾಮ ಪಂಚಾಯಿತಿಗಳ ಅಧಿಕಾರದ ಅತಿಕ್ರಮಣ ಆಗಿರುವುದರ ಜೊತೆಯಲ್ಲೇ ವರಮಾನದ ನಷ್ಟವೂ ಸಂಭವಿಸಿದೆ ಎಂದು ಸಿಎಜಿ ಹೇಳಿದೆ.

ಕಟ್ಟಡಗಳ ಮೇಲ್ಪಾಯದ (ಪ್ಲಿಂತ್) ಅಳತೆಯನ್ನು ಆಧರಿಸಿ ಆಸ್ತಿ ತೆರಿಗೆ ನಿಗದಿಪಡಿಸಲು ಕೇಂದ್ರ ಹಣಕಾಸು ಆಯೋಗವು ನಿರ್ದೇಶನ ನೀಡಿತ್ತು. ಆದರೆ, ಗ್ರಾಮ ಪಂಚಾಯಿತಿಗಳಲ್ಲಿ ಈ ಕ್ರಮ ಅನುಸರಿಸುತ್ತಿಲ್ಲ. ಇದರಿಂದ ತೆರಿಗೆ ವರಮಾನದಲ್ಲಿ ನಷ್ಟವಾಗುತ್ತಿದೆ ಎಂಬ ಉಲ್ಲೇಖ ವರದಿಯಲ್ಲಿದೆ.

ಕೆಐಎಡಿಬಿ

'ತೆರಿಗೆ ವಸೂಲಿಯಲ್ಲಿ ಕಳಪೆ ಸಾಧನೆ'

ಗ್ರಾಮ ಪಂಚಾಯಿತಿಗಳ ಆದಾಯದ ಮೂಲಗಳಲ್ಲಿ ಆಸ್ತಿ/ ಕಟ್ಟಡ ತೆರಿಗೆಯೇ ಪ್ರಮುಖ. ಒಟ್ಟು ಆದಾಯದಲ್ಲಿ ಶೇ 74.45ರಷ್ಟು ಈ ಮೂಲದಿಂದಲೇ ಬರುತ್ತದೆ. ಆದರೆ, ದಾಖಲೆಗಳನ್ನು ಪರಿಶೀಲಿಸಿದಾಗ ಒಟ್ಟು ಬೇಡಿಕೆಯ ಶೇ 35ರಷ್ಟು ತೆರಿಗೆ ಮಾತ್ರ ವಸೂಲಾಗುತ್ತಿದೆ. ತೆರಿಗೆ ಸಂಗ್ರಹದಲ್ಲಿ ಕಳಪೆ ಸಾಧನೆ ಇದೆ ಎಂದು ಸಿಎಜಿ ವರದಿಯಲ್ಲಿ ಹೇಳಿದೆ.

ಪ್ರತಿ ಮೂರು ವರ್ಷಗಳಿಗೊಮ್ಮೆ ಆಸ್ತಿ ತೆರಿಗೆಯಲ್ಲಿ ಶೇ 15ರಷ್ಟು ಹೆಚ್ಚಳಕ್ಕೆ ಕೇಂದ್ರ ಹಣಕಾಸು ಆಯೋಗ ಒಪ್ಪಿಗೆ ಸೂಚಿಸಿದೆ. ಕರ್ನಾಟಕದಲ್ಲಿ ನಗರ ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಿಸಿದಂತೆ ತೆರಿಗೆ ಹೆಚ್ಚಳಕ್ಕೆ ಆದೇಶ ಹೊರಡಿಸಲಾಗಿದೆ. ಆದರೆ, ಪಂಚಾಯತ್ ರಾಜ್ ಕಾಯ್ದೆಯ ಆದೇಶವನ್ನೇ ಹೊರಡಿಸಿಲ್ಲ. ಇದರಿಂದಾಗಿ ತೆರಿಗೆ ದರ ಪರಿಷ್ಕರಣೆ ಆಗಿಲ್ಲ ಎಂದು ಸಿಎಜಿ ತಿಳಿಸಿದೆ.

ಗೊರುಚಗೆ ಆಹ್ವಾನ

ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಗೊ.ರು. ಚನ್ನಬಸಪ್ಪ ಅವರನ್ನು ಬೆಂಗಳೂರಿನ ಅವರ ನಿವಾಸದಲ್ಲಿ ಮಂಡ್ಯ ಜಿಲ್ಲಾಡಳಿತ ಹಾಗೂ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ವತಿಯಿಂದ ಶನಿವಾರ ಆಹ್ವಾನಿಸಲಾಯಿತು. (ಎಡದಿಂದ) ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿ ನೇ.ಭ. ರಾಮಲಿಂಗ ಶೆಟ್ಟಿ, ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ, ಕಸಾಪ ಮಂಡ್ಯ ಜಿಲ್ಲಾ ಸಂಚಾಲಕಿ ಮೀರಾ ಶಿವಲಿಂಗಯ್ಯ ಹಾಗೂ ಮಂಡ್ಯದ ಹೆಚ್ಚುವರಿ ಜಿಲ್ಲಾಧಿಕಾರಿ ಬಿ.ಸಿ.ಶಿವಾನಂದಮೂರ್ತಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಇ.ಡಿ ಕಿರುಕುಳ ಆರೋಪ: ಉದ್ಯಮಿ ದಂಪತಿ ಆತ್ಮಹತ್ಯೆ

ಭೋಪಾಲ್ (ಪಿಟಿಐ): ಸ್ಥಳೀಯ ಉದ್ಯಮಿ ಮತ್ತು ಅವರ ಪತ್ನಿ ಶಂಕಾಸ್ಪದ ರೀತಿಯಲ್ಲಿ ಸೆಹೋರ್ ಜಿಲ್ಲೆಯ ಅಷ್ಟ ಪಟ್ಟಣದ ತಮ್ಮ ನಿವಾಸದಲ್ಲಿ ಶುಕ್ರವಾರ ಮೃತಪಟ್ಟಿದ್ದಾರೆ. ಜಾರಿ ನಿರ್ದೇಶನಾಲಯ (ಇ.ಡಿ) ಮತ್ತು ಬಿಜೆಪಿ ನಾಯಕರು ನೀಡಿದ ಕಿರುಕುಳ ಸಾವಿಗೆ ಕಾರಣ ಎಂದು ಶಂಕಿಸಲಾಗಿದೆ.

ದಂಪತಿ ಶವಗಳು ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿವೆ. ಉದ್ಯಮಿ ಮನೋಜ್ ಪರ್ಮರ್ ಮತ್ತು ಪತ್ನಿ ನೇಹಾ ಮೃತರು. ಶವದ ಬಳಿ ಸಿಕ್ಕಿತೆನ್ನಲಾದ ಪತ್ರ ಸಾಮಾಜಿಕ ಮಾಧ್ಯಮದಲ್ಲಿ ಸಾಕಷ್ಟು ಹಂಚಿಕೆ ಆಗಿದೆ. ಇದು, ಆಡಳಿತಾರೂಢ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷದ ನಡುವೆ ವಾಕ್ಸಮರಕ್ಕೂ ಕಾರಣವಾಗಿದೆ. ಜಾಲತಾಣದಲ್ಲಿ ಹಂಚಿಕೆ ಆಗುತ್ತಿರುವ ಈ ಪತ್ರದಲ್ಲಿ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ, ಪಕ್ಷದ ಇತರೆ ಮುಖಂಡರಿಗೆ 'ನನ್ನ ಮಕ್ಕಳ ಅನಾಥರಾಗಿಸಬೇಡಿ' ಎಂದು ಉದ್ಯಮಿ ಕೋರಿದ್ದಾರೆ.

ಕೋವಿಡ್: ಕಾಂಗ್ರೆಸ್–ಬಿಜೆಪಿ ವಾಗ್ವಾದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್–19 ಪಿಡುಗಿನ ವೇಳೆ ಪಿಪಿಇ ಕಿಟ್ ಹಾಗೂ ಎನ್–95 ಮಾಸ್ಕ್ ಸೇರಿದಂತೆ ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ನಡೆದ ಅಕ್ರಮ ಪ್ರಕರಣದ ಸಂಬಂಧ ಬಿಜೆಪಿ ನಿಧಿಗಳು ಹಾಗೂ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಹಾಗೂ ಆರೋಗ್ಯ ಇಲಾಖೆಯ ಹಿಂದಿನ ಅಧಿಕಾರಿಗಳು, ವೈದ್ಯರು ಹಾಗೂ ಗುತ್ತಿಗೆದಾರರ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಶುಕ್ರವಾರ ಎಫ್‌ಐಆರ್ ದಾಖಲಾಗಿದೆ.

ಎಫ್‌ಐಆರ್ ದಾಖಲಿಸಿಕೊಂಡಿರುವ ವಿಧಾನಸೌಧ ಠಾಣೆ ಪೊಲೀಸರು, ಆರೋಪಿಗಳಿಗೆ ವಿಚಾರಣೆಗೆ ಹಾಜರಾಗಲು ನೋಟಿಸ್ ನೀಡುವ ಪ್ರಕ್ರಿಯೆ ಆರಂಭಿಸಿದ್ದಾರೆ. ಇದರ ನಡುವೆ ಪ್ರಕರಣ ಅಪರಾಧ ತನಿಖಾ ದಳಕ್ಕೆ (ಸಿಐಡಿ) ವರ್ಗಾವಣೆ ಆಗುವ ಸಾಧ್ಯತೆಯಿದೆ ಎನ್ನಲಾಗುತ್ತಿದೆ. ಎಫ್‌ಐಆರ್ ದಾಖಲಾದ ವಿಚಾರ ರಾಜಕೀಯ ವಲಯದಲ್ಲಿ ಆಡಳಿತಾರೂಢ ಕಾಂಗ್ರೆಸ್ ಹಾಗೂ ವಿರೋಧ ಪಕ್ಷ ಬಿಜೆಪಿ ನಾಯಕರ ಮಧ್ಯೆ ವಾಕ್‌ಸಮರಕ್ಕೆ ನಾಂದಿ ಹಾಡಿದೆ.

'ಆಯೋಗದ ವರದಿಯಂತೆ ಕ್ರಮ'

ಕೋವಿಡ್ ವೇಳೆಯ ಹಗರಣಗಳ ತನಿಖೆ ಹಿಂದೆ ರಾಜಕೀಯ ದ್ವೇಷದ ರಾಜಕಾರಣವಿಲ್ಲ. ನಿವೃತ್ತ ನ್ಯಾಯಮೂರ್ತಿಗಳ ನೇತೃತ್ವದ ಆಯೋಗ ನಡೆಸಿದ ತನಿಖೆಯ ಮಧ್ಯಂತರ ವರದಿಯಂತೆ ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಕೋವಿಡ್ ಅಕ್ರಮದ ವಿಚಾರಣಾ ವರದಿ ಅಧ್ಯಯನಕ್ಕಾಗಿ ನೇಮಿಸಿರುವ ಸಂಪುಟ ಉಪ ಸಮಿತಿಯ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜತೆ ಶನಿವಾರ ಮಾತನಾಡಿದ ಅವರು, 'ಆಯೋಗದ ವರದಿ ಆಧಾರದಲ್ಲಿ ಕಾನೂನು ಪ್ರಕಾರ ಕ್ರಮಕೈಗೊಳ್ಳಲಾಗುತ್ತಿದೆ. ರಾಜ್ಯ ಸರ್ಕಾರ ಪೊಲೀಸ್ ವ್ಯವಸ್ಥೆಯನ್ನು ದುರ್ಬಳಕೆ ಮಾಡಿಕೊಳ್ಳುತ್ತಿಲ್ಲ. ಶೇಕಡ 40ರಷ್ಟು ಲಂಚದ ಆರೋಪ ಮಾಡಿದ್ದೆವು. ಕೋವಿಡ್ ವರದಿ ಅದರ ಆರಂಭ ಅಷ್ಟೇ. ಈ ಕುರಿತು ಹೆಚ್ಚು ಮಾತನಾಡಲು ಆಗದು' ಎಂದರು.

'ಎಷ್ಟೇ ಪ್ರಭಾವಿಗಳಾದರೂ ಮಣಿಯುವುದಿಲ್ಲ'

ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದಿರುವ ಕೋವಿಡ್ ಹಗರಣದ ತನಿಖೆಯನ್ನು ತಾರ್ಕಿಕ ಅಂತ್ಯಕ್ಕೆ ತಲುಪಿಸುವವರೆಗೆ ಸರ್ಕಾರ ವಿರಮಿಸುವುದಿಲ್ಲ. ಯಾರು ಎಷ್ಟೇ ಪ್ರಭಾವಿಯಾಗಿದ್ದರೂ ಸರಿ, ತಪ್ಪಿತಸ್ಥರನ್ನು ಬಿಡುವ ಪ್ರಶ್ನೆಯೇ ಇಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಪಾಟೀಲ ಹೇಳಿದ್ದಾರೆ.

ಕಲಬುರಗಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಜನರಿಗೆ ಮಾತು ಕೊಟ್ಟಂತೆ ಕೋವಿಡ್ ಹಗರಣವನ್ನು ತಾರ್ಕಿಕ ಅಂತ್ಯಕ್ಕೆ ತೆಗೆದುಕೊಂಡು ಹೋಗುತ್ತೇವೆ. ಕೋವಿಡ್ ಅವಧಿಯ ಬಹುತೇಕ ಹಗರಣಗಳ ಕುರಿತು ತನಿಖೆ ನಡೆಸಲಾಗುತ್ತಿದೆ. ಈಗ ಒಂದೊಂದಾಗಿ ಎಫ್‌ಐಆರ್ ದಾಖಲಿಸಲಾಗುತ್ತಿದೆ' ಎಂದರು.

ರಾಜಕೀಯ ದ್ವೇಷದ ನಡೆಗೆ ಬಗ್ಗುವುದಿಲ್ಲ: ಆರ್. ಅಶೋಕ

ಬಿಜೆಪಿ ಸರ್ಕಾರದ ಅವಧಿಯಲ್ಲಿ ಹಗರಣ ನಡೆದಿದೆ ಎಂದು ಆರೋಪಿಸಿ ತನಿಖೆ ನಡೆಸುತ್ತಿರುವುದು ಕಾಂಗ್ರೆಸ್ ಸರ್ಕಾರದ ದ್ವೇಷದ ರಾಜಕೀಯ ನಡೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ರಾಜ್ಯ ಸರ್ಕಾರದ ಹಗರಣಗಳ ವಿರುದ್ಧ ಬಿಜೆಪಿ ನಡೆಸುತ್ತಿರುವ ಹೋರಾಟವನ್ನು ಹತ್ತಿಕ್ಕಲು ಇಂತಹ ತಂತ್ರ ಹೆಣೆಯಲಾಗಿದೆ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಪ್ರತಿಕ್ರಿಯಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸರ್ಕಾರ ಎಷ್ಟೇ ಬೆದರಿಕೆ ಒಡ್ಡಿದರೂ 'ಮುಡಾ', ವಕ್ಫ್, ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಸೇರಿದಂತೆ ಬಿಜೆಪಿ ನಡೆಸುತ್ತಿರುವ ಹೋರಾಟಗಳಿಂದ ಹಿಂದೆ ಸರಿಯುವುದಿಲ್ಲ. ಹೋರಾಟವನ್ನು ಇನ್ನಷ್ಟು ತೀವ್ರಗೊಳಿಸುತ್ತೇವೆ' ಎಂದರು.

ವಿಧಾನಸಭೆಯೊಳಗೆ ನಿರುತ್ಸಾಹ: ಇಕ್ಕಟ್ಟಿಗೆ ಸಿಲುಕಿದ ಶಾಸಕರು

ನಾವಿಕನಿಲ್ಲದ ನಾವೆಯಾದ ಜೆಡಿಎಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌.ಡಿ. ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿ ದೆಹಲಿ ಸೇರಿದ ಬಳಿಕ ಜೆಡಿಎಸ್ ಪಕ್ಷವು ವಿಧಾನಸಭೆಯೊಳಗೆ ನಾವಿಕನಿಲ್ಲದ ನಾವೆಯಂತಾಗಿದೆ. ಶಾಸಕಾಂಗ ಪಕ್ಷದ ನಾಯಕ ಸಿ.ಬಿ. ಸುರೇಶ್ ಬಾಬು ಪಕ್ಷ ಮುನ್ನಡೆಸಲು ನಿರಾಸಕ್ತರಾಗಿದ್ದಾರೆ. ಇನ್ನೊಂದೆಡೆ, ಆಗಾಗ ಗಟ್ಟಿ ಧ್ವನಿಯಲ್ಲಿ ಮಾತನಾಡುತ್ತಿದ್ದ ಜಿ.ಟಿ. ದೇವೇಗೌಡ ಅವರೂ ಸದನದ ಕಲಾಪಗಳಿಂದಲೇ ದೂರ ಉಳಿದಿದ್ದಾರೆ.

ವಿಧಾನಮಂಡಲದ ಚಳಿಗಾಲದ ಅಧಿವೇಶನದ ಮೊದಲ ವಾರದ ಕಲಾಪ ಮುಕ್ತಾಯವಾಗಿದೆ. ಇನ್ನು ನಾಲ್ಕು ದಿನಗಳ ಕಲಾಪವಷ್ಟೇ ಉಳಿದಿದೆ. ಮೊದಲ ವಾರದಲ್ಲಿ ತಮ್ಮ ಶಾಸಕಾಂಗ ಪಕ್ಷದ ನಾಯಕ ಒಮ್ಮೆಯೂ ಸರ್ಕಾರದ ವಿರುದ್ಧ ಗಟ್ಟಿ ಧ್ವನಿಯಲ್ಲಿ ಮಾತನಾಡದೇ ಇರುವುದು ಜೆಡಿಎಸ್ ಶಾಸಕರನ್ನು ಚಿಂತೆಗೀಡು ಮಾಡಿದೆ. ಚರ್ಚೆ, ಪ್ರಶ್ನೋತ್ತರ ಕಲಾಪ ಯಾವುದರಲ್ಲೂ ಸುರೇಶ್ ಬಾಬು ಗಟ್ಟಿ ನಿಲುವು ತಾಳಿ ಶಾಸಕರನ್ನು ಒಟ್ಟಿಗೆ ಕೊಂಡೊಯ್ಯುವ ಪ್ರಯತ್ನ ಮಾಡುತ್ತಿಲ್ಲ ಎಂಬ ಅಸಮಾಧಾನ ಜೆಡಿಎಸ್‌ನೊಳಗೆ ಆರಂಭವಾಗಿದೆ.

ಸಂತಾಪ ಸೂಚನಾ ನಿರ್ಣಯಗಳನ್ನು ಬೆಂಬಲಿಸಿದ್ದು ಬಿಟ್ಟರೆ ಸುರೇಶ್ ಬಾಬು ಅವರು ಸದನದೊಳಗೆ ಹೆಚ್ಚು ಮಾತನಾಡಿಲ್ಲ. ಪಂಚಮಸಾಲಿ ಮೀಸಲಾತಿ ಹೋರಾಟಗಾರರ ಮೇಲಿನ ಲಾಠಿ ಪ್ರಹಾರ, ವಕ್ಫ್ ಮಂಡಳಿ ಆಸ್ತಿ ಮಾಲೀಕರಿಗೆ ನೋಟಿಸ್ ನೀಡಿರುವುದು ಸೇರಿದಂತೆ ಮಿತ್ರಪಕ್ಷ ಬಿಜೆಪಿ ಪ್ರಸ್ತಾಪಿಸಿದ ವಿಷಯಗಳ ಕುರಿತು ನಡೆದ ಚರ್ಚೆಯಲ್ಲೂ ಅವರು ಭಾಗಿಯಾಗಿದ್ದು ಕಡಿಮೆ. ಸದನದೊಳಗೆ ಜೆಡಿಎಸ್‌ನ ಅಸ್ತಿತ್ವವೇ ಕಣ್ಮರೆಯಾದ ಸ್ಥಿತಿ ನಿರ್ಮಾಣವಾಗಿದೆ ಎಂಬ ಆತಂಕವನ್ನು ಕೆಲವು ಶಾಸಕರು ಕುಮಾರಸ್ವಾಮಿಯವರ ಮುಂದಿಟ್ಟಿದ್ದಾರೆ ಎಂದು ಪಕ್ಷದ ಮೂಲಗಳು ಹೇಳಿವೆ.

ಶರಣಗೌಡ ಕಂದಕೂರ, ಜಿ.ಡಿ. ಹರೀಶ್ ಗೌಡ, ಸಮೃದ್ಧಿ ಮಂಜುನಾಥ್ ಸೇರಿದಂತೆ ಜೆಡಿಎಸ್‌ನ ಕೆಲವು ಶಾಸಕರು ಕುಮಾರಸ್ವಾಮಿ ಅವರಿಗೆ ದೂರವಾಣಿ ಕರೆಮಾಡಿ ಅಳಲು ತೋಡಿಕೊಂಡಿದ್ದಾರೆ. ಸುರೇಶ್ ಬಾಬು ಅವರು ಶಾಸಕಾಂಗ ಪಕ್ಷದ ನಾಯಕನ ಸ್ಥಾನವನ್ನು ಸಮರ್ಪಕವಾಗಿ ನಿರ್ವಹಿಸುತ್ತಿಲ್ಲ. ಸದನದಲ್ಲಿ ಪಕ್ಷದ ಶಾಸಕರು ಎತ್ತಿದ ಪ್ರಶ್ನೆಗಳಿಗೆ ಸರ್ಕಾರದಿಂದ ಸರಿಯಾದ ಉತ್ತರ ಪಡೆಯುವ ನಿಟ್ಟಿನಲ್ಲೂ ಬೆಂಬಲ ನೀಡುತ್ತಿಲ್ಲ ಎಂದು ದೂರು ಹೇಳಿಕೊಂಡಿದ್ದಾರೆ. ಸಂಸತ್ ಅಧಿವೇಶನ ಮುಗಿದ ತಕ್ಷಣ ಬೆಂಗಳೂರಿಗೆ ಬಂದು ಸಭೆ ನಡೆಸಿ ಸಮಸ್ಯೆ ಪರಿಹರಿಸುವುದಾಗಿ ಕುಮಾರಸ್ವಾಮಿ ಅವರು ಶಾಸಕರಿಗೆ ಭರವಸೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ತಮ್ಮ ಕ್ಷೇತ್ರದ ಜನರಿಗೆ ಆಗುತ್ತಿರುವ ಸಮಸ್ಯೆಗಳ ಕುರಿತು ಶರಣಗೌಡ ಕಂದಕೂರ ಪ್ರಶ್ನೆಯೊಂದನ್ನು ಹಾಕಿದ್ದರು. ಅವರ ಅನುಪಸ್ಥಿತಿಯಲ್ಲಿ ಸುರೇಶ್ ಬಾಬು ಅವರೇ ಪ್ರಶ್ನೆ ಕೇಳಿದ್ದರು. ಸರ್ಕಾರ ಸರಿಯಾದ ಉತ್ತರ ನೀಡಿಲ್ಲ, ಆದರೂ ಶಾಸಕಾಂಗ ಪಕ್ಷದ ನಾಯಕರು ಗಟ್ಟಿ ಧ್ವನಿಯಲ್ಲಿ ಮಾತನಾಡಿಲ್ಲ ಎಂದು ಕಂದಕೂರ ಆಕ್ಷೇಪ ಎತ್ತಿದ್ದಾರೆ. ಸುರೇಶ್ ಬಾಬು ಅವರನ್ನೇ ಭೇಟಿಮಾಡಿ ಈ ಕುರಿತು ತಕರಾರು ಹೊರಹಾಕಿದ್ದಾರೆ ಎಂದು ಗೊತ್ತಾಗಿದೆ.

ಜಿ.ಟಿ.ಡಿ., ರೇವಣ್ಣ ಗೈರು

ಸದನದಲ್ಲಿ ಪಕ್ಷದ ಶಾಸಕರ ಬೆಂಬಲಕ್ಕೆ ನಿಂತು ಮಾತನಾಡುತ್ತಿದ್ದ ಜಿ.ಟಿ. ದೇವೇಗೌಡ ಅವರು ಜೆಡಿಎಸ್ ವರಿಷ್ಠರ ಜೊತೆಗಿನ ಮುನಿಸಿನ ಕಾರಣದಿಂದ ವಿಧಾನಮಂಡಲದ ಕಲಾಪದಿಂದಲೂ ದೂರ ಉಳಿದಿದ್ದಾರೆ. ಈವರೆಗೆ ಅವರು ಸದನಕ್ಕೆ ಹಾಜರಾಗಿಲ್ಲ.

ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರ ಕುಟುಂಬದವರೇ ಆದ ಎಚ್‌.ಡಿ. ರೇವಣ್ಣ ಕೂಡ ಹಿಂದೆ ತಮ್ಮ ಶಾಸಕರ ಬೆಂಬಲಕ್ಕೆ ನಿಂತು ಮಾತನಾಡುತ್ತಿದ್ದರು. ಆದರೆ, ಅವರೂ ಈಗ ಅಧಿವೇಶನದಲ್ಲಿ ಭಾಗವಹಿಸಲು ಹೆಚ್ಚು ಆಸಕ್ತಿ ತೋರುತ್ತಿಲ್ಲ. ಮೊದಲ ವಾರದ ಕಲಾಪದಲ್ಲಿ ಒಂದು ದಿನವಷ್ಟೇ ಕೆಲವು ಗಂಟೆ ಸದನದಲ್ಲಿದ್ದರು.

ಶಾಸಕಾಂಗ ಪಕ್ಷದ ಸಭೆಯನ್ನೂ ಸರಿಯಾಗಿ ನಡೆಸುತ್ತಿಲ್ಲ, ಕೇವಲ ವಾಟ್ಸ್ ಆ್ಯಪ್ ಸಂದೇಶಗಳ ಮೂಲಕ ಆಹ್ವಾನ ನೀಡಲಾಗುತ್ತಿದೆ ಎಂದು ಕೆಲವು ಶಾಸಕರು ಆಕ್ಷೇಪ ಎತ್ತಿದ್ದಾರೆ ಎಂದೂ ಮೂಲಗಳು ತಿಳಿಸಿವೆ.

₹167 ಕೋಟಿ ಅಕ್ರಮ: ಸಿಐಡಿಗೆ ವರ್ಗ?

ಒಂದನೇ ಪುಟದಿಂದ...

ಕೋವಿಡ್ ನಿರ್ವಹಣೆ ವೇಳೆ ಅತೀ ಅವಶ್ಯಕ ವೈದ್ಯಕೀಯ ಸಾಮಗ್ರಿಗಳನ್ನು ಸಂಗ್ರಹಿಸುವ ನೆಪದಲ್ಲಿ ದೊಡ್ಡಮೊತ್ತದ ಹಣ ದುರ್ಬಳಕೆ ಮಾಡಿ ಕೊಳ್ಳಲಾಗಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ. ಭಾರತೀಯ ದಂಡ ಸಂಹಿತೆಯ ಸೆಕ್ಷನ್ 120ಬಿ, 403, 406 ಹಾಗೂ 409ರ ಅಡಿ ಪ್ರಕರಣ ದಾಖಲಿಸಲಾಗಿದೆ.

ವೈದ್ಯಕೀಯ ಉಪಕರಣಗಳ ಖರೀದಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ (ಕೆಟಿಪಿಪಿ) ಕಾನೂನು ಪಾಲನೆ ಮಾಡಬೇಕು. ನಿಗದಿತ ಮೊತ್ತದ ಒಳಗೇ ಉಪಕರಣ ಖರೀದಿಸಬೇಕೆಂದು ಷರತ್ತು ವಿಧಿಸಲಾಗಿತ್ತು. ಅದನ್ನು ಉಲ್ಲಂಘಿಸಿರುವುದು ಕಂಡುಬಂದಿದೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಪಿಪಿಇ ಕಿಟ್‌ಗಳನ್ನು ಯಾವುದೇ ಸರಬರಾಜು ಆದೇಶವಿಲ್ಲದೇ ಖರೀದಿ ಮಾಡಿರುವುದು ಪತ್ತೆಯಾಗಿದೆ. ಸಾವಿರಾರು ಪಿಪಿಇ ಕಿಟ್‌ಗಳನ್ನು ಎಲ್ಲಿಗೆ ಪೂರೈಸಲಾಗಿದೆ ಎಂಬುದಕ್ಕೆ ದಾಖಲೆಗಳು ಇಲ್ಲ. ಐದು ಖರೀದಿ ಆದೇಶಗಳನ್ನು ಯಾವುದೇ ರೀತಿಯ ಟೆಂಡರ್ ಪ್ರಕ್ರಿಯೆ ಇಲ್ಲದೇ, ದರಪಟ್ಟಿ ಆಹ್ವಾನಿಸದೇ ನೇರವಾಗಿ ಲಾಜ್ ಎಕ್ಸ್‌ಪೋರ್ಟ್‌ಗೆ ನೀಡಿರುವುದು ಕಾನೂನುಬಾಹಿರ ಎಂದು ಮೂಲಗಳು ಹೇಳಿವೆ.

'ಮೊದಲೇ ಹಣ ಪಾವತಿ'

2020ರ ಡಿಸೆಂಬರ್ 22ರಂದು ಸರ್ಕಾರದಿಂದ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯಕ್ಕೆ ₹23 ಕೋಟಿ ಪಾವತಿ ಆಗಿತ್ತು. 2020ರ ನವೆಂಬರ್ 5ರಂದು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದಿಂದ ₹13.16 ಕೋಟಿ ಮುಂಬೈನ ಪ್ರೂಡೆಂಟ್ ಮ್ಯಾನೇಜ್‌ಮೆಂಟ್ ಸಲ್ಯೂಷನ್‌ಗೆ ವರ್ಗಾವಣೆ ಆಗಿದೆ. ಸರ್ಕಾರದಿಂದ ಡಿಎಂಇಗೆ ಹಣ ಪಾವತಿ ಆಗುವುದಕ್ಕೂ ಮೊದಲೇ ಪ್ರೂಡೆಂಟ್ ಮ್ಯಾನೇಜ್‌ಮೆಂಟ್‌ಗೆ ಹಣ ಪಾವತಿ ಆಗಿರುವುದು ಕಂಡುಬಂದಿದೆ ಎಂದು ಮೂಲಗಳು ಹೇಳಿವೆ.

ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಲು ಲಾಜ್ ಎಕ್ಸ್‌ಪೋರ್ಟ್ ಸಂಸ್ಥೆಗೆ ಕಾನೂನಿನ ಅಡಿಯಲ್ಲಿ ಅವಕಾಶ ಇರಲಿಲ್ಲ. ಆದರೆ, ಈ ಸಂಸ್ಥೆಗೆ ದೊಡ್ಡ ಮೊತ್ತದ ಟೆಂಡರ್ ನೀಡಿ ಎನ್–95 ಮಾಸ್ಕ್ ಹಾಗೂ ಪಿಪಿಇ ಕಿಟ್ ಖರೀದಿಸಲಾಗಿದೆ. ಪ್ರೂಡೆಂಟ್ ಮ್ಯಾನೇಜ್‌ಮೆಂಟ್‌ನವರೂ ಪೂರ್ಣ ಪ್ರಮಾಣದಲ್ಲಿ ಎನ್–95 ಮಾಸ್ಕ್ ಹಾಗೂ ಪಿಪಿಇ ಕಿಟ್ ಪೂರೈಸಿಲ್ಲ ಎಂಬುದು ತನಿಖೆ ವೇಳೆ ಗೊತ್ತಾಗಿದೆ.

ಒಕ್ಕಲಿಗರ ಮಹಾ ಸಂಸ್ಥಾನ ಮಠ: ನಾಗರಾಜು ಪಟ್ಟಾಧಿಕಾರ ಇಂದು

ಬೆಂಗಳೂರು: ಕೆಂಗೇರಿಯಲ್ಲಿರುವ ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಉತ್ತರಾಧಿಕಾರಿಯಾಗಿ ಕೆಎಎಸ್ ಅಧಿಕಾರಿಯ ಹುದ್ದೆಯಿಂದ ಇತ್ತೀಚೆಗಷ್ಟೇ ಸ್ವಯಂ ನಿವೃತ್ತಿ ಪಡೆದಿರುವ ಎಚ್‌.ಎಲ್. ನಾಗರಾಜು ಅವರು ಡಿ.15 ರಂದು ಪಟ್ಟಾಧಿಕಾರ ಸ್ವೀಕರಿಸಲಿದ್ದಾರೆ.

'ವಿಶೇಷ ಜಿಲ್ಲಾಧಿಕಾರಿಯಾಗಿ ಸ್ವಯಂ ನಿವೃತ್ತಿ ಪಡೆದಿರುವ ಎಚ್‌.ಎಲ್.ನಾಗರಾಜು ಅವರು ಕುಣಿಗಲ್ ತಾಲ್ಲೂಕಿನ, ಹೊನ್ನೇನಹಳ್ಳಿ ಗ್ರಾಮದ ಲಿಂಗಯ್ಯ ಮತ್ತು ಗಂಗಮ್ಮ ಅವರ ಪುತ್ರ. ಅವರು ನಿಶ್ಚಲಾನಂದನಾಥ ಸ್ವಾಮೀಜಿಯಾಗಿ ದೀಕ್ಷೆ ಪಡೆದು ಮಠವನ್ನು ಮುನ್ನಡೆಸಲಿದ್ದಾರೆ' ಎಂದು ವಿಶ್ವ ಒಕ್ಕಲಿಗರ ಮಹಾ ಸಂಸ್ಥಾನ ಮಠದ ಪೀಠಾಧ್ಯಕ್ಷ ಕುಮಾರ ಚಂದ್ರಶೇಖರನಾಥ ಸ್ವಾಮೀಜಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಭಾನುವಾರ ಬೆಳಿಗ್ಗೆ 10.30ಕ್ಕೆ ನಡೆಯುವ ಪಟ್ಟಾಧಿಕಾರ ಮಹೋತ್ಸವದಲ್ಲಿ ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ, ತೋಂಟದ ಸಿದ್ಧರಾಮ ಸ್ವಾಮೀಜಿ, ನಿಡುಮಾಮಿಡಿ ಮಠದ ವೀರಭದ್ರ ಚನ್ನಮಲ್ಲ ದೇಶಿಕೇಂದ್ರ ಸ್ವಾಮೀಜಿ, ತರಳಬಾಳು ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಬೇಲಿಮಠದ ಶಿವರುದ್ರ ಸ್ವಾಮೀಜಿ ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಎಚ್‌.ಎಲ್‌ ನಾಗರಾಜು

'ರಾಜ್ಯತ್ವ'ಕ್ಕೆ ಒಮರ್ ಆಗ್ರಹ

ನವದೆಹಲಿ (ಪಿಟಿಐ): ಕೇಂದ್ರಾಡಳಿತ ಪ್ರದೇಶಗಳಲ್ಲಿ ಸಿಎಂ ಹಾಗೂ ಲೆಫ್ಟಿನೆಂಟ್ ಗವರ್ನರ್ ನಡುವಿನ ಅಧಿಕಾರದ ಹಂಚಿಕೆಯು ನಕಾರಾತ್ಮಕ ಪರಿಣಾಮಗಳನ್ನು ಬೀರುತ್ತದೆ ಎಂದು ಜಮ್ಮು ಮತ್ತು ಕಾಶ್ಮೀರ ಮುಖ್ಯಮಂತ್ರಿ ಒಮರ್ ಅಬ್ದುಲ್ಲಾ ಹೇಳಿದರು.

ದೆಹಲಿಯಲ್ಲಿರುವ ಪಿಟಿಐ ಸುದ್ದಿ ಸಂಸ್ಥೆಯ ಕಚೇರಿಯಲ್ಲಿ ಸಂದರ್ಶನ ನೀಡಿ, 'ಕೇಂದ್ರ ಸರ್ಕಾರವು ಈ ಹಿಂದೆ ತಾನು ಭರವಸೆ ನೀಡಿದಂತೆ ಶೀಘ್ರವೇ ಜಮ್ಮು ಕಾಶ್ಮೀರದಲ್ಲಿ 'ರಾಜ್ಯತ್ವ'ವನ್ನು ಮರುಸ್ಥಾಪಿಸಬೇಕು' ಎಂದರು.

₹150 ಕೋಟಿ ಆಮಿಷ: ಸಿಬಿಐ ತನಿಖೆಗೆ ಒತ್ತಾಯ

ಒಂದನೇ ಪುಟದಿಂದ...

'ವಕ್ಫ್ ಆಸ್ತಿ ವಿಷಯದಲ್ಲಿ ವಿಜಯೇಂದ್ರ ವಹಿಸುತ್ತಿರುವ ಆಸಕ್ತಿಯನ್ನು ನೋಡಿದರೆ ಅವರ ಕುಟುಂಬವೇ ವಕ್ಫ್ ಮಂಡಳಿಗೆ ಸೇರಿದ ಆಸ್ತಿಗಳ ಕಬಳಿಕೆಯಲ್ಲಿ ಶಾಮೀಲಾಗಿರುವಂತೆ ಕಾಣುತ್ತಿದೆ. ಅವರ ಪಕ್ಷದ ಮಹಾಮಹಿಮರೆಲ್ಲರೂ ಶಾಮೀಲಾಗಿರುವ ಸಂಶಯವೂ ಇದೆ. ಮಾಣಿಪ್ಪಾಡಿ ಅವರನ್ನು ಬಾಯಿ ಮುಚ್ಚಿಸುವಲ್ಲಿ ಯಾರೆಲ್ಲ ಶಾಮೀಲಾಗಿದ್ದಾರೆ? ವಕ್ಫ್ ಆಸ್ತಿ ಲೂಟಿಯಲ್ಲಿ ಬೇರೆ ಯಾರೆಲ್ಲ ಪಾಲುದಾರರಿದ್ದಾರೆ ಎಂಬುದರ ಬಗ್ಗೆಯೂ ತನಿಖೆ ಆಗಬೇಕು' ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಇಂತಹ ಗಂಭೀರ ಆರೋಪ ಹೊತ್ತುಕೊಂಡಿರುವ ವಿಜಯೇಂದ್ರ ಅವರು ಬಿಜೆಪಿಯ ರಾಜ್ಯ ಘಟಕದ ಅಧ್ಯಕ್ಷರಾಗುತ್ತಾರೆ. ಇನ್ನೊಂದೆಡೆ ಪಕ್ಷದ ಹೈಕಮಾಂಡ್‌ಗೆ ₹ 2,000 ಕೋಟಿ ಸಂದಾಯ ಮಾಡಿ ವಿಜಯೇಂದ್ರ ಅವರು ತಮ್ಮ ತಂದೆ ಯಡಿಯೂರಪ್ಪನವರನ್ನು ಮುಖ್ಯಮಂತ್ರಿ ಮಾಡಿದ್ದಾರೆ ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ ಆರೋಪಿಸುತ್ತಾರೆ. ಕೇಂದ್ರದಲ್ಲಿ ಅಧಿಕಾರದಲ್ಲಿರುವ ಬಿಜೆಪಿ, ಕರ್ನಾಟಕವನ್ನು ಎಟಿಎಂ ಮಾಡಿಕೊಂಡಿತ್ತು ಎಂಬ ಆರೋಪಕ್ಕೆ ಈ ಘಟನೆಗಳು ಪುಷ್ಟಿ ನೀಡುತ್ತವೆ ಎಂದಿದ್ದಾರೆ.

ತನಿಖೆಗೆ ಆಗ್ರಹಿಸುವ ನೈತಿಕತೆ ಇದೆಯೆ?: ಬಿ.ವೈ.ವಿ

ಬೆಂಗಳೂರು: 'ನಿಮ್ಮ ಸರ್ಕಾರವೇ ಹಗರಣಗಳಲ್ಲಿ ಸಿಲುಕಿದೆ. ನೀವು ತನಿಖೆಯನ್ನೇ ತಡೆಯಲು ಯತ್ನಿಸುತ್ತಿದ್ದೀರಿ. ನನ್ನ ವಿರುದ್ಧ ಆಧಾರರಹಿತ ಆರೋಪಗಳನ್ನು ಮುಂದಿಟ್ಟುಕೊಂಡು ಸಿಬಿಐ ತನಿಖೆಗೆ ಆದೇಶಿಸುವಂತೆ ಆಗ್ರಹಿಸುವ ನೈತಿಕತೆ ನಿಮಗೆ ಇದೆಯೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಸಿಎಂ ಸಿದ್ದರಾಮಯ್ಯ ಅವರನ್ನು ಪ್ರಶ್ನಿಸಿದ್ದಾರೆ.

ಅನ್ವರ್ ಮಾಣಿಪ್ಪಾಡಿ ಆರೋಪದ ಕುರಿತು ಸಿಬಿಐ ತನಿಖೆಗೆ ಆದೇಶಿಸಬೇಕೆಂಬ ಒತ್ತಾಯದ ಬಗ್ಗೆ ತಮ್ಮ 'ಎಕ್ಸ್' ಖಾತೆಯಲ್ಲಿ ಶನಿವಾರ ಪ್ರತಿಕ್ರಿಯಿಸಿರುವ ಅವರು, 'ಸಿಬಿಐ ಮತ್ತು ಜಾರಿ ನಿರ್ದೇಶನಾಲಯದ ತನಿಖೆಯಿಂದ ಭಯಗೊಂಡಿರುವ ನೀವು ರಾಜ್ಯಪಾಲರು ತನಿಖೆಗೆ ನೀಡಿರುವ ಅನುಮತಿಯನ್ನೇ ನ್ಯಾಯಾಲಯದಲ್ಲಿ ಪ್ರಶ್ನಿಸುವ ಮೂಲಕ ತನಿಖೆಗೆ ತಡೆ ಒಡ್ಡಿದ್ದೀರಿ. ದೆಹಲಿಯಿಂದ ವಕೀಲರನ್ನು ಕರೆತಂದರೂ ಹೈಕೋರ್ಟ್‌ನಲ್ಲಿ ಇರಿಸುಮುರಿಸು ಅನುಭವಿಸಿದ್ದೀರಿ. ನಿಮ್ಮ ಸರ್ಕಾರ ವಾಲ್ಮೀಕಿ ಅಭಿವೃದ್ಧಿ ನಿಗಮದ ಹಗರಣ ಮತ್ತು ಮುಡಾ ಹಗರಣಗಳಲ್ಲಿ ಸಿಲುಕಿದೆ. ಅವುಗಳ ಬಗ್ಗೆ ಉತ್ತರಿಸಬೇಕಿತ್ತು' ಎಂದಿದ್ದಾರೆ.

'ಕಾಂಗ್ರೆಸ್ ನಾಯಕರ ವಿರುದ್ಧದ ಆರೋಪಗಳನ್ನು ಮುಚ್ಚಿಹಾಕಲು ನಿಮ್ಮ ಎಳೆಯ ತಂತ್ರಗಾರ ಪ್ರಿಯಾಂಕ್ ಖರ್ಗೆ ಇಂತಹ ಕಟ್ಟುಕತೆ ಹರಿಯಬಿಟ್ಟು ಸಂಭ್ರಮಿಸುತ್ತಿದ್ದಾರೆ. ಕರ್ನಾಟಕದ ಸಿಎಂ ಸ್ಥಾನಕ್ಕೆ ನೀವು ಕಳಂಕ ಮೆತ್ತಿದ್ದೀರಿ ಎಂಬುದು ಇತಿಹಾಸದಲ್ಲಿ ದಾಖಲಾಗಿದೆ' ಎಂದಿದ್ದಾರೆ.

'ದೇಶದ್ರೋಹ' ಆರೋಪದಿಂದ ಖುಲಾಸೆ ನ್ಯಾಯಾಧೀಶರಾಗಿ ನೇಮಿಸಲು ಆದೇಶ

ಪ್ರಯಾಗ್‌ರಾಜ್/ಕಾನ್ಪುರ (ಪಿಟಿಐ): ದೇಶದ್ರೋಹ ಪ್ರಕರಣದಲ್ಲಿ ಖುಲಾಸೆಗೊಂಡಿದ್ದ ವ್ಯಕ್ತಿಯನ್ನು ಜಿಲ್ಲಾ ಹೆಚ್ಚುವರಿ ನ್ಯಾಯಾಧೀಶರಾಗಿ ನೇಮಿಸಬೇಕು ಎಂದು ಅಲಹಾಬಾದ್ ಹೈಕೋರ್ಟ್ ನಿರ್ದೇಶಿಸಿದೆ.

ಪಾಕಿಸ್ತಾನದ ಪರವಾಗಿ ಪಿತೂರಿ ನಡೆಸಿದ ಕುರಿತು ಇವರ ವಿರುದ್ಧ ದೇಶದ್ರೋಹ ಸೇರಿ ಎರಡು ಪ್ರಕರಣಗಳಿದ್ದವು. ಇದೇ ಕಾರಣದಿಂದ ಇವರಿಗೆ ಉತ್ತರ ಪ್ರದೇಶ ಸರ್ಕಾರ ಈ ಹಿಂದೆ ನೇಮಕಾತಿ ಆದೇಶ ನೀಡಿರಲಿಲ್ಲ.

ಅರ್ಜಿದಾರ ಪ್ರದೀಪ್ ಕುಮಾರ್ 2017ರಲ್ಲಿ ನ್ಯಾಯಾಂಗದ ಉನ್ನತ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದರು. ಇವರಿಗೆ ಜನವರಿ 15, 2025ರ ಒಳಗೆ ನೇಮಕಾತಿ ಆದೇಶ ನೀಡಬೇಕು ಎಂದು ಹೈಕೋರ್ಟ್ ಆದೇಶಿಸಿದೆ.

ಪ್ರದೀಪ್ ಕುಮಾರ್ ಸಲ್ಲಿಸಿದ್ದ ರಿಟ್ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೌಮಿತ್ರಾ ದಯಾಳ್ ಸಿಂಗ್ ಮತ್ತು ಡೋನಾಡಿ ರಮೇಶ್ ಅವರಿದ್ದ ಪೀಠವು, 'ಅರ್ಜಿದಾರರು ಪ್ರಕರಣದಲ್ಲಿ ಖುಲಾಸೆಗೊಂಡಿದ್ದಾರೆ. ಅವರ ವಿರುದ್ಧದ ಆರೋಪದಲ್ಲಿ ಸತ್ಯ ಕಂಡುಬಂದಿಲ್ಲ' ಎಂದು ಅಭಿಪ್ರಾಯಪಟ್ಟಿತು.

'ಈ ಕಾರಣದಿಂದ ರಿಟ್ ಅರ್ಜಿ ಮಾನ್ಯ ಮಾಡಲಾಗಿದೆ. ಎರಡು ವಾರಗಳಲ್ಲಿ ಸಂಬಂಧಿಸಿದ ಅಧಿಕಾರಿಗಳು ಅವರಿಗೆ 'ಸನ್ನಡತೆ ಪ್ರಮಾಣಪತ್ರ' ನೀಡಬೇಕು ಹಾಗೂ ಜ. 15ರ ಒಳಗೆ ನೇಮಕಾತಿ ಆದೇಶ ನೀಡಬೇಕು. ಹಾಲಿ ಖಾಲಿ ಇರುವ ಹುದ್ದೆಯಲ್ಲಿ ಅರ್ಜಿದಾರರನ್ನು ನೇಮಕಾತಿ ಮಾಡಬಹುದು' ಎಂದು ಸೂಚಿಸಿತು.

ಕುಮಾರ್ ಅವರ ಕುಟುಂಬವು ಕಾನ್ಪುರದ ಮೆಸ್ಟೋನ್ ರಸ್ತೆ ಬಡಾವಣೆಯಲ್ಲಿ ನೆಲಸಿದೆ. ಕುಟುಂಬದ ಐವರು ಮಕ್ಕಳಲ್ಲಿ ಇವರೇ ಕಿರಿಯವರು. ಇವರನ್ನು ಆರೋಪದಿಂದ ಖುಲಾಸೆಗೊಳಿಸಿ ಹೆಚ್ಚುವರಿ ಸೆಷನ್ ನ್ಯಾಯಾಲಯವು ಮಾರ್ಚ್ 6, 2014ರಂದು ಆದೇಶಿಸಿತ್ತು.

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ-581 301
OFFICE OF THE DEPUTY COMMISSIONER, UTTARA KANNADA DISTRICT, KARWAR, -581 301
ದೂರವಾಣಿ: 08382 226406, 226471 E-mail: dckarwar@gmail.com
Telephone:08382 226603 (Fax) Website: http://uttara kannada.nic.in
ಕಂಶಾ/ಆರ್‌ಕೆಎಲ್/ವಿವ-01/2024-25 ದಿನಾಂಕ: 13-12-2024
ಇ-ಪ್ರಕ್ಯೂರಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ಉತ್ತರ ಕನ್ನಡ ಜಿಲ್ಲೆಯ ಕಂದಾಯ ಇಲಾಖೆಗೆ ಸಂಬಂಧಿಸಿದಂತೆ Non-pilot ತಾಲೂಕು ಕಛೇರಿಗಳ ಅಭಿಲೇಖಾಲಯದ ದಾಖಲೆಗಳನ್ನು ಭೂ-ಸುರಕ್ಷಾ ಯೋಜನೆಯಡಿಯಲ್ಲಿ ಗಣಕೀಕರಣಗೊಳಿಸುವ ಕಾರ್ಯವನ್ನು ಪ್ರಾರಂಭಿಸಲು 66 ಡಾಟಾ ಎಂಟ್ರಿ ಆಪರೇಟರ್‌ಗಳನ್ನು **ದಿನಾಂಕ:01-01-2025 ರಿಂದ 30-06-2025 ರವರೆಗಿನ ಅವಧಿ ಅಥವಾ ಮುಂದಿನ ಆದೇಶದವರೆಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ನಿರ್ಧರಿಸಲಾಗಿದೆ.**
ಆಸಕ್ತಿ ಇರುವವರು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ದರವಾರವನ್ನು **ದಿನಾಂಕ: 22-12-2024 ರಂದು ಸಾಯಂಕಾಲ 4.00 ಗಂಟೆ ಒಳಗೆ ಸಲ್ಲಿಸಬಹುದಾಗಿದೆ.** ಸ್ವೀಕೃತಗೊಂಡ ಟೆಂಡರ್‌ಗಳನ್ನು **ದಿನಾಂಕ:23-12-2024** ರಂದು **ಸಾಯಂಕಾಲ 4.30** ಗಂಟೆಗೆ ಟೆಂಡರ್‌ನ್ನು ಪರಿಶೀಲಿಸಲಾಗುವುದು, ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಛೇರಿ, ಉತ್ತರ ಕನ್ನಡ ಜಿಲ್ಲೆ ಕಾರವಾರ ಕಛೇರಿಯ ಅಭಿಲೇಖಾಲಯ ಶಾಖೆ ಅಥವಾ ಇಪ್ರೊಕ್ಯೂರ್ ಮೆಂಟ್ ವೆಬ್‌ಸೈಟ್‌ನಲ್ಲಿ ಪರಿಶೀಲಿಸಬುದಾಗಿದೆ.
ಸಹಿ/- ಜಿಲ್ಲಾಧಿಕಾರಿ,
ಉತ್ತರ ಕನ್ನಡ ಜಿಲ್ಲೆ ಕಾರವಾರ

ಆಡಳಿತ ತರಬೇತಿ ಸಂಸ್ಥೆ
ಲಲಿತ ಮಹಲ್ ರಸ್ತೆ, ಮೈಸೂರು –570011
ದೂರವಾಣಿ: 0821–2520906/2443835/2443265/2522142
ಇಮೇಲ್: dgatimysore@gmail.com , ವೆಬ್‌ಸೈಟ್ : atimysore.karnataka.gov.in, sirdmysuru.karnataka.gov.in
ಕಡತ ಸಂಖ್ಯೆ: ಆತಸಂ/77/ಸಿಬ್ಬಂದಿ/ಸಿಬ್ಬಂದಿ1/2024–ಆಡಳಿತ–ಆತಸಂ(1605184) ದಿನಾಂಕ: 13.12.2024
ಆಡಳಿತ ತರಬೇತಿ ಸಂಸ್ಥೆಯ ಭೂ ಆಡಳಿತ ಮತ್ತು ನಿರ್ವಹಣಾ ಉತ್ಕೃಷ್ಟತಾ ಕೇಂದ್ರದ ಹುದ್ದೆಗಳಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಾತಿ
ಆಡಳಿತ ತರಬೇತಿ ಸಂಸ್ಥೆ (ATI), ಮೈಸೂರು ಇಲ್ಲಿನ ಭೂ ಆಡಳಿತ ಮತ್ತು ನಿರ್ವಹಣಾ ಉತ್ಕೃಷ್ಟತಾ ಕೇಂದ್ರದ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಇಚ್ಚಿಸಿರುತ್ತದೆ. ಈ ಸಂಬಂಧ ಆಸಕ್ತರು, ಹುದ್ದೆಗಳ ವಿವರ, ವಿದ್ಯಾರ್ಹತೆ ಮತ್ತು ಇತರೆ ವಿವರಗಳಿಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು ಕೆಳಗಿನ ಲಿಂಕ್‌ಗೆ ಭೇಟಿ ನೀಡಿ ಮಾಹಿತಿ ಪಡೆಯಬಹುದು. ಅರ್ಜಿ ಸಲ್ಲಿಸಲು ಪ್ರಾರಂಭಿಕ **ದಿನಾಂಕ: 16/12/2024** ಹಾಗೂ ಕೊನೆಯ **ದಿನಾಂಕ: 30/12/2024** ಆಗಿರುತ್ತದೆ.
ದೂರವಾಣಿ ಸಂಖ್ಯೆ : 0821-2520906 / 2443835
ಜಾಲತಾಣ ಸಂಪರ್ಕ ಕೊಂಡಿ : https://atimysore.karnataka.gov.in/326/recruitment-of-human-resource-for-centre-of-excellence-%28coe%29-in-land-administration-and-management-on-contract-basis/kn
ಸಹಿ/– ಜಂಟಿ ನಿರ್ದೇಶಕರು (ಆಡಳಿತ)
DIPR/MYS/KAVITA/957/2024-25 ಆಡಳಿತ ತರಬೇತಿ ಸಂಸ್ಥೆ, ಮೈಸೂರು

ಜಿಲ್ಲಾಧಿಕಾರಿಗಳ ಕಾರ್ಯಾಲಯ
(ಕಂದಾಯ ಇಲಾಖೆ)
ಚಾಮರಾಜನಗರ ಜಿಲ್ಲೆ, ಚಾಮರಾಜನಗರ
E-mail :deo.cnagar@gmail.com
Fax: 08226-223180 Phone : 08226-226536
ಸಂಖ್ಯೆ : ಆರ್.ಕೆ/ಸಿಆರ್/01/2024–25 ದಿನಾಂಕ: 13–12–2024
ಅಲ್ಪಾವಧಿ ಟೆಂಡರ್ ಪ್ರಕಟಣೆ
ಚಾಮರಾಜನಗರ ಜಿಲ್ಲೆಯ ನಾಲ್ಕು ತಾಲ್ಲೂಕು ಕಛೇರಿಗಳ ಅಭಿಲೇಖಾಲಯಗಳನ್ನು ಗಣಕೀಕರಣ ಮಾಡಲು ಡಾಟಾಎಂಟ್ರಿ ಆಪರೇಟರ್‌ಗಳ ಸೇವೆ ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕ ನಿಯಮ 2000 ಹಾಗೂ ತಿದ್ದುಪಡಿ ನಿಯಮ 2001 ಕ್ಕೆ ಒಳಪಟ್ಟು ನೋಂದಾಯಿತ ಅರ್ಹ ಏಜೆನ್ಸಿದಾರರುಗಳಿಂದ/ ಸಂಸ್ಥೆಗಳಿಂದ ಕೆ.ಪಿ.ಪಿ. ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ (ಇಂಡೆಂಟ್ ಸಂಖ್ಯೆ: RD/2024-25/SE0387) ಟೆಂಡರ್‌ಗಿಟ್ಟ ಮೊತ್ತ ರೂ.75.00 ಲಕ್ಷಗಳು, ಇಎಂಡಿ ಮೊತ್ತ ರೂ. 1,50,000.00 ಗಳು. ಆಸಕ್ತಿಯುಳ್ಳ ಏಜೆನ್ಸಿದಾರರು/ ಸರಬರಾಜುದಾರರು ಟೆಂಡರ್ ವಿವರಗಳನ್ನು https://kppp.karnataka.gov.in ವೆಬ್‌ಸೈಟ್ ಮೂಲಕ ಪಡೆದುಕೊಂಡು, ನಂತರ ಭರ್ತಿ ಮಾಡಿದ ಟೆಂಡರ್‌ನ್ನು ಆನ್‌ಲೈನ್ ಮೂಲಕ ಸಲ್ಲಿಸತಕ್ಕದ್ದು. ಟೆಂಡರ್‌ಗೆ ಬಿಡ್ ಸಲ್ಲಿಸಲು ಅಂತಿಮ ದಿನಾಂಕ: 21.12.2024 ರ ಸಂಜೆ 5.30 ಗಂಟೆಯವರೆಗೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 23.12.2024 ರ ಬೆಳಿಗ್ಗೆ 10.30 ಗಂಟೆಗೆ ಹೆಚ್ಚಿನ ಮಾಹಿತಿ ಕಾಮಗಾರಿ ನಿಬಂಧನೆ ಹಾಗೂ ಷರತ್ತುಗಳಿಗೆ ಕಛೇರಿ ವೇಳೆಯಲ್ಲಿ ಕೊಠಡಿ ಸಂಖ್ಯೆ: 106, ಜಿಲ್ಲಾಧಿಕಾರಿಗಳ ಕಛೇರಿ, ಚಾಮರಾಜನಗರ ಜಿಲ್ಲೆ ಇಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಜಿಲ್ಲಾಧಿಕಾರಿ
ಸಂ:ವಾಸಾಸಂಇ:ಚಾನಗರ:469:2024–25 ಚಾಮರಾಜನಗರ ಜಿಲ್ಲೆ, ಚಾಮರಾಜನಗರ

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ತುಂ.ಮೇ.ಯೋ ವಿಭಾಗ, ಶಿವಮೊಗ್ಗ.
ಫೋನ್ ನಂ. 08182–254832, ಇ–ಮೇಲ್ : eeutpsmg@gmail.com
No.EE/UTPDN/SMG/KNNL/PB-3/T.N.No. 19/2024-25 Dated:13.12.2024
SHORT TERM TENDER NOTIFICATION (Through KPP Portal only)
ವ್ಯವಸ್ಥಾಪಕ ನಿರ್ದೇಶಕರು, ಕ.ನೀ.ನಿ.ನಿ., ಬೆಂಗಳೂರು ಇವರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಅರ್ಹ ಗುತ್ತಿಗೆದಾರರಿಂದ ಕೆ.ಪಿ.ಪಿ.ಪಿ–ಪೋರ್ಟಲ್ ಪದ್ಧತಿಯ ಮೂಲಕ ಲೆಕ್ಕ ಶೀರ್ಷಿಕೆ 2701 ಉಬ್ರಾಣಿ ಅಮೃತಾಪುರ ಕೆರೆ ತುಂಬಿಸುವ ಯೋಜನೆಯಡಿ ಬರುವ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ.
(1) ಅಂದಾಜು ಪತ್ರಿಕೆಯಂತೆ ಟೆಂಡರಿಗೆ ಇಡಲಾದ ಮೊತ್ತ ರೂ.133.57 ಲಕ್ಷಗಳಾಗಿರುತ್ತದೆ. (ಜಿ.ಎಸ್.ಟಿ ಹೊರತುಪಡಿಸಿ). (2) ಟೆಂಡರ್ ಕುರಿತ ಪ್ರಶ್ನೆಗಳಿಗಾಗಿ/ಸ್ಪಷ್ಟೀಕರಣಗಳಿಗಾಗಿ ಕೊನೆಯ ದಿನಾಂಕ: 18.12.2024 ಸಾಯಂಕಾಲ 5.30 ಘಂಟೆಯವರೆಗೆ. (3) ತುಂಬಿದ ಟೆಂಡರ್‌ಗಳನ್ನು ಸಲ್ಲಿಸುವ ದಿನಾಂಕ: 13.12.2024 ರಿಂದ 21.12.2024 ಸಾಯಂಕಾಲ 5.29 ಘಂಟೆಯವರೆಗೆ.
ಟೆಂಡರನ್ನು ತೆರೆಯುವ ದಿನಾಂಕ / ಕಾಮಗಾರಿಯ ವಿವರಗಳು /ಇ.ಎಂ.ಡಿ. ಮೊತ್ತ/ ಟೆಂಡರ್‌ನ ನಿಯಮಗಳು ಮತ್ತು ಷರತ್ತುಗಳು / ಗುತ್ತಿಗೆದಾರರ ದರ್ಜೆ ಇತ್ಯಾದಿ ಹೆಚ್ಚಿನ ವಿವರಗಳಿಗಾಗಿ ಟೆಂಡರ್ ಅಧಿಸೂಚನೆಯಲ್ಲಿ ಪಡೆಯಬಹುದು ಅಥವಾ ಕೆಳಗೆ ಸಹಿ ಮಾಡಿರುವವರ ಕಚೇರಿಯಲ್ಲಿ ಕಚೇರಿ ವೇಳೆಯಲ್ಲಿ ಪಡೆಯಬಹುದು ಅಥವಾ https:// kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು.
ಸಹಿ/–
ಕಾರ್ಯಪಾಲಕ ಇಂಜಿನೀಯರರು,
ಕನೀನಿನಿ, ತುಂ.ಮೆ.ಯೋ. ವಿಭಾಗ, ಶಿವಮೊಗ್ಗ.
ವಾ.ಸಾ.ಸಂ.ಇ/ಶಿ/ನಂ. 80–12/ ಝೇಂಕಾರ್/2024–25

ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
CHAMARAJANAGAR INSTITUTE OF MEDICAL SCIENCES
(An Autonomous institute of Govt of Karnataka)
Sy. No:124, Yadapura Village, Kasaba Hobli, Chamarajanagar-571313.
E-Mail: directorcimscrnagara@gmail.com
Tel: 08226-226701, Website: https://cimscrnagara.karnataka.gov.in
ಸಂ.ಸಿಮ್ಸ್/ಟೆಂಡರ್/ಲ್ಯಾಬ್/33/2024–25 ದಿನಾಂಕ: 05–12–2024
ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ
ವಿಷಯ: ಈ ವಿದ್ಯಾಲಯದ ಬೋಧನಾ ಆಸ್ಪತ್ರೆಯ ಸೆಂಟ್ರಲ್ ಲ್ಯಾಬ್‌ನ್ನು ಸಿ.ಪಿ.ಆರ್.ಟಿ. ಮಾದರಿಯಲ್ಲಿ ನಿರ್ವಹಣೆ ಮಾಡಲು ಟೆಂಡರ್ ಕರೆಯುವ ಬಗ್ಗೆ.
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮ 1999 ರಂತೆ ಈ ವಿದ್ಯಾಲಯದ ಬೋಧನಾ ಆಸ್ಪತ್ರೆಗಳ ಸೆಂಟ್ರಲ್ ಲ್ಯಾಬ್‌ನ್ನು ಸಿ.ಪಿ.ಆರ್.ಟಿ. ಮಾದರಿಯಲ್ಲಿ ನಡೆಸಲು ಅಧಿಕೃತ ಏಜೆನ್ಸಿಯವರಿಂದ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ದಸ್ತಾವೇಜುಗಳನ್ನು https://www.kppp.karnataka.gov.in ಇಂದ ಪಡೆಯಬಹುದಾಗಿದ್ದು ದಿನಾಂಕ 13.01.2025 ರ ಅಪರಾಹ್ನ 5.30 ರೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿರುತ್ತದೆ.
ಒಂದು ವೇಳೆ ಟೆಂಡರ್ ಸಲ್ಲಿಸಲು ಕಡೆಯ ದಿನಾಂಕವು ಸಾರ್ವಜನಿಕ ರಜೆಯೆಂದು ಘೋಷಿಸಲ್ಪಟ್ಟರೆ ಮುಂದಿನ ಕಾರ್ಯನಿರತ ದಿನವನ್ನು ಕಡೆಯ ದಿನಾಂಕವೆಂದು ಪರಿಗಣಿಸತಕ್ಕದ್ದು. ಈ ಬಗ್ಗೆ ಪ್ರತ್ಯೇಕ ಅಧಿಸೂಚನೆಯನ್ನು ಹೊರಡಿಸಲಾಗುವುದಿಲ್ಲ. ಟೆಂಡರ್ ಕರೆಯುವ ಪ್ರಾಧಿಕಾರವು ಟೆಂಡರ್ ನ್ನು ತಿರಸ್ಕರಿಸುವ / ರದ್ದುಪಡಿಸುವ ಅಧಿಕಾರವನ್ನು ಹೊಂದಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಈ ವಿದ್ಯಾಲಯದ ಕಛೇರಿಗೆ ಭೇಟಿ ಮಾಡಬಹುದಾಗಿರುತ್ತದೆ.
ಸಹಿ/– ಡೀನ್ ಮತ್ತು ನಿರ್ದೇಶಕರು,
ಚಾಮರಾಜನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಚಾಮರಾಜನಗರ.
ಸಂ:ವಾಸಾಸಂಇ:ಚಾನಗರ:476:2024–25

ಕಬಿನಿಯಲ್ಲಿ ಮದ್ಯದ 'ಹೊಳೆ'

● ಮೋಹನ್ ಕುಮಾರ ಸಿ.

ಮೈಸೂರು: 'ನೋಡಿ ಸಾ... ಬಾವಲಿ ಹಾಡಿ ಮನೆಗಳಲಿ ಹೆಂಗಸ್ರು, ಮಕ್ಳು ಮಾತ್ರ ಅವ್ರೆ. ಯಾವ್ ಮನೇಲೂ ಗಂಡಸ್ರಿಲ್ಲ. ಕುಡ್ದೂ ಕುಡ್ದೂ ಸತ್ತೋಗವ್ರೆ. ಕುಡಿಯೋದು, ಸಾಲ ಮಾಡಾದು, ತೀರಿಸಕಾಯ್ದೆ ಕಾಡಿಗೋಗಿ ಮರಕ್ಕೆ ನೇಣಾಕಳದು..'

–ಜಿಲ್ಲೆಯ ಎಚ್.ಡಿ.ಕೋಟೆ ತಾಲ್ಲೂಕಿನ ಬಾವಲಿ ಗ್ರಾಮದ ನಿವಾಸಿ ಜಯಮ್ಮ ಅವರ ಸಂಕಟದ ನುಡಿಗಳಿವು.

ಒಂದು ಬದಿ ವನ್ಯಜೀವಿಗಳ ಸಮೃದ್ಧ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಮತ್ತೊಂದು ಬದಿ ಭೋರ್ಗರೆಯುತ್ತ ಹರಿಯುವ ಕಬಿನಿ ನದಿ. ಕಾಡಿನ ತೊರೆಗಳಿಂದ ನಳನಳಿಸುತ್ತಿರುವ ಭತ್ತದ ಗದ್ದೆಗಳ ಮಧ್ಯೆ ನಿಂತ ಹಾಡಿಗಳಲ್ಲಿ 'ಮದ್ಯ'ದ ಹೊಳೆ ಹರಿಯುತ್ತಿದೆ. ಅದರಿಂದ ನಲುಗಿರುವ ಬುಡಕಟ್ಟು ಮಹಿಳೆಯರ–ಮಕ್ಕಳ ಗೋಳು ಕೇಳುವವರಿಲ್ಲ.

ಕೇರಳ ಗಡಿಗೆ ತಾಗಿಕೊಂಡಿರುವ ಬಾವಲಿ, ಕಡೆಗದ್ದೆ, ತಿಮ್ಮನಹೊಸಳ್ಳಿ, ಡಿ.ಬಿ.ಕುಪ್ಪೆ, ಮಾನಿಮೂಲೆ, ಗೂಳೂರು, ಮಚ್ಚೂರು, ವಡಕನಮಾಳ, ಆನೆಮಾಳ ಸೇರಿದಂತೆ ವಿವಿಧ ಹಾಡಿಗಳ ನಿವಾಸಿಗರು ಮದ್ಯದಂಗಡಿಗಳನ್ನು ಮುಚ್ಚಿಸುವಂತೆ ದಶಕದಿಂದ ಹೋರಾಟ ನಡೆಸುತ್ತಿದ್ದರೂ, ಕಾಡಿನ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಮದ್ಯ ಮಾರಾಟ ನಿಂತಿಲ್ಲ. ಒಂದಿದ್ದ ಬಾರ್ ನಾಲ್ಕಾಗಿದೆ. ದುಡಿಯುವ ಗಂಡ, ಮಕ್ಕಳನ್ನು ಕಳೆದುಕೊಂಡಿರುವವರ ಕಣ್ಣೀರು ಕಾಣದಷ್ಟು ವ್ಯವಸ್ಥೆ ಕುರುಡಾಗಿದೆ.

'2013ರಿಂದಲೂ ಬಾರ್‌ಗಳ ಹಾವಳಿ. ಆಗ ಚೆಕ್‌ಪೋಸ್ಟ್ ಹತ್ರ ಬಾರಿತ್ತು. ಈಗ ಮನೆ ಹತ್ತಿರವೇ ಬಂದಿದೆ. ಚಿಕ್ಕ ಮಕ್ಕಳೂ ಎಣ್ಣೆ ಕುಡಿಯವ್ರೇ. ಓದಕ್ಕೆ ಹೋಗಲ್ಲ. ಹಾಡೀಲಿ ಪೊನ್ನಮ್ಮ ಎಂಬವ್ರ ಕಿರೀ ಮಗಳೂ ಕೆಲವು ದಿನಗಳ ಹಿಂದೆ ಸತ್ತೋದ್ಲು. ಕೊಡಗಿಗೆ ಕೂಲಿಗೆ ಹೋದಾಗ ಕುಡಿದು ಜಗಳಾಡ್ತಾ ಚಾಕು ಹಾಕಿಬಿಟ್ರು. ಆವಮ್ಮನ ಮೂವರು ಗಂಡು, ಹೆಣ್ಮಕ್ಕಳು ಈಗಿಲ್ಲ. ಆ ಅಜ್ಜಿ ಭಿಕ್ಷೆ ಬೇಡ್ತ ಜೀವ್ನ ಮಾಡ್ತಾವ್ರೆ. ಮಾರಿ, ಜಾನಮ್ಮ, ನೀಲಮ್ಮ ಎಲ್ಲರ ಮನೇಲೂ ಕಷ್ಟವೇ' ಎನ್ನುತ್ತಾರೆ ಅವರು.

'ನಿನ್ನೆ ಮೊನ್ನೆ ತಾನೇ ಅಣ್ತಮ್ಮದೀರೂ ಜಗಳಾಡ್ತಾ ಗುದ್ಲಿಲೀ ವೊಡೆದಾಡ್ಕಂಡವ್ರೆ. ಪಂಚಾಯ್ತಿಲೀರೋ ಎಲ್ಲ ಬಾರ್ನೂ ತೆಗೆದಾಕ್ಬಿಡಿ. ರಸ್ತೆಲೀ ದನ–ಕರ ವಡ್ಕೊಂಡ್ ಓಡಾಂಗಿಲ್ಲ. ಕೇರಳದ್ವ್ರೇ ದಾರಿ ತುಂಬಾ. ಮಚ್ಚೂರಲ್ಲೂ ಐದು ವರ್ಷದಿಂದೇ ಬಾರು ಸುರ್ವಾಯ್ತು. ಅಲ್ಲೂ ಇದೇ ಕಥೆ' ಎಂದು ನೋವಿನಿಂದ ಹೇಳಿದರು.

ನಿಯಮ ಉಲ್ಲಂಘನೆ: ಡಿ.ಬಿ.ಕುಪ್ಪೆ ಗಿರಿಜನ ಆಶ್ರಮ ಶಾಲೆ, ಬಾವಲಿ ಹಾಡಿ ಪಕ್ಕದಲ್ಲೇ ತಲೆ ಎತ್ತಿರುವ ಬಾರ್ ಮತ್ತು ರೆಸಾರ್ಟ್‌ನಲ್ಲಿ ರೂಂ ಪಡೆದ ಅತಿಥಿಗಳಿಗೆ ಮದ್ಯ ಮಾತ್ರ ನೀಡಬೇಕೆಂಬ ಅಬಕಾರಿ ಇಲಾಖೆಯು ನೀಡಿದ 'ಸಿಎಲ್–7' ಪರವಾನಗಿ ನಿಯಮವಿದ್ದರೂ, ಅದನ್ನು ಉಲ್ಲಂಘಿಸಿ ಸ್ಥಳೀಯರು ಹಾಗೂ ಕೇರಳದ ಜನರಿಗೆ ಮದ್ಯಮಾರಾಟ ಮಾಡಲಾಗುತ್ತಿದೆ. ಸನ್ನದು ರದ್ದುಗೊಳಿಸುವಂತೆ 'ಶ್ರೀ ಶಕ್ತಿ ಕರಿಗಾಳಿಯಮ್ಮ ಮಹಿಳಾ ಸಂಘ'ದವರು ಜಿಲ್ಲಾಧಿಕಾರಿಗೆ ಮೇ 9ಕ್ಕೆ ಪತ್ರ ಬರೆದಿದ್ದರೂ ಕ್ರಮವಾಗಿಲ್ಲ.

ಪರಿಸರ ಸೂಕ್ಷ್ಮ ವಲಯದಲ್ಲಿರುವ ಬಾವಲಿ, ತಿಮ್ಮನಹೊಸಳ್ಳಿ ಬಾರ್‌ಗಳಿಗೆ ಬಾಡಿಗೆ ವಾಹನ, ಟೆಂಪೊ ಟ್ರಾವಲರ್ಸ್‌ಗಳಲ್ಲಿ, ಡಿ.ಬಿ.ಕುಪ್ಪೆ, ಮಚ್ಚೂರು ಗ್ರಾಮದಲ್ಲಿ ಕಬಿನಿ ನದಿ ದಡದಲ್ಲಿಯೇ ತಲೆ ಎತ್ತಿರುವ ಎರಡು ಬಾರ್‌ಗಳಿಗೆ ದೋಣಿ, ತೆಪ್ಪಗಳಲ್ಲಿ ಕೇರಳದ ಜನ ನದಿ ದಾಟಿ ಬರುತ್ತಿದ್ದಾರೆ. ಅಲ್ಲಿನ ಪುಲ್ಪಳ್ಳಿ, ಮಾನಂದವಾಡಿ, ಕಾಟಿಕೊಳಂ, ತಿರುನೇಲಿ, ಪೆರಿಕ್ಕಾಲ್ಲೂರು, ಚೇಗಾಡಿ, ಕೊಡಗಿನ ಕುಟ್ಟ ಕಡೆಯಿಂದಲೂ ಬರುತ್ತಿದ್ದು, ಕೆಲವರು ಬೆಳಿಗ್ಗೆ 5.30ಕ್ಕೆ ಮೊಕ್ಕಾಂ ಹೂಡಿರುತ್ತಾರೆ!

ಕುಡಿದವರು ಬುಡಕಟ್ಟು ಜನ ವಾಸಿಸುವ ಹಾಡಿಗಳ ಗುಡಿಸಲುಗಳಿಗೆ ಹೋಗಿ ಅಸಭ್ಯವಾಗಿ ವರ್ತಿಸುತ್ತಾರೆ ಎನ್ನುವ ಆರೋಪವಿದೆ. ಬಾವಲಿ, ಡಿ.ಬಿ.ಕುಪ್ಪೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳು ಕ್ರಮವಾಗಿ 150 ಮೀಟರ್ ಹಾಗೂ 1 ಕಿ.ಮೀ ಸಮೀಪದಲ್ಲಿದ್ದರೆ, ಮಚ್ಚೂರು ಗಿರಿಜನ ಆಶ್ರಮ ಶಾಲೆ ಮತ್ತು ಅಂಗನವಾಡಿ ಕೇಂದ್ರಗಳೂ ಬಾರ್‌ಗಳಿಂದ 500 ಮೀಟರ್ ಸನಿಹವೇ ಇವೆ. ಶಾಲೆಗಳಿಗೆ ತೆರಳುವ ಬಾಲಕಿಯರನ್ನು ರೇಗಿಸಿದ, ಅವರಿಗೆ ಗುಪ್ತಾಂಗ ಪ್ರದರ್ಶನ ಮಾಡಿದ ಘಟನೆಗಳೂ ನಡೆದಿವೆ. ಅವುಗಳಿಂದ ರೋಸಿಹೋಗಿರುವ ಹಾಡಿ ಜನ ಬಾರ್‌ಗಳನ್ನು ಮುಚ್ಚುವಂತೆ ಹೋರಾಡುತ್ತಿದ್ದಾರೆ.

ಶಾಲೆಯ 100 ಮೀಟರ್ ಸುತ್ತಮುತ್ತ ಬಾರ್ ತೆರೆಯುವಂತಿಲ್ಲ. ಆದರೆ, ಹಾಡಿಯಿಂದ ಶಾಲೆಗಳಿಗೆ ಮದ್ಯದಂಗಡಿ ಇರುವ ರಸ್ತೆಯಲ್ಲಿಯೇ ಮಕ್ಕಳು ತೆರಳಬೇಕು. ಹೀಗಾಗಿ ತೊಂದರೆ ಅನುಭವಿಸುತ್ತಿದ್ದಾರೆ.

'ಬಾವಲಿ, ಕಡೆಗದ್ದೆ ಸೇರಿದಂತೆ ಕಬಿನಿ ಹಿನ್ನೀರಿನ ಉದ್ದಕ್ಕೂ ಇರುವ ಗ್ರಾಮಗಳು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ವ್ಯಾಪ್ತಿಗೆ ಬರುವ ಕಂದಾಯ ಗ್ರಾಮಗಳಾಗಿದ್ದು, ಪರಿಸರ ಸೂಕ್ಷ್ಮ ಪ್ರದೇಶ ವ್ಯಾಪ್ತಿಗೆ ಬರುತ್ತವೆ. ಕಾಡಂಚಿನಿಂದ 10 ಕಿ.ಮೀವರೆಗೂ ಯಾವುದೇ ವಾಣಿಜ್ಯ ಚಟುವಟಿಕೆ ನಡೆಸಲು ಅರಣ್ಯ ಇಲಾಖೆಯಿಂದ ಅನುಮತಿಯನ್ನು ಕಡ್ಡಾಯವಾಗಿ ತೆಗೆದುಕೊಳ್ಳಬೇಕು. ಹುಲಿ ಸಂರಕ್ಷಿತ ಪ್ರದೇಶವಾದ್ದರಿಂದ ಕೇರಳದ ವ್ಯಾಪ್ತಿಗೂ ಪರಿಸರ ಸೂಕ್ಷ್ಮ ಪ್ರದೇಶದ ನಿಯಮಗಳು ಅನ್ವಯಿಸುತ್ತವೆ' ಎನ್ನುತ್ತಾರೆ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ನಿರ್ದೇಶಕಿ ಪಿ.ಎ.ಸೀಮಾ.

'ಬಫರ್ ವಲಯದಲ್ಲಿ ಕಂದಾಯ ಗ್ರಾಮಗಳೂ ಸೇರುತ್ತವೆ. ಕಾಡಂಚು, ಕಾರಿಡಾರ್ ಆಧರಿಸಿ ವಲಯದ ವ್ಯಾಪ್ತಿ ನಿರ್ಧರಿಸಲಾಗುತ್ತದೆ. ಹಾಡಿಗಳು ಅರಣ್ಯ ಇಲಾಖೆ ಜಾಗದಲ್ಲಿ ನಿರ್ಮಾಣವಾಗಿದ್ದು, ಅವರೂ ಮನೆ ಕಟ್ಟುವುದಕ್ಕೆ ಇಲಾಖೆಯಿಂದ ಅನುಮತಿ ಪಡೆಯುವುದು ಕಡ್ಡಾಯ. ಮದ್ಯ ಮಾರಾಟ ಮಾಡುತ್ತಿರುವ ರೆಸಾರ್ಟ್ ಕಡೆಗದ್ದೆ ಕಂದಾಯ ಗ್ರಾಮದಲ್ಲಿದ್ದು, ಪರವಾನಗಿ ರದ್ದು ಪಡಿಸುವಂತೆ ಅಬಕಾರಿ ಇಲಾಖೆಗೆ ಜುಲೈ 7ರಂದು ಪತ್ರ ಬರೆಯಲಾಗಿದ್ದು, ಪೂರಕ ದಾಖಲೆ, ಮಾರಾಟದ ಛಾಯಾಚಿತ್ರಗಳನ್ನು ಕೊಡಿ ಎಂದಿದ್ದರು. ಇದೀಗ ಅವುಗಳನ್ನೂ ಸೇರಿಸಿ ಮರುಪತ್ರ ಬರೆಯಲಾಗಿದೆ' ಎಂದರು.

ಮೈಸೂರು ಜಿಲ್ಲೆ ಎಚ್.ಡಿ.ಕೋಟೆ ತಾಲ್ಲೂಕಿನ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ವ್ಯಾಪ್ತಿಯ ಮಚ್ಚೂರಿಗೆ ಮದ್ಯ ಸೇವನೆಗಾಗಿ ದೋಣಿಯಲ್ಲಿ ನದಿ ದಾಟಿ ಬರುತ್ತಿರುವ ಕೇರಳದ ಜನರು –ಪ್ರಜಾವಾಣಿ ಚಿತ್ರ

ಬಾವಲಿಯ ಕಬಿನಿ ದಡದಲ್ಲಿ ಮದ್ಯದ ಬಾಟಲಿಗಳನ್ನು ಒಡೆದಿರುವುದು

ಆರ್ಥಿಕ ಸಂಕಷ್ಟ: ಹಾಡಿಗಳ ಯುವಕರು ಕೆಲಸಕ್ಕೆ ಹೋಗುತ್ತಿಲ್ಲ. ಮದ್ಯದಂಗಡಿಗಳಲ್ಲಿ ಮೊಕ್ಕಾಂ ಹೂಡುವುದರಿಂದ ಬುಡಕಟ್ಟು ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೀಡಾಗಿವೆ. ಬಾವಲಿ ಹಾಡಿಯ ಪೊನ್ನಿ ಎಂಬವರ ಮಕ್ಕಳು ಕುಡಿದು ತೀರಿಹೋಗಿದ್ದು, ವಯಸ್ಸಾಗಿ ಬೆನ್ನು ಬಾಗಿದ್ದರೂ ಜೀವನ ಸಾಗಿಸಬೇಕಾದ ಅನಿವಾರ್ಯತೆಯಿಂದ ಕೂಲಿಗೆ ಹೋಗುತ್ತಿದ್ದಾರೆ.

ಪೊಲೀಸ್ ಠಾಣೆ ಕೊಡಿ: 'ಡಿ.ಬಿ.ಕುಪ್ಪೆ ಗ್ರಾಮ ಪಂಚಾಯಿತಿಯನ್ನೇ ಕೇರಳದವರು ಖರೀದಿಸಿದ್ದಾರಾ ಎನ್ನುವ ಅನುಮಾನ ಬರುತ್ತದೆ. ಬಾರ್‌ಗಳು ಬೇಡವೆಂದು ಕೇಳಿಕೊಂಡರೂ ಅಧ್ಯಕ್ಷರು, ಸದಸ್ಯರ ತಲೆಗೆ ಹೋಗುವುದಿಲ್ಲ. ಇಡೀ ಹಾಡಿಗಳು ಹಾಗೂ ಗ್ರಾಮಸ್ಥರ ರಕ್ಷಣೆಗೆ ಪೊಲೀಸ್ ಠಾಣೆಯೂ ಇಲ್ಲ. ಫೋನಿನಲ್ಲಿ ದೂರು ನೀಡಿದರೆ, ಅಂತರಸಂತೆ ಠಾಣೆಯಿಂದ ಇಲ್ಲಿಗೆ ಪೊಲೀಸರು ಬರಲು 40 ಕಿ.ಮೀ ಆಗುತ್ತದೆ. ಕಾಡಿನ ಮೂಲೆಯಲ್ಲಿರುವುದರಿಂದ ಬರುವುದೂ ಇಲ್ಲ. ಇಲ್ಲಿಗೇ ಒಂದು ಪೊಲೀಸ್ ಠಾಣೆ ಕೊಡಬೇಕು' ಎನ್ನುತ್ತಾರೆ ಬಾವಲಿಯ ನಾಗೇಶ.

'ಯರವ, ಬೇಡ, ಕುರುಬ ಹಾಗೂ ಜೇನುಕುರುಬ ಸಮುದಾಯವರೇ ಹೆಚ್ಚಿರುವ ಈ ಊರಿನವರಿಗೇ ಮದ್ಯದಂಗಡಿಗಳು ಬೇಕಾಗಿಲ್ಲ. ಆದರೆ, ಮದ್ಯದಂಗಡಿ ಮಾಲೀಕರಿಗೆ ಲಾಭ ಬೇಕು. ಪ್ರತಿ ತಿಂಗಳ ಮೊದಲ ದಿನ ಗಡಿಯ ನಾಲ್ಕೂ ಬಾರ್‌ಗಳಿಗೆ ಕೇರಳದಿಂದ ಸಾವಿರಾರು ಜನ ಬರುತ್ತಾರೆ. ಸಂಜೆ, ಮುಂಜಾನೆ ಇಲ್ಲಿ ನಡೆದಾಡುವಂತೆಯೇ ಇಲ್ಲ' ಎಂದು ಅಸಹಾಯಕತೆ ವ್ಯಕ್ತಪಡಿಸಿದರು.

ಬಾಟಲಿ, ಪ್ಲಾಸ್ಟಿಕ್ ತ್ಯಾಜ್ಯ ರಾಶಿ: 'ಪ್ರಜಾವಾಣಿ' ಪ್ರತಿನಿಧಿ ಭೇಟಿ ನೀಡಿದ ವೇಳೆ, ಕಬಿನಿ ನದಿ ಪಕ್ಕದಲ್ಲಿಯೇ ಒಡೆದ ಮದ್ಯದ ಬಾಟಲಿಗಳು, ಪ್ಲಾಸ್ಟಿಕ್ ಲೋಟ, ಕುರುಕಲು ತಿಂಡಿ ಪೊಟ್ಟಣಗಳ ರಾಶಿ ರಾಶಿಯೇ ಬಿದ್ದಿದ್ದವು. ಬಾರ್‌ಗಳಲ್ಲಿ ಮದ್ಯ ಖರೀದಿಸಿ ಅರಣ್ಯ ಪ್ರವೇಶಿಸುವ ಜನ ಕಬಿನಿ ನದಿ ದಡಗಳಲ್ಲಿ ಕುಡಿದು ಮರ, ಬಂಡೆಗಳಲ್ಲಿ ನಿದ್ದೆ ಹೋಗುವುದು ಸಾಮಾನ್ಯ. ಅದನ್ನು ತಡೆಯುವುದೂ ಅರಣ್ಯ ಇಲಾಖೆಗೆ ಸವಾಲಾಗಿದೆ.

ನೀರು ಕುಡಿಯಲು, ನದಿಯಂಚಿನ ಮೇವಿಗೆ ಆನೆಗಳು ಸೇರಿದಂತೆ ಕಾಡುಪ್ರಾಣಿಗಳು ಬರುತ್ತಿದ್ದು, ಅವುಗಳಿಂದ ಪ್ರಾಣಹಾನಿಯಾಗುವ ಆತಂಕವಿದೆ. ಬಾಟಲ್‌ಗಳನ್ನು ವನ್ಯಜೀವಿಗಳು ಓಡಾಡುವ ಜಾಗದಲ್ಲಿಯೇ ಒಡೆಯಲಾಗುತ್ತಿದೆ. ಜನ ಹಾಗೂ ಕಾಡುಪ್ರಾಣಿಗಳಿಗೆ ಅಪಾಯ ಸಂಭವಿಸುವುದರಿಂದ ಬಾರ್‌ಗಳನ್ನು ಮುಚ್ಚಬೇಕು ಎಂದು ಕೋರಿ ಅರಣ್ಯ ಇಲಾಖೆಯ ಡಿಸಿಎಫ್ ಅವರು ಜಿಲ್ಲಾಧಿಕಾರಿ ಹಾಗೂ ಅಬಕಾರಿ ಜಿಲ್ಲಾಧಿಕಾರಿಗೆ ಪತ್ರವನ್ನೂ ಬರೆದಿದ್ದಾರೆ.

ನದಿ ಕಡೆ ಸುಳಿವಂತಿಲ್ಲ: ಬಾವಲಿಯಲ್ಲಿ ದಶಕಗಳ ಹಿಂದೆಯೇ ಜಲ್ಲಿಕಲ್ಲು ಕಾರ್ಖಾನೆ ಮುಚ್ಚಿದ್ದು, ಅದೇ ಹಾಡಿ ಮಕ್ಕಳ ಆಟದ ಮೈದಾನವಾಗಿತ್ತು. ಈಗ ಮದ್ಯಪ್ರಿಯರ ತಾಣವಾಗಿದೆ. ಈ ಮೈದಾನ ದಾಟಿಯೇ ಬಾವಲಿ, ಕಡೆಗದ್ದೆ ಗ್ರಾಮಸ್ಥರು ಸ್ನಾನ, ಬಟ್ಟೆ ಒಗೆಯಲೆಂದು ಕಬಿನಿ ನದಿಗೆ ತೆರಳಬೇಕು. ಮಳೆಗಾಲದಲ್ಲಿ ಬಾವಿಗಳಲ್ಲಿ ನೀರು ಇರುವುದರಿಂದ ನದಿ ಕಡೆ ಯಾರೂ ಬರುವುದಿಲ್ಲ. ಬೇಸಿಗೆಯಲ್ಲಿ ನದಿಗೆ ಬಂದರೆ, ಕುಡಿದವರಿಂದ ಕಿರುಕುಳ ಅನುಭವಿಸಬೇಕು.

'ಕುಡಿಯಲು ಬಂದವರು ಬೆತ್ತಲೆಯಾಗಿ ಸ್ನಾನ ಮಾಡುತ್ತಾರೆ. ಕುಣಿಯುತ್ತಾ ರೇಗಿಸುತ್ತಾರೆ. ಈ ಬೇಸಿಗೆಯಲ್ಲೂ ಮೂರ್ನಾಲ್ಕು ಮಂದಿ ಬಟ್ಟೆ ಹಾಕಿಕೊಳ್ಳದೇ ಚುಡಾಯಿಸಲು ಬಂದಿದ್ದರು. ಹುಡುಗರೆಲ್ಲ ಸೇರಿಕೊಂಡು ಅಟ್ಟಿದೆವು. ತಾಯಿ, ಅಕ್ಕ–ತಂಗಿಯರನ್ನು ನಾವೂ ಹೋಗಿ ಕಾಯಬೇಕು. ಏನು ಮಾಡೋದು' ಎಂದು ಬಾವಲಿ ನಿವಾಸಿ ಮನೋಜ್ ಅಳಲು ತೋಡಿಕೊಂಡರು.

'ಕೇರಳದಿಂದ ಬರುವ ಯುವಕರು ಆಟದ ಮೈದಾನದಲ್ಲಿ ಮದ್ಯದ ಜೊತೆಗೆ ಗಾಂಜಾ ಸೇವಿಸುತ್ತಾರೆ. ಎಂಡಿಎಂ ಡ್ರಗ್ಸ್ ಹಾವಳಿಯೂ ಇಲ್ಲಿದೆ' ಎಂದು ಮನೋಜ್, ಅಲ್ಲಿಯೇ ಬಿದ್ದಿದ್ದ ಎಂಡಿಎಂ ಡ್ರಗ್ಸ್ ಸೇವನೆಗೆ ಬಳಸುವ ಕಾಗದಗಳನ್ನು ತೋರಿಸಿದರು.

'ಬಾವಲಿಯಲ್ಲಿ 50 ಮನೆಗಳಿದ್ದು, 300ಕ್ಕೂ ಹೆಚ್ಚು ನಿವಾಸಿಗಳಿದ್ದಾರೆ. ಹಾಡಿಗೆ ತೆರಳುವ ರಸ್ತೆಯಲ್ಲಿಯೇ ಬಾರ್ ತೆರೆದದ್ದರಿಂದ ಅಲ್ಲಿದ್ದವರೆಲ್ಲ ಬೇರೆ ಕಡೆ ಮನೆ ಕಟ್ಟಿಕೊಂಡರು. ಮದ್ಯ ಸೇವನೆ ಮಾಡಿದವರು ಹಾಡಿಗಳ ಒಳಗೆ ಬಂದು ಅಲ್ಲಿಯೇ ಬಿದ್ದಿರುತ್ತಾರೆ. ಹೆಂಗಸರು, ಮಕ್ಕಳು ಭಯದಿಂದಲೇ ರಾತ್ರಿ ಕಳೆಯಬೇಕು' ಎಂದರು.

ನದಿ ಪಕ್ಕದಲ್ಲೇ ಬಾರ್: 'ಡಿ.ಬಿ.ಕುಪ್ಪೆಯಲ್ಲಿ ಕಬಿನಿ ನದಿ ದಡದಲ್ಲಿಯೇ ಬಾರ್ ತೆರೆಯಲಾಗಿದ್ದು, ಪಕ್ಕದಲ್ಲಿಯೇ ಅಂಚೆ ಕಚೇರಿ, ಶಾಲೆ, ದೇವಸ್ಥಾನ, ಮಸೀದಿ ಇವೆ. ಕೇರಳದ ಪುಲ್ಪಳ್ಳಿಯಿಂದ ದೋಣಿಗಳಲ್ಲಿ ಇಲ್ಲಿನ ಬಾರ್‌ಗೆ ಜನ ಬರುತ್ತಿದ್ದಾರೆ. ಇಲ್ಲಿ ಮದ್ಯ ಕೊಂಡವರು ಪಕ್ಕದಲ್ಲಿಯೇ ಇರುವ ಅರಣ್ಯದೊಳಗೆ ಹೋಗಿ ಕುಡಿಯುತ್ತಾರೆ. ತಿಮ್ಮನಹೊಸಹಳ್ಳಿ ಬಾರ್‌ನಲ್ಲಿ ಕುಡಿದು ಹೋಗುತ್ತಿದ್ದವರ ಮೇಲೆ ಆನೆ ದಾಳಿ ಮಾಡಿತ್ತು. ಕುಡಿದ ಮತ್ತಿನಲ್ಲೇ ಹೊಳೆ ಹಾಯಲು ಹೋಗಿ ನದಿ ಸೆಳೆತಕ್ಕೆ ಸಿಕ್ಕು ತೀರಿಕೊಂಡಿದ್ದಾರೆ' ಎನ್ನುತ್ತಾರೆ ಸ್ಥಳೀಯರು.

'ಪ್ರತಿ ತಿಂಗಳ ಮೊದಲ ದಿನ ಪ್ರತಿ ಬಾರ್‌ನಲ್ಲೂ ಅಂದಾಜು ₹ 10 ಲಕ್ಷ ಮದ್ಯ ವ್ಯಾಪಾರವಾಗುತ್ತದೆ. ಸ್ಥಳೀಯರ ಬದುಕು, ಜೀವಕ್ಕೆ ಬೆಲೆ ಕೊಡದೆ ಲಾಭಕ್ಕಾಗಿ ಮಾಡುತ್ತಾರೆ. ಮದ್ಯದ ಚಟಕ್ಕೆ ಬಿದ್ದು, ಯಾವುದೇ ಹಾಡಿಗಳಲ್ಲಿ ಪದವಿ ಓದಿದವರು ಇಲ್ಲವೇ ಇಲ್ಲ' ಎಂದು ನಾಗೇಶ್ ಬೇಸರದಿಂದ ಹೇಳಿದರು.

'ಕೇರಳದ ಯುವಕರು ಮದ್ಯ ಕೊಂಡು, ಗಾಂಜಾ ಸೇವಿಸಿ ಅರಣ್ಯಗಳಲ್ಲಿ ಡಿ.ಜೆ ಹಾಕಿಕೊಂಡು ಕುಣಿಯುತ್ತಾರೆ. ಆದರೆ, ನಮ್ಮ ಮನೆಯಲ್ಲಿ ಹಬ್ಬ ನಡೆದರೆ ಮೈಕ್ ಹಾಕಲು ಅರಣ್ಯ ಇಲಾಖೆಯವರು ಬಿಡುವುದಿಲ್ಲ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ರಾತ್ರಿ ವಾಹನ ಸಂಚಾರ ನಿರ್ಬಂಧವಿರುವುದರಿಂದ ಬಾವಲಿ ಚೆಕ್‌ಪೋಸ್ಟ್ ಅನ್ನು 6 ಗಂಟೆಗೆ ಮುಚ್ಚಬೇಕು. ಆದರೆ, ರಾತ್ರಿ 9.30 ಆದರೂ ಮದ್ಯಪ್ರಿಯರಿಗೆ ತೆರೆದಿರುತ್ತದೆ' ಎಂದು ಆರೋಪಿಸಿದರು.

ಕೇರಳದ ಬಸ್: ಮಾನಂದವಾಡಿಯಿಂದ ಕೇರಳದವರೇ ಬಸ್ ಬಿಟ್ಟಿದ್ದು, ಅದು ಬೆಳಿಗ್ಗೆ 7.30, 11.30 ಹಾಗೂ ಸಂಜೆ 5.30ಕ್ಕೆ ಚೆಕ್‌ಪೋಸ್ಟ್‌ವರೆಗೂ ಬರುತ್ತದೆ. ಇಲ್ಲಿಂದ ಅಲ್ಲಿಗೆ ಯಾರೂ ಹೋಗುವುದಿಲ್ಲ. ಕೆಲಸಕ್ಕೆ ಹೋಗಬೇಕೆಂದರೆ ಸ್ಥಳೀಯರು ದೋಣಿಯಲ್ಲಿಯೇ ಹೋಗುತ್ತಾರೆ. ಜೀಪ್‌ಗಳೂ, ಬಾಡಿಗೆ ವಾಹನಗಳು ಚೆಕ್‌ಪೋಸ್ಟ್‌ನಿಂದ ಮಚ್ಚೂರುವರೆಗಿನ ಬಾರ್‌ಗಳಿಗೆ ಗಿರಾಕಿಗಳನ್ನು ಕರೆದುಕೊಂಡು ಹೋಗುತ್ತಿವೆ.

'ಬಾವಲಿ ಚೆಕ್‌ಪೋಸ್ಟ್ ಸಮೀಪದ ಮದ್ಯದಂಗಡಿ ಹತ್ತಿರವೇ ಇರುವ ಬಿದಿರು ಮೆಳೆಗಳ ಮೇವಿಗೆ ಆನೆಗಳು ಬರುತ್ತವೆ. ಆ.21ರ ಸಂಜೆಯೂ ಆನೆ ಬಂದಿತ್ತು. ಅದೇ ವೇಳೆ ಅದೇ ದಾರಿಯಲ್ಲಿ ಬರುತ್ತಿದ್ದವರು ಹೆದರಿ ನಿಂತರೆ, ಕುಡಿಯುವವವರು ಆನೆಗಳನ್ನೇ ಅಟ್ಟಲು ಹೋಗಿದ್ದರು' ಎಂದು ಜಯಮ್ಮ ಆತಂಕ ವ್ಯಕ್ತಪಡಿಸಿದರು.

'ಬಾವಲಿ ಸುತ್ತಮುತ್ತ ನಕ್ಸಲ್ ಚಟುವಟಿಕೆ ಪ್ರದೇಶವೆಂದು ಗುರುತಿಸಲಾಗಿದ್ದು, ಹಾಡಿ ಪಕ್ಕವೇ ಸುಬ್ರಹ್ಮಣ್ಯ ಸ್ವಾಮಿ ದೇವಾಲಯವೂ ಇದೆ. 2014ರಲ್ಲಿಯೇ ಬಾರ್ ಮತ್ತು ರೆಸ್ಟೋರೆಂಟ್ ತೆಗೆಯದಂತೆ ನಿರ್ಬಂಧಿತ ಪ್ರದೇಶವೆಂದು ಆಗಿನ ಜಿಲ್ಲಾಧಿಕಾರಿ ಸಿ.ಶಿಖಾ ಆದೇಶ ಹೊರಡಿಸಿದ್ದರು. ಆದರೀಗ ಚೆಕ್‌ಪೋಸ್ಟ್ ಪಕ್ಕದಲ್ಲಿಯೇ ರೆಸಾರ್ಟ್ ನಿರ್ಮಿಸಲಾಗಿದೆ. ಅದಕ್ಕೆ ಅರಣ್ಯ ಇಲಾಖೆಯಿಂದ ನಿರಾಕ್ಷೇಪಣಾ ಪತ್ರವನ್ನೂ ಪಡೆಯಲಾಗಿದೆ. ಅಬಕಾರಿ ಇಲಾಖೆಯಿಂದ ಸಿಎಲ್–7 ಪರವಾನಗಿ ಪಡೆದು, ನಿಯಮ ಉಲ್ಲಂಘಿಸಿ ಮದ್ಯ ಅಕ್ರಮ ಮಾರಾಟ ನಡೆಸಿದ್ದಾರೆ' ಎಂದು ಅವರು ದೂರಿದರು.

ಇಂಥ ಹಲವು ದೂರುಗಳಿದ್ದರೂ, ಕ್ರಮವಾಗದೇ ಇರುವುದರಿಂದ ಸ್ಥಳೀಯರ ಬದುಕು ಆತಂಕ, ಹಿಂಜರಿಕೆ, ಭಯದ ನಡುವೆಯೇ ನಡೆಯುವಂತಾಗಿದೆ.

ಪರಿಕಲ್ಪನೆ: ಜಿ.ಡಿ. ಯತೀಶ್‌ಕುಮಾರ್
ಪೂರಕ ಮಾಹಿತಿ: ಕೆ.ಎಸ್.ಗಿರೀಶ

'ನಮ್ಗೆ ಕುಡಿಯವ್ರದ್ದೇ ಹಿಂಸೆ'

'ಮೂರು ವರ್ಷದ ಹಿಂದೆ ರೆಸಾರ್ಟ್ ಪಕ್ಕದ ಜಮೀನಿನ ಬಳಿ ಮದ್ಯ ಕುಡಿದು ಅಡ್ಡಾಡುತ್ತಿದ್ದ ತಿರುಶ-ಲ್ಲೇರಿಯವನನ್ನು ಆನೆ ತುಳಿದು ಹಾಕಿತ್ತು. ಬೇಸಿಗೆಯಲ್ಲಿ 6 ಗಂಟೆಗೆ ಆನೆಗಳು ಈ ದಾರಿಯಲ್ಲಿ ಓಡಾಡುತ್ತವೆ. ಕಾಡು ಪ್ರಾಣಿಗಳನ್ನು ತಡೆಯಲು ಏನಾದರೂ ಮಾಡಬಹುದು. ಆದರೆ ಕುಡಿಯವ್ರದ್ದೆ ಹಿಂಸೆ ನಮ್ಗೆ

ಜಯಮ್ಮ, ಬಾವಲಿ ನಿವಾಸಿ

'ಮಾನವೀಯತೆ ಇಲ್ಲವಾಗಿದೆ'

ಒಂದೆಡೆ ಗಿರಿಜನರ ಅಭಿವೃದ್ಧಿಗೆ ಯೋಜನೆಗಳನ್ನು ಜಾರಿಗೊಳಿಸಲಾಗುತ್ತದೆ. ಮತ್ತೊಂದೆಡೆ ಅವರ ಕುಟುಂಬ ನಾಶ ಮಾಡುವ ಕೆಲಸಗಳೂ ನಡೆದಿವೆ. ಹಾಡಿಗಳ ಯುವಕರು ಕೆಲಸಕ್ಕೆ ಹೋಗದೆ ಮದ್ಯದಂಗಡಿಗಳಲ್ಲಿರು-ತ್ತಾರೆ. ಅದರಿಂದ ಬುಡಕಟ್ಟು ಕುಟುಂಬಗಳು ಆರ್ಥಿಕ ಸಂಕಷ್ಟಕ್ಕೀಡಾಗಿವೆ. ಮಹಿಳೆಯರು ಮಕ್ಕಳೊಂದಿಗೆ ನಿರಂತರ ಧರಣಿ, ಪ್ರತಿಭಟನೆ ನಡೆಸಿದರೂ ಆಡಳಿತ ನಡೆಸುವವರಿಗೆ ಮಾನವೀಯತೆ ಇಲ್ಲವಾಗಿದೆ. ಮದ್ಯ ಕೊಂಡು ಅರಣ್ಯ ಪ್ರದೇಶದಲ್ಲಿ ಸೇವನೆ ಮಾಡುವವರಿಗೆ ವನ್ಯಜೀವಿಗಳಿಂದ ಅಪಾಯವೂ ಇದೆ

ಜೋಸೆಫ್ ಹೂವರ್, ರಾಜ್ಯ ವನ್ಯಜೀವಿ ಮಂಡಳಿಯ ಮಾಜಿ ಸದಸ್ಯ

'ಪರಿಶೀಲನೆ ನಡೆಸಿರುವೆ'

ಅರಣ್ಯ ಪ್ರದೇಶದಲ್ಲಿ ಮದ್ಯ ಸೇವನೆ ಮಾಡುವುದು ಹಾಗೂ ಅತಿಕ್ರಮ ಪ್ರವೇಶ ನಿಷಿದ್ಧ. ಬಾವಲಿ, ಡಿ.ಬಿ.ಕುಪ್ಪೆ ಸೇರಿದಂತೆ ಕಬಿನಿ ಹಿನ್ನೀರಿನ ಅರಣ್ಯ ಪ್ರದೇಶಗಳಲ್ಲಿ ಪರಿಶೀಲನೆ ನಡೆಸಿದ್ದೇನೆ. ಕೆಲ ತಿಂಗಳ ಹಿಂದಷ್ಟೇ ಅಧಿಕಾರ ವಹಿಸಿಕೊಂಡಿದ್ದು, ನಾನು ಬರುವುದಕ್ಕೂ ಮೊದಲೇ ಎಲ್ಲ ಬಾರ್‌ಗಳನ್ನು ರದ್ದುಗೊಳಿಸುವಂತೆ ಅಬಕಾರಿ ಇಲಾಖೆ ಹಾಗೂ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ಕುಡಿದವರು ಕಾಡಿಗೆ ಹೋಗದಂತೆ ಅರಣ್ಯ ಗಸ್ತು ಸಿಬ್ಬಂದಿ ನಿಯೋಜಿಸಲಾಗಿದೆ.

ಪಿ.ಎ.ಸೀಮಾ, ನಿರ್ದೇಶಕಿ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ

'ವನ್ಯಜೀವಿಗಳಿಗೆ ತೊಂದರೆ: ಕ್ರಮ'

ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಅಂಚಿನ ಬಾವಲಿ ಹಾಗೂ ಇತರ ಹಾಡಿಗಳಲ್ಲಿ ಮದ್ಯದಂಗಡಿಗಳಲ್ಲಿ ಮದ್ಯಕೊಂಡವರು ಅರಣ್ಯದಲ್ಲಿ ಸೇವನೆ ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಮಾನವ ಹಾಗೂ ವನ್ಯಜೀವಿ ಸಂಘರ್ಷಕ್ಕೆ ಕಾರಣವಾಗುತ್ತಿದ್ದು, ಕ್ರಮವಹಿಸಲಾಗುವುದು

ರಮೇಶ್ ಕುಮಾರ್, ನಿರ್ದೇಶಕ, ಹುಲಿ ಯೋಜನೆ

'ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದೇವೆ'

ಬಾವಲಿಯಲ್ಲಿ ಮದ್ಯ ಮಾರಾಟ ಮಾಡುತ್ತಿರುವ ಬಾರ್‌ನ ಪರವಾನಗಿ 2014ರಲ್ಲೇ ರದ್ದಾಗಿತ್ತು. ಅರಣ್ಯ ಇಲಾಖೆ ನಿರಕ್ಷೇಪಣಾ ಪತ್ರ ನೀಡಿದ್ದರಿಂದ 2023ರಲ್ಲಿ ಮತ್ತೆ ಮದ್ಯ ಮಾರಾಟಕ್ಕೆ ಅವಕಾಶ ನೀಡಲಾಗಿತ್ತು. 6 ತಿಂಗಳ ನಂತರ ಪುನಃ ಪರವಾನಗಿ ನೀಡದಂತೆ ಅರಣ್ಯ ಇಲಾಖೆ ನಮಗೆ ಪತ್ರ ಬರೆದಿದ್ದು, ಅದನ್ನು ಜಿಲ್ಲಾಧಿ-ಕಾರಿಗಳಿಗೆ ಕಳುಹಿಸಿದ್ದೆವು. ವ್ಯತಿರಿಕ್ತ ಅಭಿಪ್ರಾಯವನ್ನು ಅರಣ್ಯ ಇಲಾಖೆ ವ್ಯಕ್ತಪಡಿಸಿದ್ದರಿಂದ ಸ್ಪಷ್ಟವಾದ ವರದಿ ನೀಡಿ ಎಂದು ಜಿಲ್ಲಾಧಿಕಾರಿಗಳು ಪತ್ರ ಬರೆದಿದ್ದಾರೆ. ನಾವೂ ಅರಣ್ಯ ಇಲಾಖೆಯ ಉತ್ತರಕ್ಕೆ ಕಾಯುತ್ತಿದ್ದೇವೆ. ಡಿ.ಬಿ.ಕುಪ್ಪೆ, ತಿಮ್ಮನಹೊಸಳ್ಳಿ ಹಾಗೂ ಮಚ್ಚೂರಿನ ಬಾರ್‌ಗಳನ್ನು ಸ್ಥಳಾಂತರಿಸಲು ಈಗಾಗಲೇ ಆದೇಶವಾಗಿದೆ. ಆದರದು ನ್ಯಾಯಾಲಯದ ವಿಚಾರಣೆಯಲ್ಲಿದೆ.

ಮಹದೇವಿ ಬಾಯಿ, ಗ್ರಾಮಾಂತರ ಅಬಕಾರಿ ಜಿಲ್ಲಾಧಿಕಾರಿ

'ತನಿಖೆ ನಡೆಸಿ ಕ್ರಮ ವಹಿಸುವೆ'

ಮದ್ಯದಂಗಡಿ ಮುಚ್ಚುವಂತೆ ಹಾಡಿ ನಿವಾಸಿಗಳು ನಡೆಸಿರುವ ಹೋರಾಟದ ಬಗ್ಗೆ ತಿಳಿದುಬಂದಿಲ್ಲ. ಇತ್ತೀಚೆಗೆ ಬಾವಲಿ ಕಡೆ ಹೋಗಿದ್ದಾಗಲೂ ಈ ವಿಷಯ ಗಮನಕ್ಕೆ ಬಂದಿಲ್ಲ. ಅಲ್ಲಿ ಮಾರಾಟ ಅಕ್ರಮವಾಗಿ ನಡೆಯುತ್ತಿದ್ದ-ರೆ, ಮಾಹಿತಿ ತರಿಸಿಕೊಳ್ಳುವೆ. ನಂತರ ತನಿಖೆ ನಡೆಸಿ, ವರದಿ ಆಧರಿಸಿ ಕ್ರಮವಹಿಸುವೆ

ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾಧಿಕಾರಿ

ವಿಫಲವಾದ ಹೋರಾಟ

ಮಡಿಕೇರಿ: ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ತಿತಿಮತಿ ಗ್ರಾಮದಲ್ಲಿ ಮದ್ಯದಂಗಡಿಯೊಂದಿತ್ತು. ಆದರೆ, ಹಾಡಿಯ ಸುತ್ತಮುತ್ತ ಇರಲಿಲ್ಲ. 5 ವರ್ಷದ ಹಿಂದೆ ಹಾಡಿಗಳಿಗೆ ಕೂಗಳತೆ ದೂರದಲ್ಲೆ ಮದ್ಯದಂಗಡಿಯೊಂದನ್ನು ತೆರೆದಾಗ ಪ್ರತಿಭಟನೆ ನಡೆದಿದ್ದವು. ಹಾಡಿ ಜನ, ಮಹಿಳೆಯರು ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ಆದರೆ, ಅದು ವಿಫಲವಾಯಿತು.

ಕೇರಳದ ತೋಳ್ಪಟ್ಟಿಯಿಂದ ಕುಟ್ಟಕ್ಕೆ, ಕೇರಳದ ಪಾಣತ್ತೂರಿನಿಂದ ಕರಿಕೆಗೆ ಹೆಚ್ಚಿನ ಜನ ಬಂದು ಮದ್ಯ ಖರೀದಿಸುತ್ತಿದ್ದಾರೆ. ಕೊಡಗಿನ ಹಾಡಿ ಜನರಲ್ಲಿ ಪುರುಷರು ಹೆಚ್ಚು ಎಂದರೆ 40 ವರ್ಷ ಬದುಕುತ್ತಿದ್ದು, ಮದ್ಯವ್ಯಸನದಿಂದ ಬರುವ ರೋಗಗಳಿಗೆ ಬಲಿಯಾಗುತ್ತಿದ್ದಾರೆ. ಅನಾಥರಾದ ಮಕ್ಕಳೂ ಮದ್ಯಕ್ಕೆ ದಾಸರಾಗುತ್ತಿದ್ದಾರೆ. ಬಹಳಷ್ಟು ಹಾಡಿ ಜನರು ಸರ್ಕಾರ ತಮಗೆ ನೀಡುವ ಪೌಷ್ಠಿಕ ಆಹಾರ ಹಣಕ್ಕೆ ಮಾರಾಟ ಮಾಡಿ, ಬಂದ ಹಣದಲ್ಲಿ ಮದ್ಯ ಸೇವಿಸುತ್ತಿದ್ದಾರೆ.

ಜೇನುಕುರುಬರ ಸಂಖ್ಯೆ ಅಧಿಕವಾಗಿರುವ ಚೊಟ್ಟೆಪಾರಿಯಲ್ಲಿ ಗುಡಿಸಲಿನಲ್ಲಿ ಸರ್ಕಾರದ ಎಂಎಸ್‌ಐಎಲ್ ಸಂಸ್ಥೆಯೇ ಮಳಿಗೆ ತೆರೆದಿದೆ.

ಚಾಮರಾಜನಗರ ಜಿಲ್ಲೆ ಹನೂರು ತಾಲ್ಲೂಕಿನ ಲೊಕ್ಕನಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿರುವ ಅರ್ಧನಾರೀಪುರ ಗುಂಡಿಮಾಳ, ಹಿರಿಯಂಬಲ, ಕತ್ತೆಕಾಲು ಪೋಡು, ಜೀರಿಗೆ ಗದ್ದೆ, ಉದ್ದಟಿ ಮಾವತ್ತೂರು, ಅಂಡೆಕುರುಬನದೊಡ್ಡಿ ಹಾಡಿಗಳ ಗೂಡಂಗಡಿಗಳಲ್ಲಿ ಮದ್ಯ ಅಕ್ರಮ ಮಾರಾಟವಾಗುತ್ತಿದೆ.

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 15-12-1999

● **ಮಂದಿರ ನಿರ್ಮಾಣ ಇಲ್ಲ: ವಾಜಪೇಯಿ ಘೋಷಣೆ**

ನವದೆಹಲಿ, ಡಿ. 14 (ಯುಎನ್‌ಐ)– ರಾಮಮಂದಿರ ನಿರ್ಮಾಣ ವಿಚಾರದಲ್ಲಿ ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ ಕೂಟದ (ಎನ್‌ಡಿಎ) ಕಾರ್ಯಸೂಚಿಯನ್ನು ಉತ್ತರ ಪ್ರದೇಶ ಸರ್ಕಾರವೂ ಅನುಸರಿಸಲಿದೆ ಎಂದು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ರಾತ್ರಿ ಸ್ಪಷ್ಟಪಡಿಸಿದ್ದಾರೆ.

ಮಂದಿರ ನಿರ್ಮಾಣದ ಪ್ರಸ್ತಾವವು ತಮ್ಮ ಸರ್ಕಾರದ ಮುಂದಿಲ್ಲವೆಂದು ಉತ್ತರ ಪ್ರದೇಶ ಮುಖ್ಯಮಂತ್ರಿ ರಾಂ ಪ್ರಕಾಶ್ ಗುಪ್ತಾ ತಿಳಿಸಿರುವುದಾಗಿ ಪ್ರಧಾನಿಯವರು ಹೇಳಿದ್ದಾರೆ. ಈ ಮೂಲಕ, ಕಳೆದೆರಡು ದಿನಗಳಿಂದ ಲೋಕಸಭೆ ತಲ್ಲಣಗೊಳಿಸಿದ್ದ ರಾಮ ಮಂದಿರ ನಿರ್ಮಾಣ ಕುರಿತಾದ ವಿವಾದಕ್ಕೆ ತೆರೆ ಬಿದ್ದಂತಾಗಿದೆ.

50 ವರ್ಷಗಳ ಹಿಂದೆ

ಭಾನುವಾರ, 15-12-1974

● **ಪೆಟ್ರೋಲಿಯಂ ವಸ್ತು ಬೆಲೆ ಮತ್ತಷ್ಟು ಏರಿಕೆ**

ನವದೆಹಲಿ, ಡಿ.14– ರಾಷ್ಟ್ರಾದ್ಯಂತ ಜನವರಿ 1ರಿಂದ ಬಹುತೇಕ ಪೆಟ್ರೋಲಿಯಂ ವಸ್ತುಗಳ ಬೆಲೆ ಮತ್ತಷ್ಟು ಹೆಚ್ಚಲಿದೆ. ಪೆಟ್ರೋಲಿಯಂ ರಫ್ತು ರಾಷ್ಟ್ರಗಳ ಒಕ್ಕೂಟವು ಕಚ್ಚಾ ತೈಲದ ಸರಾಸರಿ ಬೆಲೆಯನ್ನು ಬ್ಯಾರಲ್‌ವೊಂದಕ್ಕೆ 38 ಸೆಂಟ್ಸ್‌ಗಳನ್ನು ಹೆಚ್ಚಿಸುವ ನಿರ್ಧಾರ ಕೈಗೊಂಡಿರುವುದನ್ನು ಆಧರಿಸಿ ಈ ಬೆಲೆ ಏರಿಕೆ ಅನಿವಾರ್ಯವಾಗಿದೆ ಎಂದು ಇಲ್ಲಿನ ಅಧಿಕೃತ ಮೂಲಗಳು ತಿಳಿಸಿವೆ.

ಕಚ್ಚಾ ತೈಲ ಆಮದಿಗಾಗಿ ತೆರುವ ಹೆಚ್ಚುವರಿ ಬೆಲೆಯನ್ನು, ತೈಲ ಶುದ್ಧೀಕರಣಾಗಾರಗಳಿಗೆ ತುಂಬಿಕೊಡಬೇಕಿರುವುದರಿಂದ ಏರಿಕೆ ಅಗತ್ಯವಾಗಿದೆ ಎಂಬುದಾಗಿಯೂ ಈ ವಲಯಗಳು ತಿಳಿಸಿವೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಡಿಸೆಂಬರ್ 15, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಪೂರ್ಣಿಮಾ ಗಂ. 14-32 **ನಕ್ಷತ್ರ:** ಮೃಗಶಿರ ಗಂ. 26-20, **ಯೋಗ:** ಶುಭ ಗಂ. 26-03 **ಕರಣ:** ಬವ ಗಂ. 14-32, ವೃಶ್ಚಿಕ ಮಾಸದ 29 ನೇ ದಿನ, **ಮಳೆನಕ್ಷತ್ರ:** ಜ್ಯೇಷ್ಠ 4.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-49 **ಸೂರ್ಯಾಸ್ತ:** 06-02
ಮುಸ್ಲಿಂ ದಿನಾಂಕ: 12 ಜುಮಾದುಸ್ಸಾನಿ
ದಿನ ವಿಶೇಷ: ಹುತ್ತರಿ - 3 ದಿನ (ಕೊಡಗು), ಮಾರ್ಗಿ ಪೂರ್ಣಿಮಾ **ಅದೃಷ್ಟ ಸಂಖ್ಯೆ:** 8, 5

ಮೇಷ: ಮಕ್ಕಳ ಆಸೆ ಆಕಾಂಕ್ಷೆಗಳ ಈಡೇರಿಕೆಗೆ ಹೆಚ್ಚಿನ ಧನವ್ಯಯವಾಗಿ, ಹಣಕಾಸಿನ ಪರಿಸ್ಥಿತಿ ನಿಯಂತ್ರಣ ತಪ್ಪಲಿದೆ. ಇನ್ನೊಬ್ಬರ ಬಳಿ ಸಲಹೆ ಕೇಳುವ ಬದಲು ಸ್ವ–ಇಚ್ಛೆಯಿಂದ ನಿರ್ಧಾರ ಕೈಗೊಳ್ಳುವುದು ಸೂಕ್ತ.

ವೃಷಭ: ಸಂದರ್ಭಕ್ಕನುಸಾರ ವರ್ತಿಸುವ ಗುಣದಿಂದಾಗಿ, ಸ್ನೇಹ-ಸಂಬಂಧಗಳಲ್ಲಿ ಬಿರುಕು ಮೂಡುವ ಅಪಾಯವಿದೆ. ಅನಾರೋಗ್ಯದಿಂದಾಗಿ ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಬೇಕಾಗಬಹುದು. ಹೊಸ ಯೋಜನೆಗಳು ಕೈಗೂಡಲಿವೆ.

ಮಿಥುನ: ವೃತ್ತಿ ವಿಷಯದಲ್ಲಿ ಒಮ್ಮತದ ಅಭಿಪ್ರಾಯದಿಂದ ನಿರ್ಧಾರ ಕೈಗೊಳ್ಳುವುದು ಸೂಕ್ಷ್ಮ ವಿಷಯವಾದ್ದರಿಂದ ಗಂಭೀರ ಚಿಂತನೆ ಅಗತ್ಯ. ಮಹತ್ವದ ಜವಾಬ್ದಾರಿಯನ್ನು ನಿಭಾಯಿಸುವ ಸವಾಲು ನಿಮ್ಮೆದುರಿಗಿದೆ.

ಕರ್ಕಾಟಕ: ಸ್ನೇಹಿತರೊಬ್ಬರು ವಿಭಿನ್ನ ರೀತಿಯ ಕೆಲಸವೊಂದನ್ನು ನಿಮಗೊಪ್ಪಿಸಲಿದ್ದು, ಅದು ಸಾಕಷ್ಟು ಆದಾಯ ಮತ್ತು ಹೆಸರನ್ನು ತರಲಿದೆ. ತೆಂಗಿನಕಾಯಿ ವ್ಯಾಪಾರಿಗಳಿಗೆ ಹೆಚ್ಚು ಲಾಭ ಸಿಗಲಿದೆ.

ಸಿಂಹ: ಪ್ರದರ್ಶನ ಮತ್ತು ಮಾರಾಟ ಮಳಿಗೆಯವರಿಗೆ ಲೋಹದ ಉತ್ಪನ್ನ ಮಾರಾಟಗಳಿಂದ ನಿರೀಕ್ಷೆಗೂ ಮೀರಿದ ಲಾಭವಿದೆ. ಕುಟುಂಬವರೊಂದಿಗೆ ಸುಖ ಭೋಜನ ಮಾಡುವ ಅವಕಾಶವಿದೆ.

ಕನ್ಯಾ: ಸಿಬ್ಬಂದಿ ವರ್ಗದವರನ್ನು ವಿಶ್ವಾಸಕ್ಕೆ ತೆಗೆದುಕೊಂಡಲ್ಲಿ ನೀವಂದುಕೊಂಡಂತೆಯೇ ಕೆಲಸಗಳು ನಡೆಯಲಿವೆ. ಅಲಂಕಾರಿಕ ವಸ್ತುಗಳ ಮಾರಾಟಗಾರರು ಹಾಗೂ ದಲ್ಲಾಳಿಗಳಿಗೆ ಹೆಚ್ಚಿನ ಲಾಭವಾಗಲಿದೆ.

ತುಲಾ: ಮನಸ್ಥಿತಿ ಬದಲಾಗಲು, ವಾಸಸ್ಥಳವನ್ನು ತಾತ್ಕಾಲಿಕವಾಗಿ ಬದಲಿಸಬೇಕಾಗಬಹುದು. ಕಾರ್ಮಿಕ ವರ್ಗದವರಿಂದ ಕೆಲಸ ಕಾರ್ಯದಲ್ಲಿ ಮೋಸ ಹೋಗುವ ಸಂಭವವಿದ್ದು, ಎಚ್ಚರವಿರಲಿ.

ವೃಶ್ಚಿಕ: ಬರವಣಿಗೆ ವೃತ್ತಿಯವರು, ಆಕರ ಗ್ರಂಥಗಳನ್ನು ಸಮಂಜಸವಾಗಿ ಅಧ್ಯಯನ ಮಾಡುವುದು ಉತ್ತಮ. ವಸ್ತ್ರ ವಿನ್ಯಾಸದ ಕೆಲಸಗಳಿಂದ ಹೇರಳ ಧನಲಾಭವಿದೆ. ಮನೆಯಲ್ಲಿ ಮಂಗಳ ಕಾರ್ಯಗಳು ನಡೆಯಲಿವೆ.

ಧನು: ಎಲೆಕ್ಟ್ರಾನಿಕ್ ವಸ್ತುಗಳ ಮಾರಾಟಗಾರರಿಗೆ ಅಥವಾ ರಿಪೇರಿ ಮಾಡುವವರಿಗೆ ಹಾಗೂ ಖಾದ್ಯ ತೈಲ ವ್ಯಾಪಾರಿಗಳಿಗೆ ಹೆಚ್ಚಿನ ಲಾಭದ ನಿರೀಕ್ಷೆ ಇದೆ. ಯೋಜನೆಗಳು ವಿಳಂಬವಾಗುವ ಸಂಭವವಿದೆ.

ಮಕರ: ಗುರುಗಳ ಉಪದೇಶವು ಬದುಕಿಗೆ ದಾರಿದೀಪವಾಗಲಿದೆ. ಧಾರ್ಮಿಕ ಪರಂಪರೆಯ ವ್ಯಕ್ತಿಗಳಿಗೆ ಒತ್ತಡ ಹೆಚ್ಚಲಿದೆ. ಸ್ವಚ್ಛತಾ ಕಾರ್ಯಗಳಲ್ಲಿ ಪಾಲ್ಗೊಳ್ಳುವುದರಿಂದ ಅಲರ್ಜಿ ಉಂಟಾಗಬಹುದು.

ಕುಂಭ: ಅಭಿರುಚಿಗೆ ಸೂಕ್ತವಾಗುವ ವ್ಯಕ್ತಿತ್ವವುಳ್ಳವರೊಂದಿಗೆ ವ್ಯವಹರಿಸುವುದು ಉತ್ತಮ. ದಾಯಾದಿಗಳ ಉಪಟಳದಿಂದಾಗಿ ವೈರತ್ವ ಹೆಚ್ಚಾಗುವ ಸಂಭವವಿದೆ. ದುರ್ಘಟನೆಯ ನೋವುಗಳು ಪುನಃ ಪುನಃ ಕಾಡಲಿವೆ.

ಮೀನ: ಹಿರಿಯರ ಆಶೀರ್ವಾದದಿಂದ ಇಷ್ಟಸಿದ್ಧಿಯಾಗಿ, ಕೃಷಿ ಉತ್ಪನ್ನಗಳಿಂದ ಹೆಚ್ಚಿನ ಲಾಭವಾಗಲಿದೆ. ದಾಂಪತ್ಯದಲ್ಲಿ ಮಧುರ ಬಾಂಧವ್ಯ ಮೂಡಲಿದ್ದು, ನೆಮ್ಮದಿಯನ್ನು ತರಲಿದೆ.

ಪದಬಂಧ 5892

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಜೀರುಗುಣಿಕೆಯ ಹಗ್ಗ (3)
3.ಉಗ್ರವಾದ ಹೊಡೆದಾಟ (4)
5.ದಾರ ಹಿಡಿದುಕೊಂಡಿರುವ ಬಾಧ್ಯಸ್ಥ (4)
7.ತಡವಾದಾಗಲೇ ಈ ಗೊಂದಲ (4)
8.ಉಲ್ಟಾಪಲ್ಟಾ ಕಾಣುತ್ತಿರುವ ನೊಸಲು (2)
10.ಕಚೇರಿಯ ನೌಕರ ವರ್ಗ (3)
12.ಹವಿಸ್ಸು ನೀಡುವಾಗ ಆಕಳು ಕಾಣುತ್ತಿದೆಯಲ್ಲಾ! (2)
14.ಮೆತ್ತನೆಯ ಹಾಸಿಗೆ (4)
16.ಸಂಪೂರ್ಣವಾದುದನ್ನು ಹೀಗೆನ್ನಿ (4)
18.ಪ್ರಯೋಜನವಿಲ್ಲದುದು ಇದು (4)
19.ಬಾಣ ಬಿದ್ದಿರುವ ಸಮುದ್ರ (3)

ಮೇಲಿಂದ ಕೆಳಕ್ಕೆ
1.ದಾಹವಿದ್ದಾಗ ನೀಡಿದ ದೃಷ್ಟಾಂತ (5)
2.ಆಧಾರವಾದ ಕಾಗದಪತ್ರವಿಲ್ಲಿ ಉಲ್ಟಾ ಆಗಿದೆ (3)
3.ಹರಿದಂತದಲ್ಲಿ ಹಸಿರುಬಣ್ಣವಿದೆ (3)
4.ಲಲಾಟಲಿಖಿತವಿದು (5)
6.ತಂತಿ ವಾದ್ಯವಿಲ್ಲಿ ಉಲ್ಟಾ ಪಲ್ಟಾ ಆಗಿದೆ (3)
9.ಠಕ್ಕನನ್ನು ಹೀಗೂ ಕರೆವರು (5)
11.ಸೂರ್ಯನ ಇನ್ನೊಂದು ಹೆಸರು (3)
13.ಒಳ್ಳೆಯ ಅವಕಾಶ (5)
15.ಸ್ವಪ್ನವಿಲ್ಲಿ ತಿರುವುಮುರುವಾಗಿದೆ (3)
17.ಆನೆಯ ಮೇಲೆ ಕುಳಿತುಕೊಳ್ಳಲು ಹಾಕುವ ಭದ್ರಾಸನ ಉಲ್ಟಾ ಆಗಿದೆ (3)



5891ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುಸ್ವಾರ 3.ಗರ್ಭಕೋಶ
5.ಕನ್ನಡಿ 6.ನೆನಪು
8.ಬರಹ 9.ಪರಾರಿ
10.ವರಾಹ 12.ಪರ್ವತ
14.ರತ್ನಾಕರ 15.ಹತ್ಯಾಕಾಂಡ

ಮೇಲಿಂದ ಕೆಳಕ್ಕೆ:
1.ಅರಮನೆ 2.ರಸಿಕ
3.ಗರಡಿ 4.ಶಯ್ಯಾಗೃಹ
7.ಪುಢಾರಿ 8.ಬಡವ
9.ಪರಿವಾರ 11.ಹಳವಂಡ
12.ಪತ್ತಾರ 13.ತರಹ

ಸುಡೊಕು 6277

7	1			5			9	
	2		1		9	6		5
		5		3			1	
					4	1		9
9		1	5	8			4	
4				1		3		7
			3		7			1
	6					7	3	
				2			6	4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6276 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಮೀಸಲಾತಿ ಹೋರಾಟದಲ್ಲಿ ಶಾಸಕರೂ ಭಾಗಿ • ಮುಖ್ಯಮಂತ್ರಿಗೆ ಬಸವಜಯ ಮೃತ್ಯುಂಜಯ ಸ್ವಾಮೀಜಿ ಸವಾಲು

‘ತಾಕತ್ತಿದ್ದರೆ ‘ಕೈ’ ಶಾಸಕರ ವಜಾಗೊಳಿಸಿ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಮೀಸಲಾತಿಗಾಗಿ ನಡೆಸಿದ ಹೋರಾಟ ಸಂವಿಧಾನ ವಿರೋಧಿ ಆಗಿದ್ದರೆ, ಅದರಲ್ಲಿ ಭಾಗಿ ಆಗಿದ್ದ ಕಾಂಗ್ರೆಸ್‌ನ ಎಲ್ಲ ಶಾಸಕರ ವಜಾಗೊಳಿಸಿ’ ಎಂದು ಲಿಂಗಾಯತ ಪಂಚಮಸಾಲಿ ಪೀಠಾಧಿಪತಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಇಲ್ಲಿ ಮುಖ್ಯಮಂತ್ರಿ ಅವರಿಗೆ ಸವಾಲು ಹಾಕಿದರು.

‘ಹೋರಾಟಕ್ಕೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ, ಶಾಸಕರಾದ ಬಾಬಾ ಸಾಹೇಬ ಪಾಟೀಲ, ಭರಮಗೌಡ (ರಾಜು) ಕಾಗೆ, ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ ಬಂದಿದ್ದರು. ತಾಕತ್ತಿದ್ದರೆ ಅವರ ವಿರುದ್ಧ ಕ್ರಮವಹಿಸಿ. ರಾಜೀನಾಮೆ ಕೇಳಿ’ ಎಂದು ಶನಿವಾರ ಸುದ್ದಿಗೋಷ್ಠಿಯಲ್ಲಿ ತಿರುಗೇಟು ಕೊಟ್ಟರು.

‘ನಾಲ್ಕು ವರ್ಷದಿಂದ ಶಾಂತಿಯುತವಾಗಿ ಹೋರಾಡಿದ್ದೇವೆ. ಈಗ ಕ್ರಾಂತಿಗೆ ಸರ್ಕಾರವೇ ಬಡಿದೆಬ್ಬಿಸಿದೆ. ಸಮಾಜದ ಬಗ್ಗೆ ಕಳಕಳಿ ಇರದಿದ್ದರೆ, ಮೀಸಲಾತಿ ಕೊಡಲಾಗದು ಎಂದು ಹೇಳಿ. ಆದರೆ, ಹೋರಾಟವೇ ಸಂವಿಧಾನ ವಿರೋಧಿ ಎಂಬ ಹೇಳಿಕೆ ಹಿಂಪಡೆದು, ಕ್ಷಮೆ ಯಾಚಿಸಿ’ ಎಂದು ಆಗ್ರಹಪಡಿಸಿದರು.

‘ಮೀಸಲಾತಿ ಕೇಳುವುದೇ ಸಂವಿಧಾನ ವಿರೋಧಿ ಆಗಿದ್ದರೆ, ಪ್ರತಿಭಟನೆಗೆ ಅನುಮತಿ ಏಕೆ ನೀಡಿದಿರಿ? ‘ನೀವು ಬಸವಣ್ಣನನ್ನು ‘ಸಾಂಸ್ಕೃತಿಕ ನಾಯಕ’ ಎಂದು ಘೋಷಿಸಿದ್ದೀರಿ. ಆದರೆ, ನಮ್ಮ ಸಮಾಜ ನಿಂದಿಸುವ ಮೂಲಕ ಬಸವಣ್ಣನಿಗೆ ಪರೋಕ್ಷವಾಗಿ ಅಪಮಾನಿಸಿದ್ದೀರಿ. ಲಿಂಗಾಯತರ ಸ್ವಾಭಿಮಾನ ಕೆಣಕಲು ಪ್ರಯತ್ನಿಸಿದ್ದೀರಿ. ಸಂವಿಧಾನ ವಿರೋಧಿ ಹೋರಾಟ ಎಂದು ನೀಡಿದ ಹೇಳಿಕೆಯನ್ನು ಸದನದ ಕಡತದಿಂದ ತೆಗೆದು ಹಾಕಬೇಕು’ ಎಂದು ಸ್ವಾಮೀಜಿ ಆಗ್ರಹಿಸಿದರು.

ಲಾಠಿ ಪ್ರಹಾರ ಸಮರ್ಥಿಸಿಕೊಂಡಿದ್ದ ಗೃಹ ಸಚಿವ ಜಿ.ಪರಮೇಶ್ವರ ವಿರುದ್ಧವೂ ವಾಗ್ದಾಳಿ ನಡೆಸಿದ ಅವರು, ‘ಹಲ್ಲೆ ಸಮರ್ಥಿಸಿಕೊಂಡಿದ್ದು ನೀವು ಓದಿದ, ಬೆಳೆದ ಸಿದ್ಧಗಂಗಾ ಮಠಕ್ಕೆ ಮಾಡಿದ ಅಪಮಾನ. ಹಲ್ಲೆ ಘಟನೆ ಖಂಡಿಸಿ, ಕೊರಟಗೆರೆ ಕ್ಷೇತ್ರದಲ್ಲಿ ಲಿಂಗಾಯತರು ಧರಣಿ ಮಾಡಬೇಕು’ ಎಂದರು.

‘ಸಿ.ಎಂ ಸಿದ್ದರಾಮಯ್ಯ ವ್ಯಕ್ತಿತ್ವಕ್ಕೆ ಮಸಿ ಬಳಿಯಲು ಸ್ವಾಮೀಜಿ ಬಿಜೆಪಿ ಅವರಿಂದ ಸುಪಾರಿ ಪಡೆದಿದ್ದಾರೆ’ ಎಂಬ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತ ವೇದಿಕೆ ಅಧ್ಯಕ್ಷ ಕೆ.ಎಸ್.ಶಿವರಾಮು ಟೀಕೆಗೆ, ‘ನಾನು ಹೋರಾಟಕ್ಕಾಗಿ ಯಾರಿಂದಲೂ ಸುಪಾರಿ ಪಡೆದಿಲ್ಲ. ಇಂಥ ಹೋರಾಟಗಾರರೇ ಸುಪಾರಿ ಪಡೆದುಕೊಂಡಿರಬಹುದು’ ಎಂದು ತಿರುಗೇಟು ಕೊಟ್ಟರು.

‘ನಮ್ಮ ಅನ್ನದ ತಟ್ಟೆಗೆ ಕೈಹಾಕಿದರೆ, ಅವರ ಕೈ ಕತ್ತರಿಸುತ್ತೇವೆ’ ಎಂಬ ಶಿವರಾಮು ಟೀಕೆಗೆ, ‘ಹಾಗೇ ಮಾತನಾಡುವುದೇ ಅವರ ಗುಣ. ನಾವು ಅಹಿಂಸಾತ್ಮಕವಾಗಿ, ಬಸವಣ್ಣನವರ ತತ್ವದಡಿ ಹೋರಾಡುತ್ತೇವೆ. ಅಸಾಂವಿಧಾನಿಕ ಪದ ಬಳಸದೆ, ಸಂಸ್ಕಾರಯುತ ಭಾಷೆ ಬಳಸುತ್ತೇವೆ’ ಎಂದರು.

16ರಿಂದ ಧರಣಿ ಸತ್ಯಾಗ್ರಹ

‘ಸಿ.ಎಂ ಹೇಳಿಕೆ ಖಂಡಿಸಿ ಡಿ.16ರಿಂದ ವಿಧಾನಮಂಡಲ ಅಧಿವೇಶನ ಮುಗಿಯುವವರೆಗೆ ಬೆಳಗಾವಿ ಜಿಲ್ಲಾಧಿಕಾರಿ ಕಚೇರಿ ಬಳಿ ಧರಣಿ ಸತ್ಯಾಗ್ರಹ ಮಾಡುವೆ. ನಿತ್ಯ ಒಂದೊಂದು ಜಿಲ್ಲೆಯ ಮುಖಂಡರು ಭಾಗವಹಿಸುವರು’ ಎಂದು ಬಸವಜಯ ಮೃತ್ಯುಂಜಯ ಸ್ವಾಮೀಜಿ ಇಲ್ಲಿ ಪ್ರಕಟಿಸಿದರು.


ಬಸವಜಯ ಮೃತ್ಯುಂಜಯ ಸ್ವಾಮೀಜಿ

ಸ್ವಾಮೀಜಿ ಮುಗಿಸಲು ಸಂಚು: ರೇಣುಕಾಚಾರ್ಯ ಆರೋಪ

ದಾವಣಗೆರೆ: ‘ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗೆ ಒತ್ತಾಯಿಸಿ ಬೆಳಗಾವಿಯಲ್ಲಿ ಪ್ರತಿಭಟನೆ ವೇಳೆ ಗೋಲಿಬಾರ್ ನಡೆಸಿ ಬಸವಜಯ ಮೃತ್ಯುಂಜಯ ಸ್ವಾಮೀಜಿ ಮುಗಿಸಲು ಪೊಲೀಸ್ ಅಧಿಕಾರಿಗಳೇ ಸಂಚು ನಡೆಸಿದ್ದರು’ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಆರೋಪಿಸಿದರು.

ರೇಣುಕಾಚಾರ್ಯ

‘ಸ್ವಾಮೀಜಿ ಮುಗಿಸಿದರೆ ಹೋರಾಟ ನಿಲ್ಲುತ್ತದೆ ಎಂದು ಭಾವಿಸಿದ್ದರು’ ಎಂದು ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು.

‘ಕಿತ್ತೂರು ರಾಣಿ ಚನ್ನಮ್ಮಳ ವಂಶಸ್ಥರ ಮೇಲೂ ಹಲ್ಲೆ ಮಾಡಿದ್ದಾರೆ. ಇದನ್ನು ಎಲ್ಲ ಸಮುದಾಯಗಳ ಮಠಾಧೀಶರು ಖಂಡಿಸಬೇಕು. ಇಲ್ಲವಾದರೆ ಯಾರಿಗೂ ಉಳಿಗಾಲವಿಲ್ಲದಂತಾಗುತ್ತದೆ’ ಎಂದರು.

‘ಲಾಠಿ ಚಾರ್ಜ್ ಬದಲು ಮುತ್ತು ಕೊಡಬೇಕಿತ್ತಾ’ ಎಂದು ಗೃಹ ಸಚಿವರು ಲಘುವಾಗಿ ಮಾತನಾಡಿದ್ದಾರೆ. ‘ಹೋರಾಟದ ದಿಕ್ಕು ತಪ್ಪಿಸಲು ಅವರೇ ಕಲ್ಲು ತೂರಲು ಕುಮ್ಮಕ್ಕು ನೀಡಿರಬಹುದು’ ಎಂದು ಹೇಳಿದರು.

‘ಲಾಠಿಗೆ ಹೆದರುವುದಿಲ್ಲ’

ಮಾದಾರ ಚನ್ನಯ್ಯ ಸ್ವಾಮೀಜಿ ಸ್ಪಷ್ಟ ನುಡಿ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಒಳ ಮೀಸಲಾತಿಗಾಗಿ ನಾವು 30 ವರ್ಷ ಹೋರಾಟ ಮಾಡಿದವರು. ಈಗ ನಿಮ್ಮ ಲಾಠಿಗೆ ಹೆದರುವುದಿಲ್ಲ’ ಎಂದು ಮಾದಾರ ಚನ್ನಯ್ಯ ಗುರುಪೀಠದ ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ ಸರ್ಕಾರಕ್ಕೆ ಸ್ಪಷ್ಟ ಸಂದೇಶ ರವಾನಿಸಿದರು.

ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆಯು ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಶನಿವಾರ ಇಲ್ಲಿ ಹಮ್ಮಿಕೊಂಡಿದ್ದ ಮಾದಿಗ ವಕೀಲರ ರಾಜ್ಯಮಟ್ಟದ ಮೊದಲ ಸಮಾವೇಶದ ಸಾನಿಧ್ಯ ವಹಿಸಿ ಅವರು ಮಾತನಾಡಿದರು.

‘ಸುಪ್ರೀಂ’ಕೋರ್ಟ್ ಆದೇಶದಂತೆ ಪರಿಶಿಷ್ಟ ಜಾತಿಗಳಿಗೆ ಒಳಮೀಸಲಾತಿ ನೀಡಬೇಕು. ನಾವು ಹಕ್ಕು ಕೇಳುತ್ತಿದ್ದೇವೆ. ಇದನ್ನು ನ್ಯಾಯಯುತ ಹೋರಾಟದಿಂದ ಪಡೆಯುವುದಂತೂ ನೂರರಷ್ಟು ಸತ್ಯ’ ಎಂದು ತಿಳಿಸಿದರು.

ಕೊಟ್ಟ ಮಾತಿನಂತೆ ನಡೆದುಕೊಳ್ಳಿ ಎಂದು ಸಿ.ಎಂ ಅವರಿಗೆ ಹೇಳುತ್ತಿದ್ದೇವೆ. ಆದರೆ, ಅವರ ನಡೆ ಅನುಮಾನ ಮೂಡಿಸುತ್ತಿದೆ

ಬಸವಮೂರ್ತಿ ಮಾದಾರ ಚನ್ನಯ್ಯ ಸ್ವಾಮೀಜಿ, ಮಾದಾರ ಚನ್ನಯ್ಯ ಗುರುಪೀಠ

‘ಬೇಡಿಕೆ ಬಗ್ಗೆ ಸಮುದಾಯದ ನಾಯಕರು ಸದನದಲ್ಲಿ ಮಾತನಾಡುತ್ತಿಲ್ಲ. ಅವರು ಸದನದಲ್ಲೇ ಈ ವಿಚಾರವಾಗಿ ಗಟ್ಟಿ ಧ್ವನಿ ಎತ್ತಬೇಕು. ಸಂವಿಧಾನ ಬದ್ಧ ಹಕ್ಕನ್ನು ನೀಡುವುದಾಗಿ ಮುಖ್ಯಮಂತ್ರಿ ಹಾಗೂ ಸಚಿವರು ಹೇಳಿದರೆ ಸಾಕು. ನಾವು ಮತ್ತೇನನ್ನೂ ಕೇಳುವುದಿಲ್ಲ’ ಎಂದು ಸ್ಪಷ್ಟಪಡಿಸಿದರು.

ದತ್ತ ದರ್ಶನಕ್ಕೆ ಬಂದ ಭಕ್ತ ಸಾಗರ

ಕಲಬುರಗಿ ಜಿಲ್ಲೆಯ ಅಫಜಲಪುರ ತಾಲ್ಲೂಕಿನ ದೇವಲ ಗಾಣಗಾಪುರದಲ್ಲಿ ದತ್ತಾತ್ರೇಯ ದೇವರ ತೊಟ್ಟಿಲೋತ್ಸವ ಕಾರ್ಯಕ್ರಮ ಅದ್ಧೂರಿಯಾಗಿ ಜರುಗಿತು ಪ್ರಜಾವಾಣಿ ಚಿತ್ರ:ತಾಜುದ್ದೀನ್ ಆಜಾದ್

ದತ್ತ ಜಯಂತಿ ಅಂಗವಾಗಿ ಚಿಕ್ಕಮಗಳೂರಿನ ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾಕ್ಕೆ ಅಸಂಖ್ಯ ಭಕ್ತರು ಶನಿವಾರ ಭೇಟಿ ನೀಡಿ ದತ್ತ ಪಾದುಕೆ ದರ್ಶನ ಪಡದರು —ಪ್ರಜಾವಾಣಿ ಚಿತ್ರ

ಪ್ರಜಾವಾಣಿ ವಾರ್ತೆ

ಅಫಜಲಪುರ (ಕಲಬುರಗಿ ಜಿಲ್ಲೆ): ತಾಲ್ಲೂಕಿನ ದೇವಲ ಗಾಣಗಾಪುರದಲ್ಲಿ ಶನಿವಾರ ದತ್ತ ಜಯಂತಿ ನಿಮಿತ್ತ ನಡೆದ ದತ್ತಾತ್ರೇಯ ಮಹಾರಾಜರ ತೊಟ್ಟಿಲೋತ್ಸವ ಕಾರ್ಯಕ್ರಮವು ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ಬೆಳಗಿನ ಜಾವ ಕಾಕಡಾರತಿ, ಮಹಾಪೂಜೆ ಬಳಿಕ ನಿರ್ಗುಣ ಪಾದುಕೆ ಪೂಜೆ ಮಾಡಿ, ಮಹಾನ್ಯಾಸ ಪೂರ್ವಕ ಲಘುರುದ್ರಾಭಿಷೇಕ ನೆರವೇರಿಸಲಾಯಿತು. ಭೀಮಾ– ಅಮರ್ಜಾ ಸಂಗಮದಲ್ಲಿ ಪುಣ್ಯಸ್ನಾನ ಮಾಡಿದ ಭಕ್ತರು, ನಂತರ ದತ್ತ ಮಹಾರಾಜರ ಮತ್ತು ನಿರ್ಗುಣ ಪಾದುಕೆಗಳ ದರ್ಶನ ಮಾಡಿದರು.

ಮಧ್ಯಾಹ್ನ 12ಕ್ಕೆ ಬಾಲ ದತ್ತ ಮೂರ್ತಿಗೆ ತೊಟ್ಟಿಲೋತ್ಸವ ಕಾರ್ಯಕ್ರಮವು ಮಂತ್ರ ಹಾಗೂ ಭಕ್ತರ ಜಯಘೋಷಗಳ ಮಧ್ಯೆ ಜರುಗಿತು. ‘ದತ್ತಾತ್ರೇಯ ಮಹಾರಾಜಕಿ ಜೈ’ ಘೋಷಣೆಗಳು ಮೊಳಗಿದವು.

ದೇಶದ ವಿವಿಧೆಡೆಯಿಂದ ಬಂದಿದ್ದ ಭಕ್ತರು ದತ್ತಾತ್ರೇಯರ ಜನ್ಮವೃತ್ತಾಂತದ ಕುರಿತು ಭಜನೆ ಮಾಡಿದರು. ಮಹಾರಾಷ್ಟ್ರ, ಆಂಧ್ರಪ್ರದೇಶ, ಗೋವಾ ಮತ್ತು ರಾಜ್ಯದ ವಿವಿಧ ಜಿಲ್ಲೆಗಳಿಂದ ಭಕ್ತರು ಬಂದಿದ್ದರು. ಹರಕೆ ಹೊತ್ತ ಭಕ್ತರು ಪ್ರಸಾದ ವಿತರಿಸಿದರು.

ರಥೋತ್ಸವ ಇಂದು: ದೇಗುಲದ ಆವರಣದಲ್ಲಿ ಭಾನುವಾರ ಸಂಜೆ 5ಕ್ಕೆ ದತ್ತ ಮಹಾರಾಜರ ರಥೋತ್ಸವ ಜರುಗಲಿದೆ.

ದತ್ತ ಜಯಂತಿ: ಪಾದುಕೆ ದರ್ಶನ ಪಡೆದ ಭಕ್ತ ಗಣ

ಚಿಕ್ಕಮಗಳೂರು: ದತ್ತ ಜಯಂತಿಯ ಅಂತಿಮ ದಿನವಾದ ಶನಿವಾರ ಸಾವಿರಾರು ಭಕ್ತರು ದತ್ತ ಪಾದುಕೆಯ ದರ್ಶನ ಪಡೆದರು.

ಶ್ರೀಗುರು ದತ್ತಾತ್ರೇಯ ಬಾಬಾಬುಡನ್ ಸ್ವಾಮಿ ದರ್ಗಾಕ್ಕೆ ಬೆಳಿಗ್ಗೆಯಿಂದಲೇ ಭಕ್ತರು ಸಾಲುಗಟ್ಟಿ ಬಂದರು. ಗುಹೆಯ ಮುಂಭಾಗದ ಆವರಣದಲ್ಲಿ ದತ್ತ ಜಯಂತಿ ನಿಮಿತ್ತ ಹೋಮ, ಹವನಗಳನ್ನು ಅರ್ಚಕರು ನೆರವೇರಿಸಿದರು. ಕೊರೆವ ಚಳಿ ಇದ್ದರೂ ಭಕ್ತರು ಸಾಲುಗಟ್ಟಿ ಬಂದರು.

ಪೊಲೀಸರು ಎಲ್ಲೆಡೆ ಬಿಗಿಭದ್ರತೆ ಒದಗಿಸಿದ್ದರು. ಮೂರು ದಿನಗಳ ದತ್ತ ಜಯಂತಿ ಶಾಂತಿಯುತವಾಗಿ ಸಂಪನ್ನಗೊಂಡಿತು.

ಮಂಡ್ಯ: ಬಾಡೂಟ ಸೇವಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಮಂಡ್ಯ: ‘87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಾಡೂಟ ನೀಡಬೇಕು’ ಎಂದು ಆಗ್ರಹಿಸಿ ವಿವಿಧ ಸಂಘಟನೆಗಳ ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಶನಿವಾರ ಮಾಂಸಾಹಾರ ಸೇವಿಸಿ ಪ್ರತಿಭಟಿಸಿದರು.

ಜಿಲ್ಲಾಧಿಕಾರಿ ಕಚೇರಿ ಬಳಿ ಜಮಾಯಿಸಿದ ಕಾರ್ಯಕರ್ತರು, ‘ಆಹಾರ ಕ್ರಾಂತಿ ಆಹ್ವಾನ’ ಎಂಬ ಘೋಷಣೆಯೊಂದಿಗೆ, ತಾವು ತಂದಿದ್ದ ಚಿಕನ್ ಸಾಂಬಾರ್, ಮುದ್ದೆ, ಮೊಟ್ಟೆ ತಿಂದರು.

ಕರುನಾಡು ಸೇವಕರು ಸಂಘಟನೆಯ ಮುಖಂಡ ಎಂ.ಬಿ. ನಾಗಣ್ಣಗೌಡ ಮಾತನಾಡಿ, ‘ಸಮ್ಮೇಳನದಲ್ಲಿ ಮಾಂಸಾಹಾರ ಸೇವನೆಯನ್ನೇ ಬೇಡವೆಂದಿರುವುದು ಸರಿಯಲ್ಲ’ ಎಂದರು.

‘ಜಿಲ್ಲೆಯಲ್ಲಿ ಮಾಂಸಾಹಾರವೇ ಮುಖ್ಯ. ಆಹಾರ ಸಮಿತಿ ಅಧ್ಯಕ್ಷ ರಮೇಶ ಬಂಡಿಸಿದ್ದೇಗೌಡ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಅವರು ಈ ಬೇಡಿಕೆಯನ್ನು ಗಂಭೀರವಾಗಿ ಪರಿಗಣಿಸಬೇಕು’ ಎಂದು ಒತ್ತಾಯಿಸಿದರು.

ದಲಿತ ಸಂಘರ್ಷ ಸಮಿತಿ ಸಂಚಾಲಕ ಎಂ.ವಿ.ಕೃಷ್ಣ ಅವರು, ‘ಆಹಾರ ವಿಷಯದಲ್ಲಿ ನಡೆಯುತ್ತಿರುವ ತಾರತಮ್ಯವನ್ನು ನಿವಾರಿಸಬೇಕು’ ಎಂದು ಆಗ್ರಹಿಸಿದರು.

ಕರ್ನಾಟಕ ರಕ್ಷಣಾ ವೇದಿಕೆಯ ಜಯರಾಂ, ನೆಲದನಿ ಬಳಗದ ಮಂಗಲ ಲಂಕೇಶ್, ವಕೀಲರಾದ ಜೆ. ರಾಮಯ್ಯ, ಚೀರನಹಳ್ಳಿ ಲಕ್ಷ್ಮಣ್, ಬಿ.ಟಿ. ವಿಶ್ವನಾಥ್, ಮುಖಂಡರಾದ ನರಸಿಂಹಮೂರ್ತಿ, ಹನಕೆರೆ ಗಂಗಾಧರ್, ಕೆಂಚನಹಳ್ಳಿ ಸತೀಶ್, ಪ್ರದೀಪ್, ಗುರುಮೂರ್ತಿ ಭಾಗವಹಿಸಿದ್ದರು.

ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಾಡೂಟ ನೀಡಬೇಕು ಎಂದು ಆಗ್ರಹಿಸಿ ಮಂಡ್ಯ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲಿ ಶನಿವಾರ ಮಾಂಸಾಹಾರ ಸೇವನೆ ಮಾಡುವ ಮೂಲಕ ವಿನೂತನವಾಗಿ ಪ್ರತಿಭಟನೆ ನಡೆಸಲಾಯಿತು

ಮಗುವಿಗೆ ಹೆಸರಿಟ್ಟ ಕೋರ್ಟ್

ಪ್ರಜಾವಾಣಿ ವಾರ್ತೆ

ಹುಣಸೂರು (ಮೈಸೂರು ಜಿಲ್ಲೆ): ಗಂಡು ಮಗುವಿಗೆ ಹೆಸರಿಡುವಲ್ಲಿ ದಿವಾಕರ್–ಅಶ್ವಿನಿ ದಂಪತಿ ನಡುವಿನ ಭಿನ್ನಾಭಿಪ್ರಾಯವನ್ನು ನಗರದ 8ನೇ ಜಿಲ್ಲಾ ಮತ್ತು ಸೆಷನ್ಸ್ ಕೋರ್ಟ್ ಬಗೆಹರಿಸಿದೆ.

ಮಗುವಿಗೆ ಪತಿ ‘ಆದಿ’ ಎಂದು, ಪತ್ನಿ ‘ವಂಶಿಕ್’ ಎಂದು ಹೆಸರಿಡಲು ಬಯಸಿದ್ದರು. ಇಬ್ಬರಲ್ಲೂ ಒಮ್ಮತ ಮೂಡಿರಲಿಲ್ಲ. ಪತ್ನಿ ಕೋರ್ಟ್ ಮೆಟ್ಟಿಲೇರಿದ್ದು, ಒಂದೂವರೆ ವರ್ಷದಿಂದ ತವರು ಮನೆಯಲ್ಲಿದ್ದರು.

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರಾದ ಜೈಬುನ್ನಿಸ್ಸಾ, 8ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶ ಗೋವಿಂದಯ್ಯ ಅವರು, ‘ಹೆಸರಿನಲ್ಲಿ ಏನಿದೆ? ಮಗುವಿಗೆ ಸಂಸ್ಕಾರ, ಉತ್ತಮ ಶಿಕ್ಷಣ ಕೊಡಿಸಿ’ ಎಂದು ಶನಿವಾರ ಸಲಹೆ ನೀಡಿದರು.

ಸಹಾಯಕ ಪಬ್ಲಿಕ್ ಪ್ರಾಸಿಕ್ಯೂಟರ್ ಸೌಮ್ಯ ಅವರು ಮಗುವಿಗೆ ‘ಆರ್ಯವರ್ಧನ್’ ಎಂಬ ಹೆಸರು ಸೂಚಿಸಿದರು. ನ್ಯಾಯಾಧೀಶ ಗೋವಿಂದಯ್ಯ, ‘ಕುಟುಂಬದ ಸದಸ್ಯರ ಸಮ್ಮುಖದಲ್ಲಿ ಮಗುವಿಗೆ ಅದೇ ಹೆಸರಿಡಿ’ ಎಂದು ಹೇಳಿ ಮಗುವಿಗೆ ಸಿಹಿ ತಿನ್ನಿಸಿದರು. ದಂಪತಿ ಕೂಡಾ ಸಮ್ಮತಿ ಸೂಚಿಸಿದರು.

ಹೊಳೆನರಸೀಪುರ ತಹಶೀಲ್ದಾರ್ ಸಲಹೆ

‘ಪಾನಿಪುರಿ ಮಾರುವವರು ಹೆಂಡತಿ, ಮಕ್ಕಳೊಂದಿಗೆ ಯಾವಾಗ, ಎಲ್ಲಿಗೆ ಬೇಕಾದರೂ ನಿಶ್ಚಿಂತೆಯಿಂದ ಹೋಗಬಹುದು. ಅಂತಹ ಸಂತೋಷ ಹಾಗೂ ಅವಕಾಶ ನನಗೆ ಇಲ್ಲವೇ ಇಲ್ಲ’

‘ಅಧಿಕ ಕೆಲಸದ ಒತ್ತಡ ಸರ್ಕಾರವನ್ನು ಪ್ರಶ್ನಿಸಿ’

ಹೊಳೆನರಸೀಪುರ (ಹಾಸನ ಜಿಲ್ಲೆ): ‘ರಸ್ತೆಬದಿ ಪಾನಿಪುರಿ, ಗೋಬಿ ಮಂಚೂರಿ ಮಾರುವವರು ನನಗಿಂತ ಸಂತೋಷ ವಾಗಿದ್ದಾರೆ. ಒಮ್ಮೊಮ್ಮೆ ನಾನೂ ಕೆಲಸ ಬಿಟ್ಟು ಪಾನಿಪುರಿ ಮಾರಿಕೊಂಡಿದ್ದರೆ ಹೆಚ್ಚು ನೆಮ್ಮದಿ ಎನಿಸಿಬಿಡುತ್ತದೆ’ ಎಂದು ತಹಶೀಲ್ದಾರ್ ಕೆ.ಕೆ. ಕೃಷ್ಣಮೂರ್ತಿ ಹೇಳಿದರು.

ಶುಕ್ರವಾರ ರಾತ್ರಿ ನಡೆದ ಸರ್ಕಾರಿ ನೌಕರರ ಸಂಘದ ತಾಲ್ಲೂಕು ಘಟಕದ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ಮಾತನಾಡಿದರು.

‘ಅಷ್ಟು ಒತ್ತಡ ಸಹಿಸಿಕೊಂಡು ಕೆಲಸ ಮಾಡುತ್ತಿದ್ದೇವೆ. ಅನೇಕರಿಗೆ ರಕ್ತದೊತ್ತಡ, ಮಧುಮೇಹ ಬಂದು ಲಿವರ್, ಕಿಡ್ನಿ ಎಲ್ಲ ಹಾಳಾಗಿವೆ. ಕಂದಾಯ ಇಲಾಖೆಯ ಎಲ್ಲ ನೌಕರರೂ, ಮೇಲಧಿಕಾರಿಗಳು ಕೇಳುವ ವಿವರಗಳನ್ನು ಅಪ್‌ಲೋಡ್ ಮಾಡೀ ಮಾಡೀ ಡೌನ್ ಆಗಿಬಿಟ್ಟಿದ್ದಾರೆ’ ಎಂದರು.

ಸಂಘಗಳು ಇಲ್ಲದಿದ್ದರೆ ಸರ್ಕಾರಿ ನೌಕರರು ಶೋಷಣೆಗೆ ಒಳಗಾಗುತ್ತಿದ್ದರು. ಅಧಿಕ ಕೆಲಸದ ಒತ್ತಡವನ್ನು ತಪ್ಪಿಸಲು ಸಂಘವು ನಿರಂತರ ಹೋರಾಡಬೇಕು

ಕೆ.ಕೆ. ಕೃಷ್ಣಮೂರ್ತಿ, ತಹಶೀಲ್ದಾರ್, ಹೊಳೆನರಸೀಪುರ

‘ಒಬ್ಬ ವ್ಯಕ್ತಿ ತನಗೆ ಸಾಧ್ಯವಿರುವಷ್ಟು ಒತ್ತಡ ತಡೆದುಕೊಳ್ಳಬಹುದು. ಅತಿಯಾದ ಒತ್ತಡ ಸಹಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ನೌಕರರಿಗೆ ಇಷ್ಟೊಂದು ಒತ್ತಡ ನೀಡುವುದು ಸರಿಯೇ ಎಂದು ಸರ್ಕಾರಿ ನೌಕರರ ಸಂಘದವರು ಎದೆಯುಬ್ಬಿಸಿ, ಧೈರ್ಯವಾಗಿ ಸರ್ಕಾರವನ್ನು ಕೇಳುವಂತಾಗಬೇಕು’ ಎಂದರು.

‘ಶಿಕ್ಷಕರು ವಿದ್ಯಾರ್ಥಿಗಳಿಗೆ ಬರುವ ಮೊಟ್ಟೆಗಳನ್ನು ಬೇಯಿಸಿ, ತಿನ್ನಿಸಿ ಬೆಂದು ಹೋಗುತ್ತಿದ್ದಾರೆ. ಕೆಲವು ಇಲಾಖೆಗಳಲ್ಲಿ 4–5 ಜನ ಮಾಡುವ ಕೆಲಸವನ್ನು ಒಬ್ಬರೋ, ಇಬ್ಬರೋ ಮಾಡುವ ಅನಿವಾರ್ಯತೆ ಇದೆ. ಇತ್ತೀಚಿನ ದಿನಗಳಲ್ಲಿ ಅನೇಕರು ಸರ್ಕಾರಿ ಕೆಲಸದಿಂದ ವಿಮುಖರಾಗುತ್ತಿದ್ದಾರೆ’ ಎಂದು ಹೇಳಿದರು.

‘ಇಂತಹ ಪರಿಸ್ಥಿತಿಯಿಂದ ನೌಕರರನ್ನು ಹೊರತರಲು ಸಂಘಗಳು ಪ್ರಾಮಾಣಿಕವಾಗಿ ಪ್ರಯತ್ನಿಸಬೇಕು’ ಎಂದು ಕಿವಿಮಾತು ಹೇಳಿದರು.

ನಕಲಿ ಖಾತೆ ಫ್ಲ್ಯಾಟ್ ಮಾರಾಟ: ‘ಸುಪ್ರೀಂ’ ಆದೇಶ

ಪ್ರಕರಣ ರದ್ದು: ಹೈಕೋರ್ಟ್ ಆದೇಶ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ನಕಲಿ ಖಾತೆಯ ಫ್ಲ್ಯಾಟ್ ಮಾರಾಟ ಮಾಡಿ ಅನಿವಾಸಿ ಭಾರತೀಯರಿಗೆ ವಂಚಿಸಿದವರ ವಿರುದ್ಧ ದಾಖಲಿಸಿದ್ದ ಕ್ರಿಮಿನಲ್ ಮೊಕದ್ದಮೆಯನ್ನು ರದ್ದುಗೊಳಿಸಿದ ಕರ್ನಾಟಕ ಹೈಕೋರ್ಟ್‌ನ ಆದೇಶವನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಸತೀಶ್ ಚಂದ್ರ ಶರ್ಮಾ ಅವರ ಪೀಠವು, ಜನ ಸಮುದಾಯದ ಮೇಲೆ ಪರಿಣಾಮ ಬೀರುವ ವಂಚನೆ ಮತ್ತು ನಕಲಿ ದಾಖಲೆ ಸೃಷ್ಟಿಯಂತಹ ಗಂಭೀರ ಪ್ರಕರಣಗಳಲ್ಲಿ ಆರೋಪಿಗಳು ಭಾಗಿಯಾಗಿರುವಾಗ, ಸಿಆರ್‌ಪಿಸಿಯ ಸೆಕ್ಷನ್ 482ರ ಅಡಿಯಲ್ಲಿ ಹೈಕೋರ್ಟ್ ತೆಗೆದುಕೊಂಡಿರುವ ಕ್ರಮ ಸರಿಯಲ್ಲ ಎಂದು ಹೇಳಿತು.

ಈ ಪ್ರಕರಣದಲ್ಲಿ, 15 ದೂರುಗಳ ಪೈಕಿ 13ರಲ್ಲಿ ಆರೋಪಿಗಳ ವಿರುದ್ಧ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳಡಿ ದೋಷಾರೋಪ ಪಟ್ಟಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗಿತ್ತು.

ಕರ್ನಾಟಕ ಸರ್ಕಾರ ಮತ್ತು ದೂರುದಾರರ ಮೇಲ್ಮನವಿಗಳನ್ನು ಪರಿಗಣಿಸಿದ ಪೀಠವು, ದೂರುದಾರರಿಗೆ ಯಾವುದೇ ವಾದ ಮಂಡಿಸಲು ಹೈಕೋರ್ಟ್ ಅವಕಾಶ ನೀಡದೆ ಮತ್ತು ಈಗಾಗಲೇ ಹೆಚ್ಚಿನ ಪ್ರಕರಣಗಳಲ್ಲಿ ಚಾರ್ಜ್‌ಶೀಟ್‌ಗಳನ್ನು ಸಲ್ಲಿಸಿರುವ ಅಂಶ ಪರಿಗಣಿಸದಿರುವುದನ್ನು, ವಿಚಾರಣೆ ರದ್ದುಗೊಳಿಸಲು ಯಾವುದೇ ಕಾರಣಗಳನ್ನು ನೀಡದಿರುವುದನ್ನು ಗಮನಿಸಿತು. ಹಲವು ಪ್ರಕರಣಗಳಲ್ಲಿ ದೂರುದಾರರು, ಪ್ರಕರಣವನ್ನು ಇತ್ಯರ್ಥಗೊಳಿಸಿದ್ದರಿಂದ ಆದೇಶವನ್ನು ಪ್ರಶ್ನಿಸಿಲ್ಲ ಎಂಬ ಆರೋಪಿಗಳ ವಾದವನ್ನು ಪೀಠವು ತಳ್ಳಿಹಾಕಿತು.

ಏನೀ ಪ್ರಕರಣ?

ದೂರುಗಳ ಪ್ರಕಾರ, ಆರೋಪಿ ಜೋಸೆಫ್ ಚಾಕೊ ಮತ್ತು ಇತರರು ಅಗತ್ಯ ಎಲ್ಲ ಮೂಲಸೌಕರ್ಯಗಳೊಂದಿಗೆ ಜಾಗತಿಕ ಗುಣಮಟ್ಟಕ್ಕೆ ಸಮನಾಗಿ ಲೇಔಟ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಎಂದು ಬಿಂಬಿಸುವ ಮೂಲಕ ಎನ್‌ಆರ್‌ಐಗಳು ನಿವೇಶನ ಖರೀದಿಸುವಂತೆ ಮಾಡಿದ್ದರು. ಅಲ್ಲದೆ, ದೂರುದಾರರು ಚಾಕೊ ಜತೆ ಕ್ರಯಪತ್ರ ಕೂಡ ಮಾಡಿಕೊಂಡಿದ್ದರು. ಟೌನ್‌ಶಿಪ್‌ಗಳಲ್ಲಿ ಉತ್ತಮ ರಸ್ತೆಗಳು, ಸಾಮಾನ್ಯ ಸಮುದಾಯ ಪ್ರದೇಶ, ಮನರಂಜನಾ ಸೌಲಭ್ಯಗಳು, ಈಜುಕೊಳ ಇತ್ಯಾದಿಗಳಂತಹ ಹಲವು ಸಾಮಾನ್ಯ ಮೂಲ ಸೌಲಭ್ಯಗಳನ್ನು ಒದಗಿಸುವ ಭರವಸೆಯೊಂದಿಗೆ ಫ್ಲ್ಯಾಟ್‌ಗಳ ಖಾತಾ ಸಂಖ್ಯೆಯೊಂದಿಗೆ ನಿವೇಶನಗಳನ್ನು ಎನ್‌ಆರ್‌ಐಗಳಿಗೆ ಮಾರಾಟ ಮಾಡಲಾಯಿತು. ಆದರೆ, ದೀರ್ಘ ಸಮಯದವರೆಗೆ ಟೌನ್‌ಶಿಪ್‌ನಲ್ಲಿ ಯಾವುದೇ ಅಭಿವೃದ್ಧಿ ಚಟುವಟಿಕೆಗಳನ್ನು ಚಾಕೊ ಪ್ರಾರಂಭಿಸಲಿಲ್ಲ. ಈ ಬಗ್ಗೆ ವಿಚಾರಣೆ ನಡೆಸಿದಾಗ, ಮೇಲ್ಮನವಿದಾರರು ಖರೀದಿಸಿದ್ದ ಫ್ಲ್ಯಾಟ್‌ಗಳು ನಕಲಿ ಖಾತಾ ಸಂಖ್ಯೆ ಹೊಂದಿದ್ದವು ಎಂಬುದು ಗೊತ್ತಾಗಿದೆ.

ಲೀಲಾವತಿ ಬೈಪಾಡಿತ್ತಾಯ ಇನ್ನಿಲ್ಲ

ಪ್ರಜಾವಾಣಿ ವಾರ್ತೆ

ಮಂಗಳೂರು: ಯಕ್ಷಗಾನದ ಮೊದಲ ಮಹಿಳಾ ಭಾಗವತರು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದ, ತಮ್ಮ ಕಂಠ ಸಿರಿಯಿಂದಲೇ ಕರಾವಳಿಯಲ್ಲಿ ಮನೆಮಾತಾಗಿದ್ದ ಲೀಲಾವತಿ ಬೈಪಾಡಿತ್ತಾಯ (77) ಅವರು ಶನಿವಾರ ನಿಧನರಾದರು.

ಕಾಸರಗೋಡು ಜಿಲ್ಲೆಯ ಮಧೂರಿನಲ್ಲಿ ಹುಟ್ಟಿ ಬೆಳೆದ ಲೀಲಾವತಿ ಅವರು ತೆಂಕುತಿಟ್ಟಿನ ಹಿಮ್ಮೇಳ ಗುರುಗಳಾದ ಹರಿನಾರಾಯಣ ಬೈಪಾಡಿತ್ತಾಯ ಅವರನ್ನು ವಿವಾಹವಾಗಿದ್ದರು.

ಹೆಣ್ಣು ಮಕ್ಕಳು ಯಕ್ಷಗಾನ ನೋಡುವುದಕ್ಕೂ ಅವಕಾಶವಿಲ್ಲದ ಕಾಲದಲ್ಲಿ ಅವರು ತೆಂಕು ತಿಟ್ಟಿನ ಅಗ್ರಮಾನ್ಯ ಭಾಗವತರಲ್ಲೊಬ್ಬರಾಗಿ ಹೆಸರು ಗಳಿಸಿದ್ದರು. ಪತಿಯೊಂದಿಗೆ ಅವರು ಸುಬ್ರಹ್ಮಣ್ಯ, ಪುತ್ತೂರು, ಕದ್ರಿ, ಕರ್ನಾಟಕ, ಅರುವ (ಅಳದಂಗಡಿ), ಬಪ್ಪನಾಡು, ಕುಂಬ್ಳೆ, ತಲಕಳ ಮುಂತಾದ ಡೇರೆ-ಬಯಲಾಟ ಮೇಳಗಳಲ್ಲಿ ನಿರಂತರ 20 ವರ್ಷ ಭಾಗವತರಾಗಿ ಕೆಲಸ ಮಾಡಿದ್ದರು. 17ಕ್ಕೂ ಹೆಚ್ಚು ವರ್ಷ ಅತಿಥಿ ಕಲಾವಿದರಾಗಿಯೂ ಸೇವೆ ಸಲ್ಲಿಸಿದ್ದರು. ಯಕ್ಷಗಾನದ ವೃತ್ತಿ ಮೇಳಗಳಲ್ಲಿ ತಿರುಗಾಟ ನಡೆಸಿದ ಏಕೈಕ ಮಹಿಳಾ ಭಾಗವತರು ಎಂಬ ಶ್ರೇಯವೂ ಅವರಿಗಿದೆ.

ಲೀಲಾವತಿ ಅವರು ಅನೇಕ ಮಹಿಳೆಯರಿಗೆ ಯಕ್ಷಗಾನದ ಭಾಗವತಿಕೆ ಕಲಿಸಿದ್ದಾರೆ. ಧರ್ಮಸ್ಥಳದ ಯಕ್ಷಗಾನ ತರಬೇತಿ ಕೇಂದ್ರದಲ್ಲಿ 10 ವರ್ಷ ಹಾಗೂ ಕಟೀಲು, ಮೂಡುಬಿದಿರೆ, ಬಜಪೆ ಮೊದಲಾದ ಕಡೆ ಯಕ್ಷಗುರುಗಳಾಗಿ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕ ಶಾಸ್ತ್ರೀಯ ಸಂಗೀತದ ಪಾಠ ಮಾಡಿದ್ದಾರೆ.

ಬಡತನದಿಂದಾಗಿ ಶಾಲೆಗೆ ಹೋಗದ ಅವರು ಅಣ್ಣನಿಂದ, ಅಕ್ಕ ಪಕ್ಕದವರ ಸಹಾಯದಿಂದ ಅಕ್ಷರಾಭ್ಯಾಸ ಮಾಡಿದ್ದರು. ಬಳಿಕ ‘ಹಿಂದಿ ವಿಶಾರದ’ ಪದವಿಯನ್ನು ಪಡೆದಿದ್ದರು.

ಅವರಿಗೆ ರಾಜ್ಯ ಸರ್ಕಾರವು ಈ ವರ್ಷ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಹಾಗೂ 2010ನೇ ಸಾಲಿನಲ್ಲಿ ಕರ್ನಾಟಕದ ಯಕ್ಷಗಾನ ಅಕಾಡೆಮಿ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. 2012ರಲ್ಲಿ ಸಾಧಕ ಹಿರಿಯ ನಾಗರಿಕ ಪ್ರಶಸ್ತಿಗೂ ಅವರು ಭಾಜನರಾಗಿದ್ದರು. ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಉಳ್ಳಾಲ ರಾಣಿ ಅಬ್ಬಕ್ಕ ಪ್ರಶಸ್ತಿಯೂ ಸೇರಿದಂತೆ ಅನೇಕ ಸಂಘ ಸಂಸ್ಥೆಗಳಿಂದ ಅವರು ಗೌರವಗಳಿಗೆ ಪಾತ್ರರಾಗಿದ್ದಾರೆ. ಅವರಿಗೆ ಪತಿ ಹರಿನಾರಾಯಣ ಬೈಪಾಡಿತ್ತಾಯ, ಪುತ್ರರಾದ ‘ಪ್ರಜಾವಾಣಿ’ ಡಿಜಿಟಲ್ ವಿಭಾಗದ ಸಂಪಾದಕ ಅವಿನಾಶ ಬೈಪಾಡಿತ್ತಾಯ ಹಾಗೂ ಗುರುಪ್ರಸಾದ ಬೈಪಾಡಿತ್ತಾಯ ಇದ್ದಾರೆ.

ಮಾಪಣ್ಣ ಹದನೂರ ನಿಧನ

ಕಲಬುರಗಿ: ಮಾದಿಗ ದಂಡೋರ ಸಂಘಟನೆಯ ಸಂಸ್ಥಾಪಕ ರಾಜ್ಯ ಅಧ್ಯಕ್ಷರಾಗಿದ್ದ ಮಾಪಣ್ಣ ಹದನೂರ (62) ಶನಿವಾರ ಇಲ್ಲಿ ನಿಧನರಾದರು. ಅವರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಭಾನುವಾರ ನಂದೂರ (ಬಿ) ಗ್ರಾಮದಲ್ಲಿ ಅಂತ್ಯಕ್ರಿಯೆ ನಡೆಯಲಿದೆ.

ವಿಜಯೇಂದ್ರ ಬಣದ ಸಭೆ ಇಂದು

ದಾವಣಗೆರೆ: ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪರ ಗುರುತಿಸಿಕೊಂಡಿರುವ ಬಣದವರು ನಗರದಲ್ಲಿ ಸಮಾವೇಶ ನಡೆಸುವ ಬಗ್ಗೆ ಚರ್ಚಿಸಲು ಭಾನುವಾರ ಇಲ್ಲಿನ ಸಾಯಿ ಇಂಟರ್‌ನ್ಯಾಷನಲ್ ಹೋಟೆಲ್‌ನಲ್ಲಿ ಬೆಳಿಗ್ಗೆ 11 ಗಂಟೆಗೆ ಪೂರ್ವಭಾವಿ ಸಭೆ ನಡೆಸಲಿದ್ದಾರೆ ಸಭೆ ನಡೆಸಲಿದ್ದಾರೆ.

ರಾಜ್ಯದಲ್ಲೇ ದಿನದ 24 ಗಂಟೆ ನೀರು ಪೂರೈಕೆ ಹೊಂದಿದ ಮೊದಲ ಗ್ರಾಮ

ಗಣಜಲಖೇಡದಲ್ಲಿ ಐತಿಹಾಸಿಕ ‘ಜಲಕ್ರಾಂತಿ’

• ಪ್ರಭು ಬ. ಅಡವಿಹಾಳ

ಗಣಜಲಖೇಡ (ಕಲಬುರಗಿ ಜಿಲ್ಲೆ): ಆ ಊರಿನವರೊಂದಿಗೆ ನೆಂಟಸ್ತನಕ್ಕೆ ಜನ ಹಿಂಜರಿಯುತ್ತಿದ್ದರು. ನಿಗದಿಯಾಗಿದ್ದ ಕೆಲ ಮದುವೆಗಳೂ ಮುರಿದುಬಿದ್ದಿದ್ದವು. ಇದೆಲ್ಲದಕ್ಕೂ ಕಾರಣವಾಗಿದ್ದು ಅದೊಂದೇ ಸಮಸ್ಯೆ. ‘ಜೀವಜಲ’ದ ಕೊರತೆ.

ಕಲಬುರಗಿ ನಗರದಿಂದ 14 ಕಿ.ಮೀ ದೂರದಲ್ಲಿರುವ ಗಣಜಲಖೇಡ ಗ್ರಾಮ ಶತಮಾನಗಳಿಂದ ಹನಿ ಹನಿ ನೀರಿಗೂ ಪರಿತಪಿಸುತ್ತಿತ್ತು. ಬೇಸಿಗೆ ಎಂದರೆ ಗ್ರಾಮಸ್ಥರು ಭಯಭೀತರಾಗುತ್ತಿದ್ದರು. ಈಗ ತಿಂಗಳಿನಿಂದ ಚಿತ್ರಣ ಬದಲಾಗಿದೆ. ಜಲ ಜೀವನ್ ಮಿಷನ್‌ನಿಂದಾಗಿ (ಜೆಜೆಎಂ) ನೆಮ್ಮದಿ ಆವರಿಸಿದೆ.

431 ಮನೆಗಳಿರುವ ಗಣಜಲಖೇಡ ಗ್ರಾಮದಲ್ಲಿ ಸುಮಾರು 2 ಸಾವಿರಕ್ಕೂ ಅಧಿಕ ಜನಸಂಖ್ಯೆಯಿದೆ. ಈ ಊರಿಗೆ ಯಾವುದೇ ಜಲಮೂಲಗಳಿಲ್ಲ. ಇದ್ದ ಸಣ್ಣ ಹಳ್ಳವೂ ಬತ್ತಿ ದಶಕಗಳೇ ಕಳೆದಿವೆ. ಹೀಗಾಗಿ ನೀರು ಅಪರೂಪವಾಗಿತ್ತು. ‘ಮಧ್ಯರಾತ್ರಿ 1 ಗಂಟೆಯಿಂದಲೇ ಮನೆಗೊಬ್ಬರು ರೈತರ ಬಾವಿಗಳಿಂದ ನೀರು ತರಲು ಸಜ್ಜಾಗುತ್ತಿದ್ದೆವು’ ಎನ್ನುತ್ತಾರೆ ಗ್ರಾಮದ ಹಿರಿಯ ಈರಪ್ಪ ಧರಿ.

‘ದುಡ್ಡಿದ್ದವರು ಬ್ಯಾರಲ್‌ಗೆ ₹50 ಕೊಟ್ಟು ಖರೀದಿಸುತ್ತಿದ್ದರು. ದ್ವಿಚಕ್ರ ವಾಹನ ಇದ್ದವರು ಪಕ್ಕದ ಊರುಗಳಿಗೆ ಹೋಗಿ ತರುತ್ತಿದ್ದರು. ಬಡವರು ಬತ್ತಿಹೋದ ಬಾವಿಯಲ್ಲಿ ಒರತೆ ತೋಡಿ ಗಂಟೆಗಟ್ಟಲೇ ಕುಳಿತು ಲೋಟದಿಂದ ನೀರು ತುಂಬಿ ತರುತ್ತಿದ್ದರು. ಬಾವಿ ಹೊಂದಿದ್ದ ಕೆಲ ರೈತರು ನೀರು ಕೊಡುತ್ತಿದ್ದರು, ಕೆಲವರು ನಿರಾಕರಿಸುತ್ತಿದ್ದರು. ಬೇಸಿಗೆ ಬರುತ್ತಿದ್ದಂತೆಯೇ ಜಾನುವಾರುಗಳನ್ನು ಮಾರಿ ಬಿಡುತ್ತಿದ್ದೆವು’ ಎಂದು ಕಹಿ ನೆನಪುಗಳನ್ನು ಮೆಲುಕು ಹಾಕಿದರು ಈರಪ್ಪ.

ಗ್ರಾಮ ಪಂಚಾಯಿತಿಯ ಯುವ, ಉತ್ಸಾಹಿ ಅಧ್ಯಕ್ಷ ಶ್ರೀಧರ ವಿಶ್ವನಾಥ ಪಾಟೀಲ ಅವರಿಂದ ಈಗ ಗ್ರಾಮದಲ್ಲಿ ‘ಜಲಕ್ರಾಂತಿ’ ಆಗಿದೆ. ಜಲ ಜೀವನ್ ಮಿಷನ್ ಗ್ರಾಮದಲ್ಲಿ ಯಶಸ್ವಿಯಾಗಿದ್ದು, ಗ್ರಾಮದಲ್ಲಿ ದಿನದ 24 ಗಂಟೆಯೂ ಗಂಗೆ ಮನೆ, ಮನೆಗೂ ಹರಿಯುತ್ತಿದ್ದಾಳೆ. ಜಲ ಜೀವನ್ ಮಿಷನ್ ಸಂಪೂರ್ಣ ಯಶಸ್ವಿಯಾದ ರಾಜ್ಯದ ಮೊದಲ ಊರು ಎಂಬ ಹೆಗ್ಗಳಿಕೆಗೆ ಈ ಗ್ರಾಮ ಪಾತ್ರವಾಗಿದೆ.

ಗಣಜಲಖೇಡದಲ್ಲಿ ನೀರು ಪೂರೈಕೆ ವೇಳೆ ಗ್ರಾಮಸ್ಥರು ಹರ್ಷ ವ್ಯಕ್ತಪಡಿಸಿದರು

ಮುಖ್ಯಾಂಶಗಳು

- **ಜೆಜೆಎಂ ಯೋಜನೆಯಡಿ ಗ್ರಾಮದಲ್ಲಿ ₹1.63 ಕೋಟಿ ವೆಚ್ಚ**
- **ನ.12ರಿಂದ ಪ್ರತಿ ಮನೆಗೂ ನೀರು ಪೂರೈಕೆ**
- **ನಿರ್ವಹಣೆಗೆ ₹100 ಶುಲ್ಕ ನಿಗದಿ, ಮಿತಬಳಕೆಗೆ ಜಾಗೃತಿ**

ಗ್ರಾ.ಪಂ. ಚುನಾವಣೆಗೆ ಸ್ಪರ್ಧಿಸಿದಾಗ ನೀರು ಒದಗಿಸುವ ಭರವಸೆ ನೀಡಿದ್ದೆ. ಆಯ್ಕೆಯಾದ ನಂತರ ಅದನ್ನು ಈಡೇರಿಸಿದ ತೃಪ್ತಿಯಿದೆ.

ಶ್ರೀಧರ ವಿಶ್ವನಾಥ ಪಾಟೀಲ ಗ್ರಾ.ಪಂ. ಅಧ್ಯಕ್ಷ

ದಿನದ 24 ಗಂಟೆ ನೀರು ಪೂರೈಕೆ ಸೌಲಭ್ಯವಿರುವ ರಾಜ್ಯದ ಮೊದಲ ಗ್ರಾಮ ಎಂಬ ಹಿರಿಮೆಗೆ ಜಿಲ್ಲೆಯ ಗಣಜಲಖೇಡ ಪಾತ್ರವಾಗಿದೆ. ಇದು ಹೆಮ್ಮೆಯ ಸಂಗತಿ

ಭಂವರ್‌ಸಿಂಗ್ ಮೀನಾ ಜಿ.ಪಂ.ಸಿಇಒ

‘ಭಗೀರಥ’ನಾದ ಯುವ ಅಧ್ಯಕ್ಷ


ಶ್ರೀಧರ ಪಾಟೀಲ

ಗಣಜಲಖೇಡ ಗ್ರಾಮ ಪಕ್ಕದ ಕುಮಸಿ ಪಂಚಾಯಿತಿಗೆ ಸೇರಿದೆ. ಗ್ರಾಮದ ಶ್ರೀಧರ ಪಾಟೀಲ ಅವರೇ ಅಧ್ಯಕ್ಷರು. ಭೂಗರ್ಭಶಾಸ್ತ್ರಜ್ಞರನ್ನು ಕರೆಯಿಸಿ ಗ್ರಾಮದ ಸುತ್ತಮುತ್ತ ಅಂತರ್ಜಲ ಮೂಲವುಳ್ಳ ಜಾಗ ಹುಡುಕಿದರು. ಸ್ವಂತ ಹಣ ₹1.5 ಲಕ್ಷ, ಶಾಸಕ ಬಸವರಾಜ ಮತ್ತಿಮಡು ಅವರಿಂದ ₹1 ಲಕ್ಷ ಪಡೆದು ₹2.5 ಲಕ್ಷ ಮೊತ್ತದಲ್ಲಿ 5 ಗುಂಟೆ ಜಾಗ ಖರೀದಿಸಿದರು. ಅಲ್ಲಿ 43 ಅಡಿ ಆಳದ ತೆರೆದ ಬಾವಿ ಕೊರೆಯಿಸಿ, ಅಲ್ಲಿಂದ ಗ್ರಾಮದ ಓವರ್‌ಹೆಡ್ ಟ್ಯಾಂಕ್‌ಗೆ ಸಂಪರ್ಕ ಕಲ್ಪಿಸಿದರು.

ಈಗ ಅಲ್ಲಿಂದ ದಿನದ 24 ಗಂಟೆ ನಲ್ಲಿಗಳ ಮೂಲಕ ನೀರು ಪೂರೈಕೆ ಆಗುತ್ತಿದೆ. ಯುವ ಅಧ್ಯಕ್ಷನ ಸಾಧನೆಗೆ ಮೆಚ್ಚಿ ಜ. 26ರ ಗಣರಾಜ್ಯೋತ್ಸವ ಸಮಾರಂಭದಲ್ಲಿ ಪಾಲ್ಗೊಳ್ಳಲು ದೆಹಲಿಯಿಂದ ಬುಲಾವ್ ಬಂದಿದೆ.

ಕೊಳವೆಬಾವಿ ಕೊರೆಸಲು ‘ಗೃಹಲಕ್ಷ್ಮಿ’ ಹಣ

ಪ್ರಜಾವಾಣಿ ವಾರ್ತೆ

ಗಜೇಂದ್ರಗಡ (ಗದಗ ಜಿಲ್ಲೆ): ‘ಗೃಹಲಕ್ಷ್ಮಿ’ ಯೋಜನೆ ನೆರವಿನ ಹಣವನ್ನು ಪಟ್ಟಣದ ಅತ್ತೆ ಮತ್ತು ಸೊಸೆ ಇಬ್ಬರೂ ಜಮೀನಿನಲ್ಲಿ ಕೊಳವೆಬಾವಿ ಕೊರೆಸಲು ಸದ್ಬಳಕೆ ಮಾಡಿಕೊಂಡಿದ್ದಾರೆ.

ಪಟ್ಟಣದ ಮಾಲ್ದಾರ್ ಕುಟುಂಬದ ಅತ್ತೆ ಮಾಬುಬೀ ಮತ್ತು ಸೊಸೆ ರೋಷನ್‌ಬೇಗಂ ಇಬ್ಬರೂ ಗೃಹಲಕ್ಷ್ಮಿ ಯೋಜನೆಯ ಒಟ್ಟು ₹44 ಸಾವಿರ ಹಣವನ್ನು ತಮ್ಮ 3 ಎಕರೆ ಜಮೀನಿನಲ್ಲಿ ಕೊಳವೆಬಾವಿ ಕೊರೆಯಿಸಲು ಬಳಸಿದ್ದಾರೆ.

‘ಕೊಳವೆಬಾವಿ ಕೊರೆಸಲು ₹60 ಸಾವಿರ ಖರ್ಚಾಗಿದ್ದು, ಉಳಿದ ₹14 ಸಾವಿರ ಹಣವನ್ನು ಮಾಬುಬೀ ಅವರ ಮಗ ನಜೀರ್ ಮಾಲ್ದಾರ್ ಭರಿಸಿದ್ದಾರೆ.

ಗಜೇಂದ್ರಗಡ ಪಟ್ಟಣದ ಮಾಬುಬೀ ಹಾಗೂ ರೋಷನ್‌ಬೇಗಂ ಅವರು ಗೃಹಲಕ್ಷ್ಮಿ ಯೋಜನೆಯಿಂದ ಬಂದ ಹಣವನ್ನು ಕೊಳವೆಬಾವಿ ಕೊರೆಯಿಸಲು ಬಳಸಿದ್ದಾರೆ

‘ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ‘ಗೃಹಲಕ್ಷ್ಮಿ’ ಯೋಜನೆ ನಮ್ಮಂತಹ ಬಡ ಕುಟುಂಬಗಳಿಗೆ ಪ್ರಯೋಜನಕಾರಿ ಆಗಿದೆ. ಡಿಸೆಂಬರ್ 10ರಂದು ಕೊಳವೆಬಾವಿ ಕೊರೆಯಿಸಿದ್ದು, ಒಂದೂವರೆ ಇಂಚು ನೀರು ಬಂದಿದೆ’ ಎಂದು ನಜೀರ್ ಮಾಲ್ದಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100ಕ್ಕೆ ₹635
12 ಕ್ಕೆ ₹82
ಮೈಸೂರು
100ಕ್ಕೆ ₹637

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್‌-4 ₹187
ಆರ್‌ಎಸ್‌ಎಸ್‌-5 ₹182
ಗುಡ್ ಲಾಟ್ ₹177
(ಪ್ರತಿ ಕೆ.ಜಿಗೆ)

ಸಂಕ್ಷಿಪ್ತ ಸುದ್ದಿ

'ಇಸ್ತಾಂಬುಲ್‌ನಿಂದ ಪ್ರಯಾಣಿಕರನ್ನು ಕರೆತರಲು ಕ್ರಮ'

ನವದೆಹಲಿ (ಪಿಟಿಐ): ಇಸ್ತಾಂಬುಲ್ ವಿಮಾನ ನಿಲ್ದಾಣದಲ್ಲಿ ಸಿಲುಕಿರುವ ಪ್ರಯಾಣಿಕರನ್ನು ಕರೆತರಲು ಎರಡು ವಿಮಾನಗಳನ್ನು ಕಳುಹಿಸಲಾಗಿದೆ ಎಂದು ಇಂಡಿಗೊ ವಿಮಾನಯಾನ ಕಂಪನಿ ತಿಳಿಸಿದೆ.

ವಿಮಾನದಲ್ಲಿ ಕಾಣಿಸಿಕೊಂಡಿದ್ದ ತಾಂತ್ರಿಕ ಸಮಸ್ಯೆಯಿಂದಾಗಿ ಇಸ್ತಾಂಬುಲ್‌ನಿಂದ ದೆಹಲಿಗೆ ಬರಬೇಕಿದ್ದ ವಿಮಾನದ ಹಾರಾಟವನ್ನು ಶುಕ್ರವಾರ ರದ್ದುಪಡಿಸಲಾಗಿತ್ತು. ಇದರಿಂದ ನೂರಾರು ಪ್ರಯಾಣಿಕರು ಇಸ್ತಾಂಬುಲ್‌ನಲ್ಲಿಯೇ ಉಳಿಯುವಂತಾಗಿದೆ. ಪ್ರತಿದಿನ ದೆಹಲಿ ಮತ್ತು ಮುಂಬೈನಿಂದ ಇಂಡಿಗೊದ ಎರಡು ವಿಮಾನಗಳು ಇಸ್ತಾಂಬುಲ್‌ಗೆ ಕಾರ್ಯಾಚರಣೆ ನಡೆಸುತ್ತವೆ. ಇವುಗಳ ಹಾರಾಟದ ವಿಳಂಬದಿಂದಾಗಿ ಪ್ರಯಾಣಿಕರು ತೊಂದರೆಗೆ ಸಿಲುಕಿದ್ದಾರೆ.

ಎ.ಐ ಗಸ್ತು ವಾಹನ ನಿಯೋಜನೆ

ನವದೆಹಲಿ (ಪಿಟಿಐ): ಹೆದ್ದಾರಿಗಳಲ್ಲಿ ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) 'ರಾಜಮಾರ್ಗ ಸಾಥಿ' ಹೆಸರಿನ ಕೃತಕ ಬುದ್ಧಿಮತ್ತೆ ತಂತ್ರಜ್ಞಾನ (ಎ.ಐ) ಅಳವಡಿಸಿರುವ ರಸ್ತೆ ಗಸ್ತು ವಾಹನಗಳ (ಆರ್‌ಪಿವಿ) ನಿಯೋಜನೆಗೆ ನಿರ್ಧರಿಸಿದೆ.

ಹೆದ್ದಾರಿಗಳಲ್ಲಿ ಸಂಭವಿಸುವ ಅವಘಡಗಳಿಗೆ ತುರ್ತಾಗಿ ಸ್ಪಂದಿಸಲು ಮತ್ತು ಮೇಲ್ವಿಚಾರಣೆ ಮಾಡಲು ಈ ವಾಹನಗಳು ನೆರವಾಗಲಿವೆ ಎಂದು ಪ್ರಾಧಿಕಾರ ತಿಳಿಸಿದೆ.

ಈ ವಾಹನಗಳಲ್ಲಿ ಎ.ಐ ವಿಡಿಯೊ ವಿಶ್ಲೇಷಣಾ ಸಾಧನಗಳನ್ನು ಅಳವಡಿಕೆ ಮಾಡಲಾಗಿದೆ. ಇವು ಹೆದ್ದಾರಿಗಳಲ್ಲಿನ ಬಿರುಕುಗಳು, ಗುಂಡಿಗಳನ್ನು ಪತ್ತೆ ಹಚ್ಚಲಿವೆ. ವಾಹನಗಳ ಸುಗಮ ಸಂಚಾರ ಮತ್ತು ಪ್ರಯಾಣಿಕರ ಸುರಕ್ಷತೆಗೆ ಇದರಿಂದ ನೆರವಾಗಲಿದೆ ಎಂದು ಹೇಳಿದೆ.

ವೈಕುಂಠ ಸಮಾರಾಧನೆ

ಸರಲಾ ಕುಲಕರ್ಣಿ (ಸತ್ಯಭಾಮ)
ನಿವೃತ್ತ ಶಾಲಾ ಶಿಕ್ಷಕಿ, ಧಾರವಾಡ
(ದಿವಂಗತ ಕೃಷ್ಣಮೂರ್ತಿ ಬಿ. ಬಿಸ್ತಪ್ಪನಾಯಕನವರ್‌ರವರ ಧರ್ಮಪತ್ನಿ)
(ಗಣೇಶ್‌ರಾವ್ ಕುಲಕರ್ಣಿ ಅವರ ಪುತ್ರಿ)
ತಾ|| 05-12-2024ರಂದು ಮಧ್ಯಾಹ್ನ 1-30ಕ್ಕೆ ಬೆಂಗಳೂರಿನಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.
ವೈಕುಂಠ ಸಮಾರಾಧನೆ :
ತಾ|| 17-12-2024 ರಂದು ನಮ್ಮ ಸ್ವಗೃಹ ನಂ.ಎಸ್3, #107 ಸುಕೃತಾ ಅಪಾರ್ಟ್‌ಮೆಂಟ್ 13ನೇ ಮೈನ್, ಬಿನ್ನಿ ಲೇಔಟ್, 2ನೇ ಸ್ಟೇಜ್, ವಿಜಯನಗರ, ಬೆಂಗಳೂರು-560 040
ಇಂತಿ ದುಃಖತಪ್ತರು : ಮಗ-ಅರವಿಂದ್ ಕೆ.ಬಿ, ಸೊಸೆ-ಸಾವಿತ್ರಿ, ಮಗಳು-ಸುಷ್ಮಾ, ಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು
ದೂರವಾಣಿ : 96208 69322

14ನೇ ಪುಣ್ಯಸ್ಮರಣೆ

ಪಿ.ವಿ. ಕೃಷ್ಣಪ್ಪನವರು
ತಾಲ್ಲೂಕು ಬೋರ್ಡ್ ಮಾಜಿ ಅಧ್ಯಕ್ಷರು
(ಪಟೇಲ್ ವೀರಪ್ಪನವರ ಮಗ ಅಮೃತಹಳ್ಳಿ, ಬೆಂಗಳೂರು-92)
ನೀವು ನಮ್ಮನ್ನಗಲಿ ಇಂದಿಗೆ 14ವರ್ಷಗಳು ಗತಿಸಿದವು.
ನಿಮ್ಮ ಸರಳ ಸಜ್ಜನಿಕೆ, ನೇರ ನಡೆನುಡಿ, ನಿಮ್ಮ ಆದರ್ಶ ಜೀವನ ನಮಗೆಲ್ಲ ಮಾರ್ಗದರ್ಶಕವಾಗಿದೆ.
ಭಗವಂತನು ನಿಮ್ಮ ಆತ್ಮಕ್ಕೆ ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ.
ಪಟೇಲ್ ವಂಶಸ್ಥರು ಮತ್ತು ಕುಟುಂಬದವರು

ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿಕೆ

ಅಂಚೆ ಕಚೇರಿ ಡಿಜಿಟಲೀಕರಣ

ನವದೆಹಲಿ (ಪಿಟಿಐ): 'ಅಂಚೆ ಇಲಾಖೆಯಲ್ಲಿ ವಾಣಿಜ್ಯ ವಹಿವಾಟು ಹೆಚ್ಚಳಕ್ಕೆ ಒತ್ತು ನೀಡುವ ನಿಟ್ಟಿನಲ್ಲಿ ಶೀಘ್ರವೇ ಇಲಾಖೆಯ ಡಿಜಿಟಲೀಕರಣಕ್ಕೆ ಸರ್ಕಾರ ಕ್ರಮಕೈಗೊಳ್ಳಲಿದೆ' ಎಂದು ಕೇಂದ್ರ ಸಂವಹನ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದ್ದಾರೆ.

ಶನಿವಾರ ನಡೆದ ಭಾರತೀಯ ಅಂಚೆ ಮತ್ತು ದೂರಸಂಪರ್ಕ ಲೆಕ್ಕಪತ್ರ ಮತ್ತು ಹಣಕಾಸು ಸೇವೆಗಳ ಕಚೇರಿಯ 50ನೇ ಸಂಸ್ಥಾಪನಾ ದಿನಾಚರಣೆಯಲ್ಲಿ ಅವರು ಮಾತನಾಡಿದರು.

'ಪ್ರಸ್ತುತ ದೇಶದಲ್ಲಿ ಇ-ಕಾಮರ್ಸ್ ವಲಯವು ವೇಗವಾಗಿ ಬೆಳವಣಿಗೆ ಕಾಣುತ್ತಿದೆ. ಈ ವಹಿವಾಟಿನ ಹಾದಿಯಲ್ಲಿ ಸಾಗಲು ಅಂಚೆ ಕಚೇರಿಗಳಿಗೆ ಡಿಜಿಟಲ್ ಸ್ಪರ್ಶ ನೀಡಲಾಗುವುದು' ಎಂದರು.

ಇ-ಕಾಮರ್ಸ್ ವಲಯದ ಲಾಭ ಪಡೆಯಬೇಕಾದರೆ ನಾವು ಸಾಗಣೆ ಕಂಪನಿಯ ಮಾದರಿಯಲ್ಲಿ ಸೇವೆ ಒದಗಿಸಬೇಕಿದೆ. ಆ ಮೂಲಕ ಜಾಗತಿಕ ಮಟ್ಟದಲ್ಲಿ ಮುಂಚೂಣಿ ಸ್ಥಾನವನ್ನು ಕಾಯ್ದುಕೊಳ್ಳಬೇಕಿದೆ ಎಂದು ಹೇಳಿದರು.

ದೇಶದಲ್ಲಿ 1.64 ಲಕ್ಷ ಅಂಚೆ ಕಚೇರಿಗಳಿವೆ. ಜಾಗತಿಕಮಟ್ಟದಲ್ಲಿ ಅತಿದೊಡ್ಡ ವಿತರಣಾ ಜಾಲ ಇದಾಗಿದೆ ಎಂದು ಹೇಳಿದರು.

'ಗ್ರಾಮೀಣ ಅಂಚೆ ಸೇವಕರು ಮನೆಯಿಂದ ಮನೆಗೆ ಸೇವೆ ನೀಡುತ್ತಿದ್ದಾರೆ. ಹಾಗಾಗಿ, ಅಂಚೆ ಸೇವೆಯು ಜನ ಸೇವೆಯಾಗಿದೆ. ಎಲ್ಲಾ ನಾಗರಿಕರಿಗೆ ಡಿಜಿಟಲ್ ಸೇವೆ ತಲುಪಿಸುವ ಗುರಿ ಹೊಂದಲಾಗಿದೆ' ಎಂದು ತಿಳಿಸಿದರು.

ಭಾರತವು ದೂರಸಂಪರ್ಕ ವಿಭಾಗದಲ್ಲಿ ಅತ್ಯುತ್ತಮ ಸಾಧನೆ ಮಾಡಿದೆ. ಭವಿಷ್ಯದ ಅಭಿವೃದ್ಧಿಗೆ ಅನ್ವೇಷಣೆ ಮತ್ತು ಭದ್ರತೆಗೆ ಒತ್ತು ನೀಡಿದೆ. ಐವತ್ತು ವರ್ಷಗಳಲ್ಲಿ ವಿವಿಧ ವಲಯದ ಮಧ್ಯಸ್ಥಗಾರರಿಗೆ ಅನುಪಮ ಕೊಡುಗೆ ನೀಡಿದೆ ಎಂದು ಹೇಳಿದರು.

'ಭಾರತವು ಒಂದು ಕಾಲದಲ್ಲಿ ವಿದೇಶಿ ತಂತ್ರಜ್ಞಾನವನ್ನು ಅವಲಂಬಿಸಿತ್ತು. ಸ್ಥಿರ ದೂರವಾಣಿಗಳ ಸಂಖ್ಯೆ ಕಡಿಮೆ ಇತ್ತು. ಮೊಬೈಲ್ ತಂತ್ರಜ್ಞಾನವೂ ಸುಲಭವಾಗಿ ಬಳಕೆಗೆ ಸಿಗುತ್ತಿರಲಿಲ್ಲ. ಇಂತಹ ಸ್ಥಿತಿಯಲ್ಲಿ ಅಂಚೆ ಮತ್ತು ದೂರಸಂಪರ್ಕ ಇಲಾಖೆಯು ಟೆಲಿಕಾಂ ವಲಯದ ಬಲವರ್ಧನೆಗೆ ಬೆನ್ನೆಲುಬಾಗಿದೆ. ಆರ್ಥಿಕ ಸಬಲೀಕರಣದಲ್ಲೂ ಮುಂಚೂಣಿಯಲ್ಲಿದೆ ಎಂದರು.

95.4 ಕೋಟಿ ಇಂಟರ್‌ನೆಟ್ ಬಳಕೆದಾರರು



ಜ್ಯೋತಿರಾದಿತ್ಯ ಸಿಂಧಿಯಾ

ಕಳೆದ ಒಂದು ದಶಕದ ಅವಧಿಯಲ್ಲಿ ಇಂಟರ್‌ನೆಟ್ ಮತ್ತು ಬ್ರ್ಯಾಂಡ್‌ಬಾಂಡ್ ಚಂದಾದಾರಿಕೆಯಲ್ಲಿ ಉತ್ತಮ ಪ್ರಗತಿ ಸಾಧಿಸಲಾಗಿದೆ ಎಂದು ಜ್ಯೋತಿರಾದಿತ್ಯ ಸಿಂಧಿಯಾ ಹೇಳಿದರು.

ಹತ್ತು ವರ್ಷದ ಹಿಂದೆ 25 ಕೋಟಿ ಇಂಟರ್‌ನೆಟ್ ಬಳಕೆದಾರರಿದ್ದರು. ಪ್ರಸ್ತುತ ಚಂದಾದಾರರ ಸಂಖ್ಯೆ 95.4 ಕೋಟಿಗೆ ಮುಟ್ಟಿದೆ. ದೇಶದ ಪ್ರತಿ ಪ್ರಜೆಯ ಇಂಟರ್‌ನೆಟ್ ಬಳಕೆ ಪ್ರಮಾಣ 1ಜಿಬಿ ಆಗಿದೆ. ಸರಾಸರಿ ಬಳಕೆ 20 ಜಿಬಿಗೆ ಮುಟ್ಟಿದೆ. ಬ್ರ್ಯಾಂಡ್‌ಬಾಂಡ್ ಚಂದಾದಾರರ ಸಂಖ್ಯೆಯು 60 ಲಕ್ಷದಿಂದ 9.24 ಕೋಟಿಗೆ ಏರಿಕೆಯಾಗಿದೆ ಎಂದು ವಿವರಿಸಿದರು.

'4ಜಿ ತಂತ್ರಜ್ಞಾನದಲ್ಲಿ ಭಾರತವು ವಿಶ್ವವನ್ನು ಅನುಸರಿಸಿತು. 5ಜಿ ತಂತ್ರಜ್ಞಾನ ದೊಟ್ಟಿಗೆ ಜಗತ್ತಿನ ಜೊತೆಗೆ ಹೆಜ್ಜೆ ಹಾಕಿತು. ಈಗ 6ಜಿ ತಂತ್ರಜ್ಞಾನ ಮುನ್ನಡೆಯಲ್ಲಿ ಭಾರತವು ಜಾಗತಿಕಮಟ್ಟದಲ್ಲಿ ನಾಯಕತ್ವ ವಹಿಸಿಕೊಳ್ಳಲಿದೆ' ಎಂದರು.

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹322-622
ದ್ವಿತಳಿ (ಬಿ.ವಿ) ₹210-762

ರಿಲಯನ್ಸ್ ಮಾನವ ಸಂಪನ್ಮೂಲ ವಿಭಾಗಕ್ಕೆ ಇರಾ ಬಿಂದ್ರಾ ನೇಮಕ

ನವದೆಹಲಿ (ಪಿಟಿಐ): ರಿಲಯನ್ಸ್ ಇಂಡಸ್ಟ್ರೀಸ್ ಲಿಮಿಟೆಡ್‌ನ ಮಾನವ ಸಂಪನ್ಮೂಲ ವಿಭಾಗದ ಗ್ರೂಪ್ ಅಧ್ಯಕ್ಷರಾಗಿ ಇರಾ ಬಿಂದ್ರಾ ಅವರನ್ನು ನೇಮಿಸಲಾಗಿದೆ.

ಸಾಮಾನ್ಯವಾಗಿ ಕಂಪನಿಗೆ ಹಿರಿಯ ಅಧಿಕಾರಿಗಳನ್ನು ನೇಮಿಸಿಕೊಂಡಾಗ ಕಂಪನಿಯ ಕಾರ್ಯಾಚರಣೆಯ ಮುಖ್ಯಸ್ಥರು ಈ ಬಗ್ಗೆ ಅಧಿಕೃತವಾಗಿ ಘೋಷಿಸುವುದು ವಾಡಿಕೆ. ಆದರೆ, ರಿಲಯನ್ಸ್ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಮುಕೇಶ್ ಅಂಬಾನಿ ಅವರೇ ಖುದ್ದಾಗಿ ಇರಾ ಅವರ ಹೆಸರನ್ನು ಪ್ರಕಟಿಸಿದ್ದಾರೆ.

ರಿಲಯನ್ಸ್‌ನ ಪೀಪಲ್ ಆ್ಯಂಡ್ ಟಾಲೆಂಟ್ ವಿಭಾಗದ ಗ್ರೂಪ್ ಅಧ್ಯಕ್ಷರಾಗಿ ಅಂಬಾನಿ ಕುಟುಂಬಕ್ಕೆ ಸೇರದ ಮಹಿಳೆಯೊಬ್ಬರು ನೇಮಕವಾಗುತ್ತಿರುವುದು ಇದೇ ಮೊದಲು. ಇರಾ ಅವರು ಸಮೂಹದ ಕಾರ್ಯಕಾರಿ ಸಮಿತಿಯ ಭಾಗವಾಗಿದ್ದಾರೆ.

ಅಮೆರಿಕದ ಮೆಡ್ಟ್ರಾನಿಕ್ ಕಂಪನಿಯಲ್ಲಿ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥೆ ಮತ್ತು ಜಾಗತಿಕ ವ್ಯವಹಾರಗಳ ವಿಭಾಗದ ಉಪಾಧ್ಯಕ್ಷೆಯಾಗಿ ಅವರು ಕಾರ್ಯ ನಿರ್ವಹಿಸುತ್ತಿದ್ದರು.

'ನಿಗೂಢ ಡ್ರೋನ್' ಹೊಡೆದುರುಳಿಸಲು ಟ್ರಂಪ್ ಒತ್ತಾಯ

ವಾಷಿಂಗ್ಟನ್ (ಪಿಟಿಐ): 'ದೇಶದ ವಿವಿಧ ಭಾಗಗಳಲ್ಲಿ ಹಾರಾಡುತ್ತಿರುವ 'ನಿಗೂಢ ಡ್ರೋನ್'ಗಳನ್ನು ಹೊಡೆದುರುಳಿಸಬೇಕು' ಎಂದು ಅಮೆರಿಕದ ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಗ್ರಹಿಸಿದ್ದಾರೆ.

ಕೆಲವು ದಿನಗಳ ಹಿಂದೆ ನ್ಯೂಜೆರ್ಸಿಯಲ್ಲಿ ಡ್ರೋನ್‌ಗಳು ಹಾರಾಟ ನಡೆಸಿದ್ದು ಪತ್ತೆಯಾಗಿತ್ತು. ಇದಾದ ಬಳಿಕ ಬೇರೆ ಸ್ಥಳಗಳಲ್ಲಿ ಹಾರಾಡಿದ್ದು ಕಂಡುಬಂದಿದೆ.

ದೇಶದ ಒಳಗೆ ಹಾರಾಡಿರುವ ಡ್ರೋನ್‌ಗಳಿಂದ ದೇಶದ ಭದ್ರತೆಗೆ ಯಾವುದೇ ಅಪಾಯವಿಲ್ಲ ಎಂದು ಅಮೆರಿಕ ಸರ್ಕಾರ ಹಾಗೂ ಶ್ವೇತಭವನದ ಅಧಿಕಾರಿಗಳು ಕೂಡ ಸ್ಪಷ್ಟಪಡಿಸಿದ್ದಾರೆ. ಇದರ ಹಿಂದೆ ವಿದೇಶಿ ಕೈವಾಡವಿರುವ ಸಾಧ್ಯತೆಯನ್ನು ತಳ್ಳಿಹಾಕಿದ್ದಾರೆ. ಹೀಗಿದ್ದರೂ, ರಹಸ್ಯವಾಗಿ ಹಾರಾಡಿದ ಡ್ರೋನ್‌ಗಳ ಕುರಿತು ತನಿಖೆಗೆ ಆದೇಶಿಸಲಾಗಿದೆ.

'ದೇಶದಾದ್ಯಂತ ರಹಸ್ಯವಾಗಿ ಡ್ರೋನ್‌ಗಳು ಹಾರಾಟ ನಡೆಸಿರುವುದಾಗಿ ವರದಿಯಾಗಿದೆ. ಸರ್ಕಾರದ ಗಮನಕ್ಕೆ ಬಾರದೇ ಇವುಗಳು ಹಾರಾಟ ನಡೆಸಿದ್ದವೇ? ನನ್ನ ಪ್ರಕಾರ, ಆ ರೀತಿ ಇಲ್ಲ' ಎಂದು ಡೊನಾಲ್ಡ್ ಟ್ರಂಪ್ ಅವರು ಸಾಮಾಜಿಕ ಜಾಲತಾಣ 'ಟ್ರೂಥ್ ಸೋಷಿಯಲ್'ನಲ್ಲಿ ಬರೆದುಕೊಂಡಿದ್ದಾರೆ.

'ಈ ವಿಚಾರವು ಜನರಿಗೆ ತಿಳಿಯಬೇಕು, ಇಲ್ಲದಿದ್ದರೆ ಅವುಗಳನ್ನು ಹೊಡೆದು ಉರುಳಿಸಬೇಕು' ಎಂದು ಆಗ್ರಹಿಸಿದ್ದಾರೆ.

ಬೆಳಗಾವಿ: ಅಕಾಲಿಕ ಮಳೆಯಿಂದ ಆವಕ ಕುಸಿತ

ಈರುಳ್ಳಿ ಧಾರಣೆ ಏರಿಕೆ

● ಇಮಾಮ್‌ಹುಸೇನ್ ಗೂಡುನವರ

ಬೆಳಗಾವಿ: ಅಕಾಲಿಕ ಮಳೆಯಿಂದ ಬೆಳೆ ಹಾನಿ ಹಾಗೂ ಇಳುವರಿ ಕುಸಿತದಿಂದ ಇಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆಯಲ್ಲಿ (ಎಪಿಎಂಸಿ) ಈರುಳ್ಳಿ ಆವಕ ಪ್ರಮಾಣ ಕುಸಿದಿದೆ. ಇದರಿಂದ ಧಾರಣೆ ಏರಿಕೆಯಾಗಿದೆ.

ಎಪಿಎಂಸಿಗೆ ಬೆಳಗಾವಿ ಜಿಲ್ಲೆಯ ತಾಲ್ಲೂಕುಗಳು, ಬಾಗಲಕೋಟೆ ಜಿಲ್ಲೆ, ಮಹಾರಾಷ್ಟ್ರದ ಸೊಲ್ಲಾಪುರ, ಅಹ್ಮದ್‌ನಗರ ಮತ್ತಿತರ ಕಡೆಯಿಂದ ಈರುಳ್ಳಿ ಆವಕವಾಗುತ್ತದೆ. ಇಲ್ಲಿಂದ ಕರ್ನಾಟಕದ ವಿವಿಧ ನಗರಗಳು ಮತ್ತು ಉತ್ತರ ಭಾರತದ ಮಾರುಕಟ್ಟೆಗೆ ಪೂರೈಕೆಯಾಗುತ್ತದೆ.

'ಕರ್ನಾಟಕದಲ್ಲಿ ಈರುಳ್ಳಿ ಸುಗ್ಗಿ ಈಗ ಮುಗಿಯುವ ಹಂತಕ್ಕೆ ಬಂದಿದೆ. ಅಕಾಲಿಕ ಮಳೆಯಿಂದ ಬೆಳೆ ಹಾನಿಗೀಡಾಗಿದೆ. ಪ್ರತಿ ವರ್ಷದಂತೆ ಗುಣಮಟ್ಟದ ಫಸಲೂ ಬಂದಿಲ್ಲ. ಆದರೆ, ಬೇಡಿಕೆಯಷ್ಟು ಈರುಳ್ಳಿ ಆವಕ ಆಗದ ಕಾರಣ ರೈತರಿಗೆ ಉತ್ತಮ ದರ ಸಿಗುತ್ತಿದೆ' ಎಂದು ಎಪಿಎಂಸಿ ಕಾರ್ಯದರ್ಶಿ ಕೆ.ಎಚ್. ಗುರುಪ್ರಸಾದ ತಿಳಿಸಿದರು.

'ಡಿಸೆಂಬರ್ 11ರಂದು ಕ್ವಿಂಟಲ್‌ಗೆ ₹6 ಸಾವಿರ ದರದಲ್ಲಿ ಈರುಳ್ಳಿ ಮಾರಾಟವಾಗಿತ್ತು. ಶನಿವಾರ (ಡಿಸೆಂಬರ್ 14) ಕ್ವಿಂಟಲ್‌ಗೆ ₹4,500 ದರದಲ್ಲಿ ಮಾರಾಟವಾಗಿದೆ. ಗುಣಮಟ್ಟದ ಈರುಳ್ಳಿಯನ್ನು ಕ್ವಿಂಟಲ್‌ಗೆ ₹5 ಸಾವಿರ ದರದಲ್ಲೂ ಕೆಲವು ವ್ಯಾಪಾರಿಗಳು ಖರೀದಿಸಿದ್ದಾರೆ. ದರದಲ್ಲಿ ವ್ಯತ್ಯಾಸವಾಗುತ್ತಿದ್ದರೂ ರೈತರಿಗೆ ಉತ್ತಮ ಆದಾಯ ಸಿಗುತ್ತಿದೆ' ಎಂದರು.

2023ರ ಡಿಸೆಂಬರ್‌ನಲ್ಲಿ ಬೆಳಗಾವಿ ಎಪಿಎಂಸಿಗೆ 95,193 ಕ್ವಿಂಟಲ್ ಈರುಳ್ಳಿ ಆವಕವಾಗಿತ್ತು. ಈ ವರ್ಷ ಡಿಸೆಂಬರ್ 1ರಿಂದ 14ರವರೆಗೆ 39,182 ಕ್ವಿಂಟಲ್ ಬಂದಿದೆ. ಶನಿವಾರ ಒಂದೇ ದಿನ 8,696 ಕ್ವಿಂಟಲ್ ಆವಕವಾಗಿದೆ.

'ಈಗ ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳಿಂದಷ್ಟೇ ಈರುಳ್ಳಿ ಬರುತ್ತಿದೆ. ಆವಕ ಇಳಿಕೆಯಾದ ಕಾರಣ ದರ ಏರಿಕೆಯಾಗಿದೆ. ಮಹಾರಾಷ್ಟ್ರದಿಂದ ಆವಕ ಶುರುವಾದರೆ, ದರ ಕಡಿಮೆಯಾಗಬಹುದು' ಎಂದು ವ್ಯಾಪಾರಿ ದೀಪಕ ಪಾಟೀಲ ಹೇಳಿದರು.

ಬೆಳಗಾವಿ ಎಪಿಎಂಸಿಯಲ್ಲಿ ಆವಕವಾಗಿರುವ ಈರುಳ್ಳಿ ಪ್ರಜಾವಾಣಿ ಚಿತ್ರ

ಬಾಂಗ್ಲಾ: ಹಿಂದೂಗಳ ಆಸ್ತಿ ಧ್ವಂಸ ಪ್ರಕರಣ ನಾಲ್ವರ ಬಂಧನ

ಢಾಕಾ (ಪಿಟಿಐ): ಬಾಂಗ್ಲಾದೇಶದ ಸುನಾಮ್‌ಗಂಜ್ ಜಿಲ್ಲೆಯಲ್ಲಿ ಹಿಂದೂಗಳ ಮನೆಗಳು, ಅಂಗಡಿಗಳು ಮತ್ತು ಲೋಕನಾಥ ದೇವಸ್ಥಾನವನ್ನು ಧ್ವಂಸಗೊಳಿಸಿದ ಪ್ರಕರಣ ಸಂಬಂಧ ನಾಲ್ವರನ್ನು ಬಂಧಿಸಲಾಗಿದೆ.

ಘಟನೆ ಸಂಬಂಧ 150ರಿಂದ 170 ಮಂದಿಯ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ. ಅಲಿಮ್ ಹುಸೇನ್ (19), ಸುಲ್ತಾನ್ ಅಹಮದ್ ರಾಜು (20), ಇಮ್ರಾನ್ ಹುಸೇನ್ (31) ಮತ್ತು ಶಜಹಾನ್ ಹುಸೇನ್ (20) ಅವರನ್ನು ದೋರಾಬಜಾರ್ ಪ್ರದೇಶದ ಧ್ವಂಸ ಪ್ರಕರಣ ಸಂಬಂಧ ಬಂಧಿಸಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಡಿಸೆಂಬರ್ 3ರಂದು ಸುನಾಮ್‌ಗಂಜ್ ಜಿಲ್ಲೆಯ ನಿವಾಸಿ ಆಕಾಶ್ ದಾಸ್ ಎಂಬವರು ಹಾಕಿದ್ದ ಪೋಸ್ಟ್‌ನಿಂದಾಗಿ ಜಿಲ್ಲೆಯಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು. ಆತ ತನ್ನ ಪೋಸ್ಟ್ ಅಳಿಸಿ ಹಾಕಿದ್ದರೂ ಸ್ಕ್ರೀನ್‌ಶಾಟ್‌ಗಳು ಎಲ್ಲೆಡೆ ಹರಡಿ ಹಿಂಸಾಚಾರಕ್ಕೆ ಕಾರಣವಾಯಿತು ಎಂದು ಸರ್ಕಾರಿ ಒಡೆತನದ ಸುದ್ದಿಸಂಸ್ಥೆ ಬಿಎಸ್‌ಎಸ್ ತಿಳಿಸಿದೆ.

ಸ್ಥಳೀಯ ಪೊಲೀಸರು ದಾಸ್ ಅವರನ್ನು ತಕ್ಷಣ ಬಂಧಿಸಿ ಸುರಕ್ಷತೆ ಹಿತದೃಷ್ಟಿಯಿಂದ ಮತ್ತೊಂದು ಠಾಣೆಗೆ ಸ್ಥಳಾಂತರಿಸಿದ್ದರು. ಅದೇ ದಿನ ಉದ್ರಿಕ್ತ ಜನರು ಹಿಂದೂಗಳ ಮನೆ, ಅಂಗಡಿಗಳು ಮತ್ತು ಲೋಕನಾಥ ದೇವಸ್ಥಾನವನ್ನು ಧ್ವಂಸಗೊಳಿಸಿದ್ದರು.

ಜಿಲ್ಲಾ ಪೊಲೀಸ್ ಅಧೀಕ್ಷಕ, ಜಿಲ್ಲಾಧಿಕಾರಿ ಮತ್ತು ಸೇನಾ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿದ್ದರು. ಮಾಜಿ ಪ್ರಧಾನಿ ಶೇಖ್ ಹಸೀನಾ ಪದಚ್ಯುತಿ ಬಳಿಕ ಬಾಂಗ್ಲಾದೇಶದಲ್ಲಿ ಹಿಂದೂಗಳ ಮೇಲೆ 88 ಕೋಮು ಗಲಭೆಗಳು ನಡೆದಿವೆ. ಈ ಪ್ರಕರಣಗಳ ಸಂಬಂಧ 70 ಜನರನ್ನು ಬಂಧಿಸಲಾಗಿದೆ.

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಡ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪಾಕಿಸ್ತಾನ: ಪೋಲಿಯೊ 4 ಹೊಸ ಪ್ರಕರಣ ಪತ್ತೆ

ಇಸ್ಲಾಮಾಬಾದ್(ಪಿಟಿಐ): ಪಾಕಿಸ್ತಾನದಲ್ಲಿ ಪೋಲಿಯೊದ ನಾಲ್ಕು ಹೊಸ ಪ್ರಕರಣಗಳು ವರದಿಯಾಗಿವೆ. ಇದರೊಂದಿಗೆ ಈ ವರ್ಷ ವರದಿಯಾದ ಪೋಲಿಯೊ ಪ್ರಕರಣಗಳ ಸಂಖ್ಯೆ 63ಕ್ಕೆ ಏರಿದಂತಾಗಿದೆ.

ಕಳೆದ ವರ್ಷ 6 ಪ್ರಕರಣಗಳು ವರದಿಯಾಗಿದ್ದವು. ದೇಶದಾದ್ಯಂತ ಪೋಲಿಯೊ ಲಸಿಕೆ ಕಾರ್ಯಕ್ರಮ ಹಮ್ಮಿಕೊಂಡಿದ್ದರೂ, ಖೈಬರ್ ಪಂಖ್ತುಂಖ್ವ ಮತ್ತು ಸಿಂಧ್ ಪ್ರಾಂತ್ಯಗಳಲ್ಲಿ ಶುಕ್ರವಾರ ತಲಾ ಎರಡು ಹೊಸ ಪ್ರಕರಣಗಳು ಪತ್ತೆಯಾಗಿವೆ ಎಂದು ಡಾನ್ ಪತ್ರಿಕೆ ವರದಿ ಮಾಡಿದೆ.

ಸುಚಿರ್ ಬಾಲಾಜಿ ಆತ್ಮಹತ್ಯೆ

ನ್ಯೂಯಾರ್ಕ್ (ಪಿಟಿಐ): ಕೃತಕ ಬುದ್ಧಿಮತ್ತೆಯ ಉದ್ಯಮ ಓಪನ್‌ಎಐನ ಮಾಜಿ ಉದ್ಯೋಗಿ, ಭಾರತ ಮೂಲದ 26 ವರ್ಷದ ಸುಚಿರ್ ಬಾಲಾಜಿ ಅವರು ಸ್ಯಾನ್‌ಫ್ರಾನ್ಸಿಸ್ಕೊದಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನವೆಂಬರ್ 26ರಂದು ಸುಚಿರ್ ಅವರ ಮೃತದೇಹ ಸ್ಯಾನ್‌ಫ್ರಾನ್ಸಿಸ್ಕೊದ ಬ್ಯುಕನನ್ ರಸ್ತೆಯ ಅಪಾರ್ಟ್‌ಮೆಂಟ್‌ವೊಂದರಲ್ಲಿ ಪತ್ತೆಯಾಗಿದೆ.

'ಸುಚಿರ್ ಅವರದು ಆತ್ಮಹತ್ಯೆ ಎಂಬುದು ವೈದ್ಯಕೀಯ ಪರೀಕ್ಷೆಯಲ್ಲಿ ಗೊತ್ತಾಗಿದೆ. ಸಾವಿನ ಹಿಂದೆ ದುಷ್ಕೃತ್ಯ ಇರುವ ಕುರಿತು ಸದ್ಯಕ್ಕೆ ಯಾವುದೇ ಸಾಕ್ಷ್ಯ ಇಲ್ಲ' ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಚಾಟ್‌ಜಿಪಿಟಿ ಅಭಿವೃದ್ಧಿ ಪಡಿಸುವಾಗ ಅಮೆರಿಕದ ಹಕ್ಕುಸ್ವಾಮ್ಯ ಕಾನೂನನ್ನು ಓಪನ್‌ಎಐ ಉಲ್ಲಂಘಿಸಿದೆ ಎಂದು ಮೂರು ತಿಂಗಳ ಹಿಂದೆ ಸುಚಿರ್ ಬಾಲಾಜಿ ಬಹಿರಂಗವಾಗಿ ಆರೋಪಿಸಿ, 'ವಿಷಲ್ ಬ್ಲೋವರ್' ಎನಿಸಿದ್ದರು.

'ಚಾಟ್‌ಜಿಪಿಟಿ'ನಲ್ಲಿ ಬಳಸಲಾಗುವ 'ಜಿಪಿಟಿ4' ಪ್ರೋಗ್ರಾಂ ಅಭಿವೃದ್ಧಿಗೆ ಶ್ರಮಿಸಿದ ತಂಡದಲ್ಲಿ ಸುಚಿರ್ ಕೂಡ ಇದ್ದರು. ಈ ಕೃತಕಬುದ್ಧಿಮತ್ತೆ ತಂತ್ರಜ್ಞಾನ ಕುರಿತು ಅವರು ಟೈಮ್ಸ್ ನಿಯತಕಾಲಿಕಕ್ಕೆ ಅಕ್ಟೋಬರ್‌ನಲ್ಲಿ ನೀಡಿದ್ದ ಸಂದರ್ಶನದಲ್ಲಿ ಹೇಳಿದ್ದರು.

'ಚಾಟ್‌ಜಿಪಿಟಿ ಅಭಿವೃದ್ಧಿಪಡಿಸಲು ಉದ್ಯಮ ಹಾಗೂ ಉದ್ಯಮಿಗಳ ಮಾಹಿತಿಯನ್ನು ಬಳಸಿಕೊಳ್ಳುವ ಮೂಲಕ ಓಪನ್‌ಎಐ ಹಾನಿ ಉಂಟು ಮಾಡುತ್ತಿದೆ' ಎಂದು ಅಕ್ಟೋಬರ್ 23ರಂದು ನ್ಯೂಯಾರ್ಕ್ ಟೈಮ್ಸ್‌ಗೆ ನೀಡಿದ್ದ ಸಂದರ್ಶನದಲ್ಲಿ ಸುಚಿರ್ ಹೇಳಿದ್ದರು.

ತಮ್ಮ ತಂತ್ರಜ್ಞಾನ ಸಮಾಜಕ್ಕೆ ಒಳಿತಾಗುವುದಕ್ಕಿಂತ ಹೆಚ್ಚಾಗಿ ಕೆಡಕಾಗುತ್ತದೆ ಎಂದು ಭಾವಿಸಿದ್ದ ಅವರು, ನಂತರ ಓಪನ್‌ಎಐ ಅನ್ನು ತ್ಯಜಿಸಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

SRI KSHETRA TAILESHWARA GANIGARA MAHASAMSTHANA MATA, Nelamangala.
WANTED
1) Accountant Cum Typist
2) Vegetarian Cook
Accommodation Available
Contact :
94802 59762 / 99726 58884

ಲಾಂಡ್ರಿಗೆ ಫ್ಯಾಕ್ಟರಿ ಹೆಲ್ಪರ್ಸ್ ಬೇಕಾಗಿದ್ದಾರೆ. ಸಂಬಳ: 15000+ ಊಟ+ವಸತಿ ಸೌಲಭ್ಯವಿರುತ್ತದೆ. ಸಮಯ: ಬೆಳಗ್ಗೆ: 7.00 ರಿಂದ ರಾತ್ರಿ: 7.00 ಗಂಟೆಯವರೆಗೆ ಸ್ಥಳ: ಬನ್ನೇರುಘಟ್ಟ ರಸ್ತೆ, ಬೆಂಗಳೂರು. ಸಂಪರ್ಕಿಸಿ: 8050666007

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ವ್ಯಾಪಾರ

Business to Business

Finance

LOAN AGAINST PROPERTY- MORTGAGE LOAN (All KHATA's) LOAN AMOUNT:- 60%- 75% of Market Value. Interest rate-9.5% onwards, Source: Banks and NBFC's. Call 9071013506 EKTAA LOANS.

ಸೌಂದರ್ಯ-ಆರೋಗ್ಯ

Beauty Parlour

SP ಸೆಲೆಬ್ರಿಟಿ ಸಲೂನ್ & ಸ್ಪಾ (MEN*WOMEN* CHILDREN) ಐಬ್ರೋ-Rs 20 ಫೇಷಿಯಲ್-350 ಬ್ಲೀಚಿಂಗ್-350 ಕ್ಲೀನ್ ಅಪ್-250 ಹೇರ್ ಡೈ-200 ಮೇಹಂದಿ ಡೈ-200 ಮೆನಿಕ್ಯೂರ್-250 ಪೆಡಿಕ್ಯೂರ್-350, ವಿವಿಧ ರೀತಿಯ ಹೇರ್ ಕಟ್-250 ವ್ಯಾಕ್ಸಿಂಗ್-300. ವಿಳಾಸ: ಎಸ್ ಸಿ ರೋಡ್, ಕುಮಾರ್ ಕೀನೊ ಎದುರುಗಡೆ, ಶೇಷಾದ್ರಿಪುರಂ, ಬೆಂಗಳೂರು-7349494852.

ಭವಿಷ್ಯ

Astrology

★ಭಾರತದ★ ಪ್ರಖ್ಯಾತ ಬುಡಬುಡಕಿ ಜನಾಂಗದ ಲಕ್ಷಾಂತರ ಸಂತುಷ್ಟಗ್ರಾಹಕರ ಪರಮಶ್ರೇಷ್ಠ ಬಾಬಾ ಶ್ರೀ.ದೇವಾನಂದರವರಿಂದ ನಿಮ್ಮೆಲ್ಲಾ ಸಂಕಷ್ಟಗಳಿಗೆ ಮುಕ್ತಿ,ಮನ್ಮೋಹಿನಿ ಮೂಡಿ ವಶೀಕರಣಗಳಿಗೆ.9353143216

★||ಇಷ್ಟಪಟ್ಟವರು||★ ನಿಮ್ಮಂತೆ ಆಗಲು. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ನಿಗೂಢ. ಗುಪ್ತ ಸಮಸ್ಯೆಗಳಿಗೆ. 1 ದಿನದಲ್ಲಿ. ಶಾಶ್ವತ ಪರಿಹಾರ. 9611968471

ಪ್ರವಾಸ

Travel

ಭಾರತಪರಂಪರ ದರ್ಶನ: 23.1.2025 11ದಿನ 4ಜ್ಯೋತಿರ್ಲಿಂಗ ಗುಜರಾತ್,ಮಧ್ಯಪ್ರದೇಶ. 28.2.2025 7ದಿನ ಕಾಶಿಯಾತ್ರೆ. 18.3.2025 11ದಿನ,ಮುಕ್ತಿನಾಥ್ ನೇಪಾಳಸಹಿತ ಕಾಶಿ. ಪ್ರಕಾಶ್ ಹೆಬ್ಬಾರ್: 9448792891.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಸುಸಜ್ಜಿತ ವ್ಯವಸ್ಥೆಗಳೊಂದಿಗೆ: 22.12.2024 20.01.2025 ರಿಂದ 7 ದಿನಗಳ ತಮಿಳುನಾಡು ಕೇರಳ.23.12.2024 ರಿಂದ 7 ದಿನಗಳ ಶ್ರೀಶೈಲ,ಮಂತ್ರಾಲಯ ಹೈದ್ರಾಬಾದ್. 03.02.2025 13.02.2025 ರಿಂದ 17/11 ದಿನಗಳ ಗುಜರಾತ್,ರಾಜಸ್ಥಾನ್. 10.02.2025 ರಿಂದ 10 ದಿನಗಳ ಮಧ್ಯಪ್ರದೇಶ. 16.01.2025 ರಿಂದ 6 ದಿನಗಳ ದುಬೈ,ಅಬುದಾಬಿ. 04.02.2025 10.04.2025 ರಿಂದ 11/7 ದಿನಗಳ ಸಿಂಗಾಪುರ ಮಲೇಶಿಯಾ ಥೈಲ್ಯಾಂಡ್. 28.02.2025 ರಿಂದ 10 ದಿನಗಳ ವಿಯೆಟ್ನಂ ಕಾಂಬೋಡಿಯ ಪ್ರವಾಸಗಳು. ಸಂಪರ್ಕಿಸಿ: ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

ಪ್ರವಾಸ 4/1/2025 ಪುರಿಜಗನ್ನಾಥ, ಕಲ್ಕತ್ತಾ 28/1/2025 ತಮಿಳುನಾಡು:11/2/2025 ಗುಜರಾತ್,ಮಧ್ಯಪ್ರದೇಶ ನಾಲ್ಕು ಜ್ಯೋತಿರ್ಲಿಂಗ: 25/2/25 ಶಿವರಾತ್ರಿ ವಿಶೇಷ ಕಾಶಿ, ಜಾರ್ಖಂಡ್ ವೈದ್ಯನಾಥ. ಮಲ್ಲಿಕಾರ್ಜುನ ಪ್ಯಾಕೇಜ್ ತುಮಕೂರು ಮೊ: 8496044942

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
*Conditions apply
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
9886213331
9901641752
9845114560
9900428036
9731810277
080- 45557163/164

ಯೋಲ್ ವಿರುದ್ಧದ ವಾಗ್ದಂಡನೆ ನಿರ್ಣಯಕ್ಕೆ ಸಂಸತ್ ಅನುಮೋದನೆ ● ನಾಗರಿಕರ ಸಂಭ್ರಮಾಚರಣೆ

ದಕ್ಷಿಣ ಕೊರಿಯಾ ಅಧ್ಯಕ್ಷರ ಪದಚ್ಯುತಿ

ಯೂನ್ ಸುಕ್ ಯೋಲ್

ಸೋಲ್ (ಎಪಿ): ದಕ್ಷಿಣ ಕೊರಿಯಾ ಅಧ್ಯಕ್ಷ ಯೂನ್ ಸುಕ್ ಯೋಲ್ ಅವರನ್ನು ಪದಚ್ಯುತಿಗೊಳಿಸುವ ನಿರ್ಣಯವನ್ನು, ಸಂಸತ್ ಅಂಗೀಕರಿಸಿದೆ. ಈ ಮೂಲಕ, ದೇಶದಲ್ಲಿ ಮಿಲಿಟರಿ ಆಡಳಿತ ಜಾರಿಗೊಳಿಸಿದ್ದಕ್ಕಾಗಿ ಯೋಲ್ ಅವರು ಅಧಿಕಾರ ಕಳೆದುಕೊಂಡಿದ್ದಾರೆ.

ಅಧ್ಯಕ್ಷರಿಗೆ ವಾಗ್ದಂಡನೆ ವಿಧಿಸಬೇಕೆಂದು ಕೋರಿದ್ದ ನಿರ್ಣಯವನ್ನು ಸಂಸತ್‌ನಲ್ಲಿ (ನ್ಯಾಷನಲ್ ಅಸೆಂಬ್ಲಿ) ಶನಿವಾರ ಮಂಡಿಸಿದ ವೇಳೆ, ಕಾವೇರಿದ ಚರ್ಚೆ ನಡೆಯಿತು. ನಂತರ ನಿರ್ಣಯವನ್ನು 204-85 ಮತಗಳಿಂದ ಅಂಗೀಕರಿಸಲಾಯಿತು. ಯೋಲ್ ಅವರು ಪ್ರತಿನಿಧಿಸುವ ಕನ್ಸರ್ವೇಟಿವ್ ಪೀಪಲ್ ಪವರ್ ಪಾರ್ಟಿಯ (ಪಿಪಿಪಿ) ಕೆಲ ಸದಸ್ಯರು ಕೂಡ ನಿರ್ಣಯದ ಪರವಾಗಿಯೇ ಮತ ಚಲಾಯಿಸಿದ್ದಾರೆ.

ಈ ಬೆಳವಣಿಗೆ ಬೆನ್ನಲ್ಲೇ, ಯೋಲ್ ಅವರು ಅಧಿಕಾರವನ್ನು ಮೊಟಕುಗೊಳಿಸಲಾಯಿತು. ಪ್ರಧಾನಿ ಹಾನ್ ಡಕ್-ಸೂ ಅವರು ಹಂಗಾಮಿ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡಿದ್ದಾರೆ.

'ದೇಶದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಇರಬೇಕು ಎಂಬುದು ಜನರ ಆಶಯವಾಗಿತ್ತು. ಈ ಕುರಿತು ಜನರು ಪ್ರದರ್ಶಿಸಿದ ಧೈರ್ಯ ಮತ್ತು ಬದ್ಧತೆಯ ಫಲವಾಗಿ ಯೋಲ್ ಅವರ ಪದಚ್ಯುತಿಯಾಗಿದೆ' ಎಂದು ಸ್ಪೀಕರ್ ವೂ ವೊನ್ ಶಿಕ್ ಹೇಳಿದ್ದಾರೆ.

ಯೋಲ್ ವಿರುದ್ಧದ ವಾಗ್ದಂಡನೆ ನಿರ್ಣಯ ಕುರಿತು ಸಂಸತ್‌ನಲ್ಲಿ ಎರಡನೇ ಬಾರಿ ನಡೆದ ಮತದಾನ ಇದಾಗಿದೆ.

ಮನವಿ: ಪದಚ್ಯುತಗೊಂಡ ಬೆನ್ನಲ್ಲೇ ಹೇಳಿಕೆಯೊಂದನ್ನು ಬಿಡುಗಡೆ ಮಾಡಿರುವ ಯೋಲ್, 'ಸರ್ಕಾರದ ಕಾರ್ಯದಲ್ಲಿ ಸ್ಥಿರತೆ ಕಾಪಾಡಿ' ಎಂದು ಅಧಿಕಾರಿಗಳಿಗೆ ಮನವಿ ಮಾಡಿದ್ದಾರೆ.

'ನನ್ನ ಅಧ್ಯಕ್ಷೀಯ ಅಧಿಕಾರದಲ್ಲಿ ಇದೊಂದು ತಾತ್ಕಾಲಿಕ ವಿರಾಮ. ದೇಶದ ಒಳಿತಿಗಾಗಿ ನನ್ನ ಉಸಿರು ಇರುವವರೆಗೂ ನನ್ನ ಕರ್ತವ್ಯ ನಿಭಾಯಿಸುತ್ತೇನೆ' ಎಂದಿದ್ದಾರೆ.

ಕೋರ್ಟ್ ಅಂಗಳಕ್ಕೆ: ಅಧ್ಯಕ್ಷರ ಪದಚ್ಯುತಿಯನ್ನು ಅನುಮೋದಿಸಬೇಕೇ ಅಥವಾ ಅಧಿಕಾರವನ್ನು ಪುನಃಸ್ಥಾಪಿಸಬೇಕೇ ಎಂಬುದನ್ನು ಅಲ್ಲಿನ ಸಾಂವಿಧಾನಿಕ ಕೋರ್ಟ್ 180 ದಿನಗಳಲ್ಲಿ ನಿರ್ಧರಿಸಬೇಕಿದೆ.

ಯೋಲ್ ಅವರನ್ನು ಪದಚ್ಯುತಿಗೊಳಿಸಿದ್ದನ್ನು ಒಂದು ವೇಳೆ ಸಾಂವಿಧಾನಿಕ ಕೋರ್ಟ್ ಕೂಡ ಅನುಮೋದಿಸಿದಲ್ಲಿ, ಹೊಸ ಅಧ್ಯಕ್ಷರ ಆಯ್ಕೆಗಾಗಿ ಆರು ತಿಂಗಳ ಒಳಗಾಗಿ ಚುನಾವಣೆ ನಡೆಯಬೇಕಿದೆ.

ಸಂಭ್ರಮಾಚರಣೆ: ಯೋಲ್ ಅವರ ಪದಚ್ಯುತಿ ಬೆನ್ನಲ್ಲೇ, ವಿರೋಧ ಪಕ್ಷಗಳು ಹಾಗೂ ಸಾರ್ವಜನಿಕರು ಸಂಭ್ರಮಾಚರಣೆ ಮಾಡಿದ್ದು, ಇದೊಂದು ಐತಿಹಾಸಿಕ ಕ್ಷಣ ಎಂದು ಬಣ್ಣಿಸಿದ್ದಾರೆ.

ಸಂಸತ್ ಭವನದ ಹೊರಗೆ ಭಾರಿ ಸಂಖ್ಯೆಯಲ್ಲಿ ಜಮಾಯಿಸಿದ್ದ ಜನರು, 'ನಾವು ಸಾಂವಿಧಾನಿಕ ವ್ಯವಸ್ಥೆಯನ್ನು ಸಂರಕ್ಷಿಸಿದ್ದೇವೆ' ಎಂಬ ಘೋಷಣೆ ಕೂಗಿದರು.

ಬೆಂಬಲ: ಇನ್ನೊಂದೆಡೆ, ಯೋಲ್ ಅವರನ್ನು ಬೆಂಬಲಿಸಿ, ಸೋಲ್ ನಗರದ ವಿವಿಧೆಡೆ ಜನರು ಭಾರಿ ಸಂಖ್ಯೆಯಲ್ಲಿ ರ್‍ಯಾಲಿ ನಡೆಸಿದರು.

ದಕ್ಷಿಣ ಕೊರಿಯಾ ಸಂಸತ್, ಅಧ್ಯಕ್ಷ ಯೂನ್ ಸುಕ್ ಯೋಲ್ ಅವರ ವಿರುದ್ಧದ ವಾಗ್ದಂಡನೆ ನಿರ್ಣಯವನ್ನು ಅಂಗೀಕರಿಸಿದ ಸುದ್ದಿ ತಿಳಿದು ರಾಜಧಾನಿ ಸೋಲ್‌ನಲ್ಲಿ ಜನರು ಸಂಭ್ರಮಿಸಿದ್ದು ಹೀಗೆ ಎಪಿ/ಪಿಟಿಐ ಚಿತ್ರ

ಸನ್ನದ್ಧತೆಗೆ ಸೂಚನೆ

ಹಾನ್ ಡಕ್-ಸೂ

ಅಧಿಕಾರ ವಹಿಸಿಕೊಂಡ ನಂತರ ಮಾತನಾಡಿರುವ ಹಂಗಾಮಿ ಅಧ್ಯಕ್ಷ ಹಾನ್ ಡಕ್-ಸೂ, 'ಸದ್ಯದ ಪರಿಸ್ಥಿತಿಯಲ್ಲಿ, ಯಾವುದೇ ರೀತಿಯ ಪ್ರಚೋದನೆ ನೀಡಲು ಉತ್ತರ ಕೊರಿಯಾಕ್ಕೆ ಅವಕಾಶ ಸಿಗುದಂತೆ ನೋಡಿಕೊಳ್ಳಬೇಕು' ಎಂದು ದೇಶಕ್ಕೆ ಮನವಿ ಮಾಡಿದ್ದಾರೆ.

ರಾಷ್ಟ್ರೀಯ ಭದ್ರತಾ ಮಂಡಳಿ ಸಭೆಯಲ್ಲಿ ಮಾತನಾಡಿದ ಅವರು, 'ಕ್ರಿಯಾಶೀಲ ರಾಜತಾಂತ್ರಿಕ ಕ್ರಮಗಳ ಮೂಲಕ ದೇಶದ ಹಿತಾಸಕ್ತಿಗಳನ್ನು ಕಾಪಾಡಬೇಕು' ಎಂದು ಹೇಳಿದ್ದಾಗಿ ಮಾಧ್ಯಮಗಳು ವರದಿ ಮಾಡಿವೆ.

ನಿರ್ಣಯದ ಪರ 204 ಮತ

ದಕ್ಷಿಣ ಕೊರಿಯಾದ ರಾಷ್ಟ್ರೀಯ ಅಸೆಂಬ್ಲಿ ಸದಸ್ಯ ಬಲ 300 ಇದ್ದು, ವಾಗ್ದಂಡನೆಗೆ ಗುರಿಪಡಿಸಲು ಕನಿಷ್ಠ 200 ಸದಸ್ಯರ ಬೆಂಬಲ ಅಗತ್ಯವಿತ್ತು. ನಿರ್ಣಯ ತಂದಿರುವ ಪ್ರತಿಪಕ್ಷಗಳ ಸದಸ್ಯ ಬಲ 192 ಆಗಿದ್ದು, ನಿರ್ಣಯವು ಅಂಗೀಕಾರವಾಗಬೇಕಾದರೆ ಆಡಳಿತಾರೂಢ ಪಿಪಿಪಿಯ ಕನಿಷ್ಠ 8 ಸದಸ್ಯರ ಬೆಂಬಲವು ಅಗತ್ಯವಿತ್ತು. ನಿರ್ಣಯವನ್ನು ಶನಿವಾರ ಮತಕ್ಕೆ ಹಾಕಿದಾಗ, ಪಿಪಿಪಿ ಪಕ್ಷದ 12 ಮಂದಿ ನಿರ್ಣಯದ ಪರ ಮತ ಹಾಕಿದರು. ಇದಕ್ಕೂ ಮುನ್ನ, ಡಿಸೆಂಬರ್ 7ರಂದು ಇಂತದ್ದೇ ನಿರ್ಣಯಕ್ಕೆ ಮೂರನೇ ಎರಡರಷ್ಟು ಬೆಂಬಲ ಸಿಗದ ಕಾರಣ, ಯೋಲ್ ಅವರು ಪದಚ್ಯುತಿಯಿಂದ ಪಾರಾಗಿದ್ದರು.

‘ರಾತ್ರಿ ಇಡೀ ಜೈಲು: ಕಾನೂನು ಕ್ರಮ’

ಅಲ್ಲು ಅರ್ಜುನ್ ಜೈಲಿನಿಂದ ಬಿಡುಗಡೆ • ಹೈದರಾಬಾದ್‌ನ ಜೈಲಿನಲ್ಲಿ ಶುಕ್ರವಾರ ರಾತ್ರಿ ಕಳೆದ ನಟ

ಹೈದರಾಬಾದ್ (ಪಿಟಿಐ): ನಟ ಅಲ್ಲು ಅರ್ಜುನ್ ಅವರನ್ನು ರಾತ್ರಿಯಿಡೀ ಜೈಲಿನಲ್ಲಿ ಕಳೆಯುವಂತೆ ಮಾಡಿದ್ದು ಅಕ್ರಮ ಎಂದು ಹೇಳಿರುವ ಅವರ ಪರ ವಕೀಲರು, ಕಾನೂನು ಹೋರಾಟ ನಡೆಸುವುದಾಗಿ ಶನಿವಾರ ತಿಳಿಸಿದರು.

‘ತೆಲಂಗಾಣ ಹೈಕೋರ್ಟ್ ಮಧ್ಯಂತರ ಜಾಮೀನು ನೀಡಿದ್ದ ಪ್ರತಿಯನ್ನು ನೀಡಿದರೂ ಜೈಲಿನ ಅಧಿಕಾರಿಗಳು ಪ್ರಕ್ರಿಯೆಗಳು ಪೂರ್ಣಗೊಳಿಸಲು ವಿಳಂಬ ಮಾಡಿದರು. ಇದರಿಂದ ಅಲ್ಲು ಅರ್ಜುನ್ ಶುಕ್ರವಾರ ರಾತ್ರಿಯಿಡೀ ಜೈಲಿನಲ್ಲಿ ಕಳೆಯುವಂತಾಯಿತು. ಇದರ ವಿರುದ್ಧ ಕಾನೂನು ಹೋರಾಟ ನಡೆಸುತ್ತೇವೆ’ ಎಂದು ಅವರ ಪರ ವಕೀಲ ಅಶೋಕ್ ರೆಡ್ಡಿ ತಿಳಿಸಿದರು.

‘ಅಲ್ಲು ಅವರನ್ನು ಅಕ್ರಮವಾಗಿ ಬಂಧನದಲ್ಲಿ ಇಡಲಾಗಿತ್ತು’ ಎಂದು ಅವರು ಹೇಳಿದರು.

ಕಾಲ್ತುಳಿತದಿಂದ ಮಹಿಳೆಯೊಬ್ಬರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಶುಕ್ರವಾರ ಬಂಧನಕ್ಕೆ ಒಳಗಾಗಿದ್ದ ತೆಲುಗು ನಟ, ‘ಪುಷ್ಪ’ ಸಿನಿಮಾ ಖ್ಯಾತಿಯ ಅಲ್ಲು ಅರ್ಜುನ್ ಅವರು ಶನಿವಾರ ಜೈಲಿನಿಂದ ಬಿಡುಗಡೆಯಾದರು.

ಚಿಕ್ಕಡಪಲ್ಲಿ ಪೊಲೀಸರು ಶುಕ್ರವಾರ ಮಧ್ಯಾಹ್ನದ ನಂತರ ಅಲ್ಲು ಅರ್ಜುನ್ ಅವರ ಜ್ಯುಬಿಲಿ ಹಿಲ್ಸ್‌ನಲ್ಲಿರುವ ಮನೆಗೆ ಹೋಗಿ ಅವರನ್ನು ಬಂಧಿಸಿ, ಸ್ಥಳೀಯ ಕೋರ್ಟ್‌ಗೆ ಹಾಜರುಪಡಿಸಿದ್ದರು. ಕೋರ್ಟ್ ಅವರನ್ನು 14 ದಿನ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿತು. ಬಳಿಕ, ತೆಲಂಗಾಣ ಹೈಕೋರ್ಟ್ ಸಂಜೆಯ ಹೊತ್ತಿಗೆ ನಾಲ್ಕು ವಾರಗಳ ಮಧ್ಯಂತರ ಜಾಮೀನನ್ನು ಮಂಜೂರು ಮಾಡಿತು. ಜಾಮೀನಿನ ಪ್ರತಿ ತಡರಾತ್ರಿ ಯವರೆಗೂ ಜೈಲಿನ ಅಧಿಕಾರಿಗಳಿಗೆ ತಲುಪದ ಕಾರಣ, ಅಲ್ಲು ಅರ್ಜುನ್ ಅವರು ಶುಕ್ರವಾರ ರಾತ್ರಿ ಜೈಲಿನಲ್ಲೇ ಕಳೆದರು.

‘ಅವರು ಜೈಲಿನಿಂದ ಬಿಡುಗಡೆಯಾದರು’ ಎಂದು ಅವರ ಪರ ವಕೀಲ ಅಶೋಕ್ ರೆಡ್ಡಿ ತಿಳಿಸಿದರು.

ಮನೆಗೆ ಬಂದ ಬಳಿಕ ಅಭಿಮಾನಿಗಳು, ಬೆಂಬಲಿಗರಿಗೆ ಅಲ್ಲು ಅರ್ಜುನ್ ಧನ್ಯವಾದ ಸಲ್ಲಿಸಿದರು. ಚಿತ್ರರಂಗದ ಹಲವು ನಟ, ನಟಿಯರು, ನಿರ್ದೇಶಕರು, ನಿರ್ಮಾಪಕರು, ತಾಂತ್ರಿಕ ವರ್ಗದ ಸಿಬ್ಬಂದಿ ಭೇಟಿಯಾಗಿ ಅವರಿಗೆ ಧೈರ್ಯ ತುಂಬಿದರು.

ಹೈದರಾಬಾದ್ ಜೈಲಿನಿಂದ ಬಿಡುಗಡೆಯಾಗಿ ಮನೆಗೆ ಬಂದ ನಟ ಅಲ್ಲು ಅರ್ಜುನ್ ಅವರು ಶನಿವಾರ ಮಾಧ್ಯಮಗಳ ಮುಂದೆ ಕಾಣಿಸಿಕೊಂಡಿದ್ದು ಹೀಗೆ–ಪಿಟಿಐ ಚಿತ್ರ

‘ಘಟನೆಗೂ ನನಗೂ ನೇರ ಸಂಬಂಧವಿಲ್ಲ’

ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅಲ್ಲು ಅರ್ಜುನ್, ‘ಮಹಿಳೆ ಮೃತಪಟ್ಟಿದ್ದಕ್ಕೂ ನನಗೂ ನೇರ ಸಂಬಂಧವಿಲ್ಲ. ನಾನು ಕುಟುಂಬದ ಸದಸ್ಯರ ಜೊತೆ ಥಿಯೇಟರ್ ಒಳಗೆ ಸಿನಿಮಾ ನೋಡುತ್ತಿದ್ದೆ. ಹೊರಗಡೆ ಅವಘಡ ಸಂಭವಿಸಿದೆ. ಇದೂ ಆಕಸ್ಮಿಕವಾಗಿ ನಡೆದಿದ್ದು, ಯಾವುದೇ ದುರುದ್ದೇಶ ಹೊಂದಿರಲಿಲ್ಲ. ಸಂತ್ರಸ್ತ ಕುಟುಂಬಕ್ಕೆ ಎಲ್ಲ ರೀತಿಯ ನೆರವು ನೀಡಲು ಸಿದ್ಧನಿದ್ದೇನೆ’ ಎಂದರು.

‘ನಾನು ಈ ದೇಶದ ಕಾನೂನು ಪಾಲಿಸುತ್ತೇನೆ. ವಿಚಾರಣೆಗೆ ಸಹಕಾರ ನೀಡುತ್ತೇನೆ. ಘಟನೆ ದುರದೃಷ್ಟಕರ. ಸದ್ಯಕ್ಕೆ ಕಾನೂನು ಕ್ರಮದ ಕುರಿತು ಹೆಚ್ಚು ಮಾತನಾಡುವುದಿಲ್ಲ’ ಎಂದು ಹೇಳಿದರು.

‘ನನ್ನ ಕುಟುಂಬದ ಪಾಲಿಗೆ ಅತ್ಯಂತ ಸವಾಲಿನ ಸಮಯವಾಗಿದೆ’ ಎಂದರು.

20 ವರ್ಷಗಳಲ್ಲಿ 30 ಸಲ ಅದೇ ಚಿತ್ರಮಂದಿರಕ್ಕೆ ಭೇಟಿ ನೀಡಿದ್ದೇನೆ. ಎಂದೂ ಇಂತಹ ಅವಘಡ ಸಂಭವಿಸಿರಲಿಲ್ಲ

ಅಲ್ಲು ಅರ್ಜುನ್, ನಟ

ಸಂಧ್ಯಾ ಚಿತ್ರಮಂದಿರದಲ್ಲಿ ‘ಪುಷ್ಪ 2 ದಿ ರೂಲ್’ ಸಿನಿಮಾದ ಪ್ರೀಮಿಯರ್ ಪ್ರದರ್ಶನ ನಡೆಯುತ್ತಿದ್ದಾಗ ಉಂಟಾದ ನೂಕುನುಗ್ಗಲು ಮತ್ತು ಕಾಲ್ತುಳಿತದಲ್ಲಿ ಮಹಿಳೆ ಮೃತಪಟ್ಟ ಪ್ರಕರಣದಲ್ಲಿ ಅವರನ್ನು ಶುಕ್ರವಾರ ಬಂಧಿಸಲಾಗಿತ್ತು. ಅಲ್ಲು ಅರ್ಜುನ್ ಅವರು ಆ ಸಂದರ್ಭದಲ್ಲಿ ಚಿತ್ರಮಂದಿರದಲ್ಲಿ ಅಭಿಮಾನಿಗಳ ಜೊತೆಗೂಡಿ ಸಿನಿಮಾ ವೀಕ್ಷಿಸಿದ್ದರು. ತಮ್ಮ ನೆಚ್ಚಿನ ನಟನನ್ನು ನೋಡಲು ಸಾವಿರಾರು ಜನರು ನುಗ್ಗಿ ಬಂದ ಕಾರಣ ಕಾಲ್ತುಳಿತ ಉಂಟಾಗಿತ್ತು. 35 ವರ್ಷದ ರೇವತಿ ಎಂಬ ಮಹಿಳೆ ಮೃತಪಟ್ಟರೆ ಅವರ ಮಗ 9 ವರ್ಷದ ಶ್ರೀತೇಜ್ ಗಾಯಗೊಂಡಿದ್ದಾನೆ. ಚಿಕ್ಕಡಪಲ್ಲಿ ಪೊಲೀಸರು ಸಂಧ್ಯಾ ಚಿತ್ರಮಂದಿರ, ಅಲ್ಲು ಅರ್ಜುನ್ ಮತ್ತು ಅವರ ಭದ್ರತಾ ಸಿಬ್ಬಂದಿ ಮೇಲೆ ಈ ಕಾಲ್ತುಳಿತದ ಬಳಿಕ ದೂರು ದಾಖಲಿಸಿಕೊಂಡಿದ್ದಾರೆ.

ಸಾರ್ವಜನಿಕ ಸುರಕ್ಷತೆ ಕಾಯ್ದುಕೊಳ್ಳುವಲ್ಲಿ ವೈಫಲ್ಯ ಮತ್ತು ನಿರ್ಲಕ್ಷ್ಯ ತೋರಲಾಗಿದೆ ಎಂದು ಪ್ರಕರಣ ದಾಖಲಿಸಲಾಗಿದೆ.

ದೆಹಲಿ ಪಾದಯಾತ್ರೆ ಕೈಬಿಟ್ಟ ರೈತರು

ಶಂಭು (ಪಿಟಿಐ): ಹರಿಯಾಣ ಭದ್ರತಾ ಪಡೆಗಳು ಪಂಜಾಬ್ ಗಡಿಯಲ್ಲಿ ಅಶ್ರುವಾಯು ಶೆಲ್ ಸಿಡಿಸಿದ ಪರಿಣಾಮ ಪ್ರತಿಭಟನಾನಿರತ ರೈತರು ದೆಹಲಿಗೆ ಕೈಗೊಂಡಿದ್ದ ಪಾದಯಾತ್ರೆಯನ್ನು ಶನಿವಾರ ಸ್ಥಗಿತಗೊಳಿಸಿದ್ದಾರೆ.

ಅಶ್ರುವಾಯು ಸಿಡಿಸಿದ ಪರಿಣಾಮ 17-18 ರೈತರು ಗಾಯಗೊಂಡಿದ್ದರಿಂದ ಈ ನಿರ್ಧಾರಕ್ಕೆ ಬರಲಾಗಿದೆ. ಜಾಥಾವನ್ನು ಸ್ಥಗಿತಗೊಳಿಸಲು ಎರಡೂ ರೈತ ಸಂಘಟನೆಗಳು ನಿರ್ಧರಿಸಿವೆ ಎಂದು ರೈತ ಮುಖಂಡ ಸರವಣ ಸಿಂಗ್ ಪಂಢೇರ್ ಅವರು ಸುದ್ದಿಗಾರರಿಗೆ ತಿಳಿಸಿದರು.

ಭದ್ರತಾ ಪಡೆಗಳು ರಬ್ಬರ್ ಬುಲೆಟ್‌ಗಳನ್ನೂ ಹಾರಿಸಿದ್ದು, ರೈತರೊಬ್ಬರು ತೀವ್ರವಾಗಿ ಗಾಯಗೊಂಡಿದ್ದಾರೆ ಎಂದು ರೈತ ಮುಖಂಡ ಮಂಜಿತ್ ಸಿಂಗ್ ರೈ ತಿಳಿಸಿದ್ದಾರೆ.

ಸಭೆಯ ಬಳಿಕ ಮುಂದಿನ ಕ್ರಮ ಕೈಗೊಳ್ಳಲಾಗುವುದು. ರೈತರನ್ನು ಚದುರಿಸಲು ರಾಸಾಯನಿಕಯುಕ್ತ ನೀರನ್ನು ಬಳಸಲಾಗಿದೆ ಮತ್ತು ಈ ಬಾರಿ ಹೆಚ್ಚು ಅಶ್ರುವಾಯುವನ್ನು ಬಳಸಲಾಗಿದೆ ಎಂದು ಹೇಳಿದ್ದಾರೆ.

ಅಂಬಾಲ ಕಂಟೋನ್ಮೆಂಟ್‌ನ ಡಿವೈಎಸ್‌ಪಿ ರಜತ್ ಗುಲಿಯಾ ಅವರು ಈ ಆರೋಪಗಳನ್ನು ಅಲ್ಲಗಳೆದಿದ್ದಾರೆ.

‘ಸಂವಿಧಾನ ಅಂಗೀಕಾರ ಆಗಿ 75 ವರ್ಷಗಳು ಸಂದಿವೆ. ಈ ಸಂದರ್ಭದಲ್ಲಿ ಸಂವಿಧಾನ ಕುರಿತು ಸಂಸತ್‌ನಲ್ಲಿ ಚರ್ಚೆ ನಡೆಯುತ್ತಿದೆ. ಆದರೆ, ಸಂಸತ್‌ನಲ್ಲಿ ರೈತರ ಬಗ್ಗೆ ಯಾರೊಬ್ಬರೂ ದನಿ ಎತ್ತುತ್ತಿಲ್ಲ. ನಮ್ಮ ಪ್ರತಿಭಟನೆ ತಡೆಗೆ ಯಾವ ಸಂವಿಧಾನ ಅವಕಾಶ ಮಾಡಿಕೊಟ್ಟಿದೆ? 101 ರೈತರ ಜಾಥಾದಿಂದ ದೇಶದ ಯಾವ ಕಾನೂನು ಮತ್ತು ಸುವ್ಯವಸ್ಥೆಗೆ ಅಡ್ಡಿಯಾಗುತ್ತದೆ ಎಂಬುದನ್ನು ಅರಿಯಲು ನಾವು ಬಯಸುತ್ತೇವೆ’ ಪಂಢೇರ್ ತಿಳಿಸಿದ್ದಾರೆ.

ರೈತರು ಶನಿವಾರ ಮಧ್ಯಾಹ್ನ 12ಕ್ಕೆ ಪಾದಯಾತ್ರೆ ಮರುಪ್ರಾರಂಭಿಸಿದ ಬಳಿಕ ಪಂಜಾಬ್–ಹರಿಯಾಣ ಗಡಿಯಲ್ಲಿ ಹರಿಯಾಣ ಭದ್ರತಾ ಪಡೆಗಳು ತಡೆದವು. ಎಂಎಸ್‌ಪಿಗೆ ಕಾನೂನು ಭದ್ರತೆ ಸೇರಿದಂತೆ ಹಲವು ಬೇಡಿಕೆಗಳಿಗೆ ಒತ್ತಾಯಿಸಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ.

ದೆಹಲಿಗೆ ಪಾದಯಾತ್ರೆ ಕೈಗೊಂಡಿದ್ದ ರೈತರನ್ನು ಚದುರಿಸಲು ಪಂಜಾಬ್‌ನ ಶಂಭು ಗಡಿಯಲ್ಲಿ ಭದ್ರತಾಪಡೆಗಳವರು ಶನಿವಾರ ಜಲಫಿರಂಗಿ ಪ್ರಯೋಗಿಸಿದರು

ಪಿಟಿಐ ಚಿತ್ರ

ಕಾಂಗ್ರೆಸ್ ನಾಯಕ ಇವಿಕೆಎಸ್ ಇಳಂಗೋವನ್ ನಿಧನ

ಚೆನ್ನೈ (ಪಿಟಿಐ): ಹಿರಿಯ ಕಾಂಗ್ರೆಸ್ ನಾಯಕ ಹಾಗೂ ಕೇಂದ್ರದ ಮಾಜಿ ಸಚಿವ ಈರೋಡ್ ವೆಂಕಟ ಕೃಷ್ಣಸ್ವಾಮಿ ಸಂಪತ್ (ಇ.ವಿ.ಕೆ.ಎಸ್.) ಇಳಂಗೋವನ್ (75) ಅವರು ಶನಿವಾರ ಬೆಳಿಗ್ಗೆ 10.20ಕ್ಕೆ ಅನಾರೋಗ್ಯದಿಂದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಈರೋಡ್ ಪೂರ್ವ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದ ಅವರು, ನ.11ರಂದು ಆಸ್ಪತ್ರೆಗೆ ದಾಖಲಾಗಿದ್ದರು.

‘ವೈದ್ಯಕೀಯ ಸಿಬ್ಬಂದಿಯ ಅವಿರತ ಶ್ರಮದ ಹೊರತಾಗಿಯೂ ಶನಿವಾರ ಬೆಳಿಗ್ಗೆ ಕೊನೆಯುಸಿರೆಳೆದರು’ ಎಂದು ಆಸ್ಪತ್ರೆಯ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

‘ಇಳಂಗೋವನ್ ಸಾವು ಅವರ ಕುಟುಂಬ ಹಾಗೂ ಪಕ್ಷಕ್ಕೂ ತುಂಬಲಾರದ ನಷ್ಟ’ ಎಂದು ತಮಿಳುನಾಡು ಕಾಂಗ್ರೆಸ್ ಘಟಕದ ಅಧ್ಯಕ್ಷ ಕೆ.ಸೆಲ್ವಪೆರುಂಥಗೈ ತಿಳಿಸಿದರು. ಅವರ ನಿಧನದ ಹಿನ್ನೆಲೆಯಲ್ಲಿ ರಾಜ್ಯದಲ್ಲಿರುವ ಪಕ್ಷದ ಎಲ್ಲಾ ಕಚೇರಿಗಳಲ್ಲಿ ಪಕ್ಷದ ಧ್ವಜವನ್ನು ಅರ್ಧಕ್ಕೆ ಹಾರಿಸುವಂತೆ ಸೂಚನೆ ನೀಡಲಾಗಿದೆ.

ಇ.ವಿ.ಕೆ.ಎಸ್. ಇಳಂಗೋವನ್

ಅವರ ಸಾವಿಗೆ ತೀವ್ರ ಸಂತಾಪ ವ್ಯಕ್ತಪಡಿಸಿರುವ ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್, ವಿಚಾರವಾದಿ ಪೆರಿಯಾರ್ ಕುಟುಂಬದ ಸದಸ್ಯರಾಗಿದ್ದ ಇಳಂಗೋವನ್ ಅವರ ಸಾವಿನಿಂದ ಉತ್ತಮ ಸ್ನೇಹಿತನನ್ನು ಕಳೆದುಕೊಂಡಿದ್ದೇನೆ. ಪ್ರತಿ ಸಲವೂ ನನ್ನ ಭೇಟಿಯಾಗುತ್ತಿದ್ದ ವೇಳೆ ‘ನಿಮ್ಮ ಬಗ್ಗೆ ಕಾಳಜಿ ವಹಿಸಿ’ ಎಂದು ಹೇಳುತ್ತಿದ್ದರು. ಸಾರ್ವಜನಿಕ ಸೇವೆಗೆ ಬಂದ ಮೇಲೆ ಮತ್ತಷ್ಟು ಸಕ್ರಿಯವಾಗಿ ಕೆಲಸ ಮಾಡುತ್ತಿದ್ದೇನೆ ಎಂದಿದ್ದರು. ಹಲವು ಕಾರ್ಯಕ್ರಮಗಳಲ್ಲಿ ಇಬ್ಬರೂ ಜತೆಯಾಗಿ ಭಾಗಿಯಾಗಿದ್ದೆವು’ ಎಂದು ನೆನಪಿಸಿಕೊಂಡರು.

ಸಾಧು ಸಂಗಮ... ಉತ್ತರಪ್ರದೇಶದ ಪ್ರಯಾಗರಾಜ್‌ನಲ್ಲಿ ಶನಿವಾರ ಮಹಾ ಕುಂಭಮೇಳ 2025ರ ಉತ್ಸವದ ಮೆರವಣಿಗೆಯಲ್ಲಿ ಸಾಧುಗಳು ಭಾಗವಹಿಸಿದರು – ಪಿಟಿಐ ಚಿತ್ರ

ಲೋಕಸಭೆಯಲ್ಲಿ ಸಂವಿಧಾನ ಚರ್ಚೆ – ಯಾರು ಏನೆಂದರು?

ಅಲ್ಪಸಂಖ್ಯಾತರು ರಕ್ಷಣೆ ಪಡೆಯಲು ಬಂದ ಮೊದಲ ದೇಶ ಭಾರತ. ದೇಶದಲ್ಲಿ ಎಲ್ಲರಿಗೂ ಸಮಾನವಾದ ಮತದಾನದ ಹಕ್ಕನ್ನು ನೀಡಲಾಗಿದೆ. ಆದರೆ, ದೇಶದಲ್ಲಿ ಅಲ್ಪಸಂಖ್ಯಾತರಿಗೆ ಯಾವುದೇ ಹಕ್ಕುಗಳಿಲ್ಲ ಎಂದು ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ದೇಶದ ಪ್ರತಿಷ್ಠೆಗೆ ಧಕ್ಕೆ ತರುವ ಇಂತಹ ಹೇಳಿಕೆಗಳನ್ನು ಯಾರೂ ನೀಡಬಾರದು. ಅಂಬೇಡ್ಕರ್ ಅವರನ್ನು ಕಾಂಗ್ರೆಸ್ ಪಕ್ಷ ಸೋಲಿಸಿತು. ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಅಂಬೇಡ್ಕರ್ ಅವರಿಗೆ ಭಾರತರತ್ನ ಪ್ರಶಸ್ತಿಯನ್ನೂ ನೀಡಲಿಲ್ಲ.

ಕಿರಣ್ ರಿಜಿಜು, ಸಂಸದೀಯ ವ್ಯವಹಾರಗಳ ಸಚಿವ

ವಿರೋಧ ಪಕ್ಷದ ಸದಸ್ಯರಿಗೆ ಸಂವಿಧಾನದಲ್ಲಿ ಎಷ್ಟು ಪುಟಗಳಿವೆ ಎಂಬುದೂ ಗೊತ್ತಿಲ್ಲ. ಈ ದೇಶದಲ್ಲಿ ಸಂವಿಧಾನ ಇಲ್ಲದಿದ್ದರೆ ತುರ್ತು ಪರಿಸ್ಥಿತಿಯ ಕರಾಳ ಅಧ್ಯಾಯದಿಂದ ಮುಕ್ತಗೊಳ್ಳಲು ಈ ದೇಶದ ಜನರಿಗೆ ಸಾಮಾನ್ಯ ಜನರಿಗೆ ಸಾಧ್ಯವಾಗುತ್ತಿರಲಿಲ್ಲ.

ಅನುರಾಗ್ ಠಾಕೂರ್, ಬಿಜೆಪಿ ಸದಸ್ಯ

ಸಂವಿಧಾನದ ಕಾರಣದಿಂದಲೇ 2024ರ ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಧಿಕಾರಕ್ಕೆ ಬರಲು ಸಾಧ್ಯವಾಗಲಿಲ್ಲ. ಮಹಾವಿಕಾಸ ಅಘಾಡಿ ಮೈತ್ರಿಕೂಟಕ್ಕೆ ವಿಪಕ್ಷ ಸ್ಥಾನವೂ ಸಿಕ್ಕಿಲ್ಲ.

ಶ್ರೀಕಾಂತ್ ಶಿಂದೆ, ಶಿವಸೇನಾ ಸಂಸದ

ಸಂವಿಧಾನ ರಚನೆಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಹಾಗೂ ಹಿಂದೂ ಮಹಾಸಭಾದ ಕೊಡುಗೆಗಳೇನು ಎಂಬುದನ್ನು ಬಿಜೆಪಿ ನಾಯಕರು ಮೊದಲು ಹೇಳಲಿ. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಸಂವಿಧಾನದ ಮುನ್ನುಡಿಯಲ್ಲಿ ಜಾತ್ಯತೀತ ಹಾಗೂ ಸಮಾಜವಾದಿ ಪದಗಳನ್ನು ಸೇರಿಸದಿದ್ದರೆ ಈಗಿನ ಆಡಳಿತ ಪಕ್ಷವು ಸಂವಿಧಾನವನ್ನು ಬದಲಿಸುತ್ತಿತ್ತು. ತುರ್ತು ಪರಿಸ್ಥಿತಿಯಲ್ಲಿ ಪ್ರಜಾಪ್ರಭುತ್ವದ ಮೇಲೆ ದಾಳಿ ನಡೆಸಲಾಯಿತು. ಆದರೆ, ಬಿಜೆಪಿ ಆಡಳಿತದಲ್ಲಿ ಸಂವಿಧಾನದ ಮೂಲ ರಚನೆಯ ಮೇಲೆ ದಾಳಿ ನಡೆಯುತ್ತಿದೆ. 2ಜಿ ಪ್ರಕರಣದಲ್ಲಿ ತಮ್ಮನ್ನು ಮತ್ತು ಪಕ್ಷದ ಸಹೋದ್ಯೋಗಿ ಕೆ.ಕನಿಮೊಳಿ ಅವರನ್ನು ಜೈಲಿಗೆ ಹಾಕಿದಾಗ ಕಾಂಗ್ರೆಸ್ ಮೂಕ ಪ್ರೇಕ್ಷಕರಾಗಿತ್ತು. ನಾವು ಯಾವತ್ತೂ ಭಿಕ್ಷೆ ಬೇಡಲಿಲ್ಲ.

ಎ.ರಾಜಾ, ಡಿಎಂಕೆ ಸದಸ್ಯ

ನಾವು ಒಂದು ರಾಷ್ಟ್ರ, ಒಂದು ಚುನಾವಣೆಯ ಬಗ್ಗೆ ಮಾತನಾಡುತ್ತೇವೆ. ಆದರೆ, ಒಂದು ದೇಶ–ಒಂದು ಶಿಕ್ಷಣ, ಒಂದು ದೇಶ–ಒಂದು ಆರೋಗ್ಯದ ಕುರಿತು ಚರ್ಚಿಸುತ್ತಿಲ್ಲ. ಎಲ್ಲವನ್ನೂ ಖಾಸಗೀಕರಣ ಮಾಡಲು ಸರ್ಕಾರ ಹುನ್ನಾರ ನಡೆಸಿದೆ. ಖಾಸಗಿ ವಲಯದಲ್ಲೂ ಖಾಸಗೀಕರಣ ಬರಬೇಕು.

ಪಪ್ಪು ಯಾದವ್, ಪಕ್ಷೇತರ ಸದಸ್ಯ

ಕೇಂದ್ರ ಸರ್ಕಾರವು ಒಟ್ಟಿಗೆ ಚುನಾವಣೆ ನಡೆಸಲು ಮಸೂದೆ ತರುತ್ತಿದೆ. ಈ ವಿಷಯದಲ್ಲಿ ಸರ್ಕಾರಕ್ಕೆ ಆತುರವಿದ್ದರೆ ಇಂದೇ ಲೋಕಸಭೆ ಹಾಗೂ ಇಡೀ ದೇಶದ ಸರ್ಕಾರಗಳನ್ನು ವಿಸರ್ಜಿಸಿ ಚುನಾವಣೆ ನಡೆಸಲಿ.

ಅಖಿಲೇಶ್ ಯಾದವ್, ಸಮಾಜವಾದಿ ಪಕ್ಷದ ಮುಖ್ಯಸ್ಥ

ಸಾವರ್ಕರ್ ಅವರ ಬಗ್ಗೆ ಇನ್ನಷ್ಟು ತಿಳಿದುಕೊಳ್ಳಲು ರಾಹುಲ್ ಗಾಂಧಿ ಅವರು ಪೋರ್ಟ್‌ಬ್ಲೇರ್‌ನಲ್ಲಿರುವ ಜೈಲಿಗೆ ಭೇಟಿ ನೀಡಬೇಕು. ಸರ್ದಾರ್ ವಲ್ಲಭಭಾಯಿ ಪಟೇಲ್ ಸಾಧನೆಗಳ ಕುರಿತು ರಾಹುಲ್ ಪ್ರಸ್ತಾಪಿಸುವುದೇ ಇಲ್ಲ. ಅವರು ಇಲ್ಲದಿದ್ದರೆ ದೇಶ ಛಿದ್ರವಾಗುತ್ತಿತ್ತು. ಸ್ವಾತಂತ್ರ್ಯ ನಂತರ ರಾಜಪ್ರಭುತ್ವದ 550 ರಾಜ್ಯಗಳನ್ನು ಭಾರತಕ್ಕೆ ಸೇರುವಂತೆ ಮಾಡಿದರು. ನೆಹರು ನಿಭಾಯಿಸಿದ್ದು ಒಂದೇ ರಾಜ್ಯವನ್ನು (ಕಾಶ್ಮೀರವನ್ನು). ನೆಹರು ಎಸಗಿದ ಪ್ರಮಾದವನ್ನು ಕೊನೆಗೆ ಮೋದಿ ಅವರೇ ಸರಿಪಡಿಸಬೇಕಾಯಿತು.

ರವಿಶಂಕರ್ ಪ್ರಸಾದ್, ಬಿಜೆಪಿ ಸಂಸದ

ಈ ಹಿಂದೆ ತುರ್ತುಪರಿಸ್ಥಿತಿ ಹೇರಿದ್ದವರೇ, ಮೂಲಭೂತ ಹಕ್ಕುಗಳನ್ನು ದಮನಗೊಳಿಸಿದವರೇ, ಸಂವಿಧಾನದ ಮೇಲೆ ದಾಳಿ ಮಾಡಿದವರೇ, ಇಂದು ಸಂವಿಧಾನದ ಚಾಂಪಿಯನ್‌ಗಳು ಎಂಬಂತೆ ಬಿಂಬಿಸಿಕೊಳ್ಳುತ್ತಿದ್ದಾರೆ. ಸಂವಿಧಾನವನ್ನು ನಿರ್ಜೀವಿಕರಣಗೊಳಿಸಿದವರಿಂದಲೇ ಇಂದು ಸಂವಿಧಾನದ ಬಗ್ಗೆ ಭಾಷಣ ಕೇಳುತ್ತಿದ್ದೇವೆ.

ತೇಜಸ್ವಿ ಸೂರ್ಯ, ಬಿಜೆಪಿ ಸಂಸದ

‘ಸಾವರ್ಕರ್‌ಗೆ... ಅಪಹಾಸ್ಯ’

ಒಂದನೇ ಪುಟದಿಂದ...

ನೀವು (ಬಿಜೆಪಿಯವರು) ಸಂವಿಧಾನವನ್ನು ರಕ್ಷಿಸುತ್ತೇವೆ ಎಂಬ ಮಾತನ್ನು ಹೇಳುತ್ತಿರುವುದು ಸಂತೋಷದ ವಿಷಯ. ಆದರೆ, ನಿಮ್ಮಲ್ಲಿ ಒಂದು ಮಾತನ್ನು ಕೇಳಲು ಬಯಸುತ್ತೇನೆ. ನಿಮ್ಮ ನಾಯಕ ಹಾಗೂ ಮಾರ್ಗದರ್ಶಕನ ಮಾತಿಗೆ ನೀವು ಬದ್ಧವಾಗಿ ಇರುತ್ತೀರಾ? ಏಕೆಂದರೆ, ನೀವು ಸಂವಿಧಾನವನ್ನು ರಕ್ಷಿಸುವ ಕುರಿತು ಮಾತನಾಡುವಾಗ ಸಾವರ್ಕರ್ ಅವರನ್ನು ನಿಂದಿಸಿದಂತಲ್ಲವೇ? ಅವರಿಗೆ ಅಪಹಾಸ್ಯ ಮಾಡಿದಂತಲ್ಲವೇ? ಸಾವರ್ಕರ್ ಅವರ ಮಾನಹಾನಿ ಮಾಡಿದಂತಲ್ಲವೇ’ ಎಂದು ರಾಹುಲ್ ಕೇಳಿದರು.

ಹಾಥರಸ್ ಭೇಟಿಯನ್ನು ಉಲ್ಲೇಖಿಸಿ ಮಾತನಾಡಿದ ಅವರು, ‘ಸಾಮೂಹಿಕ ಅತ್ಯಾಚಾರ ಸಂತ್ರಸ್ತೆಯ ಕುಟುಂಬದವರು ಮನೆಯೊಳಗೆ ಬಂಧಿಗಳಾಗಿದ್ದಾರೆ. ಆದರೆ, ಆರೋಪಿಗಳು ಮುಕ್ತವಾಗಿ ಓಡಾಡುತ್ತಿದ್ದಾರೆ. ಉತ್ತರ ಪ್ರದೇಶದ ಬಿಜೆಪಿ ಸರ್ಕಾರ ತನ್ನ ಮಾತನ್ನು ಉಳಿಸಿಕೊಳ್ಳದಿದ್ದರೆ ಇಂಡಿಯಾ ಮೈತ್ರಿಕೂಟವು ಕುಟುಂಬವನ್ನು ಸ್ಥಳಾಂತರ ಮಾಡಲಿದೆ’ ಎಂದು ಹೇಳಿದರು.

‘ಅತ್ಯಾಚಾರಿಗಳು ಹೊರಗೆ ಇರಬೇಕು ಮತ್ತು ಸಂತ್ರಸ್ತೆಯ ಕುಟುಂಬದವರು ಒಳಗೆ ಇರಬೇಕು ಎಂದು ಸಂವಿಧಾನದಲ್ಲಿ ಬರೆದಿಲ್ಲ. ಇದನ್ನು ‘ಮನುಸ್ಮೃತಿ’ಯಲ್ಲಿ ಬರೆದಿರಬಹುದು. ಬಡವರನ್ನು ಸಂವಿಧಾನವೇ ರಕ್ಷಿಸುತ್ತದೆ ಎಂದು ಹೇಳಲು ಬಯಸುತ್ತೇನೆ’ ಎಂದು ಅವರು ಹೇಳಿದರು. ಸಂಭಲ್ ಹಿಂಸಾಚಾರವನ್ನು ಉಲ್ಲೇಖಿಸಿದ ಅವರು, ‘ದ್ವೇಷ ಹರಡಬೇಕು ಹಾಗೂ ಸಮುದಾಯಗಳು ಪರಸ್ಪರರ ವಿರುದ್ಧ ಹೋರಾಡಬೇಕು ಎಂಬುದನ್ನೂ ಸಂವಿದಾನದಲ್ಲಿ ಬರೆದಿಲ್ಲ’ ಎಂದು ಕುಟುಕಿದರು.

‘ಆಧುನಿಕ ಭಾರತದ ದಾಖಲೆಯೇ ನಮ್ಮ ಸಂವಿಧಾನ. ಪ್ರಾಚೀನ ಭಾರತದ ಮೌಲ್ಯಗಳ ಆಧಾರದ ಮೇಲೆಯೇ ಇದನ್ನು ರಚಿಸಲಾಗಿದೆ. ಶಿವ, ಗುರು ನಾನಕ್, ಬಸವಣ್ಣ, ಬುದ್ಧ ಮತ್ತು ಮಹಾವೀರರ ತತ್ವಗಳೂ ಅದರಲ್ಲಿ ಅಡಕವಾಗಿವೆ’ ಎಂದು ರಾಹುಲ್ ಹೇಳಿದರು.

ಸಾವರ್ಕರ್ ಕುರಿತಾದ ರಾಹುಲ್ ಹೇಳಿಕೆಗಳನ್ನು ಶಿವಸೇನೆಯ ಶ್ರೀಕಾಂತ್ ಶಿಂದೆ ಟೀಕಿಸಿದರು. ಸಾವರ್ಕರ್ ಪ್ರತಿಷ್ಠಾನದ ಕಾರ್ಯನಿರ್ವಾಹಕರಿಗೆ ಆಗಿನ ಪ್ರಧಾನಿ ಇಂದಿರಾ ಗಾಂಧಿ ಬರೆದ ಪತ್ರವನ್ನು ಅವರು ಉಲ್ಲೇಖಿಸಿದರು. ಪತ್ರದಲ್ಲಿ ಸಾವರ್ಕರ್ ಅವರನ್ನು ಭಾರತದ ಸಾಧಕ ಪುತ್ರ ಎಂದು ಬಣ್ಣಿಸಲಾಗಿತ್ತು ಎಂದು ನೆನಪಿಸಿದರು. ಶಿಂದೆ ಆರೋಪಕ್ಕೆ ಪ್ರತಿಕ್ರಿಯಿಸಿದ ರಾಹುಲ್, ‘ಮಹಾತ್ಮ ಗಾಂಧಿ, ನೆಹರು ಮತ್ತು ಇತರರು ಜೈಲಿಗೆ ಹೋಗಿದ್ದ ಸಂದರ್ಭದಲ್ಲಿ ಸಾವರ್ಕರ್ ಅವರು ಬ್ರಿಟಿಷರಿಗೆ ಕ್ಷಮಾಯಾಚನೆಯ ಪತ್ರ ಬರೆದಿದ್ದರು. ಇದನ್ನು ಅಜ್ಜಿ ಇಂದಿರಾ ಅವರೇ ನನಗೆ ಹೇಳಿದ್ದರು’ ಎಂದು ನೆನಪಿಸಿಕೊಂಡರು.

ಜಾತಿ ಗಣತಿ ನಡೆಸಲು ಮತ್ತು ಮೀಸಲಾತಿ ಮೇಲಿನ ಶೇ 50ರ ಮಿತಿ ತೆಗೆದುಹಾಕಲು ‘ಇಂಡಿಯಾ’ದ ಬದ್ಧತೆಯನ್ನು ಅವರು ಪುನರುಚ್ಚರಿಸಿದರು.

‘ಒಂದೇ ಚುನಾವಣೆ’: ಮಸೂದೆ ಮಂಡನೆ ನಾಳೆ

ನವದೆಹಲಿ (ಪಿಟಿಐ): ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ, ‘ಒಂದು ರಾಷ್ಟ್ರ, ಒಂದೇ ಚುನಾವಣೆ’ಗೆ ಸಂಬಂಧಿತ ಎರಡು ಪ್ರತ್ಯೇಕ ಮಸೂದೆಗಳನ್ನು ಸೋಮವಾರ ಲೋಕಸಭೆಯಲ್ಲಿ ಮಂಡಿಸಲಿದೆ.

ಲೋಕಸಭೆ ಕಲಾಪ ಕಾರ್ಯಸೂಚಿಯಲ್ಲಿ ಈ ಅಂಶ ಸೇರ್ಪಡೆಗೊಂಡಿದೆ. ಮಸೂದೆಗೆ ಸಮ್ಮತಿ ನೀಡಿ ಮೂಲಕ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸಂಪುಟ, ನಿಟ್ಟಿನಲ್ಲಿ ಪ್ರಮುಖ ಹೆಜ್ಜೆ ಇಟ್ಟಿತ್ತು.

ಕೇಂದ್ರ ಕಾನೂನು ಸಚಿವ ಅರುಣ್ ರಾಮ್ ಮೇಘವಾಲ್ ಅವರು ‘ಸಂವಿಧಾನ (129ನೇ ತಿದ್ದುಪಡಿ) ಮಸೂದೆ ಹಾಗೂ ‘ಕೇಂದ್ರ ಪ್ರಾಂತ್ಯವಾರು ಕಾಯ್ದೆಗಳು (ತಿದ್ದುಪಡಿ)’ ಮಸೂದೆ ಮಂಡಿಸಲಿದ್ದಾರೆ.

ವಿಧಾನಸಭೆ ಅಸ್ತಿತ್ವದಲ್ಲಿರುವ ಮೂರು ಕೇಂದ್ರಾಡಳಿತ ಪ್ರದೇಶಗಳಿಗೆ ಸಂಬಂಧಿಸಿರುವ ಕಾಯ್ದೆ ಮತ್ತು ರಾಜ್ಯ ವಿಧಾನಸಭೆಗಳಿಗೆ ಸಂಬಂಧಿಸಿದ ಮಸೂದೆಗೆ ಒಗ್ಗೂಡಿಸುವ ಒಂದು ಸರಳ ಮಸೂದೆ ಹಾಗೂ ಸಂವಿಧಾನ (ತಿದ್ದುಪಡಿ) ಮಸೂದೆಗಳಿಗೆ ಕೇಂದ್ರ ಸಂಪುಟ ಈಚೆಗೆ ಅನುಮೋದನೆ ನೀಡಿತ್ತು.



ಉದ್ದೇಶಿತ ತಿದ್ದುಪಡಿ ಮಸೂದೆಗಳು ದೇಶದಲ್ಲಿ ಲೋಕಸಭೆ ಹಾಗೂ ವಿವಿಧ ರಾಜ್ಯಗಳ ವಿಧಾನಸಭೆಗೆ ಏಕಕಾಲದಲ್ಲಿ ಚುನಾವಣೆಯನ್ನು ನಡೆಸಲು ಅವಕಾಶ ಕಲ್ಪಿಸಲಿವೆ.

ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ನೇತೃತ್ವದ ಸಮಿತಿ ರಾಷ್ಟ್ರೀಯ, ರಾಜ್ಯ ಚುನಾವಣೆಗಳ ಜೊತೆಗೆ ಸ್ಥಳೀಯ ಸಂಸ್ಥೆಗಳಿಗೂ ಚುನಾವಣೆ ನಡೆಸಲು ಪ್ರಸ್ತಾಪ ಮಾಡಿತ್ತು. ಆದರೆ, ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ಅಂಶವನ್ನು ‘ಸದ್ಯಕ್ಕೆ’ ಪರಿಗಣಿಸದಿರಲು ಸಂಪುಟ ತೀರ್ಮಾನಿಸಿತ್ತು.

‘ವೆಚ್ಚ ತಗ್ಗಲಿದೆ, ಸಮಯ ಉಳಿಯಲಿದೆ...’

ನವದೆಹಲಿ (ಪಿಟಿಐ): ಚುನಾವಣೆಗಳು ದುಬಾರಿ ಆಗುತ್ತಿವೆ ಹಾಗೂ ಹೆಚ್ಚಿನ ಸಮಯ ತಗುಲುತ್ತಿದೆ ಎಂಬುದೂ ಸೇರಿ ವಿವಿಧ ಕಾರಣಗಳಿಗಾಗಿ ಏಕಕಾಲಕ್ಕೆ ಚುನಾವಣೆ ನಡೆಸುವುದು ಅಗತ್ಯ ಎಂದು ಉಲ್ಲೇಖಿತ ಮಸೂದೆಯಲ್ಲಿ ಹೇಳಲಾಗಿದೆ.

ಲೋಕಸಭೆಯಲ್ಲಿ ಮಂಡಿಸಲಿರುವ ಕರಡು ಮಸೂದೆ ಪ್ರಕಾರ, ‘ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ನೀತಿ ಸಂಹಿತೆ ಜಾರಿಯಿಂದ ಅಭಿವೃದ್ಧಿ ಯೋಜನೆಗಳ ಮೇಲೆ ಪರಿಣಾಮವಾಗಲಿದೆ. ಸಾಮಾನ್ಯ ಜನಜೀವನ ಏರುಪೇರಾಗಲಿದೆ.’

ಆಗಾಗ್ಗೆ ವಿವಿಧೆಡೆ ನೀತಿ ಸಂಹಿತೆ ಜಾರಿ, ಅಧಿಕ ಮಾನವಶಕ್ತಿಯ ಬಳಕೆಯಿಂದಾಗಿ ಅಭಿವೃದ್ಧಿ ಯೋಜನೆಗಳ ಜಾರಿ ಅವಧಿಯೂ ಲಂಬಿಸಲಿದೆ ಎಂದು ಸಂವಿಧಾನ (129ನೇ) ತಿದ್ದುಪಡಿ ಮಸೂದೆಯ ಕರಡುಪ್ರತಿಯಲ್ಲಿ ಉಲ್ಲೇಖಿಸಲಾಗಿದೆ.

ಇದನ್ನು ತಪ್ಪಿಸಲು ಲೋಕಸಭೆ, ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸಲು ಆಗುವಂತೆ ಮೂರು ಭಿನ್ನ ವಿಧಿಗಳಿಗೆ ತಿದ್ದುಪಡಿ ತರುವುದು ಹಾಗೂ ಸಂವಿಧಾನಕ್ಕೆ ಹೊಸ ವಿಧಿ ಸೇರ್ಪಡೆಗೊಳಿಸುವುದು ಕೇಂದ್ರದ ಈಗಿನ ಉದ್ದೇಶ.

ಕರಡು ಮಸೂದೆಯ ಪ್ರಕಾರ, ನೂತನ ಲೋಕಸಭೆಯ ಅವಧಿ ಅದು ಅಸ್ತಿತ್ವಕ್ಕೆ ಬಂದ ದಿನದಿಂದ ಐದು ವರ್ಷಗಳು. ವಿಧಾನಸಭೆಗಳ ಅವಧಿ ಚುನಾವಣೆ ನಡೆದು ಅಸ್ತಿತ್ವಕ್ಕೆ ಬಂದ ದಿನದಿಂದ ಲೋಕಸಭೆ ಪೂರ್ಣಾವಧಿ ಮುಗಿಯುವವರೆಗೆ ಇರಲಿದೆ.

ಒಂದು ವೇಳೆ ರಾಜ್ಯಗಳಲ್ಲಿ ವಿಧಾನಸಭೆಯನ್ನು ಅವಧಿ ಪೂರ್ವದಲ್ಲಿ ವಿಸರ್ಜನೆ ಮಾಡುವ ಸಂದರ್ಭ ಎದುರಾದಲ್ಲಿ, ಆ ವಿಧಾನಸಭೆ ಅವಧಿಯ ಬಾಕಿ ಉಳಿದಿರುವ ನಿರ್ದಿಷ್ಟ ಅವಧಿಗೆ ಅನ್ವಯಿಸಿದಂತೆ ಚುನಾವಣೆ ನಡೆಸಲಾಗುವುದು.

ಜನಪ್ರತಿನಿಧಿಗಳ ಸಭೆ (ಲೋಕಸಭೆ) ಹಾಗೂ ಎಲ್ಲ ರಾಜ್ಯಗಳ ವಿಧಾನಸಭೆಗಳಿಗೆ ಈ ಹಿಂದೆ 1951–52, 1957, 1962 ಮತ್ತು 1967ರಲ್ಲಿ ಏಕಕಾಲದಲ್ಲಿ ಚುನಾವಣೆ ನಡೆಸಲಾಗಿತ್ತು. ಆದರೆ, 1968 ಮತ್ತು 1969ರಲ್ಲಿ ಕೆಲ ವಿಧಾನಸಭೆಗಳನ್ನು ಅವಧಿ ಪೂರ್ವದಲ್ಲಿಯೇ ವಿಸರ್ಜಿಸಿದ ಸಂದರ್ಭ ಎದುರಾದ್ದರಿಂದ ಏಕಕಾಲದಲ್ಲಿ ಚುನಾವಣೆ ನಡೆಸುವ ವ್ಯವಸ್ಥೆ ಏರುಪೇರು ಗೊಂಡಿತು ಎಂದೂ ಉಲ್ಲೇಖಿಸಲಾಗಿದೆ.

‘ಸಂವಿಧಾನದ ಮೇಲೆ ಕಾಂಗ್ರೆಸ್ ಪ್ರಹಾರ’

ಒಂದನೇ ಪುಟದಿಂದ..

ದೇಶದ ರಾಜಕಾರಣದಿಂದ ಪರಿವಾರವಾದ ಮುಕ್ತಗೊಳಿಸಬೇಕು, ಭ್ರಷ್ಟಾಚಾರದ ವಿರುದ್ಧ ಶೂನ್ಯ ಸಹಿಷ್ಣುತೆ, ಧರ್ಮಾಧಾರಿತ ಮೀಸಲಾತಿ ಪರಿಚಯಿಸಬಾರದು ಎಂಬುದು ಸೇರಿದಂತೆ 11 ಸಂಕಲ್ಪಗಳನ್ನು ಮೋದಿ ಅವರು ಪುನರುಚ್ಚರಿಸಿದರು. ಇದರಿಂದ 2047ರ ವೇಳೆಗೆ ವಿಕಸಿತ ಭಾರತ ಆಗಲಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

‘ಭಾರತವು 2047ರ ವೇಳೆಗೆ ಅಭಿವೃದ್ಧಿ ಹೊಂದಿದ ದೇಶವಾಗಲು ಸಂಕಲ್ಪ ಮಾಡಿದೆ. ಈ ಗುರಿಯನ್ನು ಸಾಧಿಸಲು ದೇಶದ ಏಕತೆ ಅತಿದೊಡ್ಡ ಅವಶ್ಯಕತೆಯಾಗಿದೆ. ನಮ್ಮ ಸಂವಿಧಾನವೇ ನಮ್ಮ ಏಕತೆಗೆ ಆಧಾರವಾಗಿದೆ’ ಎಂದು ಮೋದಿ ಪ್ರತಿಪಾದಿಸಿದರು. ‘ಆದಾಗ್ಯೂ, ಸ್ವಾತಂತ್ರ್ಯದ ನಂತರ ಕೆಲವರ ಸ್ವಾರ್ಥದಿಂದಾಗಿ ದೇಶದ ಏಕತೆಯ ಮೇಲೆ ದಾಳಿಯಾಗಿದೆ. ಗುಲಾಮ ಮನಸ್ಥಿತಿಯೊಂದಿಗೆ ಬೆಳೆದವರು ವೈವಿಧ್ಯದಲ್ಲಿ ವಿರೋಧಾಭಾಸಗಳನ್ನು ಹುಡುಕಿದರು’ ಎಂದರು.

‘2014ರ ನಂತರ ಸಂವಿಧಾನವನ್ನು ಬಲಪಡಿಸಲಾಯಿತು. ಈ ಸಮಾಜದಲ್ಲಿರುವ ಕೆಟ್ಟ ಅಂಶಗಳಿಗೆ ಚಿಕಿತ್ಸೆ ನೀಡಲು ನಾವು ಶ್ರಮಿಸಿದ್ದೇವೆ. ನಾವು ಸಂವಿಧಾನದಲ್ಲಿ ತಿದ್ದುಪಡಿಗಳನ್ನು ಮಾಡಿದ್ದೇವೆ. ಆದರೆ, ಈ ದೇಶವನ್ನು ಒಗ್ಗೂಡಿಸಲು ಮಾತ್ರ ಈ ಕೆಲಸ ಮಾಡಿದ್ದೇವೆ. ಜನರ ಇಚ್ಛೆಯಿಂದ ಮಾತ್ರ ಇದನ್ನು ಮಾಡಲಾಗಿದೆ’ ಎಂದು ಅವರು ಸ್ಪಷ್ಟಪಡಿಸಿದರು.

‘ಪರಿವಾರ ರಾಜಕಾರಣದಿಂದ ನಮ್ಮ ಪ್ರಜಾಪ್ರಭುತ್ವಕ್ಕೆ ಹಾನಿಯಾಗಿರುವ ಬಗ್ಗೆ ನಾವು ಯೋಚಿಸಬೇಕು. ಕುಟುಂಬವಾದದ ಹಂಗಿಲ್ಲದ ಎಲ್ಲ ರಾಜಕೀಯ ಪಕ್ಷಗಳು ನಮ್ಮ ಯುವಕರನ್ನು ಮೇಲಕ್ಕೆತ್ತಲು ಒಗ್ಗೂಡಬೇಕು. ದೇಶದ ರಾಜಕೀಯಕ್ಕೆ ಶುದ್ಧ ಗಾಳಿ, ಹೊಸ ಶಕ್ತಿ ಬೇಕು. ವಂಶವಾದವನ್ನು ನಿರ್ಮೂಲನೆ ಮಾಡಬೇಕು’ ಎಂದು ಅವರು ಹೇಳಿದರು.

‘ಸಂವಿಧಾನ ನಮಗೆ ಅಡ್ಡಿಯಾದರೆ ಅದಕ್ಕೆ ಬದಲಾವಣೆ ತರಬೇಕು ಎಂದು ನೆಹರೂ ಅವರು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದರು. ಆಗ ದೇಶ ಸುಮ್ಮನೆ ಕುಳಿತುಕೊಳ್ಳಲಿಲ್ಲ. ರಾಷ್ಟ್ರಪತಿ ಹಾಗೂ ಲೋಕಸಭಾಧ್ಯಕ್ಷರು ನೆಹರೂ ಅವರಿಗೆ ಎಚ್ಚರಿಕೆ ನೀಡಿ ತಡೆಯಲು ಯತ್ನಿಸಿದರು. ಆದರೆ, ನೆಹರೂ ಅವರು ತಮ್ಮದೇ ಸಂವಿಧಾನ ಅನುಸರಿಸಿದರು. ಸಂವಿಧಾನವನ್ನು ತಿದ್ದುವ ಈ ಚಟ ಕಾಂಗ್ರೆಸ್‌ಗೆ ಅಂಟಿಕೊಂಡಿತು. ಮತ್ತೆ ಮತ್ತೆ ಅದನ್ನು ಪುನರಾವರ್ತಿಸಿದರು’ ಎಂದು ವಾಗ್ದಾಳಿ ನಡೆಸಿದರು.

’ಕಾಂಗ್ರೆಸ್ ಸಮಿತಿಗಳ ಪ್ರಕಾರ, ಸರ್ದಾರ್ ವಲ್ಲಭಬಾಯಿ ಪಟೇಲ್ ಪ್ರಧಾನಿ ಆಗಬೇಕಿತ್ತು. ಆದರೆ, ನೆಹರೂ ಅವರಿಗೆ ಅನುಕೂಲ ಮಾಡಿಕೊಡಲು ಇದನ್ನು ನಿರ್ಲಕ್ಷ್ಯ ಮಾಡಲಾಯಿತು. ಕಾಂಗ್ರೆಸ್ ಪಕ್ಷವು ತನ್ನದೇ ಪಕ್ಷದ ಸಂವಿಧಾನವನ್ನು ಅನುಸರಿಸುವುದಿಲ್ಲ. ಅಂತಹ ಪಕ್ಷವು ದೇಶದ ಸಂವಿಧಾನವನ್ನು ಹೇಗೆ ಅನುಸರಿಸುತ್ತದೆ’ ಎಂದು ಅವರು ಪ್ರಶ್ನಿಸಿದರು.

‘ಕಾಂಗ್ರೆಸ್ ಪಕ್ಷವು ಡಾ. ಬಿ.ಆರ್. ಅಂಬೇಡ್ಕರ್ ವಿರುದ್ಧ ದ್ವೇಷ ಹೊಂದಿತ್ತು. ಅಟಲ್ ಬಿಹಾರಿ ವಾಜಪೇಯಿ ಸರ್ಕಾರದ ಅವಧಿಯಲ್ಲಿ ಅಂಬೇಡ್ಕರ್ ಅವರ ಸ್ಮಾರಕವನ್ನು ನಿರ್ಮಿಸಲು ನಿರ್ಧರಿಸಲಾಗಿತ್ತು. ಆದರೆ, ಯುಪಿಎ ಸರ್ಕಾರವು ಈ ಯೋಜನೆ ಮುಂದುವರಿಯದಂತೆ ನೋಡಿಕೊಂಡಿತು. ನಾವು 2014ರಲ್ಲಿ ಅಧಿಕಾರಕ್ಕೆ ಬಂದಾಗ, ಅಲಿಪುರ ರಸ್ತೆಯಲ್ಲಿ ಸ್ಮಾರಕ ನಿರ್ಮಿಸಿದೆವು’ ಎಂದು ಅವರು ನೆನಪಿಸಿಕೊಂಡರು.

ಸಂವಿಧಾನವು ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಿದೆ. ದೇಶವು ಈಗ ಮಹಿಳಾ ನೇತೃತ್ವದ ಅಭಿವೃದ್ಧಿಯನ್ನು ನೋಡುತ್ತಿದೆ ಎಂದು ಮೋದಿ ಹೇಳಿದರು. ’ಏಕರೂಪ ನಾಗರಿಕ ಸಂಹಿತೆಯು ಸಂವಿಧಾನ ಸಭೆಯ ಚರ್ಚೆಯ ವಿಷಯವಾಗಿತ್ತು. ಜನರು ಆಯ್ಕೆ ಮಾಡಿದ ಸರ್ಕಾರಗಳು ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳಬೇಕು ಎಂದು ಅವರು ನಿರ್ಧರಿಸಿದರು. ಸುಪ್ರೀಂ ಕೋರ್ಟ್ ಕೂಡ ಏಕರೂಪ ನಾಗರಿಕ ಸಂಹಿತೆ ಜಾರಿಗೆ ತರಬೇಕು ಎಂದು ಪದೇ ಪದೇ ಹೇಳುತ್ತಿದೆ. ನಾವು ದೇಶದಲ್ಲಿ ಜಾತ್ಯತೀತ ಸಂಹಿತೆ ತರಲು ಶ್ರಮಿಸುತ್ತಿದ್ದೇವೆ’ ಎಂದು ಅವರು ಹೇಳಿದರು.

‘ರಾಜ್‌ಕಪೂರ್ ಶಾಶ್ವತ ಶೋಮ್ಯಾನ್’

ನವದೆಹಲಿ (ಪಿಟಿಐ): ಪ್ರಸಿದ್ಧ ನಟ, ನಿರ್ದೇಶಕ ರಾಜ್ ಕಪೂರ್ ಜನ್ಮ ಶತಮಾನೋತ್ಸವದ ಸಂದರ್ಭದಲ್ಲಿ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಶ್ರದ್ಧಾಂಜಲಿ ಸಲ್ಲಿಸಿದ್ದು, ಅವರನ್ನು ‘ಶಾಶ್ವತ ಶೋಮ್ಯಾನ್’ ಎಂದು ಶ್ಲಾಘಿಸಿದ್ದಾರೆ.

ರಾಜ್‌ಕಪೂರ್

‘ರಾಜ್ ಕಪೂರ್ ಅವರು ದೂರದೃಷ್ಟಿ ಉಳ್ಳ ಸಿನಿಮಾ ನಿರ್ಮಾಪಕ, ನಟ ಆಗಿದ್ದರು. ಅವರೊಬ್ಬ ಶಾಶ್ವತ ಶೋಮ್ಯಾನ್. ಅವರ ಪ್ರತಿಭೆಯು ತಲೆಮಾರುಗಳನ್ನು ಮೀರಿ, ಭಾರತೀಯ ಮತ್ತು ಜಾಗತಿಕ ಚಿತ್ರರಂಗದಲ್ಲಿ ಅಳಿಸಲಾಗದ ಛಾಪು ಮೂಡಿಸಿದೆ’ ಎಂದು ‘ಎಕ್ಸ್’ನಲ್ಲಿ ಸಂದೇಶ ಹಂಚಿಕೊಂಡಿದ್ದಾರೆ.

ಕಪೂರ್ ಕುಟುಂಬದ ಸದಸ್ಯರನ್ನು ಪ್ರಧಾನಿ ಇತ್ತೀಚೆಗೆ ಭೇಟಿಯಾಗಿ, ಅವರನ್ನು ಸ್ಮರಿಸಿದ್ದರು. ರಾಜ್ ಕಪೂರ್ 1924ರ ಡಿ.14ರಂದು ಈಗಿನ ಪಾಕಿಸ್ತಾನದಲ್ಲಿರುವ ಪ್ರದೇಶದಲ್ಲಿ ಅಂದಿನ ಜನಪ್ರಿಯ ನಟ ಪೃಥ್ವಿರಾಜ್ ಕಪೂರ್ ಅವರ ಪುತ್ರನಾಗಿ ಜನಿಸಿದ್ದರು.

46 ವರ್ಷದ ಬಳಿಕ ತೆರೆದ ದೇಗುಲ

ಸಂಭಲ್ (ಉತ್ತರ ಪ್ರದೇಶ) (ಪಿಟಿಐ): ಸಂಭಲ್ ಪಟ್ಟಣದಲ್ಲಿ ಕೋಮುಗಲಭೆ ಹಿನ್ನೆಲೆಯಲ್ಲಿ 1978ರಿಂದಲೂ ಮುಚ್ಚಿದ್ದ ದೇವಸ್ಥಾನದ ಬೀಗವನ್ನು ಜಿಲ್ಲಾಡಳಿತ ಶುಕ್ರವಾರ ತೆರೆಯಿತು.

‘ಶಾಹಿ ಜಾಮಾ ಮಸೀದಿಯಿಂದ ಸ್ವಲ್ಪವೇ ದೂರದ ಅಂತರದಲ್ಲಿರುವ ಈ ದೇವಸ್ಥಾನವು ಒತ್ತುವರಿ ತೆರವು ಕಾರ್ಯಾಚರಣೆ ವೇಳೆ ನಮ್ಮ ಗಮನಕ್ಕೆ ಬಂತು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇದು ಭಸ್ಮ ಶಂಕರ ದೇವಸ್ಥಾನವಾಗಿದ್ದು, ಇಲ್ಲಿ ಹನುಮಂತನ ಮೂರ್ತಿ ಹಾಗೂ ಶಿವಲಿಂಗ ಇವೆ. 1978ರಲ್ಲಿ ನಡೆದ ಕೋಮುಗಲಭೆ ವೇಳೆ ಈ ದೇವಸ್ಥಾನಕ್ಕೆ ಬೀಗ ಹಾಕಲಾಗಿತ್ತು. ಅಲ್ಲದೇ, ಇಲ್ಲಿನ ಹಿಂದೂಗಳನ್ನು ಬೇರೆಡೆಗೆ ಸ್ಥಳಾಂತರಿಸಲಾಗಿತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ.

‘ಈ ಪ್ರದೇಶವನ್ನು ಪರಿಶೀಲಿಸುತ್ತಿದ್ದಾಗ ಇಲ್ಲಿ ದೇವಸ್ಥಾನವಿರುವುದು ನಮ್ಮ ಗಮನಕ್ಕೆ ಬಂತು. ತಕ್ಷಣ ನಾನು ಜಿಲ್ಲಾಡಳಿತದ ಗಮನಕ್ಕೆ ತಂದೆ’ ಎಂದು ಈ ಪ್ರದೇಶದಲ್ಲಿ ವಿದ್ಯುತ್ ಕಳವು ವಿರುದ್ಧ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ ವಂದನಾ ಮಿಶ್ರಾ ತಿಳಿಸಿದ್ದಾರೆ.

ದೇವಸ್ಥಾನದ ಬಳಿ ಬಾವಿಯೂ ಇದ್ದು, ಅದನ್ನೂ ತೆರೆಯಲು ಅಧಿಕಾರಿಗಳು ಯೋಜನೆ ಹಾಕಿಕೊಂಡಿದ್ದಾರೆ.

‘1978ರಲ್ಲಿ ಕೋಮುಗಲಭೆ ಬಳಿಕ ನಮ್ಮ ಸಮುದಾಯದವರನ್ನು ಇಲ್ಲಿಂದ ಬಲವಂತವಾಗಿ ಸ್ಥಳಾಂತರಿಸಲಾಗಿತ್ತು. ಇದು ನಮ್ಮ ಕುಲದೇವರ ದೇವಸ್ಥಾನವಾಗಿದ್ದು, ಅಂದಿನಿಂದ ಬೀಗಹಾಕಲಾಗಿತ್ತು’ ಎಂದು 82 ವರ್ಷದ ವಿಷ್ಣು ಶಂಕರ್ ರಸ್ತೋಗಿ ಎಂಬುವವರು ತಿಳಿಸಿದ್ದಾರೆ.

ಇಲ್ಲಿನ ಶಾಹಿ ಜಾಮಾ ಮಸೀದಿಯ ಸಮೀಕ್ಷೆಗೆ ಕೋರ್ಟ್ ಆದೇಶ ನೀಡಿದ ಬಳಿಕ ನ.24ರಂದು ನಡೆದ ಗಲಭೆಯಲ್ಲಿ ನಾಲ್ವರು ಮೃತಪಟ್ಟಿದ್ದರು. ಅದಾದ ಕೆಲವು ವಾರಗಳ ನಂತರ ಜಿಲ್ಲಾಡಳಿತವು ಈ ಮಸೀದಿಯ ಸುತ್ತಲಿನ ಪ್ರದೇಶದಲ್ಲಿ ಒತ್ತುವರಿ ತೆರವು ಹಾಗೂ ವಿದ್ಯುತ್ ಕಳವು ವಿರುದ್ಧ ಕಾರ್ಯಾಚರಣೆ ಕೈಗೊಂಡಿತ್ತು.

ಉತ್ತರ ಪ್ರದೇಶದ ಸಂಭಲ್ ಜಿಲ್ಲೆಯ ಕಗ್ಗು ಸರಾಯ್ ಎಂಬ ಪ್ರದೇಶದಲ್ಲಿ 46 ವರ್ಷದ ಬಳಿಕ ಬಾಗಿಲು ತೆರೆದ ದೇವಸ್ಥಾನದೊಳಗೆ ಕಂಡ ಆಂಜನೇಯ ಮೂರ್ತಿ ಹಾಗೂ ಶಿವಲಿಂಗ

‘ನಕಲಿ ಇ.ಡಿ ದಾಳಿ: ಎಎಪಿ ಕಾರ್ಯಕರ್ತ ಸೂತ್ರಧಾರ’

ಭುಜ್ (ಪಿಟಿಐ): ಕಛ್ ಜಿಲ್ಲೆಯಲ್ಲಿ ಡಿಸೆಂಬರ್ ಆರಂಭದಲ್ಲಿ ಜಾರಿ ನಿರ್ದೇಶನಾಲಯದ (ಇ.ಡಿ) ಹೆಸರಿನಲ್ಲಿ ನಡೆದ ನಕಲಿ ದಾಳಿಯ ರೂವಾರಿ ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಕರ್ತ ಎಂದು ಗುಜರಾತ್ ಪೊಲೀಸರು ಶನಿವಾರ ಆರೋಪಿಸಿದ್ದಾರೆ.

ಅಲ್ಲದೇ, ಅಕ್ರಮವಾಗಿ ಗಳಿಸಿದ ಹಣವನ್ನು ಪಕ್ಷದ ಚಟುವಟಿಕೆಗಳಿಗೆ ನೀಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಡಿ. 2ರಂದು ರಾಧಿಕಾ ಜ್ಯುವೆಲರ್ಸ್ ಮೇಲೆ ನಕಲಿ ಇ.ಡಿ ದಾಳಿ ನಡೆಸಿ ಸುಮಾರು ₹22.25 ಲಕ್ಷ ಮೌಲ್ಯದ ಚಿನ್ನಾಭರಣಗಳನ್ನು ಕಳವು ಮಾಡಿದ ಆರೋಪದಡಿ ಅಬ್ದುಲ್ ಸತ್ತಾರ್ ಮಜೋತಿ ಸೇರಿದಂತೆ 12 ಜನರನ್ನು ಪೊಲೀಸರು ಡಿ.4ರಂದು ಬಂಧಿಸಿದ್ದಾರೆ.

ಮಜೋತಿ ಅವರ ಬ್ಯಾಂಕ್ ವಿವರಗಳನ್ನು ತನಿಖೆಗೆ ಒಳಪಡಿಸಲಾಗುತ್ತಿದ್ದು, ಅಗತ್ಯವಿದ್ದರೆ ತನಿಖಾಧಿಕಾರಿಗಳು ಪಕ್ಷದ ಇತರ ಕಾರ್ಯಕರ್ತರನ್ನೂ ವಿಚಾರಣೆಗೆ ಕರೆಯಲಿದ್ದಾರೆ ಎಂದು ಅವರು ಹೇಳಿದರು.

ಓವರ್‌ಹೆಡ್ ಟ್ಯಾಂಕ್ ಕುಸಿದು 3 ವಿದ್ಯಾರ್ಥಿಗಳ ಸಾವು

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದ ನಹರ್‌ಲಾಗುನ್ ಎಂಬಲ್ಲಿ ಶನಿವಾರ ಓವರ್‌ಹೆಡ್ ಟ್ಯಾಂಕ್ ಕುಸಿದಿದ್ದರಿಂದ ಖಾಸಗಿ ಶಾಲೆಯ ಮೂವರು ವಿದ್ಯಾರ್ಥಿಗಳು ಮೃತಪಟ್ಟಿದ್ದಾರೆ.

ಸೇಂಟ್ ಆಲ್ಫೊನ್ಸಾ ಶಾಲೆಯ ಆವರಣದಲ್ಲಿ ಮಕ್ಕಳು ಆಟವಾಡುತ್ತಿದ್ದಾಗ ಟ್ಯಾಂಕ್ ಕುಸಿಯಿತು. ಅವಘಡದಲ್ಲಿ ಮೂವರು ಮೃತಪಟ್ಟಿದ್ದು, ಆರು ವಿದ್ಯಾರ್ಥಿಗಳಿಗೆ ಗಾಯಗಳಾಗಿವೆ ಎಂದು ನಹರ್‌ಲಾಗುನ್ ಎಸ್‌ಪಿ ಮಿಹಿನ್ ಗಾಂಬೊ ತಿಳಿಸಿದ್ದಾರೆ.

ಟ್ಯಾಂಕ್ ಕುಸಿದುಬಿದ್ದಾಗ ಗಾಯಗೊಂಡ ಮಕ್ಕಳನ್ನು ಟೋಮೊ ರೀಬಾ ಆಸ್ಪತ್ರೆಗೆ ಸಾಗಿಸಲಾಯಿತು. ಅಲ್ಲಿ ಮೂವರು ವಿದ್ಯಾರ್ಥಿಗಳು ಮೃತಪಟ್ಟಿರುವುದನ್ನು ವೈದ್ಯರು ಖಚಿತಪಡಿಸಿದರು. ಮೃತಪಟ್ಟ ವಿದ್ಯಾರ್ಥಿಗಳು 9ನೇ ತರಗತಿಯಲ್ಲಿ ಓದುತ್ತಿದ್ದರು. ಗಾಯಗೊಂಡವರು 6 ಹಾಗೂ 7ನೇ ತರಗತಿಯ ವಿದ್ಯಾರ್ಥಿಗಳು. ಶಾಲೆಯ ಪ್ರಾಂಶುಪಾಲರು, ಮಾಲೀಕರು ಹಾಗೂ ಸಿಬ್ಬಂದಿಯನ್ನು ವಿಚಾರಣೆಗೆ ಒಳಪಡಿಸಿದ್ದಾರೆ.

ಅಂಕದ ಪರದೆ ಭಿನ್ನ ರಂಗ ಪ್ರಯೋಗ

11

ಸಮ್ಮೇಳನದ ರಥ ಬದಲಾಗಲಿ ಪಥ

ಕಲಬುರಗಿಯಲ್ಲಿ ನಡೆದ ಸಾಹಿತ್ಯ ಜಾತ್ರೆಯ ನೋಟ

ಚಿತ್ರಗಳು: ತಾಜುದ್ದೀನ್ ಆಜಾದ್

ಸಾಹಿತ್ಯ ಸಮ್ಮೇಳನಗಳು ಅರ್ಥಪೂರ್ಣಗೊಳ್ಳುವುದು ಹೇಗೆ? ಸಮ್ಮೇಳನಗಳ ಸ್ವರೂಪ ಹೇಗಿರಬೇಕು? ಮಂಡ್ಯದಲ್ಲಿ ನಡೆಯಲಿರುವ ಸಾಹಿತ್ಯ ಸಮ್ಮೇಳನ ಹುಟ್ಟು ಹಾಕಿರುವ ಚರ್ಚೆಗಳಲ್ಲಿ ಈ ಪ್ರಶ್ನೆಗಳಿಗೆ ಉತ್ತರವೂ ಇರುವಂತಿದೆ. ಸಮ್ಮೇಳನಗಳು ನಡೆದುಬಂದ ದಾರಿಯಲ್ಲಿ ನಡೆಯಬೇಕಾದ ದಾರಿಗೆ ಬೆಳಕಿನ ಬಿತ್ತಗಳೂ ಇವೆ.

ರಘುನಾಥ ಚ.ಹ.

ಸಾಹಿತ್ಯ ಸಮ್ಮೇಳನವೊಂದರ ಸಾರ್ಥಕತೆ ಜನರ ವಿವೇಕವನ್ನು ಜಾಗೃತಗೊಳಿಸುವುದು ಎಂದಾದಲ್ಲಿ, ಮಂಡ್ಯದಲ್ಲಿ ನಡೆಯಲಿರುವ ಎಂಬತ್ತೇಳನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಆರಂಭಕ್ಕೆ ಮೊದಲೇ ಯಶಸ್ವಿಯಾಗಿದೆ.

ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ಸಾಹಿತಿಗಳಿಗೇ ಸಲ್ಲಬೇಕು ಹಾಗೂ ಸಮ್ಮೇಳನದಲ್ಲಿ ಮಾಂಸಾಹಾರವೂ ಇರಬೇಕು ಎನ್ನುವ ಚರ್ಚೆಗಳು ಸಮ್ಮೇಳನಕ್ಕೆ ಮುನ್ನ ಸಹೃದಯರ ಗಮನಸೆಳೆದವು. ನೂರಾರು ವರ್ಷಗಳಿಂದ ನಾಡಿನ ಆತ್ಮಸಾಕ್ಷಿಯ ಸಂಕೇತದಂತಿರುವ ಸಾಹಿತಿಯನ್ನು ಅಪ್ರಸ್ತುತಗೊಳಿಸುವ ಪ್ರಯತ್ನ ಇತ್ತೀಚಿನ ವರ್ಷಗಳಲ್ಲಿ ಪ್ರಜ್ಞಾಪೂರ್ವಕವಾಗಿ ನಡೆಯುತ್ತಿದೆ. ಈ ಪ್ರಯತ್ನದ ಭಾಗವಾಗಿ, ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯಿಂದಲೂ ಸಾಹಿತಿಯನ್ನು ದೂರವಿಡುವ ಸೂಚನೆ ಕಾಣಿಸಿತ್ತು. ಆದರೆ, ಸಹೃದಯರ ಮಧ್ಯಪ್ರವೇಶದಿಂದ ಸಾಹಿತ್ಯೇತರ ಕ್ಷೇತ್ರಗಳ ಸಾಧಕರತ್ತ ವಾಲುತ್ತಿದ್ದ ಅಧ್ಯಕ್ಷತೆಯ ಗೌರವ ಸಾಹಿತಿಗೇ ಸಲ್ಲುವಂತಾಗಿದೆ.

ಊಟವೂ ಸಾಹಿತ್ಯ ಮೇಳವೂ...

ಸಮ್ಮೇಳನದಲ್ಲಿ ಮಾಂಸಾಹಾರ ನೀಡುವುದರ ಬಗ್ಗೆಯೂ ಕನ್ನಡಿಗರು ಧ್ವನಿ ಎತ್ತಿದ್ದಾರೆ. ಊಟೋಪಚಾರದ ಹೊಣೆಗಾರಿಕೆ ತನ್ನದಲ್ಲವೆಂದು ಹೇಳುವ ಮೂಲಕ ಕೈತೊಳೆದುಕೊಳ್ಳುವ ಜಾಣ್ಮೆಯನ್ನು ಪರಿಷತ್ತು ಪ್ರದರ್ಶಿಸುತ್ತಿದೆಯಾದರೂ, ಸಾಹಿತ್ಯ ಸಮ್ಮೇಳನದಲ್ಲಿ ‘ಆಹಾರದ ಸಮಾನತೆ’ ಅಗತ್ಯ ಎನ್ನುವ ವಾದವನ್ನು ಮುಂದಿನ ಸಮ್ಮೇಳನಗಳಲ್ಲಿ ಸುಲಭಕ್ಕೆ ತಳ್ಳಿಹಾಕಲಾಗದ ಸ್ಥಿತಿ ರೂಪುಗೊಂಡಿದೆ.

ಸಾಹಿತ್ಯದ ಬದಲು ಊಟದ ಬಗ್ಗೆ ಚರ್ಚೆಯಾಗುತ್ತಿರುವುದು ಸರಿಯಲ್ಲ ಎನ್ನುವುದು ಕೆಲವರ ಅಭಿಪ್ರಾಯ. ಹೀಗೆ ಅಭಿಪ್ರಾಯಪಡುವವರಿಗೆ ಊಟವೂ ಸಾಹಿತ್ಯದ ಭಾಗ ಎನ್ನುವುದೇ ಉತ್ತರ. ಜೀವನಕ್ಕೆ ಸಂಬಂಧಿಸಿದ ಯಾವುದೇ ಸಂಗತಿಯಿಂದ ಸಾಹಿತ್ಯವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ಇತ್ತೀಚಿನ ವರ್ಷಗಳಲ್ಲಿ ಆಹಾರ ಸಂಸ್ಕೃತಿಯ ಹೆಸರಿನಲ್ಲಿ ಕೆಲವರನ್ನು ಅವಮಾನಿಸುವ, ಸಮುದಾಯಗಳ ನಡುವೆ ಒಡಕನ್ನುಂಟು ಮಾಡುವ ಪ್ರಯತ್ನಗಳು ನಿರಂತರವಾಗಿ ನಡೆದಿವೆ. ವರ್ತಮಾನಕ್ಕೆ ಕನ್ನಡಿಯಾಗುವುದು ಸಾಹಿತ್ಯದ ಲಕ್ಷಣವೇ ಆಗಿರುವುದರಿಂದ, ಮಂಡ್ಯ ಸಾಹಿತ್ಯ ಸಮ್ಮೇಳನದ ನೆಪದಲ್ಲಿ ರೂಪುಗೊಂಡಿರುವ ಆಹಾರದ ಹಕ್ಕಿನ ಪ್ರಶ್ನೆ ಸರಿಯಾದುದೇ ಆಗಿದೆ. ಈ ಪ್ರಶ್ನೆಗೆ ಸ್ಪಂದಿಸಲೇಬೇಕಾದ ಅನಿವಾರ್ಯತೆಯನ್ನು ಪರಿಷತ್ತು ತಾನಾಗಿಯೇ ಸೃಷ್ಟಿಸಿಕೊಂಡಿದೆ. ಮಾಂಸಾಹಾರದ ಬಗೆಗೆ ಕೆಲವರಲ್ಲಿರುವ ಪೂರ್ವಗ್ರಹಗಳನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಮಂಡ್ಯ ಸಾಹಿತ್ಯ ಸಮ್ಮೇಳನ ಮುನ್ನುಡಿ ಬರೆಯಬೇಕು. ಈ ಕಾಲಕ್ಕೆ ಅಗತ್ಯವಾದ ಮೇಲ್ಪಂಕ್ತಿಯೊಂದನ್ನು ಹಾಕಿಕೊಡುವಲ್ಲಿ ಪರಿಷತ್ತು ಹಿಂಜರಿಯಬಾರದು.

ಮಾಂಸಾಹಾರದ ಹಕ್ಕು ಮಂಡಿಸುತ್ತಿರುವವರು ಸಸ್ಯಾಹಾರವನ್ನೇನೂ ವಿರೋಧಿಸುತ್ತಿಲ್ಲ; ಸಮ್ಮೇಳನದಲ್ಲಿ ಮಾಂಸಾಹಾರವಷ್ಟೇ ಇರಲಿ ಎಂದೂ ಹೇಳುತ್ತಿಲ್ಲ. ಆಹಾರದ ಹೆಸರಿನಲ್ಲಿ ನಡೆಯುವ ತಾರತಮ್ಯ ಕುರಿತಾದ ವಿರೋಧವನ್ನು, ಪ್ರಜಾಪ್ರಭುತ್ವದ ಜೀವಾಳವಾದ ಸಮಾನತೆಯ ನೆಲೆಗಟ್ಟಿನಲ್ಲಿ ನೋಡಬೇಕು. ಸಾಹಿತ್ಯದ ಪ್ರಮುಖ ಉದ್ದೇಶವಾದ ಎಲ್ಲರನ್ನೂ ಒಳಗೊಳ್ಳುವ ಪ್ರಕ್ರಿಯೆಯಲ್ಲಿ ಎಲ್ಲ ಬಗೆಯ ಆಹಾರವನ್ನು ಗೌರವದಿಂದ ಕಾಣುವುದೂ ಸೇರಿದೆ. ‘ಬೇರೆಯವರ ಮನೆಗೆ ಹೋಗುವವರು ಇಂತಹದ್ದೇ ಬೇಕು ಎಂದು ನಿರೀಕ್ಷಿಸಬಾರದು’ ಎಂದು ನಿಯೋಜಿತ ಸಮ್ಮೇಳನದ ಅಧ್ಯಕ್ಷರು ಹೇಳಿದ್ದಾರೆ. ಆದರೆ, ಅಧ್ಯಕ್ಷರು ಹೇಳುವಂತೆ ಪರಿಷತ್ತು ಹಾಗೂ ಸಮ್ಮೇಳನ ಬೇರೆಯ ಮನೆಯಲ್ಲ; ಅದು ನಮ್ಮದೇ ಮನೆ. (‘ಪರಿಷತ್ತೆಂದರೆ ಏನು? ಸೇರಿದ ಮಂದಿಯೇ ಪರಿಷತ್ತು. ಅದು ನಾವೇ ತಾನೆ?’ –ವಿ.ಕೃ. ಗೋಕಾಕ್.) ಆ ಮನೆಯ ಸಂಭ್ರಮಕ್ಕೆ ಬಳಕೆಯಾಗುತ್ತಿರುವುದು ನಮ್ಮದೇ ಹಣ. ಜನರ ತೆರಿಗೆಯ ಹಣದಲ್ಲಿ ನಡೆಯುವ ಕಾರ್ಯಕ್ರಮಗಳು ಪ್ರಜೆಗಳ ಆಶೋತ್ತರಗಳಿಗೆ ಸ್ಪಂದಿಸಬೇಕೆಂದು ನಿರೀಕ್ಷಿಸುವುದರಲ್ಲಿ ಯಾವ ತಪ್ಪೂ ಇಲ್ಲ.

ಇತ್ತೀಚಿನ ವರ್ಷಗಳಲ್ಲಿ ಪ್ರತಿ ಸಮ್ಮೇಳನದ ಸಂದರ್ಭದಲ್ಲೂ, ‘ಸಾಹಿತ್ಯ ಜಾತ್ರೆಯ ಸ್ವರೂಪ ಹೇಗಿರಬೇಕು?’ ಎನ್ನುವ ಪ್ರಶ್ನೆ ಮತ್ತೆ ಮತ್ತೆ ಚರ್ಚೆಗೆ ಬರುತ್ತಿದೆ. ಸಮ್ಮೇಳನದ ಸ್ವರೂಪ ಹೇಗಿರಬೇಕು ಎನ್ನುವುದಕ್ಕೆ ಉತ್ತರ ಹುಡುಕಲು ಪರಿಷತ್ತು ಹೆಚ್ಚಿನ ತಲೆ ಕೆಡಿಸಿಕೊಳ್ಳುವ ಅಗತ್ಯವೇನೂ ಇಲ್ಲ; ಈವರೆಗಿನ ಸಮ್ಮೇಳನಗಳ ಅಧ್ಯಕ್ಷರ ಭಾಷಣಗಳ ದೂಳು ಕೊಡವಿ ನೋಡಿದರೆ, ಸಮ್ಮೇಳನ ಅರ್ಥಪೂರ್ಣಗೊಳ್ಳಲು ಏನು ಮಾಡಬೇಕು ಎನ್ನುವುದು ಸ್ಪಷ್ಟವಾಗುತ್ತದೆ. ನಲವತ್ತನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿನ (ಬಳ್ಳಾರಿ, 1958) ವಿ.ಕೃ. ಗೋಕಾಕ್ ಅವರ ಅಧ್ಯಕ್ಷ ಭಾಷಣದ ಮುಖ್ಯಾಂಶಗಳನ್ನು ಗಮನಿಸಿ:

“ಸಮ್ಮೇಲನದ ಗೋಷ್ಠಿಗಳು ಹೇಗೆ ನಡೆಯಬೇಕು? ಅಭ್ಯಾಸಮಂಡಲಗಳ ಏರ್ಪಾಟಾದರೆ ಅದು ಹೇಗಾಗಬೇಕು? ಈ ಎಲ್ಲ ವಿಷಯಗಳನ್ನು ಪರ್ಯಾಲೋಚಿಸಿ ಪರಿಷತ್ತು ಒಂದು ಕ್ರಮಬದ್ಧ ವ್ಯವಸ್ಥೆಯನ್ನು ರೂಪಿಸುವುದು ಅವಶ್ಯವೆಂದು ತೋರುತ್ತದೆ. ಅಂದರೆ ಸಾಹಿತ್ಯ ಸಂಸ್ಕೃತಿಗಳ ಮುನ್ನಡೆಗೆ ಪ್ರತಿ ಸಮ್ಮೇಲನದಿಂದ ಒಂದು ಸರಿಯಾದ ಉದ್ದೀಪನವಲ್ಲದೆ ಮುನ್ನಡೆಯೇ ಅಂಶತಃ ದೊರೆಯಬಹುದು.

ಎರಡನೆಯದಾಗಿ, ಪರಿಷತ್ತಿನಿಂದ ಒಬ್ಬಿಬ್ಬರು ಪ್ರತಿನಿಧಿಗಳನ್ನು ಸೋದರ ಭಾಷಾ-ಸಮ್ಮೇಲನಗಳಿಗೆ ಕಳಿಸಬೇಕು; ಒಂದೆರಡು ಸೋದರ ಪ್ರಾಂತಗಳ ಪ್ರತಿನಿಧಿಗಳನ್ನು ಪ್ರತಿ ವರ್ಷ ನಮ್ಮ ಸಮ್ಮೇಲನಕ್ಕೆ ಬರಮಾಡಿಕೊಳ್ಳಬೇಕು. ಐದಾರು ವರ್ಷಗಳಲ್ಲಿ ಈ ರೀತಿ ಭಾರತದಲ್ಲಿಯ ಪ್ರತಿಯೊಂದು ಭಾಷೆಯ ಸಾಹಿತ್ಯ ಸಮ್ಮೇಲನಕ್ಕೆ ನಮ್ಮ ಪ್ರತಿನಿಧಿಗಳು ಹೋಗಿ ನಮ್ಮದಕ್ಕೆ ಆಯಾ ಪ್ರಾಂತಗಳ ಪ್ರತಿನಿಧಿಗಳು ಬರುವಂತಾದರೆ ನಮ್ಮ ಸಮ್ಮೇಲನಗಳಿಗೆ ಒಂದು ಅಂತರ್‌ಪ್ರಾಂತೀಯ ಸ್ವರೂಪ ಬರುವುದು; ಉಳಿದ ಭಾಷೆಗಳ ವಿಕಾಸದೊಡನೆಯೂ ನಮ್ಮ ನಿಕಟ ಸಂಬಂಧ ಬೆಳೆಯುವುದು.

ಮೂರನೆಯದಾಗಿ, ಐದು ವರ್ಷಗಳಿಗೊಮ್ಮೆಯಾದರೂ ನಮ್ಮ ನೆರೆಹೊರೆಯ ಭಾಷೆಗಳಿಗೆ ಸಂಬಂಧಿಸಿದ ಒಂದು ಅಂತರ್‌ಪ್ರಾಂತೀಯ ಸಾಹಿತ್ಯ ಸಮ್ಮೇಲನವನ್ನು ಕರೆಯಬೇಕು. ಅಖಿಲ ಭಾರತೀಯ ಸಾಹಿತ್ಯ ಸಮ್ಮೇಲನ 13–14 ವರ್ಷಗಳಿಗೊಮ್ಮೆಯಾದರೂ ಕನ್ನಡ ನಾಡಿನಲ್ಲಿ ನೆರೆಯಬೇಕು.

ನಾಲ್ಕನೆಯದಾಗಿ, ಪ್ರತಿ ವರ್ಷ ಸಾಹಿತಿಗಳ ಸೆಮಿನಾರ್ ಇಲ್ಲವೆ ಸಂಕೂಟವೊಂದು ಅಗತ್ಯವೆನಿಸಿದೆ. ಸಮ್ಮೇಲನದಲ್ಲಿ ವಿಶೇಷ ವಿಚಾರ ವಿನಿಮಯಕ್ಕೆ ಆಸ್ಪದವಿರುವುದಿಲ್ಲ. ಒಬ್ಬ ಹಿರಿಯ ಸಾಹಿತಿಯನ್ನಾಯ್ದು ಇಂತಹ ಸಂಕೂಟದ ನೇತೃತ್ವವೆಂದು ಸ್ವಾಗತ ಸಮಿತಿಯವರೇ ನಿಯಮಿಸಬೇಕು.

ಐದನೆಯದಾಗಿ, ಪ್ರಾತಿನಿಧಿಕ ಪುಸ್ತಕ ಭಾಂಡಾರಗಳೆಷ್ಟು ಕರ್ನಾಟಕದಲ್ಲಿವೆಯೆಂದು ಕೇಳುವ ಹಾಗಿದೆ. ದೊಡ್ಡ ಊರಿನ ವಿದ್ಯಾಸಂಸ್ಥೆಗಳು ಇದನ್ನು ಕೈಗೊಳ್ಳಬೇಕು. ಮೊದಲು ನಮ್ಮ ಪುಸ್ತಕ ಭಾಂಡಾರಗಳಲ್ಲಿ ಕನ್ನಡ ಪುಸ್ತಕಗಳ ಏಕೀಕರಣ ಆಗಬೇಕಾಗಿದೆ. ಊರೂರಿಗೆ ಇಂತಹ ಏಕೀಕರಣ ಕೇಂದ್ರಗಳು ಬೇಕು. ಪರಿಷತ್ತಿನ ಸಮಿತಿಯವರು ಈ ವಿಷಯವನ್ನು ಕುರಿತು ಪರ್ಯಾಲೋಚಿಸುವ ಹಾಗಿದೆ.”

ಸಮ್ಮೇಳನದ ಸ್ವರೂಪದ ಬಗ್ಗೆ ಅರವತ್ತಾರು ವರ್ಷಗಳ ಹಿಂದೆ ಗೋಕಾಕರು ನೀಡಿದ ಸಲಹೆಗಳು ಈಗಲೂ ಹೊಂದುವಂತಿವೆ. ಆದರೆ, ಇವುಗಳಲ್ಲಿ ಎಷ್ಟು ಸಲಹೆಗಳನ್ನು ಪರಿಷತ್ತು ಕಾರ್ಯರೂಪಕ್ಕೆ ತಂದಿದೆ?

ಸಾಹಿತ್ಯ ಸಮ್ಮೇಳನಗಳನ್ನು ಪರಿಷತ್ತು ಮೊದಲಿನಿಂದಲೂ ‘ಕನ್ನಡದ ಜಾತ್ರೆ’ಯ ರೂಪದಲ್ಲಿ ನೋಡುತ್ತಾ ಬಂದಿದೆ. ಇದಕ್ಕೆ ತಕ್ಕಹಾಗೆ ಸರ್ಕಾರ ಕೂಡ ಕೋಟ್ಯಂತರ ರೂಪಾಯಿಗಳ ಅನುದಾನ ನೀಡುವ ಮೂಲಕ ಸಮ್ಮೇಳನಗಳು ಜಾತ್ರೆಗಳಾಗಿ ಮುಂದುವರೆಯಲು ಕಾರಣವಾಗಿದೆ. ಇದರಿಂದ ಸಾಹಿತ್ಯಕ್ಕಾದ ಲಾಭವೇನು? ನಾಡು–ನುಡಿಗಾದ ಉಪಯೋಗವೇನು? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳದೆ ಹೋದರೆ, ಸಾಹಿತ್ಯ ಸಮ್ಮೇಳನವೆನ್ನುವುದು ಸಾರ್ವಜನಿಕ ಹಣದ ಪೋಲಾಗಿಯಷ್ಟೇ ಉಳಿಯುತ್ತದೆ.

11ನೇ ಪುಟಕ್ಕೆ...



ಚಿತ್ರ: ಪ್ರಶಾಂತ್ ಎಚ್.ಜಿ.

ಜಾನಪದ ಬಿತ್ಯಾರೋ ನಾಡಿಗೆಲ್ಲ...

ವ.ನಂ.ಶಿವರಾಮು

ಗೊ.ರು.ಚನ್ನಬಸಪ್ಪ (ಗೊರುಚ) ಎಂದ ಕೂಡಲೇ ಥಟ್ಟನೆ ಕಣ್ಣೆದುರು ಬರುವ ಚಿತ್ರ ಬಿಳಿಯ ಖಾದಿ ಜುಬ್ಬ ಮತ್ತು ಪಂಚೆಯುಟ್ಟ ಕೋಲುಮುಖದ ಸಣಕಲು ದೇಹ, ಮುಖದ ತುಂಬ ಪ್ರಸನ್ನ ನಗು. ಅಡಿಗಡಿಗೂ ಗಾದೆ, ನುಡಿಗಟ್ಟು, ಹಳ್ಳಿಯ ಸೊಗಡಿನ ಪದಪುಂಜಗಳೊಂದಿಗೆ ಅಡೆತಡೆಗಳಿಲ್ಲದೆ ಬರುವ ಮಾತು. ಜನಪದ ಸಾಹಿತ್ಯ, ಕಲೆ, ಕಲಾವಿದ, ಅವರ ವೇಷಭೂಷಣ, ವಾದ್ಯ ಪರಿಕರಗಳನ್ನು ಅವರು ಪರಿಚಯ ಮಾಡಿಕೊಡುವ ವಿಶಿಷ್ಟ ಪರಿ. ಅವರು ಮಾತಿಗೆ ನಿಂತರೆ, ಗ್ರಾಮೀಣ ಬದುಕೇ ಅನಾವರಣಗೊಳ್ಳುತ್ತದೆ. ಸಭಾಂಗಣವಾಗಲಿ, ಬಯಲಾಗಲಿ, ಉದ್ಯಾನವಾಗಲಿ, ಸಂತೆಯಾಗಲಿ ಜನರನ್ನು ತಕ್ಷಣಕ್ಕೆ ಸೆಳೆದುಕೊಳ್ಳಬಲ್ಲ ಅದ್ಭುತ ಮಾತುಗಾರಿಕೆ ಅವರದು. ಈ ಕಾರಣಕ್ಕಾಗಿಯೇ ಸಂಘಟನೆ ಮತ್ತು ಮಾತುಗಾರಿಕೆಗೆ ಗೊರುಚ ಒಂದು ಉತ್ತಮ ಮಾದರಿ.

ತೊಂಬತ್ನಾಲ್ಕು ಉಗಾದಿಗಳಲ್ಲಿ ಉಂಡ ಹಿರಿಮೆ ಇವರದು. ಎಂಬತ್ತೊಂಬತ್ತು ಸಂಕ್ರಾಂತಿಯ ಎಳ್ಳುಬೆಲ್ಲ ಹಂಚಿದ ಮಹಾತಾಯಿ ಇವರು. ನೂರಾಎಂಟು ಶಿವರಾತ್ರಿ ಜಾಗರಣೆ ಮಾಡಿದ ಹಿರಿಯ ಜೀವವಿದು...ಇದು ಗೊರುಚ ಅವರು ಜನಪದ ಕಲಾವಿದರ ವಯಸ್ಸನ್ನು ಹೇಳುವ ವಿಭಿನ್ನ ಬಗೆ.

ಡಿ.20 ರಿಂದ 22ರ ವರೆಗೆ ಮಂಡ್ಯದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ. ಇದರ ಸರ್ವಾಧ್ಯಕ್ಷರಾಗಿರುವ ಜಾನಪದ ವಿದ್ವಾಂಸ ಗೊ.ರು.ಚನ್ನಬಸಪ್ಪ ಅವರು ಜಾನಪದ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿನ ಕೃಷಿಕ. ಆಕರ್ಷಕ ಮಾತುಗಾರ ಮತ್ತು ಉತ್ತಮ ಸಂಘಟನಾಕಾರರು.

ಗೊರುಚ ಅವರ ಮಾತಿನ ಮೋಡಿಯ ಜೊತೆಗೆ ಅವರಿಗೆ ಸಾಹಿತ್ಯ ಕ್ಷೇತ್ರದಲ್ಲಿ ಜನಪ್ರಿಯತೆ ತಂದುಕೊಟ್ಟಿದ್ದು ರೇಡಿಯೊ ರೂಪಕಗಳಾಗಿ, ರಂಗದ ಮೇಲೆ ನಾಟಕಗಳಾಗಿ ಹಲವು ಪ್ರಸಾರ, ಪ್ರದರ್ಶನಗಳನ್ನು ಕಂಡ ‘ಸಾಕ್ಷಿಕಲ್ಲು’ ಮತ್ತು ‘ಬೆಳ್ಳಕ್ಕಿ ಹಿಂಡು ಬೆದರ್ಯಾವೇ’ ಕೃತಿಗಳು. ಅಲ್ಲದೇ ಬಾಗೂರು ನಾಗಮ್ಮ, ಮೈದುನ ರಾಮಣ್ಣ, ಗ್ರಾಮಗೀತೆಗಳು, ಜೋಗದ ಜೋಕು ಅವರ ಜನಪದ ಗೀತ ಸಾಹಿತ್ಯ ಸಂಗ್ರಹಗಳು. ಕರ್ನಾಟಕ ಪ್ರಗತಿಪಥ, ವಿಭೂತಿ ಸಂಪುಟಗಳೂ ಸೇರಿದಂತೆ ಅವರು ಸಂಪಾದಿಸಿದ, ರಚಿಸಿದ ಗ್ರಂಥಗಳೆಲ್ಲ ಜಾನಪದೀಯ ನೆಲೆಯಿಂದಲೇ ರೂಪುಗೊಂಡಿವೆ. ಆದ್ದರಿಂದಲೇ ಅವರು ಜಾನಪದ ಕ್ಷೇತ್ರ ತಜ್ಞರ ಸಾಲಿನಲ್ಲೇ ಗುರುತಿಸಿಕೊಳ್ಳುತ್ತಾರೆ. ಈಚಿನ ಗ್ರಂಥ ‘ಆಲೋಚನೆ’ ಅವರು ಎಪ್ಪತ್ತು ದಶಕಗಳಲ್ಲಿ ಜಾನಪದ, ಮತ್ತಿತರ ಕ್ಷೇತ್ರಗಳಲ್ಲಿ ನಡೆಸಿದ ಚಿಂತನೆಗಳನ್ನು ಹೊತ್ತು ಬಂದಿದೆ.

ತೊಂಬತ್ತೈದನೆಯ ಉಗಾದಿಯನ್ನು ಕಾಣುವ ಸಂಭ್ರಮದಲ್ಲಿರುವ ಗೊರುಚ, ಮೇ 18, 1930ರಂದು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕು ಗೊಂಡೇದಹಳ್ಳಿಯಲ್ಲಿ ರುದ್ರಪ್ಪ ಗಿರಿಗೌಡ ಹಾಗೂ ಅಕ್ಕಮ್ಮನವರ ಮಗನಾಗಿ ಜನಿಸಿದರು. ಪ್ರೌಢಶಾಲಾ ಶಿಕ್ಷಣವನ್ನಷ್ಟೇ ಮುಗಿಸಲು ಸಾಧ್ಯವಾಗಿದ್ದ ಇವರು ಜೀವನೋಪಾಯಕ್ಕೆ ಆರಿಸಿಕೊಂಡಿದ್ದೂ ಪ್ರಾಥಮಿಕ ಶಾಲಾ ಶಿಕ್ಷಕ ವೃತ್ತಿ. ಚಿಕ್ಕಮಗಳೂರು ಜಿಲ್ಲಾಧಿಕಾರಿಯಾಗಿದ್ದ ಜಾನಪದ ಲೋಕದ ರೂವಾರಿ ಎಚ್.ಎಲ್.ನಾಗೇಗೌಡ ಅವರನ್ನು ತಮ್ಮ ಮಾತುಗಾರಿಕೆಯಿಂದ ಗಮನಸೆಳೆದಿದ್ದರಿಂದ ಇವರು ಬೆಂಗಳೂರಿನ ಕಡೆಗೆ ಮುಖ ಮಾಡುವಂತಾಯಿತು.

ಕರ್ನಾಟಕ ಜಾನಪದ ಕ್ಷೇತ್ರದಲ್ಲಿ ಸಂಘಟನೆಗೆ ಒತ್ತು ನೀಡಿದ ದಿಗ್ಗಜರ ಮೊದಲ ಸಾಲಿನಲ್ಲಿ ನಿಲ್ಲುವ ಚನ್ನಬಸಪ್ಪ ಅವರು, ಜಾನಪದದ ಮಹತ್ತನ್ನು ಗ್ರಹಿಸುವುದು ಹೀಗೆ: ‘ಕನ್ನಡ ನೆಲದ ಜನಕೋಟಿಯ ಜೀವದುಸಿರು ಜನಪದ ಸಾಹಿತ್ಯ. ಗುಣ, ಸತ್ವಗಳ ದೃಷ್ಟಿಯಿಂದ ಅದು ಅಮೂಲ್ಯ ಭಂಡಾರ. ಮಾನವನ ಜೀವನಾನುಭವದ ಮಹಾಸಾಗರ. ಆ ಸಾಗರದ ಗರ್ಭದಲ್ಲಿ ಹುದುಗಿರುವ ಅನರ್ಘ್ಯ ರತ್ನಗಳು ಅಪಾರ. ಬದುಕಿಗೆ ಊರುಗೋಲಾಗಬಲ್ಲ, ದಾರಿದೀಪವಾಗಬಲ್ಲ ಆ ರತ್ನಗಳ ಬೆಲೆ ಇನ್ನೂ ಬಹಳ ಜನಕ್ಕೆ ತಿಳಿಯಬೇಕಾಗಿದೆ.’–ಇವು 1967ರಲ್ಲಿ ತರೀಕೆರೆಯಲ್ಲಿ ನಡೆದ ಅಖಿಲ ಕರ್ನಾಟಕ ಪ್ರಥಮ ಜಾನಪದ ಸಮ್ಮೇಳನದ ನೆನಪಿನ ಸಂಪುಟ ‘ಹೊನ್ನ ಬಿತ್ತೇವು ಹೊಲಕೆಲ್ಲ’ ಅವರ ಸಂಪಾದಕ ನುಡಿಯಲ್ಲಿ ಬರೆದ ಸಾಲುಗಳು. ಜನಪದ ಗೀತ ಗಾಯನದೊಂದಿಗೆ ಆ ಸಾಹಿತ್ಯದ ರಸದೌತಣವನ್ನು ಉಣಬಡಿಸುತ್ತಿದ್ದ ತರೀಕೆರೆಯ ಕೆ.ಆರ್. ಲಿಂಗಪ್ಪ ಅವರ ಅಭಿನಂದನಾ ಗ್ರಂಥ ‘ಗ್ರಾಮ ಜ್ಯೋತಿ’ಯ ಸಂಪಾದಕರ ಮಾತಿನಲ್ಲಿ ಗೊರುಚ ಹೀಗೆ ಬರೆದುಕೊಳ್ಳುತ್ತಾರೆ: ‘ಕೆ.ಆರ್.ಲಿಂಗಪ್ಪ ಅವರ ಅನುಭವ ಅಂಟಿಸಿದ ಹಣತೆಗಳು ಹಲವಾರು...ಜಾನಪದ ಹುಚ್ಚಾಸ್ಪತ್ರೆಗೆ ನನ್ನನ್ನು ದಾಖಲು ಮಾಡಿದ ಕೀರ್ತಿಯೂ ಅವರಿಗೆ’–ಈ ಎರಡು ಸಂದರ್ಭಗಳ ಮಾತುಗಳೇ ಸಾಕು, ಅವರಿಗೆ ಜಾನಪದದ ಬಗೆಗಿನ ಅನನ್ಯ ಪ್ರೀತಿ ಮತ್ತು ತಿಳಿವಳಿಕೆಯನ್ನು ಅರಿಯಲು.

ಗೊರುಚ ‘ಜಾನಪದ ಜಗತ್ತು’ ಪತ್ರಿಕೆಯ ಸಂಪಾದಕರಾಗಿದ್ದರು. ಆಗ ಪತ್ರಿಕೆಯನ್ನು ವಿಭಿನ್ನ ರೀತಿಯಲ್ಲಿ ಹೊರತರುವ ಅವರ ಉತ್ಸಾಹಕ್ಕೆ ಕೆಲವು ಉದಾಹರಣೆ ಇಲ್ಲಿವೆ: ಕರ್ನಾಟಕ ಜಾನಪದ ಪರಿಷತ್ತಿನ ಕಾರ್ಯಚಟುವಟಿಕೆಗಳ ವರದಿ ವಿಭಾಗಕ್ಕೆ ‘ಕೇರೆಲ್ಲ ಐಭೋಗ ಬೀದೆಲ್ಲ ಸಿಂಗಾರ’, ಹೊಸ ಪುಸ್ತಕಗಳ ಪಟ್ಟಿಯನ್ನು ‘ಜೋತಾಡುತಾವೆ ಹೊಸ ಹೂವು’, ಪುಸ್ತಕಗಳ ವಿಮರ್ಶೆಯನ್ನು ‘ಬೆಲ್ಲದ ಹಾಲಿನ ಸವಿ ನೋಡಿ’, ಜಾನಪದದ ಬಗೆಗಿನ ಪ್ರಶ್ನೋತ್ತರ ವಿಭಾಗವನ್ನು ‘ಬಲ್ಲಂತ ಜಾಣ ಬಿಡಿಸೇಳೊ’, ಕಲಾವಿದರ ಸಾವಿನ ಸುದ್ದಿಯನ್ನು ‘ಕಣ್ಣೀರು ಕರುದಾವೆ’ ಎಂಬಂಥ ಶೀರ್ಷಿಕೆಗಳಡಿಯಲ್ಲಿ ಪ್ರಕಟಿಸುತ್ತಿದದ್ದು ಆಕರ್ಷಕ ಮತ್ತು ಅರ್ಥಪೂರ್ಣ.

11ನೇ ಪುಟಕ್ಕೆ...

ಅಂತೂ ಅರ್ವಿನ್‌ಗೆ ಪಾಸ್‌ಪೋರ್ಟ್ ಬಂತು!

‘ಲೈಂಗಿಕ ಅಲ್ಪಸಂಖ್ಯಾತರು ಸಹಜವಾಗಿ ಬದುಕಲು ಅದೆಷ್ಟು ಶತಮಾನಗಳು ಕಾಯಬೇಕು?’ ಇಂಥ ಪ್ರಶ್ನೆಯನ್ನು ಕೇಳುವ ಮಾನವ ಹಕ್ಕುಗಳ ಹೋರಾಟಗಾರ್ತಿ ಅಕ್ಕೈ ಪದ್ಮಶಾಲಿ, ಲೈಂಗಿಕ ಅಲ್ಪಸಂಖ್ಯಾತರ ಕುರಿತಾದ ಸಮಾಜದ ತಿರಸ್ಕಾರದ ಬಗೆಯನ್ನು ಬಿಚ್ಚಿಟ್ಟಿದ್ದಾರೆ. ಅದನ್ನು ರಶ್ಮಿ ಎಸ್ ಅಕ್ಷರಗಳಲ್ಲಿ ಕಟ್ಟಿಕೊಟ್ಟಿದ್ದಾರೆ.

ಮಾಯಾ, ಚಿನ್ಮಯ್ ಜೊತೆಗೆ ನಾನೂ, ಅರ್ವಿನ್ ಬೆಂಗಳೂರಿನ ಕೋರಮಂಗಲದಲ್ಲಿರುವ ಪಾಸ್‌ಪೋರ್ಟ್ ಕಚೇರಿಗೆ ಹೋಗಿದ್ದೆವು. ಅಲ್ಲಿ ಸಾಲಿನಲ್ಲಿ ನಿಂತಾಗಲೇ ತರತಮದ ಕಿರಿಕಿರಿ ಶುರುವಾಯಿತು. ಜನರು ನಮ್ಮನ್ನ ನೋಡಿ, ಗುಸುಗುಸು ಮಾತಾಡೋದು, ನಗೋದು ಮಾಡುತ್ತಿದ್ದರು. ನಾವೇನು ಮನುಷ್ಯರೇ ಅಲ್ವೇನೋ ಎಂಬಂತೆ ಅವರ ವರ್ತನೆ ಇತ್ತು. ಸಾಲಿನಲ್ಲಿ ನಮ್ಮ ಹಿಂದೆ ಮುಂದೆ ನಿಲ್ಲಲೂ ಹಿಂಜರೆದಂತೆ ಬೇರೆಯೇ ಸಾಲನ್ನು ಮಾಡುವಂತೆ ಮಾಡುತ್ತಿದ್ದರು.

ಸಂದರ್ಶನಕ್ಕೆ ಹೋದ ಮಾಯಾ ಐದಾರು ನಿಮಿಷಗಳಲ್ಲಿ ಕಣ್ಣೀರು ಹಾಕಿಕೊಂಡೇ ಆಚೆ ಬಂದರು. ನಂತರ ಚಿನ್ಮಯ್ ಅವರಂತೂ ಅಳುತ್ತಲೇ ಹೊರಬಂದರು. ಅವರಿಗೆ ಮುಜುಗರವಾಗುವಂಥ ಪ್ರಶ್ನೆಗಳನ್ನು ಕೇಳಿದ್ದೂ ಅಲ್ಲದೆ, ಪರಿಪರಿಯಾಗಿ ಅವಮಾನಿಸಿದ್ದರು.

ನಾನು ಒಳ ಹೋದಾಗಲೂ ಅರ್ವಿನ್ ಅಪ್ಪನ ಹೆಸರು ಕೇಳಿದರು. ಅರ್ವಿನ್ ನನಗೆ ದತ್ತು ಪುತ್ರ. ನನ್ನ ಸಂಗಾತಿಯಿಂದ ನಾನು ವಿಚ್ಛೇದನ ಪಡೆದಿರುವೆ. ನಮ್ಮ ಬದುಕಿನಿಂದ ಸಂಗಾತಿಯ ಹೆಸರನ್ನು ಸಂಪೂರ್ಣವಾಗಿ ತೆಗೆದುಹಾಕಿರುವೆ. ಆಧಾರ್ ಕಾರ್ಡ್‌ನಲ್ಲಿ ಅರ್ವಿನ್ ಅಪ್ಪನ ಹೆಸರಿಲ್ಲ. ಆಧಾರ್ ಕಾರ್ಡ್‌ನಲ್ಲಿ ಇದ್ದಂತೆಯೇ ಪಾಸ್‌ಪೋರ್ಟ್ ಕೊಡಿ ಎಂದು ಕೇಳಿಕೊಂಡೆ. ಏಕಾಏಕಿ ಅಲ್ಲಿದ್ದ ಮಹಿಳಾ ಸಿಬ್ಬಂದಿ ಜೋರು ಮಾಡಲು ಆರಂಭಿಸಿದವರು, ‘ಅಪ್ಪನ ಹೆಸರಿಲ್ಲದೆ ಕೊಡಲಾಗದು’ ಎಂಬ ಹಟ ಹಿಡಿದರು.

ನಾನು ವಿಚ್ಛೇದಿತೆ ಎಂದಾಗ, ‘ನೀವೆಲ್ಲ ಯಾವ ಸುಖಕ್ಕೆ ಮದುವೆಯಾಗ್ತೀರಿ? ಹೇಗೆ ಸಂಭೋಗಿಸುವಿರಿ.. ಈ ಸುಖಗಳಿಲ್ಲದೆಯೇ ವಿಚ್ಛೇದನವಾಯಿತೆ’ ಎಂಬೆಲ್ಲ ವೈಯಕ್ತಿಕ ನಿಂದನೆಗೆ ಇಳಿದರು. ನನಗೋ ನನ್ನ ಕಣ್ಮುಂದೆ ನಮ್ಮ ದಾಂಪತ್ಯ ಬದುಕು ಬಂದು ಹೋಯಿತು. ಮದುವೆಯಾಗುವಾಗಲೂ ಇದು ನನ್ನ ಹಕ್ಕು ಎಂಬುದನ್ನು ಪ್ರತಿಪಾದಿಸಿ ಮದುವೆಯಾಗಿದ್ದೆ. ಮಗು ಬೇಕೆನಿಸಿದಾಗಲೂ ದತ್ತು ಪಡೆಯಲು ಹೋರಾಟ ಮಾಡಿಯೇ ಪಡೆದಿದ್ದೆ. ಸಾಂಗತ್ಯದಲ್ಲಿ ಸುಖವಲ್ಲ, ನೆಮ್ಮದಿ ಇಲ್ಲದಂತಾದಾಗ ಧೈರ್ಯದಿಂದ ಆಚೆ ಬಂದೆ. ವಿಚ್ಛೇದನ ಪಡೆಯಲೂ ಹೋರಾಟ ಮಾಡಿದ್ದೆ. ಎಲ್ಲ ದಾಖಲೆಗಳಿಂದಲೂ ಹೆಸರು ಬದಲು ಮಾಡಿದ್ದೆ. ಆಧಾರ್ ಕಾರ್ಡಿನಲ್ಲಿಯೂ ಅರ್ವಿನ್‌ಗೆ ನನ್ನ ಹೆಸರು ಮಾತ್ರ ಇದೆ. ಪಾಸ್‌ಪೋರ್ಟ್ ಕಚೇರಿಯವರು ನೋಡಬೇಕಿರುವುದು ಆಧಾರ್ ಕಾರ್ಡ್‌ನಲ್ಲಿರುವ ಹೆಸರಿಗೂ ಅರ್ವಿನ್ ಹೆಸರಿಗೂ ಸಾಮ್ಯವಿದೆಯೇ ಎಂದು. ನನ್ನ ವೈಯಕ್ತಿಕ ಬದುಕಿನಲ್ಲಿ ಇಣುಕುವ, ಕೆಟ್ಟದಾಗಿ ಕೆಣಕುವ ಅಗತ್ಯವೇ ಇರಲಿಲ್ಲ. ಆದರೂ ಅವರ ದಾರ್ಷ್ಟ್ಯ ನೋಡಿ..!

ಇದ್ಯಾವುದೂ ನಿಮಗೆ ಸಂಬಂಧಿಸಿದ್ದಲ್ಲ. ಜನರ ಖಾಸಗೀತನದ ಹಕ್ಕು ಅಂತ ಒಂದಿದೆ. ಅದರ ಬಗ್ಗೆ ಗೊತ್ತಿಲ್ಲವೆಂದರೆ ಇಂಥ ಅಪಸವ್ಯದ ಪ್ರಶ್ನೆಗಳನ್ನು ಕೇಳಬೇಡಿ ಎಂದು ಪ್ರತಿಕ್ರಿಯಿಸಿದೆ. ನನ್ನಿಂದ ಇಂಥ ಪ್ರತಿಕ್ರಿಯೆ ಆಕೆ ನಿರೀಕ್ಷಿಸಿರಲಿಲ್ಲ ಎನಿಸುತ್ತದೆ. ಅದು ತೀರ ತಮ್ಮ ಅಹಂಕಾರಕ್ಕೆ ಬೀಸಿದ ಚಾಟಿಯೇಟಿನಂತೆ ಎಂದು ಭಾವಿಸಿದ ಅವರು, ‘ಮಗುವಿಗೆ ತಂದೆಯ ಹೆಸರಿಲ್ಲದೆ ಪಾಸ್‌ಪೋರ್ಟ್ ನೀಡುವುದು ಸಾಧ್ಯವೇ ಇಲ್ಲ, ನಡೀರಿ ಆಚೆ’ ಎಂದು ದಬ್ಬಾಳಿಕೆ ಮಾಡಿದರು. ನಮ್ಮ ಖಾಸಗೀತನವನ್ನು ಗೌರವಿಸದಷ್ಟು ವ್ಯವಸ್ಥೆ ಜಡ್ಡುಗಟ್ಟಿದರೆ ಹೇಗೆ? ಲೈಂಗಿಕ ಅಲ್ಪಸಂಖ್ಯಾತರು ಎಂಬ ಕಾರಣಕ್ಕೆ ಹೀಗಳೆದರೆ ಹೇಗೆ.. ನಾವು ಮನುಷ್ಯರಲ್ಲವೇ?

‘ನಿಮ್ಮ ಧ್ವನಿ ಗಂಡಸಿನಂತಿದೆಯಲ್ಲ, ಹೇಗೆ ಮದುವೆಯಾದ್ರಿ? ಯಾರು ನಿಮಗೆ ದತ್ತು ಕೊಟ್ಟಿದ್ದು?’ ಎಂಬ ಪ್ರಶ್ನೆಗಳನ್ನೆಲ್ಲ ಮಾಡಿದ್ರು.. ಇವು ಕೇವಲ ಆ ವ್ಯಕ್ತಿಯ ಪ್ರಶ್ನೆಗಳಾಗಿರಲಿಲ್ಲ. ಸಮಾಜದ ಪ್ರಶ್ನೆಗಳಿವು. ಪ್ರಶ್ನೆಯಷ್ಟೇ ಅಲ್ಲ, ಕೆಟ್ಟ ಕುತೂಹಲವಿದು. ಸಮಾಜದ ಚೌಕಟ್ಟಿನಲ್ಲಿ ನಾವು ಬದುಕಲು ಅನರ್ಹರು ಎಂಬಂತೆ ಬಿಂಬಿಸುತ್ತಲೇ ಬಂದಿದೆಯಲ್ಲ. ನಾನು ಕುಗ್ಗಿ ಹೋಗಿದ್ದೆ. ಅವಮಾನವನ್ನು ನುಂಗಲು ಆಗುತ್ತಿರಲಿಲ್ಲ. ನನಗಿಂತ ಮೊದಲು ಅವರೇಕೆ ಕಣ್ಣೀರು ಹಾಕಿಕೊಂಡು ಹೋದರು ಎಂಬುದು ಮನವರಿಕೆ ಆಯಿತು. ಆದರೆ ನಾನೂ ಕಣ್ಣೀರು ಸುರಿಸುತ್ತ ನಿಲ್ಲಬೇಕೆ?

ಇಷ್ಟಕ್ಕೂ ಈ ಪ್ರಶ್ನೆಗಳು ಕೇವಲ ಒಬ್ಬ ಮಹಿಳಾ ಸಿಬ್ಬಂದಿ ಕೇಳಿದ್ದಾಗಿರಲಿಲ್ಲ. ಇದರ ಹಿಂದೆ ಸಮಾಜದ ದೃಷ್ಟಿಕೋನವಿತ್ತು. ಒಂದೆರಡು ನಿಮಿಷ ಸುಧಾರಿಸಿಕೊಂಡೆ. ಅಕ್ಕೈಗೆ ಯಾವುದೂ ಸುಲಭವಾಗಿ ಸಿಕ್ಕಿಲ್ಲ. ಇದೂ ಸಿಗುವುದಿಲ್ಲ. ಇದಕ್ಕೂ ಹೋರಾಡಬೇಕು. ಗಟ್ಟಿಯಾಗುವ ಎಂದು ನಿರ್ಧರಿಸಿದೆ.

ವಿಚ್ಛೇದನದ ವಿಷಯ ಬಂತಲ್ಲ, ಒಂದು ವಿಷಯ ಸ್ಪಷ್ಟಪಡಿಸುವೆ. ನಮ್ಮಂಥವರು ಮದುವೆಯಾಗಿ ಸುಭದ್ರ ಸಂಸಾರ ಮಾಡಿಕೊಂಡಿರಬೇಕು ಎಂದು ಬಯಸಿಯೇ ವ್ಯವಸ್ಥೆಯ ವಿರುದ್ಧ ಹೋರಾಡಿ, ಕಾನೂನು ಬದ್ಧಳಾಗಿ ಮದುವೆಯಾದೆ. ಆದರೆ ಕೌಟುಂಬಿಕ ಹಿಂಸೆ ಹೆಚ್ಚಾದಾಗ ಅದರಿಂದ ಕಾನೂನುಬದ್ಧ ರೀತಿಯಲ್ಲಿ ಆಚೆ ಬಂದೆ. ಆತ್ಮಗೌರವಕ್ಕೆ ಧಕ್ಕೆ ಬಂದಲ್ಲಿ, ನಿಮ್ಮ ದೇಹವನ್ನು ತಮ್ಮ ಸ್ವತ್ತು ಎಂಬಂತೆ ದಂಡಿಸುತ್ತಿದ್ದರೆ, ಆ ಹಿಂಸೆ ಸಹಿಸುವ ಅಗತ್ಯವಿಲ್ಲ. ಬಹುತೇಕ ಮಹಿಳೆಯರು, ನಮ್ಮ ಆಯ್ಕೆ ಇದು ಎಂಬಂತೆ ಸಹಿಸಿಕೊಳ್ಳುತ್ತಾರೆ. ಬಾಂಧವ್ಯದಿಂದ ಆಚೆ ಬಂದು ಬದುಕಲಾರೆ ಎಂಬ ತೀರ್ಮಾನ ಕೈಗೊಂಡಿರುತ್ತಾರೆ. ಏಕಾಂಗಿಯಾಗಿ ಬದುಕುವಲ್ಲಿ ಸವಾಲುಗಳಿವೆ. ಆದರೆ ಹಿಂಸೆ ಸಹಿಸುವುದಕ್ಕಿಂತ ಚೂರು ಧೈರ್ಯ ಇದ್ದರೆ ಸಾಕು. ನಾನು, ನನ್ನ ಮೇಲಿನ ದೌರ್ಜನ್ಯವನ್ನು ವಿರೋಧಿಸಿ, ಆ ಬಂಧದಿಂದ ಆಚೆ ಬಂದೆ. ಅರ್ವಿನ್ ನನ್ನ ಜವಾಬ್ದಾರಿಯಾಗಿದ್ದ. ನನ್ನ ಸಂಗಾತಿ ತನ್ನ ಯಾವ ಕರ್ತವ್ಯಗಳನ್ನೂ ನಿಭಾಯಿಸಲಿಲ್ಲ, ಖರ್ಚು ವೆಚ್ಚದಲ್ಲಿ ತನ್ನ ಪಾಲುದಾರಿಕೆಯನ್ನು ತೋರಲಿಲ್ಲ. ಆಗ ಆ ಹೆಸರನ್ನಿಟ್ಟುಕೊಂಡು ಏನು ಪ್ರಯೋಜನವೆಂದು, ಹೆಸರನ್ನು ತೆಗೆದುಹಾಕಿದೆ. ಇಷ್ಟು ಮಾತ್ರದ ಆತ್ಮಾಭಿಮಾನವನ್ನೂ ತೋರದಿದ್ದರೆ ಹೇಗೆ?

ಅರ್ವಿನ್ ಅಕ್ಕೈ ಪದ್ಮಶಾಲಿ, ಅಮ್ಮನೊಂದಿಗೆ

ಇದನ್ನೆಲ್ಲ ಆ ಹೆಣ್ಣುಮಗಳಿಗೆ ಬಿಡಿಸಿ ಹೇಳಬೇಕಿತ್ತಾ? ಹೇಳಿದ್ದರೆ ಅರ್ಥ ಆಗ್ತಿತ್ತಾ? ನಮ್ಮ ಸಮಾಜದಲ್ಲಿ ಈಗಲೂ ಹೊಡಿಬಡಿ ಮಾಡುವುದು, ಹಿಂಸೆ ಕೊಡುವುದು ಗಂಡನಾದವನ ಸಹಜ ವರ್ತನೆ ಎಂಬಂತೆಯೇ ಬೆಳೆಸಿಕೊಂಡು ಬರಲಾಗಿದೆ.

ಇರಲಿ, ಇದೆಲ್ಲ ಪಕ್ಕಕ್ಕಿರಿಸಿ, ಅರ್ವಿನ್ ಪಾಸ್‌ಪೋರ್ಟ್ ವಿಷಯವನ್ನು ಕೈಗೆತ್ತಿಕೊಳ್ಳಬೇಕಿತ್ತು. ಕೂಡಲೇ ನೆನಪಾಗಿದ್ದು, ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಕಾ ನಿಗಮದ ಅಧ್ಯಕ್ಷರಾಗಿರುವ ಸುಧೀಂದ್ರ ಅವರು. ಅವರ ಬಳಿ ಪರಿಸ್ಥಿತಿಯನ್ನು ವಿವರಿಸಿದೆ. ಅವರೊಂದಿಗೆ ಸಮಾಲೋಚಿಸಿದ ಮೇಲೆ ದಾರಿ ಸ್ಪಷ್ಟವಾಗತೊಡಗಿತು. ನಂತರ ಮುಖ್ಯಮಂತ್ರಿಯವರ ವಿಶೇಷ ಕರ್ತವ್ಯಾಧಿಕಾರಿ ಡಾ.ವೈಷ್ಣವಿ ಅವರೊಟ್ಟಿಗೆ ಮಾತಾಡಿದೆ. ಅವರನ್ನು ಭೇಟಿ ಮಾಡಿದೆ. ಅವರು ಪಾಸ್‌ಪೋರ್ಟ್ ಕಚೇರಿಗೆ ಕರೆ ಮಾಡಿದರು.

ಅಲ್ಲಿ ಭಾರತೀಯ ವಿದೇಶಾಂಗ ಅಧಿಕಾರಿ ಕೃಷ್ಣ ಅವರು ತಮ್ಮ ಕಚೇರಿಗೆ ಕರೆಯಿಸಿಕೊಂಡರು. ನಾನು, ಮಾಯಾ, ಚಿನ್ನು ರಾಠೋಡ್ ಹಾಗೂ ಅರ್ವಿನ್ ಒಟ್ಟಿಗೆ ಹೋದೆವು. ಅವರು ಅಂದು ನಡೆದ ಘಟನೆಯನ್ನು ಕೇಳಿದರು. ಹಳಹಳಿಸಿದರು. ತಾವೇ ಖುದ್ದಾಗಿ ಎಲ್ಲ ಪ್ರಕ್ರಿಯೆಗಳನ್ನೂ ಮುಗಿಸಿಕೊಟ್ಟರು.

ಅದಾದ ಕೆಲವು ದಿನಗಳಿಗೆ ಅರ್ವಿನ್ ಹೆಸರಿನ ಪಾಸ್‌ಪೋರ್ಟು ಕೈ ಸೇರಿತು. ಜಾತಿ ಮತ್ತು ಆದಾಯ ಪ್ರಮಾಣಪತ್ರಗಳೂ ಸಿಕ್ಕವು. ನನ್ನ ಕಷ್ಟವನ್ನು, ಅವಮಾನವನ್ನು ಹೀಗೆ ಹಗುರವಾಗಿ ಬದಿಗಿರಿಸಿ, ನನ್ನ ಅಭಿಮಾನಕ್ಕೆ, ಆತ್ಮಗೌರವಕ್ಕೆ ಧಕ್ಕೆ ಬರದಂತೆ ನಡೆಸಿಕೊಂಡ ಕರ್ನಾಟಕ ರಾಜ್ಯ ಸರ್ಕಾರದ ವಿವಿಧ ಇಲಾಖೆಯ ಅಧಿಕಾರಿ ವರ್ಗಕ್ಕೆ ಋಣಿ.

ನನ್ನ ಮುಂದಿನ ಪೀಳಿಗೆ ಇಂಥ ಅವಮಾನವನ್ನು ಅನುಭವಿಸಲಿಕ್ಕಿಲ್ಲ. ಚಂದದ ಬದುಕು, ಸಂಘರ್ಷವಿಲ್ಲದ, ಸಮಾಧಾನದ ಬದುಕು ಅವರದ್ದಾಗಬಹುದು. ನಾನು ಆಶಾವಾದಿ. ಹೋರಾಡದೇ ನನಗೇನೂ ಸಿಕ್ಕಿಲ್ಲ. ಆದರೆ ನನ್ನ ಹೋರಾಟದ ಫಲ ಮುಂದಿನ ತಲೆಮಾರಿಗೆ ಸಿಗಲಿ...

ಅಂಕದ ಪರದೆ ಭಿನ್ನ ರಂಗಪ್ರಯೋಗ

ತಿಳಿಹಾಸ್ಯ, ವ್ಯಂಗ್ಯ, ವಿಡಂಬನೆಯೊಂದಿಗೆ ನಗಿಸುತ್ತಲೇ ವೃದ್ಧಾಪ್ಯದ ಬದುಕಿನ ಚಿತ್ರಣವನ್ನು ಕಟ್ಟಿಕೊಡುತ್ತ, ವೃದ್ಧಾಶ್ರಮದ ಪರಿಸರವನ್ನು ಪರಿಚಯಿಸುವ ಈ ನಾಟಕ ನೀನಾಸಂ ತಿರುಗಾಟದ ಭಾಗವಾಗಿದೆ. ಅಭಿರಾಮ್ ಭಡ್ಕಮ್ಕರ್ ರಚಿಸಿರುವ ಈ ಮರಾಠಿ ನಾಟಕವನ್ನು ಜಯಂತ ಕಾಯ್ಕಿಣಿ ಅನುವಾದಿಸಿದ್ದಾರೆ.

ಎಂ.ರಾಘವೇಂದ್ರ

ರಂಗಭೂಮಿ

ನಾಟಕದ ದೃಶ್ಯ

ವೃದ್ಧಾಪ್ಯದ ಸಮಸ್ಯೆಗಳನ್ನು ನಾಟಕ ಸೇರಿದಂತೆ ಯಾವುದೇ ಕಲಾ ಪ್ರಕಾರಕ್ಕೆ ಅಳವಡಿಸುವಾಗ ಅದೊಂದು ಗೋಳು ಅಥವಾ ಮರುಕ ಹುಟ್ಟಿಸುವ ಕಥನವಾಗುವ ಸಾಧ್ಯತೆಗಳು ಹೆಚ್ಚಿರುತ್ತವೆ. ಈ ಸವಾಲನ್ನು ಮೀರಿ ತಿಳಿಹಾಸ್ಯ, ವ್ಯಂಗ್ಯ, ವಿಡಂಬನೆ, ಸ್ವವಿಮರ್ಶೆ ಮೂಲಕ ವೃದ್ಧಾಪ್ಯದ 'ವಿದ್ಯಮಾನ'ಗಳನ್ನು ರಂಗದ ಮೇಲೆ ತಂದಿರುವುದು 'ಅಂಕದ ಪರದೆ' ನಾಟಕದ ವಿಶೇಷ.

ಮರಾಠಿ ಲೇಖಕ ಅಭಿರಾಮ್ ಭಡ್ಕಮ್ಕರ್ ರಚಿಸಿರುವ, ಜಯಂತ ಕಾಯ್ಕಿಣಿ ಅನುವಾದಿಸಿರುವ, ವಿದ್ಯಾನಿಧಿ ವನಾರಸೆ (ಪ್ರಸಾದ್) ನಿರ್ದೇಶಿಸಿರುವ 'ಅಂಕದ ಪರದೆ' ನಾಟಕ ನೀನಾಸಂ ತಿರುಗಾಟದ ಭಾಗವಾಗಿದೆ. ವಿವಿಧ ಕ್ಷೇತ್ರಗಳಲ್ಲಿ ಕಾರ್ಯ ನಿರ್ವಹಿಸಿ ಬೇರೆ ಬೇರೆ ಕಾರಣಗಳಿಗಾಗಿ ಜೀವನದ ಸಂಧ್ಯಾಕಾಲವನ್ನು ವೃದ್ಧಾಶ್ರಮದಲ್ಲಿ ಕಳೆಯಬೇಕಾದ ಹಿರಿಯ ನಾಗರಿಕರ ಬದುಕಿನ ಚಿತ್ರಣವನ್ನು ನಾಟಕ ಕಟ್ಟಿಕೊಡುತ್ತದೆ.

ಇಲ್ಲಿ ವೃದ್ಧಾಶ್ರಮದಲ್ಲಿ ಬದುಕುತ್ತಿರುವ ವ್ಯಕ್ತಿಗಳ ಆಳದಲ್ಲಿ ನೋವಿದ್ದರೂ ಸಂಪೂರ್ಣವಾಗಿ ಹತಾಶರಲ್ಲ. ತಾವು ವೃದ್ಧಾಶ್ರಮಕ್ಕೆ ಸೇರಬೇಕಾದ ಸನ್ನಿವೇಶ ನಿರ್ಮಾಣವಾಗಿರುವ ಬಗ್ಗೆ ಅವರ ಅಂತರಂಗದಲ್ಲಿ ದುಗುಡವಿದ್ದರೂ ಅದು ಅನಿವಾರ್ಯ ಎಂದು ಒಪ್ಪಿಕೊಳ್ಳುವ ಮನಸ್ಥಿತಿ ಹೊಂದಿದವರು.

ಗತಕಾಲದ ನೆನಪುಗಳನ್ನು ಮೆಲುಕು ಹಾಕುತ್ತ ರೋಮಾಂಚನಗೊಳ್ಳುವ ವೃದ್ಧರು, ಮಕ್ಕಳ ಬಗ್ಗೆ ಮಿಶ್ರಭಾವ ಹೊಂದಿದವರು. ಇಂತಹ ಭಾವನೆಗಳ ಮೂಲಕವೇ ಹೊಸ ಬದುಕನ್ನು ಆವಿಷ್ಕರಿಸುವ ಮನೋಭೂಮಿಕೆ ಅವರಲ್ಲಿರುವ ಕಾರಣದಿಂದಲೇ ತುಂಟತನ, ತಮಾಷೆಯ ಮೂಲಕ ವೃದ್ಧಾಶ್ರಮದಲ್ಲಿ ಬದುಕು ಕಳೆಯುತ್ತಿರುತ್ತಾರೆ. ಈ ಹೊತ್ತಿನಲ್ಲಿ ತಂದೆಯ ವೇಷಧರಿಸಿ ಯುವಕನೊಬ್ಬ ವೃದ್ಧಾಶ್ರಮ ಸೇರಿಕೊಳ್ಳುವುದರೊಂದಿಗೆ ನಾಟಕ ತಿರುವು ಪಡೆದುಕೊಳ್ಳುತ್ತದೆ. ವೃದ್ಧಾಪ್ಯವೆಂಬ ವಾಸ್ತವ ರಂಗಭೂಮಿಯ ಭೂಮಿಕೆಗಳಾಗಿ ಪರಿವರ್ತನೆಯಾಗುವ ವಿಸ್ಮಯದ ದಿಕ್ಕಿಗೆ ನಾಟಕ ಮುನ್ನಡೆಯುವಲ್ಲಿ ಪ್ರತಿಯೊಂದು ಪಾತ್ರಗಳು ಜೀವಂತಿಕೆ ಪಡೆಯುತ್ತವೆ.

ಹೀಗೆ ವೇಷ ಮರೆಸಿ ಯುವಕನೊಬ್ಬ ವೃದ್ಧನಾಗುವುದು ನಾಟಕದೊಳಗೊಂದು 'ನಾಟಕ' ನಡೆಯುವುದಕ್ಕೆ, ಸ್ವಾರಸ್ಯಕರ ಪ್ರಸಂಗಗಳಿಗೆ ಪ್ರಯೋಗ ತೆರೆದುಕೊಳ್ಳುತ್ತದೆ. ಈ ಹಂತದಲ್ಲಿ ಬೆರಗು ಹುಟ್ಟಿಸುವ ರೀತಿಯಲ್ಲಿ ವೃದ್ಧಾಪ್ಯದ ವಸ್ತುವಿನ ನಿರ್ವಹಣೆಗೆ ನಾಟಕ ಮುಂದಾಗುವುದು ಪ್ರೇಕ್ಷಕರೂ ಪಾತ್ರವಾಗುವ ಸನ್ನಿವೇಶ ಸೃಷ್ಟಿಯಾಗುತ್ತದೆ. ವೃದ್ಧಾಶ್ರಮದ ಚಿತ್ರಣ ಕಟ್ಟಿಕೊಡುತ್ತಲೇ ಸಮಕಾಲೀನ ರಾಜಕೀಯ, ಸಾಮಾಜಿಕ ಸಂಗತಿಗಳಿಗೂ ಮುಖಾಮುಖಿಯಾಗುವುದು 'ಅಂಕದ ಪರದೆ'ಯ ವಿಶೇಷತೆಯಾಗಿದೆ. ಹಿರಿಯರನ್ನು ಅಪ್ರಸ್ತುತ ಎಂದು ಪರಿಗಣಿಸುವ ಕಿರಿಯರ ಮನೋಭಾವ ಅದೆಷ್ಟು ಸರಿ ಎಂಬ ಪ್ರಶ್ನೆ ರಂಗದ ಮೇಲೆ ಹಲವು ಬಾರಿ ಎದುರಾಗುತ್ತದೆ.

ತಂದೆ ತಾಯಿಗೆ ಮಕ್ಕಳು ಯಾವತ್ತೂ ವರ್ತಮಾನ. ಆದರೆ ಮಕ್ಕಳು ದೊಡ್ಡವರಾಗಿ ತಂದೆ ತಾಯಿಗೆ ವಯಸ್ಸಾದ ನಂತರ ಮಕ್ಕಳ ಪಾಲಿಗೆ ಅವರು ಭೂತಕಾಲವಾಗುವುದು ಎಂತಹ ವಿಪರ್ಯಾಸ ಎಂಬ ಪ್ರಶ್ನೆ ಎತ್ತುವ ನಾಟಕ, ಯುವಜನರೆ ನೀವು ಒಂದಿಷ್ಟು ವೃದ್ಧಾಶ್ರಮ ನಿರ್ಮಿಸಿ, ಭವಿಷ್ಯದಲ್ಲಿ ನಿಮಗೂ ಇದರ ಅಗತ್ಯ ಬೀಳಬಹುದು ಎನ್ನುವುದನ್ನು ಮಾರ್ಮಿಕವಾಗಿ ಧ್ವನಿಸುತ್ತದೆ.

ಆಧುನಿಕ ನಾಗರಿಕತೆ, ಆಧುನಿಕ ಶಿಕ್ಷಣ, ಜೀವನಕ್ರಮ ನಮ್ಮ ಚಿಂತನಾಕ್ರಮಗಳನ್ನು ಹೇಗೆ ಬದಲಿಸಿದೆ, ಹಿರಿಯರಿಗೂ ಘನತೆಯಿಂದ ಬದುಕುವ ಹಕ್ಕು ಇದೆ ಎಂಬುದು ಯಾಕೆ ಮುಖ್ಯವಾಗುತ್ತಿಲ್ಲ. ಯಶಸ್ಸು ದೊರೆತರೆ ಅದಕ್ಕೆ ನಾವೇ ಕಾರಣ, ವೈಫಲ್ಯಕ್ಕೆ ಮಾತ್ರ ಹೆತ್ತವರು ಕಾರಣ ಎಂಬ ಯುವ ತಲೆಮಾರಿನ ಧೋರಣೆ ಎಷ್ಟು ಸರಿ ಎಂಬೆಲ್ಲಾ ವಿದ್ಯಮಾನಗಳಿಗೆ ನಾಟಕ ಕನ್ನಡಿ ಹಿಡಿಯುತ್ತದೆ.

ಜೀವನಪೂರ್ತಿ ಚಳವಳಿಯಲ್ಲೆ ಕಾಲ ಕಳೆದ ಸಮಾಜವಾದಿ ತನ್ನ ಬದುಕಿನ ಸಂಧ್ಯಾಕಾಲದಲ್ಲಿ ಚಳವಳಿಯ ಯಶಸ್ಸು, ಅಪಯಶಸ್ಸಿನ ವಿಮರ್ಶೆ ನಡೆಸುವುದು, ರಂಗಭೂಮಿಯಲ್ಲೆ ಬದುಕು ಸವೆಸಿದ ಕಲಾವಿದನೊಬ್ಬ ತನ್ನ ಬದುಕಿನ ಗತಿಬಿಂಬವನ್ನು ಕಲೆಯೊಂದಿಗೆ ಅನುಸಂಧಾನ ನಡೆಸುವುದು ಸೇರಿದಂತೆ ಹಲವು ವಿವರಗಳು ನಾಟಕವನ್ನು ಜೀವಂತವಾಗಿಟ್ಟಿದೆ.

ತಂದೆ ವೇಷದಲ್ಲಿ ವೃದ್ಧಾಶ್ರಮ ಸೇರಿದ ಯುವ ನಟ ಹಾಗೂ ವೃದ್ಧಾಶ್ರಮದ ವ್ಯವಸ್ಥಾಪಕನೊಂದಿಗೆ ನಡೆಯುವ ಸಂವಾದ ಕುತೂಹಲಕರ. ರಂಗಭೂಮಿ ಸಮಾಜಮುಖಿಯಾಗಿರಬೇಕು ಎಂಬ ವಿಷಯಕ್ಕೆ ಇದು ನಾಟಕದವರಿಗೆ ಮಾತ್ರ ನೀಡಿರುವ ಗುತ್ತಿಗೆಯೆ, ಈ ಪ್ರಶ್ನೆಯನ್ನು ಚಿತ್ರಕಲಾವಿದರಿಗೆ ಯಾಕೆ ಕೇಳುವುದಿಲ್ಲ ಎಂಬ ಮರುಪ್ರಶ್ನೆ ವಿವಿಧ ಕಲಾ ಪ್ರಕಾರಗಳಲ್ಲಿ ತೊಡಗಿಸಿಕೊಂಡಿರುವವರ ಸೈದ್ಧಾಂತಿಕ ಬದ್ಧತೆಯ ವಿಮರ್ಶೆಗೆ ದಾರಿ ಮಾಡಿಕೊಡುತ್ತದೆ.

ವೃದ್ಧಾಶ್ರಮದ ಬದುಕಿನಲ್ಲೆ ಹಲವು ಆತಂಕ, ಸಂಕಟಗಳಿಗೆ ಮುಖಾಮುಖಿಯಾಗುವ ವೃದ್ಧರು ಅವುಗಳನ್ನು ಸಮರ್ಥವಾಗಿ ಎದುರಿಸುತ್ತಲೇ 'ಆಜ್ ಫಿರ್ ಜೀನೆಕಿ ತಮನ್ನಾ ಹೈ....' ಎಂಬ ಗೀತೆಯನ್ನು ಹಾಡುತ್ತ ಬದುಕಿನಲ್ಲಿ ಹೊಸ ಭರವಸೆ ಮೂಡಿಸಿಕೊಳ್ಳುವ ಆಶಯ ವ್ಯಕ್ತಪಡಿಸುವುದರೊಂದಿಗೆ ನಾಟಕ ಕೊನೆಯಾಗುತ್ತದೆ.

ವೃದ್ಧಾಶ್ರಮದ ಅವಶ್ಯಕತೆ ಬೀಳುವ ಕಾಲ ಬಂತಲ್ಲಪ್ಪ ಎಂಬ ವಿಷಾದದ ಜೊತೆಗೆ ಕೊನೆ ಕಾಲದಲ್ಲಿ ಅಂತಹದ್ದೊಂದು ವ್ಯವಸ್ಥೆಯಾದರೂ ಇದೆಯಲ್ಲ ಎಂಬ ವಾಸ್ತವವನ್ನೂ ನಾಟಕ ಬಿಂಬಿಸುತ್ತದೆ. ಯುವ ನಟ ತನ್ನ ನಟನೆಯ ಕುರಿತು ಸ್ವ ವಿಮರ್ಶೆ ನಡೆಸುವಲ್ಲಿ 'ಬದಲಾಗಬೇಕಿರುವುದು ನಿನ್ನ ಧ್ವನಿಯಲ್ಲ, ಬದಲಾಗಿ ನಿನ್ನ ಧೋರಣೆ' ಎಂಬ ಮಾತು ಹಿರಿಯರ ಬಗ್ಗೆ ಅನಾದರ ಭಾವ ಹೊಂದಿರುವವರಿಗೆ ಬೀಸಿದ ಚಾಟಿಯಂತೆ ಭಾಸವಾಗುತ್ತದೆ.

'ಒಳ್ಳೆಯ ಮನುಷ್ಯರನ್ನು ಮತ್ತಷ್ಟು ಒಳ್ಳೆಯವರನ್ನಾಗಿ ಮಾಡುವುದೇ ನಾಟಕ ಸೇರಿದಂತೆ ಇತರ ಎಲ್ಲಾ ಕಲೆಗಳ ಉದ್ದೇಶ'ಎಂಬ ನಾಟಕದೊಳಗಿನ ಮಾತಿಗೆ ಪ್ರಯೋಗ ತಕ್ಕುದಾಗಿದೆ. ಮರಾಠಿ ಆವರಣದಲ್ಲೆ ಕತೆ ನಡೆಯುತ್ತಿದೆ ಎಂದೆನಿಸಿದರೂ ವೃದ್ಧಾಪ್ಯದ ಸಮಸ್ಯೆ ದೇಶ, ಭಾಷೆ, ಗಡಿಗಳನ್ನು ಮೀರಿದ ವಿದ್ಯಮಾನವಾಗಿರುವುದರಿಂದ ವಸ್ತು ಹೊರಗಿನದು ಎಂಬ ಭಾವ ಕಾಡುವುದಿಲ್ಲ.

ನೀನಾಸಂ ತಿರುಗಾಟ ತಂಡದ ನಟರ ಹದವಾದ ಅಭಿನಯ ಪ್ರದರ್ಶನ ಕಳೆಗಟ್ಟುವಂತೆ ಮಾಡಿದೆ. ನಾಟಕ ಮುಗಿದ ನಂತರ ಹಿರಿಯರಲ್ಲಿ ಜೀನೋತ್ಸಾಹ ಹೆಚ್ಚುವ ಭಾವ ಮೂಡಿಸಿದರೆ, ಯುವ ತಲೆಮಾರಿನವರಲ್ಲಿ ಹಿರಿಯರ ಕುರಿತು ಇರುವ ಧೋರಣೆಗಳ ಆತ್ಮವಿಮರ್ಶೆಗೆ ಹಚ್ಚಿಸುವಷ್ಟು ರಂಗಪ್ರಯೋಗ ಪರಿಣಾಮಕಾರಿಯಾಗಿದೆ.



2ನೇ ಸಂಪುಟ
ಹೊನ್ನ ಕಣಜ
ಇದೀಗ ಲಭ್ಯ

ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ

ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು - 560001
ದೂರವಾಣಿ : 080 22161900/901/913/914
Shop Online www.navakarnataka.com

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಮೇಘರಾಹು

ನಿಶ್ಚಲ ನೀರವ ಗ್ರೀಷ್ಮ ಋತುವನ್ನು ವರ್ಣಿಸುತ್ತ ಕುವೆಂಪು ಅವರು, ಆ ಕಾಲದಲ್ಲಿ 'ಸರ್ವವ್ಯಾಪಿ ಮೇಘರಾಹು ರವಿಯ ನುಂಗಿದೆ' ಎಂದು ಕವನ ರಚಿಸಿದ್ದಾರೆ. ಮೋಡವು ಇಡೀ ಆಗಸವನ್ನು ವ್ಯಾಪಿಸಿಕೊಂಡು ಸೂರ್ಯನನ್ನು ನುಂಗಿರುವುದನ್ನು 'ಮೇಘರಾಹು' ಪದ ಸೃಷ್ಟಿಸಿ ಪ್ರಯೋಗಿಸಿದ್ದಾರೆ.

ರಾಹು ನವಗ್ರಹಗಳಲ್ಲಿ ಒಂದು. ರಾಹು ಸೂರ್ಯ ಚಂದ್ರರನ್ನು ಗ್ರಹಣಕಾಲದಲ್ಲಿ ನುಂಗುತ್ತದೆ ಎಂಬ ಪ್ರತೀತಿಯಿದೆ. 'ರಾಹು'ವನ್ನು 'ಗ್ರಹಣ' ಎಂದು ಕರೆಯುವರು. ಮೇಘವೇ ರಾಹುವಾಗಿ ರವಿಯನ್ನು ಕಾಣದಂತೆ ನುಂಗಿ ಹಾಕಿರುವ ರೂಪಕ ನವನವೀನವಾಗಿದೆ. ಆ ಸಮಯದಲ್ಲಿ ಜಗತ್ತಿನ ಕಣ್ಣಾದ ಸೂರ್ಯನು ಮೇಘರಾಹುವಿನಿಂದ ಮರೆಯಾಗಿ ಲೋಕದಲ್ಲಿ ಏನೂ ಕಾಣದಂತಾಗಿದೆ. ಜಗತ್ತಿನ ಕಣ್ಣುಗಳಿಗೆ ಕಂಬನಿ ತುಂಬಿ ಮಹತ್ತಾದ ಶೋಕದಿಂದಿದೆ ಎಂಬ ಕಲ್ಪನಾ ಸೌಂದರ್ಯ ವಿಶಿಷ್ಟ.

'ಲೋಕನಯನಕಶ್ರು ಪೂರ್ಣ
ಮಹತ್ ಶೋಕವಾಗಿದೆ.'

(ಸರ್ವವ್ಯಾಪಿ ಮೇಘರಾಹು ರವಿಯ ನುಂಗಿದೆ- ಕೋಗಿಲೆ ಮತ್ತು ಸೋವಿಯತ್ ರಷ್ಯಾ)

ಕುಳಿರ್ಕಾಂತಿ

ಕುಳಿರ್ಕಾಂತಿ (ನಾ). ತಂಪಾದ ಕಾಂತಿ; ಶೀತಲವಾದ ಹೊಳಪು

(ಕುಳಿರ್ + ಕಾಂತಿ)

ಆಂಜನೇಯನು ಲಂಕೆಯನ್ನು ಪ್ರವೇಶಿಸುವಾಗ ಆ ಪಟ್ಟಣ ಅಂಜಿತು ಎಂದು ಕವಿಯು ಪ್ರಕೃತಿಯ ಶೀತಲ ವಾತಾವರಣದೊಂದಿಗೆ ಚಿತ್ರಿಸಿದ್ದಾರೆ. ಅವರು ಆ ಬೆಳಗ್ಗೆಯ ಚಂದ್ರನ ಹೊಳಪನ್ನು 'ಕುಳಿರ್ಕಾಂತಿ' ಎಂದು ಹೊಸತಾಗಿ ಕರೆದಿದ್ದಾರೆ. ಶಶಿಯ ಚಳಿಯ ಕಿರಣಗಳ ತಂಪಾದ ಕಾಂತಿಯು ಮುಗಿಲಿನಂಚಿಗೆ ಸೇರಿತು ಎಂದು ವರ್ಣಿಸಿದ್ದಾರೆ.

ತಗುಳಿದುದು ಮುಗಿಲಿನಂಚಿಗೆ ಬೆಳ್ಳಿನೀರ್, ಶಶಿಯ
ಚಳಿಗದಿರ್ಗಳ ಕುಳಿರ್ಕಾಂತಿ.

ಸಮ್ಮೇಳನದ ರಥ ಬದಲಾಗಲಿ ಪಥ

10ನೇ ಪುಟದಿಂದ...

ಇತ್ತೀಚಿನ ವರ್ಷಗಳಲ್ಲಿ ಬೆಂಗಳೂರು, ಮಂಗಳೂರು, ಮೈಸೂರು ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ 'ಸಾಹಿತ್ಯ ಹಬ್ಬ'ಗಳು (ಲಿಟರರಿ ಫೆಸ್ಟಿವಲ್‌ಗಳು) ಕೂಡ ಪರಿಷತ್ತಿನ ಸಾಹಿತ್ಯ ಸಮ್ಮೇಳನದ ಸ್ವರೂಪದ ಬಗ್ಗೆ ಪ್ರಶ್ನೆಗಳು ಏಳಲು ಕಾರಣವಾಗಿವೆ. ಒಂದೆರಡು ಕೋಟಿ ರೂಪಾಯಿ ವೆಚ್ಚದಲ್ಲಿ ಅರ್ಥಪೂರ್ಣ ಸಾಹಿತ್ಯ ಸಮ್ಮೇಳನಗಳನ್ನು ನಡೆಸುವುದು ಹಾಗೂ ದೇಶದ ವಿವಿಧ ಭಾಗಗಳ ಬರಹಗಾರರನ್ನು ಮುಖಾಮುಖಿಯಾಗಿಸುವುದು ಲಿಟರರಿ ಫೆಸ್ಟಿವಲ್‌ಗಳಿಗೆ ಸಾಧ್ಯವಾಗಿದೆ; ಅದು ನೂರು ವರ್ಷಗಳ ಸಾಹಿತ್ಯ ಪರಿಷತ್ತಿಗೆ ಏಕೆ ಸಾಧ್ಯವಾಗುತ್ತಿಲ್ಲ?

ಸಮ್ಮೇಳನದ ಸಂಭ್ರಮ ಆರಂಭವಾಗುವುದು ಜಾತ್ರೆಗೆ ಬರುವವರಿಗೆ ಏನೆಲ್ಲ ರಸಕವಳ ದೊರೆಯುತ್ತದೆ ಎನ್ನುವ ಊಟದ ಖಾದ್ಯಗಳ ಪಟ್ಟಿಯೊಂದಿಗೆ. ಊಟ ಹಾಗೂ ವೇದಿಕೆಯ ಬಾಬತ್ತೇ ಸಮ್ಮೇಳನದ ಬಜೆಟ್‌ನ ಬಹುಭಾಗವನ್ನು ಕಬಳಿಸುತ್ತದೆ. ಸಾಹಿತ್ಯದ ರಸಕವಳವನ್ನು ಅಚ್ಚುಕಟ್ಟಾಗಿ ಉಣಬಡಿಸುವುದು ಪರಿಷತ್ತಿಗೆ ಸಾಧ್ಯವಾದರೆ, ಊಟದ ಬಗ್ಗೆ ಸಹೃದಯರು ತಲೆಕೆಡಿಸಿಕೊಳ್ಳಲಾರರು. ಈಗಿನ ಮಾಂಸಾಹಾರದ ಹಕ್ಕೊತ್ತಾಯವೂ ಊಟದ ಹೊಣೆಗಾರಿಕೆಯಿಂದ ಕೈತೊಳೆದುಕೊಳ್ಳಲು ಪರಿಷತ್ತಿಗೆ ನೆಪ ಒದಗಿಸಿದೆ. ಮುಂದಿನ ವರ್ಷಗಳಲ್ಲಾದರೂ, ಹೊಟ್ಟೆ ತುಂಬಿಸುವ ಉಸಾಬರಿಯನ್ನು ಬಿಟ್ಟು ಮನಸ್ಸು ತುಂಬಿಸುವ ಹೊಣೆಗಾರಿಕೆಯನ್ನಷ್ಟೇ ಪರಿಷತ್ತು ಮಾಡಿದ್ದಾದರೆ, ಅದು ಸಮ್ಮೇಳನವನ್ನು ಅರ್ಥಪೂರ್ಣಗೊಳಿಸುವ ಬಹು ಮುಖ್ಯವಾದ ಹೆಜ್ಜೆಯಾಗುತ್ತದೆ.

ಸ್ವರೂಪವನ್ನು ಬದಲಿಸುವುದರ ಜೊತೆಗೆ, ಸಾಹಿತ್ಯ ಸಮ್ಮೇಳನದ 'ನಿರ್ಣಯ'ಗಳಿಗೆ ಜೀವಶಕ್ತಿ ನೀಡಬೇಕಾದುದು ಇಂದಿನ ಅಗತ್ಯ. ಈವರೆಗಿನ ಸಮ್ಮೇಳನಗಳಲ್ಲಿ ಕೈಗೊಂಡ ನಿರ್ಣಯಗಳೆಲ್ಲ ಅನುಷ್ಠಾನಕ್ಕೆ ಬಂದಿದ್ದರೆ ಕನ್ನಡದ ವರ್ಚಸ್ಸೇ ಬದಲಾಗುತ್ತಿತ್ತು. ದುರದೃಷ್ಟವಶಾತ್, ಸಮ್ಮೇಳನದ ನಿರ್ಣಯಗಳನ್ನು ಜಾರಿಗೊಳಿಸುವ ಇಚ್ಛಾಶಕ್ತಿಯನ್ನು ಯಾವ ಸರ್ಕಾರವೂ ಪ್ರದರ್ಶಿಸಿಲ್ಲ; ತನ್ನದೇ ನಿರ್ಣಯಗಳನ್ನು ಕಾರ್ಯರೂಪಕ್ಕೆ ತರುವಂತೆ ಒತ್ತಡ ಹೇರುವ ಸಂಕಲ್ಪಶಕ್ತಿಯನ್ನು ಪರಿಷತ್ತೂ ಪ್ರದರ್ಶಿಸಿಲ್ಲ. ಔಪಚಾರಿಕ ನಿರ್ಣಯಗಳಿಂದ ಯಾರಿಗೂ ಉಪಯೋಗವಿಲ್ಲ ಎನ್ನುವುದರನ್ನು ಪರಿಷತ್ತು ಹಾಗೂ ಸರ್ಕಾರ ಅರಿಯಬೇಕು. ಕಾರ್ಯಸಾಧುವಾದ ನಿರ್ಣಯಗಳನ್ನಷ್ಟೇ ಅಂಗೀಕರಿಸಿ, ಅವುಗಳನ್ನು ಕಾರ್ಯರೂಪಕ್ಕೆ ತರುವ ಹೊಣೆಗಾರಿಕೆಯನ್ನು ಪರಿಷತ್ತು ಹಾಗೂ ಸರ್ಕಾರ ಹೊರಬೇಕು. ಒಂದು ಸಮ್ಮೇಳನದ ನಿರ್ಣಯ ಕಾರ್ಯರೂಪಕ್ಕೆ ಬರುವವರೆಗೂ ಮತ್ತೊಂದು ಸಮ್ಮೇಳನ ನಡೆಸುವುದಿಲ್ಲ ಎನ್ನುವುದು ಪ್ರಸ್ತುತ ಕೈಗೊಳ್ಳಲೇಬೇಕಾದ ನಿರ್ಣಯವಾಗಿದೆ. ಇಂಥದ್ದೊಂದು ಒತ್ತಡವನ್ನು ಪರಿಷತ್ತು ತನ್ನ ಮೇಲೆ ತಾನೇ ಹೇರಿಕೊಳ್ಳದೆ ಹೋದರೆ, ಸಮ್ಮೇಳನವೆನ್ನುವುದು ಸಾರ್ವಜನಿಕರ ತೆರಿಗೆಯ ಹಣದಲ್ಲಿ ನಡೆಯುವ ಜಾತ್ರೆಯಾಗಿಯೇ ಉಳಿಯುತ್ತದಷ್ಟೇ.



ಪರಿಷತ್ತಿನ ಕಾರ್ಯ ವಿಧಾನಗಳು ಹೇಗಿರಬೇಕೆನ್ನುವುದರ ಬಗ್ಗೆ, 1960ರಲ್ಲಿ ಮಣಿಪಾಲದಲ್ಲಿ ನಡೆದ 42ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣದಲ್ಲಿ ಅ.ನ. ಕೃಷ್ಣರಾಯರು ಆಡಿದ ಮಾತುಗಳು ಹೀಗಿವೆ: ''ಪರಿಷತ್ತು ಸಾಹಿತ್ಯವನ್ನು ಸೃಷ್ಟಿ ಮಾಡಲಾರದು. ಯಾವುದೊಂದು ಸಂಸ್ಥೆಯೂ ಆ ಕೆಲಸ ಮಾಡಲಾರದು. ದೈವದತ್ತವಾದ ಪ್ರತಿಭೆಯುಳ್ಳವರಿಗೆ ಆ ಕೆಲಸವನ್ನು ಬಿಡೋಣ. ಪರಿಷತ್ತಿನ ಕೆಲಸವೆಂದರೆ ಆ ಸಾಹಿತ್ಯದ ಮೌಲ್ಯವನ್ನು ಅಧಿಕಾರಯುತವಾಗಿ ನಿರ್ಣಯಿಸುವುದು ಕೂಡಾ ಅಲ್ಲ. ಅದರ ಕರ್ತವ್ಯ ಅಂಥ ನಿರ್ಣಯಕ್ಕೆ ಬೇಕಾದ ಪಾಂಡಿತ್ಯವನ್ನೂ, ಉದ್ವೇಗರಹಿತವಾದ ಮತ್ತು ಪೂರ್ವಗ್ರಹಗಳಿಗೆ ನಿಲುಕದ ಸ್ವಚ್ಛವಾದ ವಿಮರ್ಶನಾ ದೃಷ್ಟಿಯನ್ನು ಬೆಳೆಸುವುದು, ಹತ್ತಾರು ಕಡೆಗಳಿಂದ ಅಭಿಪ್ರಾಯ ಬೆಳೆದುಬಂದು ಅವುಗಳ ಘರ್ಷಣೆಯಿಂದ ಸತ್ಯ ಮೂಡಿಬರುವಂತೆ ಸೌಕರ್ಯಗಳನ್ನು ಕಲ್ಪಿಸುವುದು, ನಿಘಂಟು, ವಿಶ್ವಕೋಶ ಮುಂತಾದ್ದನ್ನು ಸಿದ್ಧಗೊಳಿಸುವುದು, ಇತರ ಪ್ರಕಾಶಕರು ಪ್ರಕಟಿಸಲು ಹೆದರುವ ವಿಮರ್ಶೆ, ಶಾಸ್ತ್ರಗ್ರಂಥ ಮುಂತಾದ್ದನ್ನು ಪ್ರಕಟಿಸುವುದು, ಸಂಶೋಧನೆ ನಡೆಸುವುದು - ಇತ್ಯಾದಿ ಕೆಲಸಗಳಿಗೆ ಪರಿಷತ್ತು ಮೀಸಲಾಗಬೇಕು. ಇದೆಲ್ಲಾ ಮೈಬಗ್ಗಿ ಕುಳಿತು ಮಾಡಬೇಕಾದ ಕೆಲಸ. ಇದರಿಂದ ಸುಲಭದ ಮನರಂಜನೆ ಸಾಧ್ಯವಿಲ್ಲ. ಕ್ಷಣಕ್ಷಣಕ್ಕೂ ಜನರಿಂದ ಕರತಾಡನಗಳು ಬರುವುದಿಲ್ಲ. ಕರತಾಡನದ ಆಸೆ, ಅದಕ್ಕೆ ಬೇಕಾದ ಆಡಂಬರ - ಇದನ್ನೆಲ್ಲಾ ಪರಿಷತ್ತು ಬಿಟ್ಟುಕೊಡಬೇಕು.''

ಸಾಹಿತ್ಯದ ಮೌಲ್ಯ ನಿರ್ಣಯಕ್ಕೆ ಬೇಕಾದ ಪಾಂಡಿತ್ಯವನ್ನೂ, ಉದ್ವೇಗರಹಿತವಾದ ಮತ್ತು ಪೂರ್ವಗ್ರಹಗಳಿಗೆ ನಿಲುಕದ ಸ್ವಚ್ಛವಾದ ವಿಮರ್ಶನಾ ದೃಷ್ಟಿಯನ್ನು ಬೆಳೆಸುವ ಕೆಲಸವನ್ನು ಪರಿಷತ್ತು ಮಾಡಬೇಕು ಎನ್ನುವ ಅನಕೃ ಅವರ ಮಾತಿಗೆ ಅಡಿಗೆರೆ ಎಳೆಯಬೇಕು. ಈ ವಿಮರ್ಶಾ ವಿವೇಕದ ಬೆಳವಣಿಗೆಯ ಪರಿಧಿಯಲ್ಲಿ ಪರಿಷತ್ತು ತನ್ನನ್ನೂ ಒಳಗು ಮಾಡಿಕೊಂಡಲ್ಲಿ ಸಮ್ಮೇಳನದ ಜೊತೆಗಿನ 'ಸಾಹಿತ್ಯ'ಕ್ಕೂ ಮೌಲ್ಯ-ಜೀವಶಕ್ತಿ ದೊರಕೀತು. ಕನ್ನಡದ ಜಾತ್ರೆ 'ಸಾಹಿತ್ಯದ ಅನುಭವ ಮಂಟಪವೂ' ಆದೀತು.

ಜಾನಪದ ಬಿತ್ಯಾರೋ ನಾಡಿಗೆಲ್ಲ...

10ನೇ ಪುಟದಿಂದ...

ಇದು ನನ್ನ ವೈಯಕ್ತಿಕ ಅನುಭವ. ಆಗ ಎಚ್.ಎಲ್.ನಾಗೇಗೌಡ ಅವರು 'ಜಾನಪದ ಜಗತ್ತು' ಪತ್ರಿಕೆಯ ಪ್ರಧಾನ ಸಂಪಾದಕರಾಗಿದ್ದರು. ಲೇಖನಗಳ ಕಟ್ಟೊಂದನ್ನು ಬಿಚ್ಚಿ ಆಯ್ಕೆ ಮಾಡಿದ ಕೆಲವನ್ನು ನನಗೆ ಕೊಟ್ಟು, ಅವುಗಳನ್ನು ರಾಜ್ಯ ಆರೋಗ್ಯ ನಿರ್ದೇಶನಾಲಯದ ಕಟ್ಟಡದಲ್ಲಿ 'ಭಾರತ ಜನಸಂಖ್ಯಾ ಯೋಜನೆ'ಯ ಉಪ ನಿರ್ದೇಶಕರಾಗಿದ್ದ ಗೊರುಚ ಅವರಿಂದ ಪರಿಶೀಲನೆ ಮಾಡಿಸಿಕೊಂಡು ಬರುವಂತೆ ತಿಳಿಸಿದರು. ನಾನು ಅವರಲ್ಲಿಗೆ ಹೋದೆ. ಲೇಖನಗಳ ಮೇಲೆ ಕಣ್ಣಾಡಿಸಿದ ಗೊರುಚ, ಕೆಲವು ಶೀರ್ಷಿಕೆಗಳನ್ನು ಬದಲಿಸಿದರು. ಕೆಲವು ಲೇಖನಗಳನ್ನು ಪುಟಗಟ್ಟಲೇ ತೆಗೆದು ಅವುಗಳನ್ನು ನನಗೆ ಕೊಡುತ್ತಾ ಹೋದರು. ಆ ನಡುವೆ ಒಂದೆರಡು ಸಲ ತಮ್ಮ ಮೇಜಿನ ಮೇಲಿದ್ದ ಕನ್ನಡ ನಿಘಂಟನ್ನು ತೆರೆದು ಯಾವುದೋ ಪದವನ್ನು ನೋಡಿ ಇಟ್ಟರು. ಅದೇ ಮೊದಲ ಬಾರಿಗೆ ನಾನು ಬರೆದಿದ್ದ 'ಪಜ್ಜಿಗಿಜ್ಜಿ ಮಾಡಿ ಹಿಟ್ಮಾಡೆ' ಎಂಬ ಲೇಖನವನ್ನು ಅವರ ಕೈಗಿತ್ತೆ. ಲೇಖನವನ್ನು ಓದಿದ ಅವರು ಅಲ್ಲಿದ್ದ ಅಕ್ಷರ ದೋಷ, ವಾಕ್ಯದೋಷಗಳನ್ನು ತಿದ್ದಿದ್ದಲ್ಲದೆ, ಕೆಲವು ವಾಕ್ಯಗಳನ್ನು ಮತ್ತೆ ಬರೆದು ನನಗೆ ಕೊಟ್ಟರು. ನಾನು ಮಾಡಿದ್ದ ತಪ್ಪುಗಳನ್ನು ಕಂಡು ಸಿಡುಕಲೂ ಇಲ್ಲ, ವ್ಯಂಗ್ಯವನ್ನೂ ಮಾಡಲಿಲ್ಲ, ಅವಮಾನಿಸಲೂ ಇಲ್ಲ. ಆಗ ನನಗೆ ಅರ್ಥವಾಗಿದ್ದು ಇಷ್ಟು: ಹಿರಿಯರು ಮಾತನಾಡುವುದಿಲ್ಲ, ಮಾಡಿ ತೋರಿಸುತ್ತಾರೆ, ಆ ಮೂಲಕ ಕಿರಿಯರನ್ನು ತಿದ್ದುತ್ತಾರೆಂದು.

ಗೊರುಚ ಅವರ ವಿಚಾರಕ್ಕೆ ಬಂದಾಗಲೆಲ್ಲ ನನಗೆ ನಮ್ಮ ಹಿರೀಕರು ಹೇಳುವ 'ತುಂಬಿದ ಕೊಡ ತುಳುಕುವುದಿಲ್ಲ' ಎನ್ನುವ ಮಾತು ನೆನಪಾಗುತ್ತಲೇ ಇರುತ್ತದೆ.

ಮುನ್ನೋಟ 15-12-2024 ರಿಂದ 21-12-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಮಾತಿನಲ್ಲಿ ಬಹಳ ಎಚ್ಚರಿಕೆ ವಹಿಸಿ. ವ್ಯಾಪಾರ, ವ್ಯವಹಾರಗಳಲ್ಲಿ ಸ್ವಲ್ಪ ಎಚ್ಚರಿಕೆ ಇರಲಿ. ಮಕ್ಕಳಿಂದ ಹೆಚ್ಚು ಅನುಕೂಲವಿರುತ್ತದೆ. ವಿದ್ಯಾರ್ಥಿಗಳಿಗೆ ಅವರ ನಿರೀಕ್ಷೆಯ ಫಲಿತಾಂಶ ಸಿಗುತ್ತದೆ. ಸಂಗಾತಿ ಮಾಡಿದ ವ್ಯವಹಾರಗಳಲ್ಲಿ ಲಾಭವಿರುತ್ತದೆ. ಸಿದ್ಧ ಉಡುಪು ತಯಾರಿಸುವವರಿಗೆ ಮುನ್ನಡೆಯಾಗಬಹುದು. ಹಿರಿಯರ ಜೊತೆಯಲ್ಲಿ ಕೂಡಿ ಮಾಡಿದ ವ್ಯವಹಾರಗಳಲ್ಲಿ ಹೆಚ್ಚು ಲಾಭವಿರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಬಹಳ ಸ್ಥಿರ ಮನಸ್ಸಿನಿಂದ ಇರುವಿರಿ. ಸಂಗೀತಗಾರರಿಗೆ ಸಾಕಷ್ಟು ಅಭಿವೃದ್ಧಿ ಇರುತ್ತದೆ. ಹಿರಿಯರಿಂದ ನಿಮ್ಮ ವ್ಯವಹಾರಗಳಿಗೆ ಸಹಕಾರ ದೊರೆಯುತ್ತದೆ. ಆದಾಯವು ಸಾಮಾನ್ಯ ಮಟ್ಟಕ್ಕಿಂತ ಸ್ವಲ್ಪ ಹೆಚ್ಚಿರುತ್ತದೆ. ಸರ್ಕಾರಿ ಸಂಸ್ಥೆಗಳ ಜೊತೆಗೂಡಿ ಮಾಡುವ ವ್ಯವಹಾರಗಳಲ್ಲಿ ಅಭಿವೃದ್ಧಿ ಇರುತ್ತದೆ. ಸ್ತ್ರೀಯರಿಗೆ ಸ್ವಲ್ಪ ಆರೋಗ್ಯ ತಪ್ಪುವ ಸಂಭವವಿದೆ. ವೃತ್ತಿಯಲ್ಲಿ ಒತ್ತಡ ಹೆಚ್ಚಾಗುವ ಸಾಧ್ಯತೆಗಳಿವೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಸಮೂಹದಲ್ಲಿ ಮಾತನಾಡುವಾಗ ಎಚ್ಚರವಿರಲಿ. ಆದಾಯ ಕಡಿಮೆ ಇದ್ದರೂ ಕೃಷಿಯಿಂದ ಆದಾಯ ಹೆಚ್ಚುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಬಂಧುಗಳು ವಿರೋಧ ವ್ಯಕ್ತಪಡಿಸುವರು. ಆಸ್ತಿ ವ್ಯವಹಾರಗಳಲ್ಲಿ ನಿರೀಕ್ಷಿತ ಪ್ರಗತಿ ಇರುವುದಿಲ್ಲ. ಕಣ್ಣಿನ ಸೋಂಕು ಇರುವವರು ಎಚ್ಚರವಹಿಸಿ. ಸಂಗಾತಿಯ ಅಲಂಕಾರಕ್ಕಾಗಿ ಹೆಚ್ಚು ಹಣ ಖರ್ಚಾಗುತ್ತದೆ. ಕುಲುಮೆ ಕೆಲಸ ಮಾಡುವವರಿಗೆ ಬೇಡಿಕೆ ಹೆಚ್ಚುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆದಾಯವು ನಿಮ್ಮ ಖರ್ಚನ್ನು ತೂಗಿಸುತ್ತದೆ. ಹಿರಿಯರಿಂದ ಸೂಕ್ತ ಸಮಯದಲ್ಲಿ ಸಹಕಾರ ದೊರೆಯುತ್ತದೆ. ಸಂಸಾರದಲ್ಲಿ ಸುಖವಿರುತ್ತದೆ. ಸಂಗಾತಿಯಿಂದ ಸಂಸಾರಕ್ಕೆ ಆರ್ಥಿಕ ಸಹಕಾರ ನಿರೀಕ್ಷೆ ಮಾಡಬಹುದು. ವಿದ್ಯಾರ್ಥಿಗಳಿಗೆ ಅವರ ನಿರೀಕ್ಷೆಯಂತೆ ಫಲಿತಾಂಶವಿರುತ್ತದೆ. ಉದರ ಸಂಬಂಧಿ ದೋಷಗಳು ಕಾಣಿಸಬಹುದು. ಕೃಷಿಯಿಂದ ಆದಾಯ ಕಡಿಮೆ ಇರುತ್ತದೆ. ಪುಸ್ತಕ ವ್ಯಾಪಾರಿಗಳಿಗೆ ಲಾಭ ಹೆಚ್ಚುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಸ್ವಂತ ನಿರ್ಧಾರಗಳು ಉತ್ತಮ ಫಲವನ್ನು ಕೊಡುತ್ತವೆ. ಆದಾಯವು ಕಡಿಮೆ ಇದ್ದರೂ ತೊಂದರೆ ಇರುವುದಿಲ್ಲ. ನಿಮ್ಮ ಕೆಲಸ ಕಾರ್ಯಗಳಿಗೆ ಮಹಿಳೆಯರು ಅಡ್ಡಿಯಾಗುತ್ತಾರೆ. ಸರ್ಕಾರಿ ಸಂಬಂಧಿತ ಭೂಮಿ ವ್ಯವಹಾರಗಳಲ್ಲಿ ಲಾಭವಿರುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿದೆ. ಲೇವಾದೇವಿ ವ್ಯವಹಾರ ಈಗ ಖಂಡಿತ ಬೇಡ. ಸಂಗಾತಿಯು ನಿಮ್ಮ ಹಲವು ನಿರ್ಧಾರಗಳನ್ನು ಒಪ್ಪದಿರಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಧಾರ್ಮಿಕ ವೃತ್ತಿಯಲ್ಲಿರುವವರಿಗೆ ಆದಾಯ ಹೆಚ್ಚುತ್ತದೆ. ಹಿರಿಯರ ಆಸ್ತಿಯಲ್ಲಿ ಸ್ವಲ್ಪ ಪಾಲು ನಿಮಗೆ ದೊರೆಯುವ ಸಂದರ್ಭವಿದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಫಲಿತಾಂಶ ದೊರೆಯುತ್ತದೆ. ಹೈನುಗಾರಿಕೆಯಲ್ಲಿ ಹೆಚ್ಚಿನ ಸಂಶೋಧನೆ ಮಾಡುವವರಿಗೆ ಪ್ರಗತಿ ಇದೆ. ಮೂಳೆ ನೋವು ಕೆಲವರನ್ನು ಕಾಡಬಹುದು. ನಿಮ್ಮ ವಿಚಾರಕ್ಕೆ ವಿರುದ್ಧವಾಗಿ ಸಂಗಾತಿ ನಡೆದುಕೊಳ್ಳುತ್ತಾರೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಆದಾಯವು ಖರ್ಚನ್ನು ತೂಗಿಸುತ್ತದೆ. ನಿಮ್ಮ ಕೆಲಸದಿಂದ ಹಿರಿಯರ ವಿರೋಧ ಕಟ್ಟಿಕೊಳ್ಳುವಿರಿ. ಸಂಸಾರದಲ್ಲಿ ಸುಖವಿರುತ್ತದೆ. ವಿದ್ಯಾರ್ಥಿಗಳಿಗೆ ಫಲಿತಾಂಶ ಕಡಿಮೆಯಾಗಬಹುದು. ರಾಜಕಾರಣಿಗಳಿಗೆ ಹೆಚ್ಚು ಜನಸಹಕಾರ ದೊರೆಯುತ್ತದೆ. ಕ್ರೀಡಾಪಟುಗಳಿಗೆ ಉತ್ತಮ ಕೆಲಸ ದೊರೆಯುವ ಸಾಧ್ಯತೆಯಿದೆ. ಸಂಗಾತಿಯ ಸಿಡುಕು ಮಾತುಗಳು ಬೇಸರ ತರಿಸಬಹುದು. ಸರ್ಕಾರಿ ಕೆಲಸ ಕಾರ್ಯಗಳಲ್ಲಿ ಏರುಪೇರಾಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಸ್ವಾಭಿಮಾನ ಹೆಚ್ಚಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಹೆಚ್ಚು ಅಭಿವೃದ್ಧಿ ಇರುತ್ತದೆ. ವಿದೇಶದಲ್ಲಿ ಓದಬೇಕೆನ್ನುವವರಿಗೆ ಸೂಕ್ತ ಅವಕಾಶ ಮತ್ತು ಸಹಕಾರ ದೊರೆಯುತ್ತವೆ. ಹಿರಿಯರ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸಿ. ಸಂಗಾತಿಯಿಂದ ನಿರೀಕ್ಷೆಗೆ ಮೀರಿದ ಸಹಕಾರ ಮತ್ತು ಧನಸಹಾಯ ದೊರೆಯುತ್ತದೆ. ವ್ಯಾಪಾರ ವ್ಯವಹಾರಗಳಲ್ಲಿ ಏಳಿಗೆ ಇರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ದೃಢ ನಿರ್ಧಾರಗಳಿಲ್ಲದೆ ಸ್ವಲ್ಪ ಚಿಂತೆಗೀಡಾಗುವಿರಿ. ಆದಾಯವು ಈಗ ನಿಮ್ಮ ನಿರೀಕ್ಷೆಯ ಹತ್ತಿರ ಬರುತ್ತದೆ. ರಾಜಕೀಯ ಸೇರಬೇಕೆನ್ನುವವರಿಗೆ ಉತ್ತಮ ಅವಕಾಶಗಳು ದೊರೆಯುತ್ತವೆ. ವಿದ್ಯಾರ್ಥಿಗಳಿಗೆ ಅವರ ಶ್ರಮಕ್ಕೆ ತಕ್ಕ ಫಲ ಇರುತ್ತದೆ. ಶೀತಬಾಧೆ ಕೆಲವರನ್ನು ಕಾಡಬಹುದು. ಪಾಲುದಾರಿಕೆ ವ್ಯವಹಾರಗಳಲ್ಲಿ ಅಭಿವೃದ್ಧಿ ಇರುತ್ತದೆ. ಹಿರಿಯರಿಂದ ಆಸ್ತಿ ದೊರೆಯಬಹುದು. ತೆರಿಗೆ ತಜ್ಞರಿಗೆ ಬೇಡಿಕೆ ಹೆಚ್ಚುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಬಹಳ ಅಲಂಕಾರಿಕವಾಗಿ ಕಾಣಿಸಿಕೊಳ್ಳುವಿರಿ. ನಿಮ್ಮ ನಡವಳಿಕೆ ಮಾದರಿಯಾಗಿರುತ್ತದೆ. ಆದಾಯವು ಕಡಿಮೆ ಇದ್ದರೂ ಕೂಡ ನಿಭಾಯಿಸುವಿರಿ. ಬಂಧುಗಳಿಂದ ಪ್ರತಿರೋಧ ಎದುರಾದರೂ ನಿಮ್ಮ ಕೆಲಸವನ್ನು ನೀವು ಸಾಧಿಸುವಿರಿ. ಸಂಸಾರದಲ್ಲಿ ಸಂತೋಷ ಹೆಚ್ಚಾಗುತ್ತದೆ. ನರ ದೌರ್ಬಲ್ಯ ಇರುವವರು ಎಚ್ಚರ ವಹಿಸಿರಿ. ವೃತ್ತಿಯಲ್ಲಿ ಆದಾಯದ ಸ್ಥಿರತೆ ಇರುತ್ತದೆ. ವೃತ್ತಿಯಲ್ಲಿ ಅಭಿವೃದ್ಧಿ ಇರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ವಿದೇಶದಲ್ಲಿ ಕೆಲಸದಲ್ಲಿರುವವರಿಗೆ ಆದಾಯ ಹೆಚ್ಚುತ್ತದೆ. ಯುವಕರು ಸಮೂಹದಲ್ಲಿ ಮಾತನಾಡುವಾಗ ಎಚ್ಚರವಹಿಸಿರಿ. ನಿಮ್ಮ ಹಿರಿಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿ ಬರಬಹುದು. ಈಗ ಸ್ಥಿರಾಸ್ತಿಯನ್ನು ಹೊಂದುವ ಯೋಗವಿದೆ. ಮಕ್ಕಳ ಉದ್ಯೋಗದಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ಹರಿತವಾದ ಆಯುಧಗಳನ್ನು ಉಪಯೋಗಿಸುವಾಗ ಎಚ್ಚರವಾಗಿರಿ. ಕೃಷಿಕರಿಗೆ ಲಾಭವಾಗುವ ಸಾಧ್ಯತೆಗಳಿವೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ದ್ವಂದ್ವ ನಡವಳಿಕೆಗಳಿಂದ ನೀವೇ ಮುಜುಗರಕ್ಕೆ ಒಳಗಾಗುವಿರಿ. ಮಾತನಾಡುವಾಗ ಸಾಕಷ್ಟು ಎಚ್ಚರಿಕೆ ಇರಲಿ. ಹಿರಿಯರನ್ನು ಓಲೈಸಿ ನಿಮ್ಮ ಕೆಲಸ ಮಾಡಿಕೊಳ್ಳುವಿರಿ. ಮಕ್ಕಳಿಂದ ಕಠಿಣ ನುಡಿಗಳನ್ನು ಕೇಳಬೇಕಾಗುತ್ತದೆ. ಕ್ರೀಡಾಪಟುಗಳಿಗೆ ಅಭಿವೃದ್ಧಿ ಇರುತ್ತದೆ. ತಲೆನೋವು ಕೆಲವರನ್ನು ಕಾಡಬಹುದು. ಹೈನುಗಾರಿಕೆಯನ್ನು ಮಾಡುವವರಿಗೆ ಹೆಚ್ಚು ಲಾಭವಿರುತ್ತದೆ.

ಪದಬಂಧ 2870



ಮೇಲಿನಿಂದ ಕೆಳಕ್ಕೆ

1. ಕಲಿಕೆಯ ರೀತಿಗೊಂದು ವಿನ್ಯಾಸ 4
2. ರೆಂಬೆಯಿಂದ ಬೇರ್ಪಟ್ಟ ಕೊಂಬೆ 3
3. ಕಾಡಿನಲ್ಲಿ ಕೊಡುವ ಮಾತು 3
4. ಭೀತಿಯನ್ನುಂಟು ಮಾಡುವ ಶಿವನ ತಂತಿ ವಾದ್ಯ 4
6. ಈ ಪದ ಸಿಗಲು ಅರಸುತ್ತಾ ಹೋಗು 3
7. ನ್ಯಾಯದ ಕೀಲಿ ಹಿಡಿದಿರುವ ನ್ಯಾಯವಾದಿ 3
9. ದುಡ್ಡು ಕಾಸಿನ ಗಣಿತವನ್ನು ಬರೆದಿಡುವ ಬುಕ್ಕು 5
11. ಕುಡಿಯುವವರಿಗೆ ಸುಲಭವಾಗಿ ಸಿಗುವ ಸಾರಾಯಿ ಮಾರಾಟ ಮಳಿಗೆ 5
13. ದುಗುಡದ ಜೊತೆ ಮಾನ ಸೇರಿದ ದುಃಖ 3
14. ಮದುಮಕ್ಕಳ ನೆತ್ತಿಗೆ ಕಟ್ಟುವ ಮಂಗಳ ಸಂಕೇತ 3
15. ಜನರ ಮಧ್ಯೆ ಹುಟ್ಟು 3
16. ದಿಲ್ಲಿಯ ಈ ದೊಡ್ಡ ಜೈಲಿಗೆ ಹೋದರೆ ಹಾರದ ಮರ್ಯಾದೆ ಸಿಗಬಹುದೆ? 3
17. ಮೂಕಾಸುರನನ್ನು ವಧಿಸಿದ ಕೊಲ್ಲೂರ ದೇವತೆ 4
19. ಚಲನೆಗೆ ಇರುವ ವ್ಯತ್ಯಾಸದಿಂದ ಒದಗುವ ಅನಿವಾರ್ಯ 4
21. ಮಂತ್ರ ಮುಗ್ಧನನ್ನಾಗಿ ಮಾಡುವ ಚೆಲುವ ಮಾಯಗಾರ 3
22. ಧೈರ್ಯ ಲಕ್ಷ್ಮಿಯ ಐತಿಹಾಸಿಕ ಹೆಸರು 3

ಎಡದಿಂದ ಬಲಕ್ಕೆ

1. ಒಂದು ರೀತಿಯಲ್ಲಿ ಎಲ್ಲವನ್ನೂ ತ್ಯಜಿಸಿರುವ ಸಂನ್ಯಾಸಿ 5
3. ಹಸೆಮಣೆಯನ್ನೇರಿರುವ ಮದುಮಕ್ಕಳು 5
6. ತೃಣ ಸಮಾನನಾದ ಮನುಷ್ಯ 5
8. ಸಾಲು ಬೆಟ್ಟಗಳ ನಮ್ಮ ಕರಾವಳಿ ಪ್ರದೇಶ 4
10. ಬೆರಳಚ್ಚು ಯಂತ್ರದ ಅಕ್ಷರಪೀಠ 4
12. ಜುಟ್ಟು ಕಟ್ಟಲು ಕೈಗೆ ಸಿಗಬಹುದಾದ ಅಶ್ವ ಲಾಂಗೂಲ ಪುಚ್ಛ 5
15. ಪ್ರಜಾ ಔನ್ನತ್ಯದ ಪ್ರತೀಕ 5
17. ಚಕಾರವೂ ಎತ್ತಲು ಸಾಧ್ಯವಿಲ್ಲ ಈ ಮಂದಿಗೆ 4
18. ಸರ್ಪವನ್ನು ಆಡಿಸಿ ಕಾಡಿಸುವವ 4
20 ಯುದ್ಧ ಮೊಳಗುವ ಭೇರಿಯನ್ನು ಹೊಡೆಯುವ ವೀರ 5
23. ಕೆಟ್ಟದ್ದನ್ನು ಬಯಸುವ ಅಶುಭ ಮಾತು 5
24. ಕರ್ನಾಟಕದ ಅರಣ್ಯ ಸಂಪತ್ತಿನಲ್ಲಿ ಅತ್ಯಮೂಲ್ಯವಾದ ವೃಕ್ಷ 5

ಪದಬಂಧ ಉತ್ತರ -2869

ಮೇಲಿಂದ ಕೆಳಕ್ಕೆ

1.ಕನ್ನಿಕಾ 2.ದಹನ 3.ಕಾಣಿಕೆ 4.ಬಿರುಕು 7.ತತ್ವಪದ 9.ಕೂಜನ 11.ದಧೀಚಿ 12.ದೀವಾನ 13.ತಟಾಕ 15.ಗಮಾರ 16.ದಿವಾರಾತ್ರಿ 17.ಹಿತ್ತಲು 19.ಬರಡು 20.ಚಿಲಕ 21.ಮೆದುಗ 22.ಆಯನ 23.ಡಿಗರಿ

ಎಡದಿಂದ ಬಲಕ್ಕೆ

1.ಕರ್ಮಪದ 3.ಕಾಕಂಬಿ 5.ಹಣಾಹಣಿ 6.ರುದಿತ 8.ಕಾರಕೂನ 10.ಕೆದಕು 12.ದೀನದಲಿತ 14.ಚಿತ್ರಾಂಗದ 16.ದಿನವಹಿ 18.ಕನಕಾಂಬರ 20.ಚಿಲುಮೆ 22.ಆಡುನುಡಿ 24.ತ್ರಿಕಾಲ 25.ದುರಾಶಯ 26.ಕರಗ 27.ನರಹರಿ

ಕರ್ನಾಟಕ ಶಾಸ್ತ್ರೀಯ ಸಂಗೀತದ ಮೇರು ಕಲಾವಿದ ವಿದ್ವಾನ್ ಆರ್.ಕೆ. ಪದ್ಮನಾಭ ಅವರು ನಾದತಪಸ್ವಿ. ಶಾಸ್ತ್ರೀಯ ಗಾಯನ, ದೇವರನಾಮ, ವರ್ಣ, ಕೃತಿ, ತಿಲ್ಲಾನಗಳನ್ನು ಹೃದಯ ತಟ್ಟುವಂತೆ ಹಾಡುವ ಈ ಅದ್ಭುತ ಗಾಯಕ, ಗೋಷ್ಠಿ ಗಾಯನದ ಮೂಲಕ ಸಂಗೀತವನ್ನು ಮನೆಮಾತಾಗಿಸಿದ್ದಾರೆ. ಕೇಂದ್ರ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ಸೇರಿದಂತೆ ಹಲವು ಪ್ರಶಸ್ತಿ ಪಡೆದ ಈ ಸಾಧಕನಿಗೆ ಈಗ ಎಪ್ಪತ್ತೈದರ ಹರೆಯ, ಇವರ ಸಂಗೀತ ಪಯಣಕ್ಕೆ ಸುವರ್ಣ ಸಂಭ್ರಮ.

ಬದುಕೆಲ್ಲವೂ ನಾದಮಯ

ಉಮಾ ಅನಂತ್

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಗಾನಕಲಾಭೂಷಣ ಆರ್.ಕೆ. ಪದ್ಮನಾಭ ಅವರು 'ನಡೆದಾಡುವ ಸಂಗೀತ ಎನ್‌ಸೈಕ್ಲೊಪೀಡಿಯ'. ವಾಗ್ಗೇಯಕಾರ, ಗಾಯಕ, ಬೋಧಕ, ಸಂಘಟಕ, ವಾಗ್ಮಿ, ಸಂಗೀತ ಬರಹಗಾರ... ಹೀಗೆ ಸಂಗೀತದ ಹತ್ತೆಂಟು ವಿಶೇಷಣಗಳನ್ನು ಹೊಂದಿರುವ ಇವರು ಸಂಗೀತದ ಗಟ್ಟಿಕುಳ! ಡಿ. 21ರಂದು ಬೆಂಗಳೂರಿನ ಚೌಡಯ್ಯ ಸ್ಮಾರಕ ಭವನದಲ್ಲಿ ಇವರ ಶಿಷ್ಯಂದಿರು 'ಗುರುನಮನ' ಏರ್ಪಡಿಸಿ 'ಗಾನಕಲಾ ಬ್ರಹ್ಮರ್ಷಿ' ಬಿರುದು ಪ್ರದಾನ ಮಾಡುವರು. ಇಡೀ ದಿನದ ಕಾರ್ಯಕ್ರಮದಲ್ಲಿ ವಿದ್ವಾಂಸರ ಸಂಗೀತ ಕಛೇರಿಗಳನ್ನೂ ಸವಿಯುವ ಅವಕಾಶ ಸಹೃದಯರಿಗಿದೆ. ಈ ಹಿನ್ನೆಲೆಯಲ್ಲಿ ಅವರು ತಮ್ಮ ಸಂಗೀತ ಪಯಣ ಕುರಿತು 'ಭಾನುವಾರದ ಪುರವಣಿ'ಯೊಂದಿಗೆ ಮಾತನಾಡಿದ್ದಾರೆ.

• ಶಾಸ್ತ್ರೀಯ ಸಂಗೀತದಲ್ಲಿ ನಿಮ್ಮದು ಸುಮಾರು ಐವತ್ತು ವರ್ಷಗಳ ಸುದೀರ್ಘ ಪಯಣ. ನಿಮ್ಮ ನಾದ ಬದುಕಿನ ಆರಂಭದ ದಿನಗಳು ಹೇಗಿದ್ದವು...?

ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನ ರುದ್ರಪಟ್ಟಣದ ಶಾಲೆಯಲ್ಲಿ ಓದುತ್ತಿರುವಾಗ ಅಲ್ಲಿ ಸಂಗೀತ ಪಾಠ ಹೇಳಿಕೊಡುವವರು ಇರಲಿಲ್ಲ. ಆದರೆ ನನ್ನ ಬಳಿ ಆ ಕಲೆ ಇತ್ತು. ಧೈರ್ಯವೂ ಇತ್ತು. ಯಾರಾದರೂ ಹಾಡು ಎಂದಾಗ ಹಾಡುತ್ತಿದ್ದೆ. ಆಮೇಲೆ ಮೈಸೂರಿಗೆ ಬಂದೆವು. ಅಲ್ಲಿ ಬಿಡಾರಂ ಕೃಷ್ಣಪ್ಪನವರು ಕಟ್ಟಿಸಿದ ಬಿಡಾರಂ ರಾಮಮಂದಿರದಲ್ಲಿ ಸಂಗೀತ ಕ್ಲಾಸ್ ಇತ್ತು. ಅಲ್ಲಿ ಚೌಡಯ್ಯನವರು ಅಯ್ಯನಾರ್ ಕಾಲೇಜ್ ಆಫ್ ಮ್ಯೂಸಿಕ್ ಅಂತ ಶುರು ಮಾಡಿದ್ರು. ಅಲ್ಲಿ ಸ್ವಲ್ಪವೇ ಸಂಗೀತ ಕಲಿತು 1962-63ರಲ್ಲಿ ಬೆಂಗಳೂರಿಗೆ ಬಂದು ಸೀತಾರಾಮ ಶಾಸ್ತ್ರಿ ಅವರ ಬಳಿ ಸಂಗೀತ ಕಲಿತೆ. ಕಲಿಕೆ ಕಷ್ಟ ಅನಿಸ್ತು, ಬಿಟ್ಟು ಬಿಟ್ಟೆ. ನಂತರ 1973ರಲ್ಲಿ ಬ್ಯಾಂಕ್ ನೌಕರನಾಗಿ ಸೇರಿದೆ. ಮುಂದೆ 1974ರಲ್ಲಿ ವಿಜಯಾ ಕಾಲೇಜ್ ಆಫ್ ಮ್ಯೂಸಿಕ್‌ಗೆ ಸೇರಿ ಕೃಷ್ಣಮೂರ್ತಿ ಹಾಗೂ ನಾರಾಯಣಸ್ವಾಮಿ ಭಾಗವತ ಬಳಿ ಸಂಗೀತ ಕಲಿತೆ. ಇಲ್ಲೂ ಮನೋಧರ್ಮ ಸಂಗೀತ, ರಾಗ ಎಲ್ಲವೂ ಕಷ್ಟ ಅನಿಸಿತು. ಕ್ಲಾಸಿಗೆ ಹೋಗೋದೇ ಬಿಟ್ಟೆ. ಒಮ್ಮೆ ಮೇಷ್ಟ್ರೇ ಮನೆಗೆ ಬಂದು ನನ್ನನ್ನು ಎಳ್ಕೊಂಡು ಹೋದ್ರು. 1975ರಲ್ಲಿ ಮೊದಲ ಕಛೇರಿ. ಅಲ್ಲಿಂದ ನಾನು ಸಂಗೀತವನ್ನು ತುಂಬ ಗಂಭೀರವಾಗಿ ತೆಗೆದುಕೊಂಡೆ. ವಾಯ್ಸ್ ಕಲ್ಚರ್ ಬಗ್ಗೆ ನಾನೇ ಚಿಂತನೆ ಮಾಡಿದೆ. 2001ರಿಂದ ನಾನು ಸ್ವತಂತ್ರನಾಗಿ ಹಾಡಲು ಶುರು ಮಾಡಿದೆ. ಅದೇ ನನ್ನ ಸಂಗೀತ ಜೀವನಕ್ಕೆ ದೊಡ್ಡ ತಿರುವು. ಅಲ್ಲಿಂದ ಮುಂದಿನ ನನ್ನ ಬದುಕೆಲ್ಲವೂ ಸಂಗೀತಮಯ, ಬರೀ ನಾದಮಯ!.

• ಶಾಸ್ತ್ರೀಯ ಸಂಗೀತ ಕುರಿತು ಹಲವಾರು ಕೃತಿಗಳನ್ನು ರಚಿಸಿದ್ದಲ್ಲದೆ, ಕೃತಿಗಳಿಗೆ ವರ್ಣಮಟ್ಟುಗಳನ್ನು ಹಾಕಿ ಹಾಡಿದಿರಿ. ನಿಮ್ಮ ಸಂಗೀತ ಕೃಷಿ ಬಗ್ಗೆ ತಿಳಿಸಿ.

ನಾನು ಸಂಗೀತದ ಮಟ್ಟುಗಳನ್ನು ಬರೆಯಲು ಶುರು ಮಾಡಿದ್ದು 1990ರಲ್ಲಿ ವಾದಿರಾಜರ ಅನುಗ್ರಹ ಆದ ಮೇಲೆ. ವಾದಿರಾಜರ ಮೇಲೆ 48 ಕೃತಿಗಳನ್ನು ಬರೆದೆ. ಇದು ಸೀರೀಸ್‌ನಲ್ಲಿ ಪ್ರಕಟವೂ ಆಯ್ತು. ವಾಗ್ಗೇಯಕಾರ ವಾಸುದೇವಾಚಾರ್ಯರ ಸಮಗ್ರ ಕೃತಿ, ವರ್ಣ, ತಿಲ್ಲಾನಗಳನ್ನೊಳಗೊಂಡ ಧ್ವನಿಸುರುಳಿ ಹಾಗೂ ಪುಸ್ತಕಗಳನ್ನು ಅವರ ಮೊಮ್ಮಗ ಎಸ್.ಕೃಷ್ಣಮೂರ್ತಿ ಅವರ ನೆರವಿನೊಂದಿಗೆ ಹೊರತಂದಿದ್ದೇನೆ. ಈ ಎಲ್ಲ ಕೃತಿಗಳನ್ನು ನಾಡಿನ ಹಿರಿಯ ಕಲಾವಿದರು ಹಾಡಿದ್ದಾರೆ. ಇದು ಕನ್ನಡಕ್ಕೆ ಬಹುದೊಡ್ಡ ಕೊಡುಗೆಯಾಗಿದೆ. ಜೊತೆಗೆ ನವಾವರಣ ಕೃತಿಗಳು, ರಾಘವೇಂದ್ರ, ಕನಕದಾಸ, ಪುರಂದರದಾಸರ ಮೇಲೆ ಪುಸ್ತಕ ಬರೆದೆ. 1991ರಿಂದ 2004ರವರೆಗೆ ಸಂಗೀತ ಕೃತಿಗಳ ಪುಸ್ತಕ ಪ್ರಕಟಣೆ ಮಾಡಿ ಸಂಗೀತ ಜತನವಾಗಿ ಉಳಿಯುವಂತೆ ಮಾಡಿದೆ. ಶಂಕರ ಭಾಗವತರ ನೂರು ಕೃತಿ ರಚನೆ ಮಾಡಿದೆ. ಸಂಗೀತದ 72 ಮೇಳರಾಗಗಳಲ್ಲೂ ಕೃತಿಗಳನ್ನು ಕನ್ನಡದಲ್ಲಿ, 'ಪುರಂದರ ಮೇಳ ಮಾಲಾ' ಹೆಸರಿನಲ್ಲಿ ರಚಿಸಿದೆ. ಸೌಂದರ್ಯಲಹರಿಗೂ ಮಟ್ಟು ಹಾಕಿದೆ. ಕನ್ನಡ ಮಾತ್ರವಲ್ಲದೆ ಸಂಸ್ಕೃತ, ತೆಲುಗು, ತಮಿಳು, ಹಿಂದಿ ಭಾಷೆಗಳಲ್ಲಿಯೂ ಸುಮಾರು 700-800 ಕೃತಿಗಳನ್ನು ರಚಿಸಿದ್ದೇನೆ. ಇವುಗಳಲ್ಲಿ ಬಹುತೇಕ ಕನ್ನಡದಲ್ಲಿಯೇ ಮಾಡಿದ್ದು, ದೇಶ ವಿದೇಶಗಳಲ್ಲಿ ಹಾಡಿದೆ. ಸಂಗೀತ ಕೃತಿಗಳನ್ನು ಗಮನಿಸಿ ಪುಟ್ಟರಾಜ ಗವಾಯಿಗಳು ನನ್ನನ್ನು ಆಶ್ರಮಕ್ಕೆ ಕರೆಸಿದ್ರು. ಅಲ್ಲಿ ಹಾಡಿದೆ. ಅಲ್ಲಿ ನನಗೆ 'ಪುಟ್ಟರಾಜ ಗವಾಯಿ ರಾಷ್ಟ್ರೀಯ ಪ್ರಶಸ್ತಿ'ಯೂ ಲಭಿಸಿತು.

• ನೀವು ಏರ್ಪಡಿಸುವ 'ಗೋಷ್ಠಿ ಗಾಯನ' ಬಹಳ ಜನಪ್ರಿಯವಾಗಿದೆ. ಗೋಷ್ಠಿ ಗಾಯನದ ಉದ್ದೇಶ...

ನೂರಾರು ಕಲಾವಿದರು ಸೇರಿ ಗುಂಪಿನಲ್ಲಿ ಶಾಸ್ತ್ರೀಯ ಕೃತಿ, ದೇವರನಾಮಗಳನ್ನು ಹಾಡುವುದು, ಈ ಮೂಲಕ ಸಂಗೀತದ ಕಂಪನ್ನು ನಾಡಿನ ಮೂಲೆಮೂಲೆಗೂ ತಲುಪಿಸುವುದು. ಅಲ್ಲದೆ ಮಹಿಳೆಯರಿಗೆ ಪ್ರತಿಭೆಯ ಅನಾವರಣಕ್ಕೆ ವೇದಿಕೆ ಒದಗಿಸುವುದು, ಅವರಲ್ಲಿ ಧೈರ್ಯ ತುಂಬುವುದು, ಕೀಳರಿಮೆಯನ್ನು ಹೋಗಲಾಡಿಸುವುದು ಇದರ ಉದ್ದೇಶ. ಪ್ರತಿಭೆ ಇದ್ದರೂ ಅನೇಕ ಕಾರಣಗಳಿಂದ ಮಹಿಳೆಯರಿಗೆ ಮನೆಬಿಟ್ಟು ಹೊರಗೆ ಬರೋದಕ್ಕೆ ಆಗುವುದಿಲ್ಲ. ಇದರಿಂದ ಅವರಲ್ಲಿ ಕೀಳರಿಮೆ ಬೆಳೆಯುತ್ತದೆ. ಇಂಥವರಿಗೆ ಗೋಷ್ಠಿ ಗಾಯನ ಅತ್ಯಂತ ಸೂಕ್ತವಾದದ್ದು. ಇಲ್ಲಿ ಕೃತಿಗಳನ್ನು ಗುಂಪಿನಲ್ಲಿ ಹಾಡುವುದು, 'ಕಲೆಕ್ಟಿವ್ ವಾಯ್ಸ್' ಇಲ್ಲಿರುತ್ತದೆ. ಈ ಗಾಯನದಲ್ಲಿ ಮುತ್ತುಸ್ವಾಮಿ ದೀಕ್ಷಿತರ ನವಾವರಣ ಕೃತಿಗಳು, ನವಗ್ರಹ ಕೃತಿಗಳು, ಚತುರ್ದಶ ರಾಗಮಾಲಿಕಾ, ತ್ಯಾಗರಾಜರ ಪಂಚರತ್ನ ಕೀರ್ತನೆಗಳು, ವಾದಿರಾಜರ ಲಕ್ಷ್ಮೀ ಸೋಬಾನೆ, ಪುರಂದರ ದಾಸರ ನವರತ್ನ ಕೀರ್ತನೆಗಳು, ಶ್ಯಾಮಾಶಾಸ್ತ್ರಿಗಳ ಸ್ವರಜತಿಗಳನ್ನು ಹಾಡುತ್ತೇವೆ, ಇದರಿಂದ ಶಾಸ್ತ್ರೀಯ ಸಂಗೀತಕ್ಕೆ ಕಿವಿಗಳು ಸೃಷ್ಟಿಯಾಗುತ್ತದೆ. ಇಲ್ಲಿ 8ರಿಂದ 80 ವರ್ಷದವರೆಗಿನವರು ಕಲಾವಿದರು ಹಾಡ್ತಾರೆ. ಇದರಿಂದ ಮನಸ್ಸಿಗೆ ನೆಮ್ಮದಿಯೂ ಸಿಗುತ್ತದೆ.

• 'ರುದ್ರಪಟ್ಟಣ ಸಂಗೀತೋತ್ಸವ' ವಿಶ್ವ ಮಟ್ಟದಲ್ಲಿ ಖ್ಯಾತಿ ಪಡೆದಿದೆ. ಇಲ್ಲಿ 'ಸಪ್ತಸ್ವರ ದೇವತಾ ಧ್ಯಾನ ಮಂದಿರ' ಕಟ್ಟಿಸಿದ್ದು ಮಹತ್ವದ್ದು. ಈ ಸಂಗೀತೋತ್ಸವ ಆರಂಭಿಸಿದ ಹಿನ್ನೆಲೆ ಏನು?

ರುದ್ರಪಟ್ಟಣ ಸಣ್ಣ ಹಳ್ಳಿ. ಆದರೆ ಸಂಗೀತ ಕಲಾವಿದರಿಗೆ ಈ ಊರೇ ಸ್ವರ್ಗ. ಇಲ್ಲಿ ಸಂಗೀತಕ್ಕಾಗಿ ಏನಾದರೂ ಮಾಡಬೇಕು ಎಂಬುದು ನನ್ನ ಕನಸಾಗಿತ್ತು. ಜೊತೆಗೆ ಊರವರು ಕೂಡ ಎಲ್ಲ ಸೇರಿ ಏನಾದರೂ ಮಾಡೋಣ ಅಂದ್ರು. ಮೊದಲು 'ಗೆಳೆಯರ ಸಮಾಗಮ' ಅಂತ ಶುರು ಮಾಡಿದೆವು. 2003ರಿಂದ ಇಲ್ಲಿ ಸಂಗೀತೋತ್ಸವ ಶುರು ಮಾಡಿದೆ. ಸಂಗೀತ ಕೇಳಲು ಜನ ತಾವಾಗಿಯೇ ಬರಬೇಕು ಎಂದು 2007ರಲ್ಲಿ ಇಲ್ಲಿ ತಂಬೂರಿ ಆಕಾರದಲ್ಲಿ 'ಸಪ್ತಸ್ವರ ದೇವತಾ ಧ್ಯಾನ ಮಂದಿರ' ಕಟ್ಟಿಸಿದೆ. ಸುಮಾರು ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಾಣವಾದ ಈ ದೇವಸ್ಥಾನದಲ್ಲಿ ಸಂಗೀತವೇ ಪೂಜೆ. ವೇದ, ಪಾರಾಯಣ ಪೂಜೆ ಎಂಬುದಿಲ್ಲ. ಸಂಗೀತ ಪ್ರೇಮಿಗಳು ನೋಡಲೇಬೇಕಾದ ಅದ್ಭುತವಾದ ತಾಣ ಇದು.

ಕೊನೆಯದಾಗಿ ನಾನು ಹೇಳುವುದಿಷ್ಟು. ಕರ್ನಾಟಕ ಸಂಗೀತವನ್ನು ಕೊನೆಯುಸಿರಿರುವವರೆಗೂ ಮುಂದುವರಿಸುವೆ. 'ಹಾಡಿದರಿರಬೇಕು, ಹಾಡದ ದಿವಸವೇ ಸೇರಬೇಕು ಹರಿಪಾದವ...' ಎಂದರೆ ಹಾಡ್ತಾ ಇರಬೇಕು, ಹಾಡದೇ ಇದ್ದರೆ ಅದು ಜೀವನವೇ ಇಲ್ಲ. ಸಂಗೀತವೇ ಉಸಿರು, ಅದುವೇ ನನ್ನ ಬದುಕು...!

ಮೊದಲ ಓದು

ವಿಜ್ಞಾನ ಆಸಕ್ತರಿಗೆ ಸೂಕ್ತ ಗ್ರಂಥ

ಪು: 564
₹950

ವಿಜ್ಞಾನ ರಸಯಾತ್ರಿ
ಸಂ: ಡಾ. ಟಿ.ಆರ್. ಅನಂತರಾಮು
ಪ್ರ: ಮೈತ್ರಿ ಬಾಂಧವರು
ಸಂ: 99160 44177

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಕೃಷಿ ಮಾಡಿದವರ ಪಟ್ಟಿಯಲ್ಲಿ ಪ್ರೊ.ಜೆ.ಆರ್. ಲಕ್ಷ್ಮಣರಾವ್ ಅವರ ಹೆಸರು ಮೇಲ್ಪಂಕ್ತಿಯಲ್ಲಿ ನಿಲ್ಲುತ್ತದೆ. ಕನ್ನಡದಲ್ಲಿ ವಿಜ್ಞಾನದ ಓದಿಗೆ ಹೊಸ ಆಯಾಮ ಕಟ್ಟಿಕೊಟ್ಟ ಅಗ್ಗಳಿಕೆ ಅವರದು. ಸರಳವಾಗಿ, ಅಲಂಕಾರಿಕ ಮಾತುಗಳನ್ನು ಬದಿಗಿಟ್ಟು ವಿಜ್ಞಾನದ ಸಂಕೀರ್ಣ ವಿಚಾರವನ್ನು ಕನ್ನಡದ ಮನಸ್ಸುಗಳಿಗೆ ದಾಟಿಸಿದ ಶ್ರೇಯ ಅವರಿಗೆ ಸಲ್ಲಬೇಕು. ವಿಜ್ಞಾನ ಬರಹದ ಅನುವಾದಕ್ಕೆ ಸಮಸ್ಯೆಯಾಗಬಾರದು ಎಂದು ನಿಘಂಟನ್ನೂ ರಚಿಸಿದ್ದಾರೆ. ಅವರ ಸ್ಮರಣಾರ್ಥ ಕೃತಿಯೇ 'ವಿಜ್ಞಾನ ರಸಯಾತ್ರಿ'.

ಲಕ್ಷ್ಮಣರಾವ್ ಅವರ ಸಹೋದ್ಯೋಗಿಗಳು, ಗೆಳೆಯರು, ಹಿತೈಷಿಗಳು, ಬಂಧುಗಳ ಬರೆದ ಲೇಖನಗಳ ಮಾಲೆ ಈ ಪುಸ್ತಕ. ಜೆಆರ್‌ಎಲ್ ಅವರ ಸಾಮಾಜಿಕ, ವಿಶೇಷ, ವ್ಯಕ್ತಿ ಚಿತ್ರಣಗಳು, ವಿಮರ್ಶೆಗಳು, ಇಂಗ್ಲಿಷ್ ಲೇಖನಗಳು ಹಾಗೂ ಪ್ರಶ್ನೋತ್ತರಗಳು ಪುಸ್ತಕದಲ್ಲಿ ಜಾಗ ಪಡೆದಿವೆ. ಜೆಆರ್‌ಎಲ್ ಅವರು ಬರೆದ/ಸಂಪಾದಿಸಿದ 38 ಪುಸ್ತಕಗಳ ಸಣ್ಣ ಪರಿಚಯವೂ ಇಲ್ಲಿದೆ. ಪುಸ್ತಕದಲ್ಲಿ 8 ವಿಭಾಗಗಳಿದ್ದು ಜೆಆರ್‌ಎಲ್ ಅವರ ವ್ಯಕ್ತಿತ್ವ, ವಿಜ್ಞಾನ ಪ್ರೀತಿ, ಪಾಂಡಿತ್ಯಕ್ಕೆ ಕೈಗನ್ನಡಿಯಂತಿದೆ. ವಿಜ್ಞಾನ ಪ್ರೀತಿಯ ಜೊತೆಗೆ ಅವರ ವೈಯಕ್ತಿಕ ಅಭಿರುಚಿಗಳನ್ನು, ನಿಲುವುಗಳನ್ನು ಬಿಂಬಿಸುವ ಲೇಖನಗಳು ಕುತೂಹಲಕಾರಿಯಾಗಿವೆ.

ಸಂಕೀರ್ಣವಾದ ವಿಜ್ಞಾನದ ವಿಷಯವನ್ನು ಸಾಮಾನ್ಯ ಓದುಗನ ಮನಸಿಗೆ ಜೆಆರ್‌ಎಲ್ ಅವರು ದಾಟಿಸುತ್ತಿದ್ದ ರೀತಿ, ಅದಕ್ಕಾಗಿ ಅವರು ಬಳಸುತ್ತಿದ್ದ ಉದಾಹರಣೆಗಳು, ಅದರ ಸರಳ ನಿರೂಪಣೆ, ವಿಷಯ ವೈವಿಧ್ಯತೆ, ದೂರದೃಷ್ಟಿ, ವೈಯಕ್ತಿಕ ಜೀವನದ ಬಗ್ಗೆ ಹಲವು ಲೇಖಕರು ಕೃತಿಯಲ್ಲಿ ಬೆಳಕು ಚೆಲ್ಲಿದ್ದಾರೆ. ಸಾಧನೆಯನ್ನು ಕೊಂಡಾಡಿದ್ದಾರೆ.

ಎಲ್ಲಾ ಸ್ಮರಣ ಸಂಚಿಕೆಗಳಂತೆ ಇದರಲ್ಲೂ ಹಲವು ವಿಷಯಗಳು ವಿವಿಧ ಲೇಖಕರ ಬರವಣಿಗೆಯಲ್ಲಿ ಪುನರಾವರ್ತನೆಯಾಗಿದೆ. ಈ ಬೃಹತ್ ಗ್ರಂಥ ಸಾಮಾನ್ಯ ಓದುಗನಿಗೆ ಹೊರೆ ಅನಿಸಿದರೂ, ವಿಜ್ಞಾನದ ಆಸ್ಥೆ ಇರುವವರಿಗೆ ಸೂಕ್ತವಾಗಬಲ್ಲದು. ಸರಳ ಭಾಷೆ, ನಿರೂಪಣೆ ಪುಸ್ತಕದ ಹೆಚ್ಚುಗಾರಿಕೆ. ಕೊನೆಯಲ್ಲಿ ಜೆಆರ್‌ಎಲ್ ಅವರ ಜನ್ಮಶತಾಬ್ದಿ ಪ್ರಯುಕ್ತ ನಡೆಸಿದ ವಿಜ್ಞಾನ ಉಪನ್ಯಾಸಗಳ ಯೂಟ್ಯೂಬ್ ವಿಡಿಯೊಗಳ ಕ್ಯೂಆರ್ ಕೋಡ್ ನೀಡಿಲಾಗಿದೆ. ಹೊಸ ಓದುಗನಿಗೆ ವಿಜ್ಞಾನದ ಆಸಕ್ತಿ ಹುಟ್ಟಿಸುವ ಲೇಖನಗಳು ಪುಸ್ತಕವನ್ನು ಸಮೃದ್ಧಗೊಳಿಸಿವೆ.

ಕಥೆ
ಪ. ರಾಮಕೃಷ್ಣ ಶಾಸ್ತ್ರಿ ಅವರ
ಮಡೆಸ್ನಾನ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಪಾಪುಗುರು ಅವರ
ಗೋಡೆ ಪಟದ ಗೆಳೆಯರು
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ



ಡಣ್ಣ ಚಕ್ಕು ಕೇಶ್ರಪ್ಪು ಕಥೆಯ — ಅಲೆಯಲ್ಲ..ತಿಮಿಂಗಿಲ

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ಸಮುದ್ರದಲ್ಲಿ ಸರ್ಫಿಂಗ್ ಮಾಡಲು ಹೋಗಿದ್ದ. ಬಹಳ ಹೊತ್ತು ಖುಷಿಯಲ್ಲೇ ಸರ್ಫಿಂಗ್ ಮಾಡಿದ. ಒಮ್ಮೆಲೇ ಹಿಂದಿನಿಂದ ದೊಡ್ಡ ಗಾತ್ರದ ಅಲೆಯೊಂದು ಬಂದಂತೆ ಗುಂಡನಿಗೆ ಅನಿಸಿತು. ಗುಂಡ ತಿರುಗಿ ನೋಡಿದಾಗ ಅದು ಅಲೆಯಾಗಿರಲಿಲ್ಲ, ಬದಲಾಗಿ ದೊಡ್ಡ ತಿಮಿಂಗಿಲವೊಂದು ಬಾಯ್ದೆರೆದು ಗುಂಡನತ್ತ ಬರುತ್ತಿತ್ತು. ಇದನ್ನು ಕಂಡು ಗುಂಡ ಒಂದು ಕ್ಷಣ ಬೆಚ್ಚಿಬಿದ್ದ.

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು


ಅನನ್ವಿ ಎಸ್.
ಗುಬ್ಬಿ

ಸೌಜನ್ಯ ಉಡಿಕೇರಿ
ಬೆಳಗಾವಿ

ಲೇಖನ ಪಿ.
ಬೆಂಗಳೂರು

ದೀಪಾ ಸಚಿನ್ ಯಾದವಾಡ
ಗೋಕಾಕ್

ವಿಶೃತ ಮಹೇಶ ಮುಗಳಿ
ಬೆಳಗಾವಿ

ಪವನ ಗೌಡ ಎನ್.
ಬೈಲಹೊಂಗಲ

2025ರ ದಿಢೀರ್ ಕ್ಯಾಲೆಂಡರ್

ಜನವರಿಯಿಂದ ಡಿಸೆಂಬರ್‌ವರೆಗೆ ಈ ಅಂಕಿಗಳನ್ನು ನೆನಪಿಡಲು 255/136/140/250 ಹೀಗೆ ನಾಲ್ಕು ಸಂಖ್ಯೆಗಳನ್ನು ಮಾಡಿಕೊಂಡು ಮನಸ್ಸಿನಲ್ಲಿಟ್ಟುಕೊಂಡರೆ 2025ನೇ ಸಾಲಿನ ಯಾವ ತಿಂಗಳಿನ ಯಾವ ತಾರೀಕು ಯಾವ ವಾರವಾಗುವುದೆಂದು ಪಟಪಟನೆ ಜಾದೂವಿನಂತೆ ಹೇಳಿ ಆಶ್ಚರ್ಯ ಉಂಟುಮಾಡಬಹುದು.

ಜ	ಫೆ	ಮಾ	ಏ	ಮೇ	ಜೂ	ಜು	ಆ	ಸೆ	ಅ	ನ	ಡಿ
2	5	5	1	3	6	1	4	0	2	5	0

ಉದಾ: 2025ರ ಆಗಸ್ಟ್ 15 ಯಾವ ವಾರ?
ಇಲ್ಲಿ ಆಗಸ್ಟ್ ತಿಂಗಳಿನ ನೆನಪಿನ ಸಂಖ್ಯೆ 4, ಅದಕ್ಕೆ ದಿನಾಂಕ 15 ಸೇರಿಸಿದಾಗ = 19
ಇದನ್ನು 7ರಿಂದ ಭಾಗಿಸಿದಾಗ (ಯಾವಾಗಲೂ ಏಳರಿಂದ ಭಾಗಿಸಿ)

7)19(2
14
5- ಶೇಷ

ಇಲ್ಲಿ ಶೇಷ ಮುಖ್ಯ. 1-ಉಳಿದರೆ ಸೋಮವಾರ, 2-ಉಳಿದರೆ ಮಂಗಳವಾರ, 3-ಉಳಿದರೆ ಬುಧ, 4-ಉಳಿದರೆ ಗುರು, 5-ಉಳಿದರೆ ಶುಕ್ರ, 6-ಉಳಿದರೆ ಶನಿ ಹಾಗೂ 0-ಉಳಿದರೆ ರವಿವಾರ ಎಂದು ತಿಳಿಯತಕ್ಕದ್ದು.
ಇಲ್ಲಿ ಐದು ಶೇಷ ಉಳಿದಿದೆ. ಆದ್ದರಿಂದ ಶುಕ್ರವಾರ. ತಿಂಗಳಿನ ಅಂಕಿಗೆ ದಿನಾಂಕ ಸೇರಿಸಿದಾಗ 7ರಿಂದ ಭಾಗ ಹೋಗದೇ ಇದ್ದರೆ ಅದನ್ನೇ ಶೇಷವೆಂದು ತಿಳಿದು ವಾರ ಹೇಳಿ.

ಮೋಜಿನ ಇಂಗ್ಲಿಷ್

ಇಲ್ಲಿ ಕೊಟ್ಟಿರುವ ಕೆಲವು ಇಂಗ್ಲಿಷ್ ಪದಗಳ ಹಿಂದೆ ಕೆಲವು ಇಂಗ್ಲಿಷ್ ಅಕ್ಷರಗಳನ್ನು ತುಂಬಿ ಹತ್ತು ಪ್ರಾಣಿಗಳ ಹೆಸರನ್ನು ಬರೆಯಿರಿ

1		AT
2		IT
3		KEY
4		ANT
5		ON
6		US
7		SUM
8		TEN
9		SON
10		BAT

ಚಳಿರಾಯ ಬಂದ

ಮಕ್ಕಳ ಮರಿಗಳ ಸೊಕ್ಕನು ಮುರಿಯುತ
ತೆಕ್ಕೆಯ ಬೀಳುವನು ಚಳಿರಾಯ
ಚಿಕ್ಕವರಿರಲಿ ದೊಡ್ಡವರಿರಲಿ
ಕನಿಕರ ತೋರದ ಮಹಾರಾಯ !

ಸುಮ್ಮನೆ ಕುಳಿತ ಅಮ್ಮನ ಕೌದಿಯು
ಒಮ್ಮೆಲೆ ಬರುವದು ಹಿಗ್ಗಿನಲಿ
ತಮ್ಮನು ಮುದುಡಿ ಬೆಚ್ಚಗೆ ಮಲಗಿ
ಗೊರಕೆ ಹೊಡೆಯುವ ರಗ್ಗಿನಲಿ

ಅಜ್ಜನಿಗಂತೂ ಥಂಡಿಗೆ ಆಸರೆ
ತೇಪೆ ಹಾಕಿದ ಕೋಟು
ಅಪ್ಪನಿಗಂತೂ ಬೇಕೇಬೇಕು
ಸಾಕ್ಸ್ ಜೊತೆಯಲಿ ಬೂಟು

ತಂಗಿಯ
ಕಿವಿಯನು ಮುಚ್ಚಲು ಬೆಚ್ಚಗೆ
ಕುಂಚಿಗೆ ಆಸರೆ ನೀಡುವುದು
ಅಕ್ಕಗೆ ಸ್ವೆಟರ್ ಅಪ್ಪಗೆ ಮಾಫ್ಲರ್
ಹಂಚಿಕೆ ಮೊದಲೆ ಆಗಿಹುದು

ಅಣ್ಣನ ಬಳಿಯಲಿ ಇರುತಿಹ ಕಂಬಳಿ
ತಣ್ಣನೆ ಗಾಳಿಯ ತಡೆಯುವುದು
ಕಂಬಳಿ ಹೊದ್ದರೆ ಥಂಡಿಯು ಹೆದರಿ
ದೂರಕೆ ತಾನು ಓಡುವದು

ಚಳಿಯನು ತಡೆಯಲು ಜಳಕಕೆ ಬೇಕು
ಎಲ್ಲರಿಗೂ ಬಿಸಿ ನೀರು
ನೆಗಡಿಯ ತಡೆಯಲು ಕಾಡೆ ಕಷಾಯ
ಅಜ್ಜಿಯ ಮೆಣಸಿನ ಸಾರು

ಬಿಸಿಬಿಸಿ ಚಹವನು ಕಾಸುವ ಕಾಯಕ
ಅವ್ವಗೆ ನಿತ್ಯವೂ ತಪ್ಪುವದಿಲ್ಲ
ಚಹವನು ಕುಡಿಯದೆ ಶಾಲೆಗೆ ಹೋಗಲು
ಯಾವ ಮಕ್ಕಳು ಒಪ್ಪುವದಿಲ್ಲ

ಪ್ರಾಸಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ			
ಉ	ತ	ಕ	ವಿ
ಕೊ	ಆ	ಸ	ಕೊ
ಅ	ಮ	ಕ	ಬೇ

1

	ವಿ	ತೆ
	ವಿ	ತೆ

2

	ರೆ	ತ
	ರೆ	ತ

3

	ಡು	ಗೆ
	ಡು	ಗೆ

4

	ಗ	ಣಿ
	ಗ	ಣಿ

5

	ಲೂ	ರ
	ಲೂ	ರ

6

	ಮ	ಲ
	ಮ	ಲ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:
majakoora@prajavani.co.in

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದ ಬಂಧ: 1.ಸವತಿ-ರೇವತಿ 2.ಕವನ-ಪಾವನ 3.ಜೀವನ-ಹವನ 4.ಅರಿಷ್ಠ-ವರಿಷ್ಠ 5.ಕವಡೆ-ದವಡೆ 6.ಉತ್ಸಾಹ-ಪ್ರೋತ್ಸಾಹ
ಚಿಕ್ಕಲೆಕ್ಕ: 8X8 = 64, 6X6 = 36 ಒಟ್ಟು = 100

ಸಮುದ್ರ ತಳದ ವಿಸ್ಮಯ ಪ್ರಪಂಚ...

ಸಹನಾ ಪ್ರಿಯದರ್ಶಿನಿ

ನನಗೂ ನೀರಿಗೂ ಅಷ್ಟಕಷ್ಟೆ. ಸ್ಕೂಬಾ ಡೈವಿಂಗ್ ಮಾತಂತೂ ದೂರವೆ. ಅಂಡಮಾನ್‌ಗೆ ಹೋಗಿ ಬಂದಿದ್ದ ಗೆಳತಿಯರು ಸ್ಕೂಬಾ ಡೈವಿಂಗ್ ಅನ್ನು ವರ್ಣಿಸಿ, ಆಸೆ ಹುಟ್ಟಿಸುತ್ತಿದ್ದರು. ಅಂಡಮಾನ್‌ನ ವಿಶೇಷತೆಗಳಲ್ಲಿ ಪ್ರಮುಖವಾದದ್ದು ಈ ಸ್ಕೂಬಾ ಡೈವಿಂಗ್. ನಾವು ಹ್ಯಾವ್ಲಾಕ್ ಐಲ್ಯಾಂಡ್‌ಗೆ ತಲುಪಿದ ಕೂಡಲೇ ಸ್ಕೂಬಾ ಡೈವಿಂಗ್‌ಗೆ ಹೊರಟೆವು. ಏನೋ ಭಯ. ಆದರೂ ಎಲ್ಲರು ಸ್ಕೂಬಾದ ಸೂಟ್ ಹಾಕಿಕೊಂಡೆವು. ಧೈರ್ಯ ತಂದುಕೊಂಡು ಸೊಂಟದೆತ್ತರದ ನೀರಿನಲ್ಲಿ ಹೋದೆವು. ಅಲ್ಲಿ ತರಬೇತುದಾರರ ತಂಡವಿತ್ತು. ಅದರ ಲೀಡರ್ ಹರ್ಷಾಲಿ. ಅಲ್ಲಿ ನಮ್ಮ ತರಬೇತಿ ಶುರುವಾಯಿತು. ಆಕ್ಸಿಜನ್ ಮಾಸ್ಕ್ ಹಾಕಿಕೊಳ್ಳುವುದು, ಬಾಯಿಯಲ್ಲಿ ಉಸಿರಾಡುವುದು, ನೀರಿನಲ್ಲಿ ಕಿವಿ ಮುಚ್ಚಿದಂತೆ ಅನಿಸಿದರೆ ಗಾಳಿಯ ಒತ್ತಡವನ್ನು ಕಿವಿಯಿಂದ ರಿಲೀಸ್ ಮಾಡುವುದು, ನೀರಿನೊಳಗೆ ಕಣ್ಣು ಬಿಡುವುದು, ನೀರಿನೊಳಗೆ ಮಾತನಾಡಲು ಆಗದಿರುವುದರಿಂದ ಕೈ ಸನ್ನೆಗಳನ್ನು ಕಲಿಯಬೇಕಾಯಿತು.

ಬಳಿಕ ಬೋಟ್ ಮಧ್ಯ ಸಮುದ್ರಕ್ಕೆ ಬಂದು ನಿಂತಿತು. ತೀರದಲ್ಲಿ ಹಸಿರು, ತಿಳಿನೀಲಿ ಬಣ್ಣವಿದ್ದ ನೀರು, ಈಗ ಕಡುನೀಲಿ ಬಣ್ಣಕ್ಕೆ ತಿರುಗಿತ್ತು. ಹೊಟ್ಟೆ ತೊಳಸಿದಂತಾಯ್ತು. ಎಲ್ಲರಿಗೂ ಹಾಗೆ ಆಗುತ್ತಿತ್ತು. ಆದರೂ ಎಲ್ಲರು ಮುಖದಲ್ಲಿ ನಗು ತಂದುಕೊಂಡು ಅಲೆಗಳ ಹೊಡೆತಕ್ಕೆ ಅಲುಗಾಡುತ್ತಿದ್ದ ಬೋಟ್‌ನಲ್ಲಿ ಗಟ್ಟಿಯಾಗಿ ಕೂತೆವು. ನಮ್ಮ ಜೊತೆ ಟ್ರೈನರ್ಸ್ ಹುಡುಗರು ಮತ್ತು ಹರ್ಷಾಲಿ ಇದ್ದ ಬೋಟ್ ಪಕ್ಕಕ್ಕೆ ಬಂದು ನಿಂತಿತು. ನನಗೆ ನೀರಿಗೆ ಹಾರಲೋ, ಬೇಡವೋ ಎನ್ನುವ ಗೊಂದಲ ಶುರುವಾಯಿತು. ಜೊತೆಗಿದ್ದವರು ಹುರಿದುಂಬಿಸಿದರು. ಒಬ್ಬೊಬ್ಬರಾಗಿ ನೀರಿಗೆ ಹಾರಲು ತಯಾರಾದರು. ಪ್ರತಿಯೊಬ್ಬರ ಬೆನ್ನಿನಲ್ಲೂ 10-15 ಕೆ.ಜಿ.ಯ ಆಕ್ಸಿಜನ್ ಸಿಲಿಂಡರ್ ಇತ್ತು. ಕಾಲಿಗೆ ಆಕ್ವಾ ಶೂಗಳನ್ನೂ ಧರಿಸಿ, ಕಣ್ಣಿಗೆ ಉಪ್ಪುನೀರು ಒಳಹೋಗದ ಕನ್ನಡಕ ಹಾಕಿ, ಬೋಟ್‌ನ ಅಂಚಿಗೆ ಕೂರಿಸಿ ಇನ್ನೇನು ತಲೆ ಕೆಳಗಾಗಿ ಕಡುನೀಲಿ ಸಮುದ್ರಕ್ಕೆ ಹಾರಬೇಕು ಎನ್ನುವಾಗ ಭಯವಾಗಿ 'ವೈಟ್.. ವೈಟ್..' ಅಂತ ಜೋರಾಗಿ ಉಸಿರಾಡಲು ಶುರು ಮಾಡಿದೆ. ನಂತರದಲ್ಲಿ ನಾನೇ ಗಟ್ಟಿ ಮನಸ್ಸು ಮಾಡಿ, ಈಗ ಹೋಗದಿದ್ದರೆ ಜೀವಮಾನದಲ್ಲಿ ಇಂಥ ಸಂದರ್ಭ ಬರುವುದೇ ಇಲ್ಲ ಎಂದುಕೊಂಡು 'ಓಕೆ' ಎನ್ನುವಂತೆ ತಲೆಯಾಡಿಸಿದೆ. ನನ್ನನ್ನು ಹಿಡಿದಿದ್ದ ಟ್ರೈನರ್ ನೀರಿಗೆ ತಲೆ ಕೆಳಗಾಗಿ ದೂಡಿಯೇಬಿಟ್ಟರು!.

ಅಲ್ಲೇ ನೀರಿನಲ್ಲಿದ್ದ ಹರ್ಷಾಲಿ ತಲೆ ಕೆಳಗಾಗಿದ್ದ ನನ್ನನ್ನು ಸರಿಮಾಡಿ ನನ್ನ ಮುಂದಿದ್ದ ಫೋಟೊ ತೆಗೆಯುವ ಹುಡುಗನ ಕಡೆ ಮುಖ ಮಾಡಿ ಎಲ್ಲಾ ಓಕೆ ಎಂದು ತೋರಿಸಿ ಎಂದರು. ಸತ್ತೇ ಹೋದೆನೇನೋ ಅನಿಸಿ ಬಾಯಲ್ಲೂ ಉಸಿರಾಡಲು ಆಗದೆ ಗಾಬರಿಯಲ್ಲಿ ಏನು ತೋರಿಸಿದೆನೋ. ಹರ್ಷಾಲಿ ನಿಧಾನವಾಗಿ ನನ್ನನ್ನು ನೀರಿನ ಒಳಗೆ ಕರೆದುಕೊಂಡು ಹೋಗಲು ಶುರು ಮಾಡಿದರು. ನೀರಿನೊಳಗೆ ಹೋದ ಒಂದೇ ನಿಮಿಷದಲ್ಲಿ ಮೇಲೆ ಹೋಗೋಣ ಎಂದು ಸಿಗ್ನಲ್ ಕೊಟ್ಟೆ. ಉಪ್ಪುನೀರು ಕಣ್ಣೊಳಗೆ ಹೋಗಿ ಉರಿ ಶುರುವಾಯಿತು. ಮೇಲೆ ಬಂದು ಕನ್ನಡಕ ಸರಿ ಮಾಡಿಕೊಂಡು ಒಳಗೆ ಕರೆದುಕೊಂಡು ಹೋದರು. ಒಂದೇ ನಿಮಿಷ. ಉಸಿರಾಡಲು ಆಗುತ್ತಿಲ್ಲ ಎಂದು ಮತ್ತೆ ಮೇಲೆ ಬಂದೆ. ಈ ಬಾರಿ ಹರ್ಷಾಲಿಗೆ 'ಸಾಕು, ನಾನು ಒಳಗೆ ಹೋಗೋಲ್ಲ. ಬೋಟ್ ಮೇಲೆ ಹತ್ತಿಸು' ಎಂದೆ. ಹರ್ಷಾಲಿ, 'ಒಂದೇ ಒಂದು ಫೋಟೊ ತೆಗೆದುಕೊಂಡು ಬರೋಣ' ಎಂದರು. ಫೋಟೊ ಆಸೆಗೆ ಮತ್ತೆ ಹೋದೆ. ಭಯದಲ್ಲಿ ಹರ್ಷಾಲಿಯ ಎರಡೂ ಕೈಗಳನ್ನು ನನ್ನ ಸೊಂಟದ ಸುತ್ತ ಗಟ್ಟಿಯಾಗಿ ಹಿಡಿದುಕೊಂಡಿದ್ದೆ. 'ಇಬ್ಬರೂ ಮುಳುಗಿ ಹೋಗುವೆವು, ಒಂದು ಕೈಯನ್ನಾದರೂ ಬಿಡಿ' ಎಂದರು ಹರ್ಷಾಲಿ. ಕಡೆಗೆ ಅವರ ಒಂದು ಕೈಯನ್ನು ಬಿಟ್ಟೆ. ನಿಧಾನವಾಗಿ ಕೆಳಗೆ ಹೋಗಲು ಶುರು ಮಾಡಿದರು. ಐದು ನಿಮಿಷ ಮಾತ್ರ ಸಾಕು ಎಂದು ಹೋದವಳು, ಅದು ಹೇಗೆ 45 ನಿಮಿಷ ಆಯಿತು. ಗೊತ್ತೇ ಆಗಲಿಲ್ಲ. ಕೆಳಗೆ ಹೋಗುತ್ತಾ ಹೋಗುತ್ತಾ, ನ್ಯಾಷನಲ್ ಜಿಯೋಗ್ರಾಫಿಕ್ ಚಾನಲ್‌ನಲ್ಲಿ ನೋಡಿದಂತಹ ಸಮುದ್ರ ತಳದ ಪ್ರಪಂಚ ತೆರೆಯಲಿಕ್ಕೆ ಶುರುವಾಯಿತು.

ಸುಂದರವಾದ ಬಣ್ಣ ಬಣ್ಣದ ಮೀನುಗಳು, ಹವಳದ ದಿಬ್ಬಗಳು(ಕೋರಲ್)... ನೋಡುತ್ತಾ ನೋಡುತ್ತಾ ಒಂದೊಂದೇ ಮೀಟರ್ ಆಳಕ್ಕೆ ಹೋದಂಥೆಲ್ಲ ಹರ್ಷಾಲಿ ನನ್ನ ಮೂಗನ್ನು ಹಿಂಡಿ, ಕಿವಿಯಿಂದ ಏರ್‌ಪ್ರೆಶರ್ ಆಚೆ ಹಾಕುವಂತೆ ಮಾಡುತ್ತಿದ್ದರು. ಅವರು ಮೂಗು ಹಿಂಡಿದಾಗಲೆಲ್ಲ ಒಂದೊಂದೇ ಮೀಟರ್ ಆಳಕ್ಕೆ ಹೋಗುತ್ತಿದ್ದೆವು. ಸಮುದ್ರದ ಒಳಗಿನ ಫೋಟೊಗ್ರಾಫರ್ ನನ್ನ ಎದುರು ಬಂದು ಹ್ಯಾಂಡ್ ಸಿಗ್ನಲ್ ಮಾಡಿ ಫೋಟೊ ತೆಗೆಯುವಾಗ ಹರ್ಷಾಲಿ ನನ್ನ ಕೈಬಿಟ್ಟರು. ಫೋಟೊ ತೆಗೆದಾದ ಮೇಲೆ ಹುಡುಕಿದರೆ ಹರ್ಷಾಲಿಯ ಕೈ ಸಿಗುತ್ತಿಲ್ಲ. ಗಾಬರಿಯಾದೆ. ನನ್ನ ಹಿಂದೆಯೇ ಇದ್ದ ಅವರು, ದೂರದಲ್ಲಿದ್ದ ಕೋರಲ್‌ಗಳತ್ತ ಕೈ ಮಾಡಿ ಅಲ್ಲಿ ಹೋಗೋಣ ಎಂದರು.

ಸ್ಕೂಬಾ ಸೂಟಿನ ಕುತ್ತಿಗೆಯ ಹಿಂಭಾಗದ ಜಿಪ್‌ನ ತುದಿಯಲ್ಲಿ ಒಂದು ಬಾಲ ಇತ್ತು. ನಾನು ನೀರಿನಲ್ಲಿ ತಪ್ಪಿಸಿಕೊಳ್ಳದಂತೆ ಅದನ್ನು ಹಿಡಿದಿದ್ದರು. ಮುಂದೆ ಮುಂದೆ ಹೋದಂತೆ ಬಣ್ಣದ ಕೋರಲ್‌ಗಳು, ಬಣ್ಣ ಬಣ್ಣದ ಗುಂಪು ಗುಂಪು ಮೀನುಗಳು.. ಕೆಲವು ಕಡೆ ಆಳವಾದ ಬಾವಿಯಂತಹ ಜಾಗಗಳು, ಬಾವಿಯೊಳಗೆ ಹೋದರೆ ಅಲ್ಲಿರುವ ಕೋರಲ್‌ಗಳೇ ಬೇರೆ ತರಹದವು. ಅಲ್ಲಿರುವ ಮೀನುಗಳೂ ಬೇರೆ ತರಹದವು. ಬಾವಿಯೊಳಗೆ ಹೋದರೆ ಅದರೊಳಗಿನ್ನೊಂದು ಬಾವಿ.. ಅಂತಹ ಬಾವಿಯೊಳಗೆ ಇಳಿಯುವಾಗ ನಿಜಕ್ಕೂ ಭಯವಾಗುತ್ತಿತ್ತು. ಆದರೆ ಇನ್ನೊಮ್ಮೆ ಈ ರೀತಿಯ ಸಾಹಸ ಮಾಡುತ್ತೇನೋ, ಇಲ್ಲವೋ ಎಂದು ಸಮುದ್ರದ ಒಳಗಿನ ಲೋಕವನ್ನು ಕಣ್ತುಂಬಿಸಿಕೊಂಡು ಹರ್ಷಾಲಿಯೇ ಮೇಲೆ ಹೋಗೋಣ ಎಂದು ಕರೆಯುವತನಕ ಸುಮಾರು 15 ರಿಂದ 20 ಮೀಟರ್ ಆಳದಲ್ಲಿ ಕಂಡ ಹವಳದ ದಿಬ್ಬಗಳನ್ನು, ಮೀನುಗಳನ್ನು ಕಣ್ತುಬಿಕೊಂಡೆ.

ಅತ್ಯಂತ ವರ್ಣರಂಜಿತವಾಗಿ ಕಣ್ಣಿಗೆ ಹಬ್ಬದಂತೆ ಇದ್ದ ಹವಳಗಳು, ಮೀನುಗಳನ್ನು ನೋಡುವಾಗ ಹರ್ಷಾಲಿ ನನ್ನ ಕೈಬಿಟ್ಟದ್ದು ಮರೆತುಹೋಗಿತ್ತು. ಭಯವೂ ಮಾಯವಾಗಿ ಮತ್ತೆ ಈ ಸೊಬಗು ಸಿಗುವುದೋ ಇಲ್ಲವೋ ಎಂಬಂತೆ ಮನ ತುಂಬಿಕೊಂಡೆ. ಅಷ್ಟರಲ್ಲಿ ಹರ್ಷಾಲಿ ಮೇಲೆ ಹೋಗೋಣ ಎಂದು ಸಿಗ್ನಲ್ ಕೊಟ್ಟರು. ಒಂದೇ ನಿಮಿಷಕ್ಕೆ ರಾಕೆಟ್‌ನಂತೆ ಮೇಲೆ ಕರೆದುಕೊಂಡು ಬಂದರು. ಬೆನ್ನಿಗಿದ್ದ ಆಕ್ಸಿಜನ್ ಸಿಲಿಂಡರ್ ಸಿಕ್ಕಾಪಟ್ಟೆ ಭಾರವಿದ್ದುದ್ದರಿಂದ ಬೋಟ್‌ನ ಏಣಿಯನ್ನು ಅರ್ಧ ಹತ್ತಿ, ಇನ್ನೂ ನೀರಿನಲ್ಲೆ ಇದ್ದಾಗಲೇ ಸಿಲಿಂಡರ್ ಮತ್ತು ಕನ್ನಡಕವನ್ನು ಅಲ್ಲೇ ಬಿಚ್ಚಿ ಮೇಲೆ ಹತ್ತಿ ಬಂದೆ.

ಸ್ಕೂಬಾ ಡೈವಿಂಗ್ ನೆನಪು ಆಗಾಗ ಕನಸಿನಲ್ಲಿ ಬಂದು ಖುಷಿ ಕೊಡುತ್ತದೆ. ❖



ಸ್ಕೂಬಾ ಡೈವಿಂಗ್‌ಗಾಗಿ ಆಳಸಮುದ್ರದತ್ತ ಪಯಣ...

ಅಂಡಮಾನ್ ಎನ್ನುವ ಮಾಂತ್ರಿಕ ದ್ವೀಪದಲ್ಲಿ ಸ್ಕೂಬಾ ಡೈವಿಂಗ್ ಅನುಭವವೇ ಅನನ್ಯ. ಅಗಾಧ ಜಲರಾಶಿಯನ್ನು ಕಂಡು ಭೀತಿಗೊಂಡವರು, ಸಮುದ್ರದ ಆಳಕ್ಕೆ ಇಳಿಯುತ್ತಾ, ಇಳಿಯುತ್ತಾ ಹೊಸಲೋಕವನ್ನೇ ಕಂಡು ವಿಸ್ಮಯಗೊಂಡ ಪರಿ ಇಲ್ಲಿ ಆಪ್ತವಾಗಿ ಅನಾವರಣಗೊಂಡಿದೆ.

ಸಮುದ್ರದಾಳದೊಳಗೆ ಹೋದಬಳಿಕ ಕೈಸನ್ನೆಯಲ್ಲೇ ಎಲ್ಲಾ ಮಾತುಕತೆ...

ಬಿಳಿ ಮರಳಿನ ರಹಸ್ಯ...

ಅಂಡಮಾನ್ ಸಮುದ್ರತೀರಗಳೆಲ್ಲ ಬಿಳಿಯಾದ ಸಣ್ಣ ಸಣ್ಣ ಕಲ್ಲಿನಂತಹ ಮರಳಿನಿಂದ ಕೂಡಿವೆ. ಸೂಕ್ಷ್ಮವಾಗಿ ಗಮನಿಸಿದರೆ ಈ ಮರಳಿನಲ್ಲಿ ಹವಳದ ಸಣ್ಣ ಸಣ್ಣ ಚೂರುಗಳು ಇವೆ. ಅಲೆಗಳ ಹೊಡೆತಕ್ಕೆ ಹವಳ ಇಷ್ಟು ಸಣ್ಣ ಚೂರುಗಳಾಗಿ ದಡಕ್ಕೆ ಬಂದು ಬಿದ್ದಿವೆ ಎಂದು ನಾನಂದುಕೊಂಡಿದ್ದೆ. ಆದರೆ ಈ ಮರಳಿನ ತರಹದ ಹವಳದ ಚೂರುಗಳಿಗೆ ಕಾರಣ ಪಾರೆಟ್ ಮೀನುಗಳು. ಇದು ಸಮುದ್ರದೊಳಗಿನ ಹವಳದ ಅಸ್ಥಿಪಂಜರವನ್ನು ತಿಂದು ಅದರ ಪುಡಿಯನ್ನು ಹೊರಹಾಕುತ್ತವೆ. ಈ ಪುಡಿಯೇ ಮರಳಿನ ರೂಪದಲ್ಲಿ ಅಲೆಗಳ ಮೂಲಕ ದಡಕ್ಕೆ ಬಂದು ಶೇಖರಣೆಯಾಗಿ ಅಂಡಮಾನಿನ ಸುಂದರವಾದ ಬಿಳಿ ಮರಳಿನ ಬೀಚ್‌ಗಳಾಗಿವೆ. ಇದೆಲ್ಲಾ ಅದ್ಭುತಗಳನ್ನು ನೋಡಿದರೆ ಪ್ರಕೃತಿ ಎಲ್ಲಿಂದ ಎಲ್ಲಿಗೆ ತನ್ನ ಸರಪಳಿಯನ್ನು ಹೆಣೆದಿದೆ ಎಂದು ಗೊತ್ತಾಗುತ್ತದೆ. ನಾವು ಮನುಷ್ಯರು ಮಾತ್ರ ಈ ಸರಪಳಿಯ ಸೂಕ್ಷ್ಮತೆಗಳನ್ನು ಅರಿಯದೆ ಎಲ್ಲವನ್ನು ಹಾಳು ಮಾಡಲು ನಿಂತಂತಿದೆ.



ವೀಣಾ ವರ್ಲ್ಡ್ ಪ್ರವಾಸ ಸ್ಪರ್ಧೆ

ನಿಮ್ಮ ಉತ್ತರಗಳನ್ನು ವೀಣಾ ವರ್ಲ್ಡ್ ವೆಬ್ಸೈಟ್ನಲ್ಲಿ ಸಲ್ಲಿಸಲು, ಬರುವ ಮಂಗಳವಾರದೊಳಗೆ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ. ಉಚಿತ ವೀಣಾ ವರ್ಲ್ಡ್ ಟೂರ್ "ಶಿಮ್ಲಾ ಮನಾಲಿ" (ಟೂರ್ ಕೋಡ್ - HPPS) ಗೆಲ್ಲಬಹುದಾದ ಅವಕಾಶ ನಿಮ್ಮದಾಗಿಸಿಕೊಳ್ಳಿ. ಅದೃಷ್ಟಶಾಲಿ ವಿಜೇತರ ಹೆಸರನ್ನು 12ನೇ ಜನವರಿ, 2025ರಂದು ಪ್ರಕಟಗೊಳ್ಳುವ ಮುಂದಿನ ಲೇಖನದಲ್ಲಿ ಪ್ರಕಟಿಸಲಾಗುವುದು

1. ಉಸೇನ್ ಬೋಲ್ಟ್ 100 ಮೀಟರ್ ಓಟದಲ್ಲಿ ವಿಶ್ವದಾಖಲೆ ಮುರಿದಿದ್ದು ಯಾವ ವರ್ಷದಲ್ಲಿ?
2. ಸ್ಯಾಂಡ್‌ವಿಚ್ ಮೂಲತಃ ಯಾವ ದೇಶದ ತಿನಿಸು?
3. ಪ್ರಪಂಚದ ಮೊದಲ ಸೌರಶಕ್ತಿ ಚಾಲಿತ ವಿಮಾನ ನಿಲ್ದಾಣ ಯಾವುದು?
4. ಮರುಭೂಮಿಯೇ ಇಲ್ಲದ ಭೂಖಂಡ ಯಾವುದು?
5. ನಾಲ್ಕು ಗಂಟೆಗಳ ಅತ್ಯಂತ ಸುದೀರ್ಘ ಅವಧಿಯ ಬಾಲಿವುಡ್ ಸಿನಿಮಾ ಯಾವುದು?
6. ವಿಲಿಯಂ ದಿ ಕಾಂಕ್ವೆರರ್ ಲಂಡನ್‌ನಲ್ಲಿ ನಿರ್ಮಿಸಿದ ಯಾವ ಐತಿಹಾಸಿಕ ಕೋಟೆಯು ರಾಜ ಮನೆತನದ ಅರಮನೆ ಮತ್ತು ಕಾರಾಗೃಹವಾಗಿದ್ದಿತು?
7. ವಿಯೆಟ್ನಾಂ ದೇಶದ ಸ್ವಾತಂತ್ರ್ಯ ಹೋರಾಟ ಮುನ್ನಡೆಸಿದ ನಾಯಕ ಯಾರು?

1ನೇ ಡಿಸೆಂಬರ್ ವೀಣಾ ವರ್ಲ್ಡ್ ಟ್ರಾವೆಲ್ ರಸಪ್ರಶ್ನೆ ಅದೃಷ್ಟಶಾಲಿ ವಿಜೇತರು "ಹೈಲೈಟ್ಸ್ ಆಫ್ ಗುಜರಾತ್" (ಟೂರ್ ಕೋಡ್ – GTSD)
ಶ್ರೀಮಂತ್ ಬಿಲ್ಕರ್
ಬೆಂಗಳೂರು
ಅಭಿನಂದನೆಗಳು!

veenaworld.com
Toll-Free: 1800 22 7979
Email: travel@veenaworld.com

ಜಪಾನೀ ಬದುಕಿನ ಕ್ರಮ

ಸುನೀಲ ಪಾಟೀಲ್
Founder, CPO & CNO
Veena World
sunila@veenaworld.com

ನನ್ನ ಸ್ನೇಹಿತರೊಬ್ಬರು ನನಗೆ ತಾವು ತಂದಿದ್ದ ಬೊನ್ಸಾಯ್ ಗಿಡ ತೋರಿಸಿದರು. ಅದರ ಬಗ್ಗೆ ಕಾಳಜಿವಹಿಸಿ ಅದರ ಪ್ರತಿಯೊಂದು ರೆಂಬೆಯ ಅಂಕುಡೊಂಕಿನೊಂದಿಗೆ ಭಾವಾನಾತ್ಮಕ ಸಂಬಂಧ ಹೊಂದುವುದರಲ್ಲಿ ಅವರು ಅದೆಷ್ಟು ಖುಷಿ ಕಾಣುತ್ತಿದ್ದರು ಎಂಬುದು ನನಗೆ ಸ್ಪಷ್ಟವಾಗಿ ಗೊತ್ತಾಗುತ್ತಿತ್ತು. "ಇದು ನನ್ನ ಜಪಾನ್ ಪ್ರವಾಸವನ್ನು ನೆನಪಿಸುತ್ತದೆ" ಎಂದು ಅವರು ಮೆಚ್ಚುಗೆಯಿಂದ ಹೇಳಿದರು. ಅವರ ಆ ಮಾತುಗಳು ನನಗೆ ನಾಟಿದವು. ಅವರ ಹೃದಯ ಈಗಲೂ ಸೂರ್ಯೋದಯದ ನಾಡಿನಲ್ಲಿ ಉಳಿದಿರುವುದು ಎದ್ದುಕಾಣುತ್ತಿತ್ತು. ಆಗ, ನನಗೆ ಜಪಾನಿನ ನನ್ನ ಮೊದಲ ಭೇಟಿಯ ನೆನಪಾಗಿ ಮುಖದ ಮೇಲೆ ಮಂದಹಾಸ ಮೂಡಿತು. ಆ ಭೇಟಿಯ ವೇಳೆ, ಜಪಾನ್ ನನ್ನ ಮಟ್ಟಿಗೊಂದು ನಿಗೂಢ ದೇಶವಾಗಿತ್ತು. ತಂತ್ರಜ್ಞಾನ ಉನ್ನತಿಯಲ್ಲಿ ಹಾಗೂ ನಾಗಾಲೋಟದ ಅಭಿವೃದ್ಧಿಯಲ್ಲಿ ಇಡೀ ಪ್ರಪಂಚಕ್ಕೆ ಮುಂಚೂಣಿಯಲ್ಲಿದ್ದೂ ಹೃದಯವನ್ನು ಸಮಾಧಾನಗೊಳಿಸುವ ತೀವ್ರ ಶಾಂತತೆ ನೀಡಬಲ್ಲ ಆ ದೇಶವನ್ನು ಅನ್ವೇಷಿಸುವ ಕಾತರದಲ್ಲಿ ನಾನಿದ್ದೆ. ಪ್ರಸ್ತುತ ನಾವೆಲ್ಲರೂ ಬದುಕುತ್ತಿರುವ ವೇಗದ ಬದುಕಿಗೆ ಅತ್ಯುತ್ತಮ ಉಪಶಮನಕಾರಕವನ್ನು ಜಪಾನ್ ಹೊಂದಿದೆಯೇನೋ ಎಂಬ ಅನಿಸಿಕೆ ಆ ದೇಶದಲ್ಲಾಗುತ್ತದೆ. ನನಗೆ ಕೆಲವು ವರ್ಷಗಳ ಹಿಂದೆ ಜಪಾನಿಗೆ ಭೇಟಿ ನೀಡುವ ಅವಕಾಶ ಒದಗಿಬಂದಿತ್ತು. ಅದಾದ ನಂತರ, ಅಲ್ಲಿಗೆ ಪದೇಪದೇ ಭೇಟಿ ನೀಡಬೇಕೆಂಬ ನನ್ನ ಹಂಬಲ ಮುಂದುವರಿದೇ ಇದೆ. ಆ ದೇಶಕ್ಕೆ ಭೇಟಿ ನೀಡುವ ಇತರ ಪ್ರವಾಸಿಗರಿಗೂ ಹೀಗನ್ನಿಸುವುದರಲ್ಲಿ ಅಚ್ಚರಿಯೇನೂ ಇಲ್ಲ. ಜಪಾನಿನ ಮೋಹಕತೆಯು ಅಲ್ಲಿನ ಪ್ರಖ್ಯಾತ ತಾಣಗಳಿಗಿಂತ ಮಿಗಿಲಾದುದು; ನಮ್ಮ ಸುತ್ತಲ ಪ್ರಪಂಚವನ್ನು ಹೇಗೆ ಅನುಭವಿಸಬೇಕು ಎಂಬುದನ್ನು ಪ್ರಭಾವಿಸುವ ಜಪಾನಿನ ಜೀವನ ವಿಧಾನ ಅದಾಗಿದೆ.

ಟೋಕಿಯೋಗೆ ನಾನು ಮಾಡಿದ ಬಿಜಿನೆಸ್ ಪ್ರವಾಸವೊಂದು ನನ್ನ ಮರೆಯಲಾಗದ ನೆನಪುಗಳಲ್ಲಿ ಒಂದಾಗಿದೆ. ದಿನವಿಡೀ ಸಮಾವೇಶದ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡ ಮೇಲೆ ನಾನು ನಗರಾನ್ವೇಷಣೆಗೆ ಹೊರಟೆ. ಜಪಾನಿ ಭಾಷೆಯ ಅಷ್ಟೇನೂ ಜ್ಞಾನವಿರದ ನಾನು, ನಿರ್ದಿಷ್ಟ ಸ್ಥಳವೊಂದಕ್ಕೆ ತೆರಳಲು ಯಾವ ರಸ್ತೆಯಲ್ಲಿ ಹೋಗಬೇಕೆಂಬ ಬಗ್ಗೆ ಸ್ಥಳೀಯ ಮಹಿಳೆಯೊಬ್ಬರ ಬಳಿ ಕೇಳಿ ತಿಳಿದುಕೊಳ್ಳಲು ಪ್ರಯತ್ನಿಸಿದೆ. ಆಗ ಆ ಮಹಿಳೆಯು, ನನಗೆ ಕೇವಲ ತನ್ನ ಕೈಯಲ್ಲಿ ಆ ರಸ್ತೆಯ ದಿಕ್ಕು ತೋರಿಸಿ ಸುಮ್ಮನಾಗಬಹುದಿತ್ತು. ಆದರೆ, ಆಕೆ ಹಾಗೆ ಮಾಡಲಿಲ್ಲ. ಬದಲಿಗೆ, ನಿಗದಿತ ಜಾಗದವರೆಗೆ ನನ್ನ ಜೊತೆ ಬಂದು, ನಾನು ಸರಿಯಾದ ರಸ್ತೆಯಲ್ಲೇ ಸಾಗುತ್ತೇನೆ ಎಂಬುದನ್ನು ಖಚಿತಪಡಿಸಿಕೊಂಡು ನಂತರ ವಾಪಸ್ಸಾದರು. ಇದು ಜಪಾನೀಯರು ತಾವು ಪ್ರಜ್ಞಾಪೂರ್ವಕವಾಗಿ ಬೆಳೆಸಿಕೊಂಡಿರುವ ಸಂಸ್ಕಾರಕ್ಕೆ ಒಂದು ನಿದರ್ಶನವಷ್ಟೆ. ಜಪಾನಿನಲ್ಲಿ ಇಂತಹ ಆತಿಥ್ಯಕ್ಕೆ 'ಒಮೊತೆನಾಸಿ' ಎನ್ನಲಾಗುತ್ತದೆ. ಈ ಪ್ರಸಂಗವು ನನ್ನ ಮೇಲೆ ಅಚ್ಚಳಿಯದ ನೆನಪಿನ ಮುದ್ರೆಯೊತ್ತಿತು. 'ಒಮೊತೆನಾಸಿ' ಎಂಬುದು ನಿಸ್ವಾರ್ಥದಿಂದ ಕೂಡಿದ ಆತಿಥ್ಯ ವಿಧಾನವಾಗಿದೆ. ಇಲ್ಲಿ ಆತಿಥ್ಯ ನೀಡುವವರು ತಮ್ಮ ಅತಿಥಿಗಳ ಅಗತ್ಯಗಳನ್ನು ಸ್ವತಃ ಮನಗಂಡು, ಅಪ್ಪಟ ಕಾಳಜಿಯೊಂದಿಗೆ ಯಾವ ಪ್ರತಿಫಲವನ್ನೂ ನಿರೀಕ್ಷಿಸದೆ ಅವನ್ನು ಪೂರೈಸುತ್ತಾರೆ. ಜಪಾನಿನ ಸಾಂಪ್ರದಾಯಿಕ ಅತಿಥಿ ಗೃಹಗಳಾದ 'ರಿಯೋಕಾನ್'ನಲ್ಲಿ ವಾಸ್ತವ್ಯ ಹೂಡಿದಾಗ ಈ ಸಾಂಸ್ಕೃತಿಕ ಮೌಲ್ಯವು ಇನ್ನಷ್ಟು ನಿಚ್ಚಳವಾಗಿ ಅನುಭವಕ್ಕೆ ಬರುತ್ತದೆ. ಈ 'ರಿಯೋಕಾನ್'ಗಳು ಟಟಾಮಿ ಮ್ಯಾಟ್‌ಗಳಿಂದ ಕೂಡಿದ ಅಚ್ಚುಕಟ್ಟಾಗಿ ವ್ಯವಸ್ಥೆಗೊಳಿಸಲಾದ ಕೊಠಡಿಗಳಾಗಿರುತ್ತವೆ. ಅತಿಥಿಗಳಿಗೆ ತಾವಿರುವ ಕೊಠಡಿಗೇ ಊಟ ಪೂರೈಸಲಾಗುತ್ತದೆ. ಅಲ್ಲಿನ ನೈಸರ್ಗಿಕ ಬಿಸಿನೀರಿನ ಬುಗ್ಗೆಗಳು (ಆನ್‌ಸೆನ್) ಮೈಮನಸ್ಸುಗಳೆರಡಕ್ಕೂ ಚೈತನ್ಯ ನೀಡುತ್ತವೆ. ಇಲ್ಲಿ ಪ್ರತಿಯೊಂದನ್ನೂ ಅತಿಥಿಗಳಿಗೆ ಅನುಕೂಲ ಹಾಗೂ ಅನುಭೂತಿಯ ಅನುಭವ ಒದಗಿಸುವ ದೃಷ್ಟಿಯಿಂದ ವ್ಯವಸ್ಥೆ ಮಾಡಲಾಗಿರುತ್ತದೆ. ಇಂತಹುದೇ ಆತಿಥ್ಯವನ್ನು ರೆಸ್ಟೋರೆಂಟ್‌ಗಳು ಮತ್ತು ಟೀ ಹೌಸ್‌ಗಳಲ್ಲಿ ಕೂಡ ಕಾಣಬಹುದು. ಇದನ್ನು ಕಣ್ಣಾರೆ ಅನುಭವಿಸುವವರಿಗೆ, ಇಲ್ಲಿ ಸೇವೆ ಎನ್ನುವುದು ಕೇವಲ ಒಂದು ವ್ಯವಹಾರವಲ್ಲ. ಅದೊಂದು ಕಲೆಗಾರಿಕೆಯಾಗಿ ವಿಕಸನಗೊಂಡಿದೆ ಎಂಬುದು ಮನವರಿಕೆಯಾಗುತ್ತದೆ. ಇನ್ನು, ಜಪಾನೀಯರ ಚಹಾ ಆಚರಣೆಯಾದ 'ಚನೋಯು' ಎಂಬುದು ಸಮರಸತೆ, ಗೌರವ ಹಾಗೂ ಪ್ರಶಾಂತತೆಯನ್ನು ಕೇಂದ್ರೀಕರಿಸಿದ ಸಂವೇದನಾಶೀಲ ಆಚರಣೆಯಾಗಿದೆ. ಇಲ್ಲಿ ಚಹಾ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ಪ್ರತಿಯೊಂದು ಚಲನೆಯೂ ಪ್ರಜ್ಞಾಪೂರ್ವಕವಾಗಿರುತ್ತದೆ. ಇಲ್ಲಿ, ಚಹಾ ಮಾಡಲು ಪಾತ್ರೆಪಗಡಿ ಬಳಸುವುದರಿಂದ ಹಿಡಿದು, ನಂತರ ಸಿದ್ಧಪಡಿಸಿದ ಚಹಾ ಸವಿಯುವ ತನಕದ ಪ್ರತಿಯೊಂದು ಕ್ರಿಯೆಯೂ ಅತಿಥಿಗಳಿಗೆ ವರ್ತಮಾನದ ಕ್ಷಣದಲ್ಲಿ ಮಗ್ನವಾಗಲು ಪೂರಕವಾಗಿರುವಂತೆ ವಿಧಿಬದ್ಧವಾಗಿ ನಡೆಯುತ್ತದೆ. ಜಪಾನಿನ ಸಂಸ್ಕೃತಿಯಲ್ಲಿ ಮಿಳಿತಗೊಂಡಿರುವ 'ಇಕಿಗಾಯ್' ತತ್ವವು ಅಲ್ಲಿನ ಮತ್ತೊಂದು ಪ್ರೇರಣಾದಾಯಕ ಸಂಗತಿಯಾಗಿದೆ. ವ್ಯಕ್ತಿಯ ಉದ್ಯೋಗದ ಉದ್ದೇಶವನ್ನು ಗುರುತಿಸುವ ಪರಿಕಲ್ಪನೆ ಇದಾಗಿರುತ್ತದೆ. ಅದು ದಿನನಿತ್ಯದ ಸಾಮಾನ್ಯ ಕೆಲಸವಾಗಿರಬಹುದು ಅಥವಾ ಜೀವನಪರ್ಯಂತದ ಉದ್ಯೋಗವಾಗಿರಬಹುದು, ಮಾಡುವ ಕಾಯಕದಲ್ಲಿ ಹಿತ ಕಾಣುವ ಹಾಗೂ ಅರ್ಥ ಶೋಧಿಸುವ ದೃಷ್ಟಿಕೋನ ಇದಾಗಿದೆ. ನಮ್ಮ ಬಹಳಷ್ಟು ಅತಿಥಿಗಳು ಜಪಾನ್ ಭೇಟಿಯ ವೇಳೆ 'ಇಕಿಗಾಯ್'ಗೆ ಖುದ್ದು ಸಾಕ್ಷಿಯಾಗಲು ತೀವ್ರವಾಗಿ ಹಂಬಲಿಸುತ್ತಾರೆ. ಇದನ್ನು ಮನಗಂಡು ನಾವು ಕೂಡ, 'ವೀಣಾ ವರ್ಲ್ಡ್'ನಲ್ಲಿ ನಮ್ಮ ಅತಿಥಿಗಳಿಗೆ ಜಪಾನ್ ಅನ್ವೇಷಣೆಯ ವೇಳೆ 'ಇಕಿಗಾಯ್' ಅನುಭವ ಲಭ್ಯವಾಗಿಸಲು ವ್ಯವಸ್ಥೆ ಮಾಡುತ್ತೇವೆ. ಜಪಾನ್‌ನಲ್ಲಿ ಇದನ್ನು ಸ್ಯಾಕಾಯ್‌ನಲ್ಲಿರುವ ಚಾಕು ತಯಾರಿಕಾ ವರ್ಕ್ ಶಾಪ್‌ಗಳಿಂದ ಹಿಡಿದು ಕೋಬಿಯಲ್ಲಿನ ವ್ಯಾಗ್ಯು ಬೀಫ್ ಫಾರ್ಮ್‌ಗಳವರೆಗೂ ಎಲ್ಲೆಡೆ ಕಾಣಬಹುದಾಗಿದೆ. ಇಲ್ಲಿಯ ಸಮೃದ್ಧ ಪ್ರಾಯೋಗಿಕ ಅನುಭವಗಳಲ್ಲಿ ಪ್ರವಾಸಿಗರು ತಮ್ಮನ್ನು ತಾವೇ ಮರೆತುಬಿಡುತ್ತಾರೆ; ಸ್ಥಳೀಯ ಕುಶಲಕರ್ಮಿಗಳೊಂದಿಗೆ ಕಲೆತು ಅವರ ಕುಶಲತೆಯ ಹಿಂದಿರುವ ನಿಖರತೆ ಹಾಗೂ ಶ್ರದ್ಧೆ ಕಂಡು ಬೆರಗಾಗುತ್ತಾರೆ. ಮತ್ತೊಂದು ರೀತಿಯಲ್ಲಿ ನೋಡಿದರೆ, ನಮ್ಮ ಅತಿಥಿಗಳಿಗೆ ಪ್ರವಾಸವೇ ಒಂದು "ಇಕಿಗಾಯ್" ಆಗಿ, ಅವರನ್ನು ಹೊಸ ಸಂಸ್ಕೃತಿಗಳು, ಪರಿಕಲ್ಪನೆಗಳು ಹಾಗೂ ಬದುಕಿನ ವಿಧಾನಗಳೊಂದಿಗೆ ಬೆಸೆಯುತ್ತದೆ.

ಜಪಾನಿನ ಹೆಸರಾಂತ ಸಾಕೂರ (ಚೆರ್ರಿ ಅರಳುವ) ಋತುವು ಆ ದೇಶದ 'ಮೋನೋ ನೋ ಅವಾರೆ' ದೃಷ್ಟಿಕೋನದ ಪ್ರತೀಕವಾಗಿದ್ದು ಬದುಕಿನ ಕ್ಷಣಿಕತೆಯನ್ನು ಸಂಕೇತಿಸುತ್ತದೆ. ಚೆರ್ರಿ ಮೊಗ್ಗುಗಳು ಅರಳಿ ಉದುರುವುದು ಭೌತಿಕ ಸಂಗತಿಗಳ ನಶ್ವರತೆಯನ್ನು ಸಾಕ್ಷೀಕರಿಸುತ್ತದೆ. ಜಪಾನೀಯರು ಕ್ಷಣಿಕತೆಯ ಸೌಂದರ್ಯವನ್ನು ಆರಾಧಿಸುವ ಜೊತೆಗೆ ವರ್ತಮಾನದ ಬದುಕಿಗೆ ತೀವ್ರವಾಗಿ ತುಡಿಯುವುದನ್ನು ಕೂಡ ಇದು ಬಿಂಬಿಸುತ್ತದೆ. ಜಪಾನಿಗೆ ಭೇಟಿ ನೀಡುವ ಪ್ರವಾಸಿಗರಿಗೆ ಆ ಜನರ ಈ ಮನೋಧೋರಣೆಯು ಸ್ಪಷ್ಟವಾಗಿ ಅರಿವಿಗೆ ಬರುತ್ತದೆ. ಈ ಎಲ್ಲಾ ಕಾರಣಗಳಿಗಾಗಿ, ಪ್ರವಾಸಿಗರು ಭೇಟಿ ನೀಡಿದಾಗ ಮನಸೂರೆಗೊಳ್ಳುವ ದೇಶ ಇದಾಗಿದೆ. ಪ್ರತಿಯೊಂದು ಋತುವಿನಲ್ಲೂ ಈ ದೇಶವು ಏನಾದರೊಂದು ಹೊಸತನ್ನು ಕೊಡಮಾಡುತ್ತದೆ– ವಸಂತದಲ್ಲಿ ಬಿರಿಯುವ ಚೆರ್ರಿ ನಸುಗುಲಾಬಿ, ಬೇಸಿಗೆಯಲ್ಲಿ ಸಂಭ್ರಮದ ಹಬ್ಬಗಳು, ಶರದೃತುವಿನಲ್ಲಿ ವರ್ಣಮಯ ಎಲೆಗಳು ಹಾಗೂ ಚಳಿಗಾಲದಲ್ಲಿ ಹಿಮಾಚ್ಛಾದಿತ ಪ್ರಶಾಂತ ದೇಗುಲಗಳು ಹೀಗೆ. 'ಮೋನೋ ನೋ ಅವಾರೆ'ಯು ಋತುವಿನ ಬದಲಾವಣೆಗಳನ್ನು ಆಸ್ವಾದಿಸುವುದರ ಮಹತ್ವವನ್ನು ನಮಗೆ ಕಲಿಸುತ್ತದೆ. ಬದುಕಿನಲ್ಲಿ ಯಾವುದೂ ಚಿರಂತನವಲ್ಲ ಎಂಬುದನ್ನು ನೆನಪಿಸುವ ಜೊತೆಗೆ ಪ್ರತಿಯೊಂದು ಕ್ಷಣವೂ ಅಮೂಲ್ಯ ಎಂಬ ಅರಿವು ಮೂಡಿಸುತ್ತದೆ.

ಮುಖ್ಯವಾಗಿ ಶರದೃತುವಿನ ಈ ಸಮಯವು ಜಪಾನ್ ಭೇಟಿಗೆ ಬಹಳ ಪ್ರಶಸ್ತವಾದುದು. ಅಕ್ಟೋಬರ್ ಕೊನೆಯಿಂದ ಡಿಸೆಂಬರ್ ಆರಂಭದವರೆಗಿನ ಸಂದರ್ಭವು ಜಪಾನಿನ ಪ್ರಕೃತಿಯು ಬಣ್ಣಗಳಲ್ಲಿ ಮೇಳೈಸುವ ಅವಧಿಯಾಗಿದ್ದು, ಮ್ಯಾಪಲ್ ಮರದೆಲೆಗಳು (ಮೊಮಿಜಿ) ಕೆಂಪು, ಕಿತ್ತಳೆ ಹಾಗೂ ಹೊಂಬಣ್ಣದ ಛಾಯೆಗಳಿಂದ ಕಣ್ಸೆಳೆಯುತ್ತವೆ. ಕ್ಯೂಟೊ ಅರಾಶಿಯಾಮ ಮತ್ತು ನೀಕೋದ ದೇವಸ್ಥಾನಗಳು ಶರದೃತುವಿನ ಭೂರಮಣೀಯತೆಯಿಂದ ಸಮ್ಮೋಹಕಗೊಳಿಸುತ್ತವೆ. ಪ್ರಾಚೀನ ದೇಗುಲಗಳು ಹಾಗೂ ಪರಿಶುಭ್ರ ಸರೋವರಗಳ ಪರಿಸರದಲ್ಲಿನ ಉದುರಿ ಚದುರಿದ ಉಜ್ವಲ ಎಲೆಗಳು ಪ್ರಪಂಚದಲ್ಲೇ ಅಪರೂಪದ ನೋಟಗಳನ್ನು ಲಭ್ಯವಾಗಿಸುತ್ತವೆ. ಮರಮರ ಸದ್ದು ಮಾಡುವ ಸುರಿದ ಎಲೆಗಳ ಮೇಲೆ ನಡೆಯುತ್ತಾ ದಿವ್ಯಮೌನದ ಕಾಡುದಾರಿಗಳಲ್ಲಿ ಸಾಗುತ್ತಿದ್ದರೆ ವರ್ಣಚಿತ್ರದ ಲೋಕದಲ್ಲಿದ್ದೇವೇನೋ ಎಂಬ ಭಾವ ಮೂಡುತ್ತದೆ.

ನೀವು ಚಳಿಗಾಲದ ಅನನ್ಯ ಅನುಭವಕ್ಕಾಗಿ ಬಯಸುತ್ತಿದ್ದರೆ, 'ತತೆಯಾಮ ಕುರೋಬೆ ಆಲ್ಪೈನ್ ರೂಟ್' ಭೇಟಿ ನೀಡಲೇಬೇಕಾದ ತಾಣವಾಗಿದೆ. ಉತ್ತರ ಜಪಾನಿನ ಆಲ್ಪ್‌ಗಳ ಮೂಲಕ ಸಾಗುವ ಈ ಅದ್ಭುತ ಮಾರ್ಗದಲ್ಲಿ ನಿಬ್ಬೆರಗಾಗಿಸುವ ಹಿಮ ಮುಸುಕಿದ ಭೂಪ್ರದೇಶಗಳಿಗೆ ಸಾಕ್ಷಿಯಾಗಬಹುದು. ಈ ಆಲ್ಪೈನ್ ಮಾರ್ಗವು ವಸಂತ ಋತುವಿನಲ್ಲಿ ಉದ್ಭವಿಸುವ ಬೃಹತ್ ಹಿಮಗೋಡೆಗಳಿಗೆ ಹೆಸರಾಗಿದ್ದು, ಈ ಗೋಡೆಗಳು 20 ಮೀಟರುಗಳಷ್ಟು (65 ಅಡಿಗಳು) ಎತ್ತರ ಮುಟ್ಟುತ್ತವೆ. ಮುಗಿಲಿಗೆ ಚಾಚಿದ ಶ್ವೇತವರ್ಣದ ನೈಸರ್ಗಿಕ ಗೋಡೆಗಳ ಗುಂಟ ಸಾಗುವಾಗ ಪ್ರಕೃತಿಯ ಮುಂದೆ ನಾವು ಹುಲುಮಾನವರಷ್ಟೇ ಎಂಬ ಭಾವನೆ ಮೂಡುತ್ತದೆ. ಹಿಮಾಚ್ಛಾದಿತ ಪರ್ವತಗಳು ಹಾಗೂ ಶ್ವೇತವರ್ಣದ ಕಣಿವೆಗಳು ಮನಸ್ಸನ್ನು ಪ್ರಶಾಂತತೆಯಿಂದ ಆವರಿಸುವ ಜೊತೆಗೆ ವಿನಮ್ರತೆ ಮೂಡಿಸಿ ಪ್ರಕೃತಿ ವಿಸ್ಮಯ ಕಣ್ತುಂಬಿಕೊಳ್ಳಲು ಹಂಬಲಿಸುವವರಿಗೆ ಹೇಳಿ ಮಾಡಿಸಿದಂತಿವೆ.

ನಿರಂತರ ಬದಲಾವಣೆಗಳನ್ನು ಕಾಣುವ ಭೂಪ್ರದೇಶಗಳು ಹಾಗೂ ಸಂಪ್ರದಾಯಗಳು ಜಪಾನಿನ ಚೈತನ್ಯಶೀಲತೆಯನ್ನು ಸಂಕೇತಿಸುತ್ತವೆ. ಟೋಕಿಯೋದ ಜನನಿಬಿಡ ರಸ್ತೆಗಳಿಂದ ಹಿಡಿದು ಕ್ಯೂಟೋದ ದಿವ್ಯಮೌನದವರೆಗೆ, ಭವ್ಯ ಫ್ಯೂಜಿ ಪರ್ವತದಿಂದ ಹಿಡಿದು ಒಸಾಕಾದ ರುಚಿಭರಿತ ಅಡುಗೆ ಖಾದ್ಯಗಳವರೆಗೆ ಜಪಾನ್ ದೇಶವು ಸರಿಸಾಟಿಯಿಲ್ಲದ ಅನುಭವಗಳನ್ನು ಕೊಡಮಾಡುತ್ತದೆ. ನೀವು ಟೋಕಿಯೋದಲ್ಲಿ ಟೀಮ್ ಲ್ಯಾಬ್ ಪ್ಲ್ಯಾನೆಟ್‌ನಂತಹ ಡಿಜಿಟಲ್ ಕಲಾಕೃತಿಗಳ ಬಳಿ ಸುಳಿದಾಡುತ್ತಿರಬಹುದು ಅಥವಾ ಕ್ಯೂಟೋದ ಜೆನ್ ಗಾರ್ಡನ್‌ನಲ್ಲಿ ಧ್ಯಾನಿಸುತ್ತಿರಬಹುದು, ಜಪಾನ್ ದೇಶವು ಹಳತು ಮತ್ತು ಹೊಸತನ್ನು ಪರಂಪರೆ ಹಾಗೂ ನಾವೀನ್ಯತೆಯ ಅವಿಚ್ಛಿನ್ನ ಸಂಯೋಜನೆಗಳೊಂದಿಗೆ ಅನ್ವೇಷಿಸಲು ಅವಕಾಶ ಕಲ್ಪಿಸುತ್ತದೆ.

ಜಪಾನ್ ಪ್ರವಾಸವೆಂಬುದು ಕೇವಲ ಭೇಟಿ ಆಗಿರುವುದಿಲ್ಲ; ಅದು, ಪ್ರಜ್ಞಾಪೂರ್ವಕತೆ, ಗೌರವ ಮತ್ತು ಸಮತೋಲನವನ್ನು ಮೌಲ್ಯಗಳೆಂದು ಪರಿಭಾವಿಸುವ ಸಂಸ್ಕೃತಿಯಲ್ಲಿ ಮಿಂದು ಮೀಯುವುದಾಗಿರುತ್ತದೆ. ಇಕಿಗಾಯ್ ಹಾಗೂ ಕಿಂತ್ಸೂಗಿಯ ತಾತ್ವಿಕತೆಗಳಿಂದ ಹಿಡಿದು ಮೋನೋ ನೋ ಅವಾರೆ ಹಾಗೂ ವಾಬಿ–ಸಾಬಿಯ ಸೊಬಗಿನವರೆಗೆ ಜಪಾನಿನ ಪ್ರತಿಯೊಂದು ಆಯಾಮವೂ ಉನ್ನತ ಧ್ಯೇಯದೊಂದಿಗೆ ಬದುಕಲು ಪ್ರೇರೇಪಿಸುವ ಜೊತೆಗೆ ಬದುಕಿನ ಪಯಣವನ್ನು ಹಾಗೂ ಅದರ ಅಪರಿಪೂರ್ಣತೆಗಳನ್ನು ಮೆಚ್ಚುವ ಬಗೆಯನ್ನು ಕಲಿಸುತ್ತದೆ. ಜಪಾನ್ ದೇಶದ ಸುತ್ತಾಟವು ಕೇವಲ ಭೌತಿಕ ಯಾನವಾಗಿರದೆ ಆಧ್ಯಾತ್ಮಿಕ ಮತ್ತು ಭಾವನಾತ್ಮಕ ಪಯಣಗಳನ್ನು ಕೂಡ ಕೊಡಮಾಡುತ್ತದೆ. ಈ ಅದ್ಭುತ ದೇಶವು ನೀಡುವ ಅನುಭವಗಳ ಬಗ್ಗೆ ಮೆಲುಕು ಹಾಕಿದಾಗ, ಸುದೀರ್ಘ ಅವಧಿಯ ನಂತರವೂ ಅದು ಹೃದಯದಲ್ಲಿ ಅಚ್ಚಳಿಯದೆ ಉಳಿಯುವ ದೇಶ ಎಂಬುದು ನನಗೆ ಸ್ಪಷ್ಟವಾಗುತ್ತದೆ. ಈಗ ನಿಮಗೆ ನನ್ನ ಪ್ರಶ್ನೆ ಏನೆಂದರೆ: ನಿಮ್ಮ ಮುಂದಿನ ಪ್ರವಾಸದಲ್ಲಿ ಜಪಾನ್ ನಿಮ್ಮನ್ನು ಹೇಗೆ ಪ್ರೇರೇಪಿಸುತ್ತದೆ?

ADVERTORIAL

ಪ್ರತಿವಾರವೂ ವಿವಿಧ ಮಾಧ್ಯಮಗಳಲ್ಲಿ ಪ್ರಕಟವಾಗುವ ಸುನೀಲಾ ಪಾಟೀಲ್, ವೀಣಾ ಪಾಟೀಲ್ ಮತ್ತು ನೀಲ್ ಪಾಟೀಲ್ ಅವರ ಲೇಖನಗಳನ್ನು ವೀಣಾ ವರ್ಲ್ಡ್ ವೆಬ್ಸೈಟ್ www.veenaworld.com ನಲ್ಲೂ ಓದಬಹುದು.

ಗಾಬಾದಲ್ಲಿ ಭಾರತಕ್ಕೆ ಕೊನೆಯ ಕ್ರಿಕೆಟ್ ಟೆಸ್ಟ್ ? ಮೊದಲ ದಿನದಾಟಕ್ಕೆ ಮಳೆ ಅಡ್ಡಿ

ಕಾಲಗರ್ಭ ಸೇರಲಿದೆ ಕನಸುಗಳ ತಾಣ

• ಮಧು ಜವಳಿ

ಬ್ರಿಸ್ಬೇನ್‌ನ ಗಾಬಾ ಕ್ರೀಡಾಂಗಣದಲ್ಲಿ ಭಾರತದ ಅಭಿಮಾನಿ –ಎಎಫ್‌ಪಿ ಚಿತ್ರ

ಬ್ರಿಸ್ಬೇನ್: ವುಲೂಂಗಾಬಾ ಅಥವಾ ಕ್ರಿಕೆಟ್ ಅಭಿಮಾನಿಗಳಿಗೆ ರೂಢಿಯಾಗಿರುವ ಗಾಬಾ ಬಹುಶಃ ಕೊನೆಯ ಬಾರಿಗೆ ಭಾರತ ತಂಡ ಆಡುತ್ತಿರುವ ಟೆಸ್ಟ್ ಪಂದ್ಯಕ್ಕೆ ಆತಿಥ್ಯ ವಹಿಸುತ್ತಿದೆ.

ಶನಿವಾರ ಇಲ್ಲಿ ಆರಂಭವಾದ ಬಾರ್ಡರ್–ಗಾವಸ್ಕರ್ ಟ್ರೋಫಿ ಟೆಸ್ಟ್ ಸರಣಿಯ ಮೂರನೇ ಪಂದ್ಯದ ಮೊದಲ ದಿನದಾಟದ ಬಹಳಷ್ಟು ಭಾಗವು ಮಳೆಯಿಂದಾಗಿ ಸ್ಥಗಿತವಾಯಿತು. ಆತಿಥೇಯ ಆಸ್ಟ್ರೇಲಿಯಾ 13.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 28 ರನ್ ಗಳಿಸಿದ್ದು ಮಾತ್ರ ದಿನದಾಟವಾಗಿತ್ತು.

ಒಂದಡೆ ಮಳೆಯ ಆಟ ನಡೆಯುತ್ತಿದ್ದರೆ, ಇನ್ನೊಂದೆಡೆ ಗಾಬಾದ ಇತಿಹಾಸ ಮತ್ತು ಭವಿಷ್ಯದ ಕುರಿತ ಚರ್ಚೆ ಬಿಸಿಯೇರಿತ್ತು. 2032ರ ಒಲಿಂಪಿಕ್ ಕೂಟವು ಬ್ರಿಸ್ಬೇನ್‌ನಲ್ಲಿ ನಡೆಯಲಿದೆ. ಆ ಹೊತ್ತಿಗೆ ಅತ್ಯಾಧುನಿಕ ಸೌಲಭ್ಯಗಳಿರುವ ಕ್ರಿಕೆಟ್ ಕ್ರೀಡಾಂಗಣವನ್ನು ನಿರ್ಮಿಸಲು ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ಯೋಜಿಸಿದೆ. ಅದರ ಅಂಗವಾಗಿ ಈ ಐತಿಹಾಸಿಕ ಕ್ರೀಡಾಂಗಣವನ್ನು ಕೆಡವಿ ಹೊಸದನ್ನು ಕಟ್ಟಲು ಯೋಜಿಸಲಾಗಿದೆ.

ಆಸ್ಟ್ರೇಲಿಯಾ ಮಾಧ್ಯಮ ವರದಿಗಳ ಪ್ರಕಾರ, ಸಿ.ಎ ಹಾಗೂ ಗಾಬಾದಲ್ಲಿ ಫುಟ್‌ಬಾಲ್ ಪಂದ್ಯಗಳನ್ನು ಆಯೋಜಿಸುವ ಬ್ರಿಸ್ಬೇನ್ ಲಯನ್ಸ್ ತಂಡದ ಆಡಳಿತವು ಮರುನಿರ್ಮಾಣದ ಕುರಿತು ಕ್ವೀನ್ಸ್‌ಲ್ಯಾಂಡ್ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಿದೆ. 100 ದಿನಗಳ ಒಲಿಂಪಿಕ್ ತಾಣ ಅವಲೋಕನದ ಅಂಗವಾಗಿ ಈ ಪ್ರಸ್ತಾವ ಸಲ್ಲಿಸಿದೆ.

‘ವಿಶ್ವ ದರ್ಜೆಯ ಕ್ರೀಡಾಂಗಣವನ್ನು ಅಭಿವೃದ್ಧಿಪಡಿಸಲು ಇದೊಂದು ಸುವರ್ಣಾವಕಾಶವಾಗಿದೆ. ಇದರಿಂದಾಗಿ ಕ್ವೀನ್ಸ್‌ಲ್ಯಾಂಡ್ ಪ್ರಾಂತ್ಯಕ್ಕೆ ಬಹಳ ದೊಡ್ಡ ಲಾಭವಾಗುತ್ತದೆ ಮತ್ತು ಪಾರಂಪರಿಕ ಮೌಲ್ಯ ಹೆಚ್ಚುತ್ತದೆ’ ಎಂದು ಪ್ರಸ್ತಾವದ ಕುರಿತು ಸಿ.ಎ ನಿರ್ಗಮಿತ ಅಧ್ಯಕ್ಷ ನಿಕ್ ಹಾಕ್ಲೀ ಅವರು ಆಸ್ಟ್ರೇಲಿಯಾ ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದಾರೆ.

ಎಲ್ಲವೂ ಯೋಜನೆಯಂತೆ ಸಾಗಿದರೆ ವಿಕ್ಟೋರಿಯಾ ಪಾರ್ಕ್‌ನಲ್ಲಿ ನೂತನ ಕ್ರೀಡಾಂಗಣ ತಲೆಯೆತ್ತಲಿದೆ.

‘ಈ ಮೈದಾನದೊಂದಿಗೆ ಹಲವಾರು ನೆನಪುಗಳು ಇವೆ. ಆದರೆ ಕೆಲವು ಅನಾನುಕೂಲಗಳೂ ಇವೆ. ವಾಹನಗಳ ನಿಲುಗಡೆಯೂ ಅದರಲ್ಲೊಂದಾಗಿದೆ’ ಎಂದು ಸ್ಥಳೀಯ ಕ್ರೀಡಾ ಪತ್ರಕರ್ತ ರಾಬರ್ಟ್ ಕ್ರಾಡಿಕ್ ಹೇಳುತ್ತಾರೆ.

‘ಆಸ್ಟ್ರೇಲಿಯಾದ ಟೆಸ್ಟ್ ತಾಣಗಳಲ್ಲಿ ಗಾಬಾಕ್ಕೆ 5ನೇ ಸ್ಥಾನವಿದೆ. ಕ್ರೀಡಾಂಗಣದೊಂದಿಗೆ ನೂರಾರು ನೆನಪುಗಳಿವೆ, ಭಾವನಾತ್ಮಕ ನಂಟು ಇದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಕಾಲದೊಂದಿಗೆ ಮುನ್ನಡೆಯುವುದು ಕೂಡ ಅಗತ್ಯ. ವಿಶ್ವದ ವೇಗಕ್ಕನುಗುಣವಾಗಿ ಸಾಗಬೇಕು’ ಎಂದೂ ರಾಬರ್ಟ್ ಹೇಳುತ್ತಾರೆ.

ಟೆಸ್ಟ್ ಕ್ರಿಕೆಟ್ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಪಂದ್ಯವೊಂದು ಟೈ ಆದ ತಾಣ ಇದಾಗಿದೆ. ಆಗ ಸರ್ ಡಾನ್ ಬ್ರಾಡ್ಮನ್ ಅವರು, ‘ಟೆಸ್ಟ್ ಕ್ರಿಕೆಟ್‌ನಲ್ಲಿ ಅತ್ಯದ್ಭುತವಾದ ಫಲಿತಾಂಶ ಇದಾಗಿದೆ’ ಎಂದು ಹೇಳಿದ್ದರು. ಶನಿವಾರ (ಡಿಸೆಂಬರ್ 14) ಟೈ ಟೆಸ್ಟ್ ಮುಗಿದು 64 ವರ್ಷಗಳು ತುಂಬಿದವು.

ಆಸ್ಟ್ರೇಲಿಯಾದ ಅಗ್ರಮಾನ್ಯ ಕ್ರೀಡಾಂಗಣದಲ್ಲಿ ಗಾಬಾ ಕೂಡ ಒಂದು. ಆಸ್ಟ್ರೇಲಿಯಾವು ಪ್ರತಿ ಬಾರಿಯೂ ಬಾರ್ಡರ್–ಗಾವಸ್ಕರ್ ಟ್ರೋಫಿಯನ್ನು ಆಯೋಜಿಸಿದಾಗಲೆಲ್ಲ ಸರಣಿಯ ಮೊದಲ ಪಂದ್ಯವನ್ನು ಇಲ್ಲಿ ನಡೆಸುವ ಸಂಪ್ರದಾಯವಿತ್ತು. ಆದರೆ ಈ ಬಾರಿಯ ಸರಣಿಯ ಮೊದಲ ಪಂದ್ಯವನ್ನು ಪರ್ತ್‌ನ ಆಪ್ಟಸ್ ಕ್ರೀಡಾಂಗಣದಲ್ಲಿ ನಡೆಸಲಾಯಿತು.

ಭಾರತದ ಅಭಿಮಾನಿಗಳಿಗೂ ಈ ಕ್ರೀಡಾಂಗಣದೊಂದಿಗೆ ಭಾವನಾತ್ಮಕ ನಂಟು ಇದೆ. ಪ್ರಮುಖವಾಗಿ 2020–21ರಲ್ಲಿ ಭಾರತ ಇಲ್ಲಿ ಜಯಿಸಿತ್ತು. ಅ1968ರಲ್ಲಿ ಭಾರತ ತಂಡವು 395 ರನ್‌ಗಳ ಕಠಿಣ ಗುರಿಯನ್ನು ಬೆನ್ನಟ್ಟಿತ್ತು. ಭಾರತ ತಂಡವು ಜಯದ ಸನಿಹಕ್ಕೆ ಬಂದಿತ್ತು. ಮೋಟಗಾನಹಳ್ಳಿ ಜೈಸಿಂಹ ಶತಕ (101), ರೂಸಿ ಸೂರ್ತಿ (64), ನಾಯಕ ಮನ್ಸೂರ್ ಅಲಿ ಖಾನ್ ಪಟೌಡಿ (48) ಮತ್ತು ಚಂದು ಬೋರ್ಡೆ (63) ಅವರು ಮಿಂಚಿದ್ದರು. ಅದರಿಂದಾಗಿ ಗೆಲುವಿನ ಭರವಸೆ ಮೂಡಿತ್ತು. ಆದರೆ ತಂಡವು 355 ರನ್‌ಗಳಿಗೆ ಆಲೌಟ್ ಆಯಿತು. ಆಸ್ಟ್ರೇಲಿಯಾ 39 ರನ್‌ಗಳಿಂದ ಜಯಿಸಿತು. ಹೈದರಾಬಾದಿನ ಸ್ಟೈಲಿಷ್ ಬ್ಯಾಟರ್ ಜೈಸಿಂಹ ಅವರು ಬ್ರಿಸ್ಬೇನ್‌ಗೆ ಕೊನೆಯ ಕ್ಷಣದಲ್ಲಿ ಬಂದಿಳಿದಿದ್ದರು.

ಸ್ಪಿನ್ನರ್ ಬಿ.ಎಸ್. ಚಂದ್ರಶೇಖರ್ ಗಾಯಗೊಂಡಿದ್ದ ಕಾರಣ ಜೈಸಿಂಹ ಅವರನ್ನು ಸೇರ್ಪಡೆ ಮಾಡಲಾಗಿತ್ತು. ಅಲ್ಲಿಯ ವಾತಾವರಣಕ್ಕೆ ಹೊಂದಿಕೊಳ್ಳಲು ಅವರಿಗೆ ತೀರಾ ಅಲ್ಪ ಸಮಯ ಒದಗಿತ್ತು. ಅದರೂ ಮೊದಲ ಇನಿಂಗ್ಸ್‌ನಲ್ಲಿ ಅವರು 74 ಮತ್ತು ಎರಡನೇಯದ್ದರಲ್ಲಿ ಶತಕ ದಾಖಲಿಸಿದ್ದರು.

1977ರ ಡಿಸೆಂಬರ್‌ನಲ್ಲಿ ಸುನಿಲ್ ಗಾವಸ್ಕರ್ (113), ಸೈಯದ್ ಕಿರ್ಮಾನಿ (55) ಮತ್ತು ಬಿಷನ್ ಸಿಂಗ್ ಬೇಡಿ ಅವರ ಛಲದ ಬ್ಯಾಟಿಂಗ್ (26) ಭಾರತೀಯರು ಸದಾಕಾಲ ನೆನಪಿಡುವಂತಹದ್ದು. ಆ ಪಂದ್ಯದಲ್ಲಿ 341 ರನ್‌ಗಳ ಗುರಿ ಬೆನ್ನಟ್ಟಿದ್ದ ಭಾರತ 16 ರನ್‌ಗಳಿಂದ ಸೋತಿತ್ತು.

ಪ್ರಸ್ತುತ ಭಾರತ ತಂಡದ ಆಟಗಾರರಿಗೂ ಕೂಡ ಈ ಕ್ರೀಡಾಂಗಣದಲ್ಲಿ ಹಲವು ಸುಂದರ ನೆನಪುಗಳಿವೆ. ಕ್ರೀಡಾಂಗಣ ಬದಲಾದರೂ ನೆನಪುಗಳ ಹಾಗೆಯೇ ಇರುತ್ತವೆ.

ಟಿಕೆಟ್ ಹಣ ಮರಳಿಸಲು ನಿರ್ಧಾರ

ಬ್ರಿಸ್ಬೇನ್ (ಪಿಟಿಐ): ಮಳೆಯಿಂದಾಗಿ ಮೊದಲ ದಿನದಾಟವು ಸ್ಥಗಿತವಾದ ಕಾರಣಕ್ಕೆ ಪ್ರೇಕ್ಷಕರಿಗೆ ಟಿಕೆಟ್ ಹಣವನ್ನು ಹಿಂದಿರುಗಿಸುವುದಾಗಿ ಕ್ರಿಕೆಟ್ ಆಸ್ಟ್ರೇಲಿಯಾ (ಸಿಎ) ಘೋಷಿಸಿದೆ.

15 ಓವರ್‌ಗಳಿಗಿಂತ ಕಡಿಮೆ ಆಟವು ನಡೆದು ದಿನದಾಟ ಸ್ಥಗಿತವಾದರೆ ಟಿಕೆಟ್ ಹಣ ಮರಳಿಸಬೇಕು ಎಂಬ ನಿಯಮದಡಿಯಲ್ಲಿ ಈ ಕ್ರಮ ಕೈಗೊಳ್ಳಲಾಗುತ್ತಿದೆ. ಭಾರತ ಮತ್ತು ಆಸ್ಟ್ರೇಲಿಯಾ ನಡುವಣ ಈ ಪಂದ್ಯದ ಮೊದಲ ದಿನದಾಟದಲ್ಲಿ ಕೇವಲ 13.2 ಓವರ್‌ಗಳಷ್ಟು ಆಟ ಮಾತ್ರ ನಡೆಯಿತು.

ಬೆಂಗಳೂರು ಫುಟ್‌ಬಾಲ್ ಕ್ಲಬ್ ತಂಡದ ಜಾರ್ಜ್ ರೋಲ್ಯಾಂಡ್ ಪೆರೇರಾ ಡಯಾಜ್ ಅವರು ಚೆಂಡನ್ನು ಗೋಲ್ ಪೋಸ್ಟ್‌ನತ್ತ ಕಿಕ್ ಮಾಡಿದರು. ಪ್ರಜಾವಾಣಿ ಚಿತ್ರ ಎಸ್.ಕೆ. ದಿನೇಶ್

ಸೋಲು ತಪ್ಪಿಸಿಕೊಂಡ ಬಿಎಫ್‌ಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎರಡು ಗೋಲುಗಳ ಹಿನ್ನಡೆಯಿಂದ ಚೇತರಿಸಿಕೊಂಡ ಆತಿಥೇಯ ಬೆಂಗಳೂರು ಎಫ್‌ಸಿ, ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಪಂದ್ಯದಲ್ಲಿ ಶನಿವಾರ ಎಫ್‌ಸಿ ಗೋವಾ ಜೊತೆ 2–2 ಗೋಲುಗಳ ಡ್ರಾ ಮಾಡಿಕೊಂಡಿತು. ತನ್ಮೂಲಕ ‘ಬ್ಲೂಸ್’ ತಂಡ ತವರಿನಲ್ಲಿ ಅಜೇಯ ದಾಖಲೆ ಮುಂದುವರಿಸಿದೆ.

ಚೆಟ್ರಿ ಬಳಗ ತವರಿನಲ್ಲಿ ಈ ಋತುವಿನಲ್ಲಿ ಆಡಿದ ಏಳು ಪಂದ್ಯಗಳಲ್ಲಿ ಐದು ಗೆದ್ದು, ಎರಡನ್ನು ಡ್ರಾ ಮಾಡಿಕೊಂಡಿದೆ. ಬಿಎಫ್‌ಸಿ 12 ಪಂದ್ಯಗಳಿಂದ 24 ಪಾಯಿಂಟ್ಸ್ ಕಲೆಹಾಕಿದೆ. ತನ್ನ ಮುಂದಿನ ಪಂದ್ಯವನ್ನು ಚೆನ್ನೈನಲ್ಲಿ ಚೆನ್ನೈಯಿನ್ ಎಫ್‌ಸಿ ವಿರುದ್ಧ ಡಿಸೆಂಬರ್ 28ರಂದು ಆಡಲಿದೆ.

ಮೊದಲ 10 ನಿಮಿಷ ಗೋವಾ ತಂಡ ಮೇಲುಗೈ ಸಾಧಿಸಿತು. ಚೆಂಡು ಬಹುತೇಕ ಆ ತಂಡದ ಆಟಗಾರರ ಹಿಡಿತದಲ್ಲೇ ಇತ್ತು. ಕಾರ್ನರ್, ಫ್ರೀಕಿಕ್ ಅವಕಾಶಗಳು ಆ ತಂಡಕ್ಕೆ ಹೆಚ್ಚು ದೊರೆತವು. ಏಳನೇ ನಿಮಿಷ ದೊರೆತ ಇಂಥ ಒಂದು ಫ್ರೀಕಿಕ್‌ನಲ್ಲಿ ದೇಜಾನ್ ಡ್ರಾಝಿಕ್ ಅವರು ಅಂಗಣದ ಬಲಮೂಲೆಯಿಂದ ಒದ್ದ ಚೆಂಡು ಗೋಲಿನ ಎದುರು ತೇಲಿಬಂದಿತು. ಬಾಕ್ಸ್‌ನ ಮಧ್ಯೆ ಬೆಂಗಳೂರು ಎಫ್‌ಸಿ ರಕ್ಷಣೆ ಆಟಗಾರರ ಸರ್ಪಗಾವಲಿನಲ್ಲಿದ್ದರೂ ಅನುಭವಿ ಸಂದೇಶ್ ಜಿಂಗಾನ್ ಅಮೋಘ ರೀತಿಯಲ್ಲಿ ಜಿಗಿದು ಚೆಂಡನ್ನು ಗೋಲಿನೊಳಗೆ ಹೆಡ್ ಮಾಡಿದರು.

ಬೆಂಗಳೂರು ಎಫ್‌ಸಿ ಸಾವರಿಸಿಕೊಂಡು ಪ್ರತಿದಾಳಿಗಳನ್ನು ನಡೆಸಿತು. 150ನೇ ಐಎಸ್‌ಎಲ್ ಪಂದ್ಯ ಆಡುತ್ತಿರುವ ನಾಯಕ ಸುನೀಲ್ ಚೆಟ್ರಿ ಮುಂಚೂಣಿಯಲ್ಲಿದ್ದರು. 14ನೇ ನಿಮಿಷ ಅವರ ಅತ್ಯುತ್ತಮ ಯತ್ನವೊಂದನ್ನು ಎಫ್‌ಸಿ ಗೋವಾದ ಗೋಲಿ ಹೃತಿಕ್ ತಿವಾರಿ ಕೊನೆಗಳಿಗೆಯಲ್ಲಿ ತಡೆದರು. ಆತಿಥೇಯ ತಂಡದ ಈ ನಿರಂತರ ದಾಳಿಗಳ ಹೊರತಾಗಿಯೂ ಮತ್ತೆ ಗೋಲು ಗಳಿಸಿ ಮುನ್ನಡೆ ಹೆಚ್ಚಿಸಿದ್ದು ಗೋವಾ ತಂಡವೇ. 66ನೇ ನಿಮಿಷ ಸಾಹಿಲ್ ತವೋರಾ ಅವರು ಗೋಲು ಗಳಿಸಿದರು.

ಸಂಕ್ಷಿಪ್ತ ಸುದ್ದಿ

ಹೃದಯಾಘಾತದಿಂದ ಕಬಡ್ಡಿ ಪಟು ನಿಧನ

ಪ್ರೀತಂ ಶೆಟ್ಟಿ

ಹೆಬ್ರಿ (ಉಡುಪಿ): ರಾಜ್ಯಮಟ್ಟದ ಕಬಡ್ಡಿ ಆಟಗಾರ, ತಾಲ್ಲೂಕಿನ ಮುಟ್ಲುಪಾಡಿ ನಡುಮನೆ ಪ್ರೀತಂ ಶೆಟ್ಟಿ (26) ಮಂಡ್ಯ ಜಿಲ್ಲೆಯ ನಾಗಮಂಗಲದಲ್ಲಿ ಶುಕ್ರವಾರ ಪಂದ್ಯದ ವೇಳೆಯೇ ಹೃದಯಾಘಾತದಿಂದ ನಿಧನರಾಗಿದ್ದಾರೆ.

ಅಲ್ಲಿನ ಟೂರ್ನಿಯೊಂದರ ಪಂದ್ಯ ಆರಂಭಗೊಂಡ ಕೆಲವೇ ಕ್ಷಣಗಳಲ್ಲಿ ಅವರಿಗೆ ಎದೆನೋವು ಕಾಣಿಸಿಕೊಂಡಿತ್ತು. ಅಂಗಣದಲ್ಲೇ ಕುಸಿದುಬಿದ್ದರು. ಸಹ ಆಟಗಾರರು ಅವರನ್ನು ಆಸ್ಪತ್ರೆಗೆ ಕರೆದೊಯ್ಯುವಷ್ಟರಲ್ಲಿ ಮೃತಪಟ್ಟಿದ್ದರು. ಅವರಿಗೆ ತಾಯಿ ಮತ್ತು ಸಹೋದರ ಇದ್ದಾರೆ.

ಪ್ರೀತಂ ಶೆಟ್ಟಿ ಅವರು ವಿಶ್ವವಿದ್ಯಾಲಯ ಹಾಗೂ ರಾಜ್ಯಮಟ್ಟದ ಕಬಡ್ಡಿ ಆಟಗಾರರಾಗಿದ್ದರು. ಮುದ್ರಾಡಿಯಲ್ಲಿ ಈಚೆಗೆ ನೇತಾಜಿ ಫ್ರೆಂಡ್ಸ್ ಕ್ಲಬ್ ಆಯೋಜಿಸಿದ್ದ ಹೊನಲು ಬೆಳಕಿನ ಅಂತರರಾಜ್ಯ ಟೂರ್ನಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಉದ್ಯೋಗಕ್ಕಾಗಿ ಜನವರಿಯಲ್ಲಿ ವಿದೇಶಕ್ಕೆ ತೆರಳುವ ಸಿದ್ಧತೆಯಲ್ಲಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅಂತ್ಯಕ್ರಿಯೆ ಭಾನುವಾರ ಬೆಳಿಗ್ಗೆ ಮುಟ್ಲುಪಾಡಿಯಲ್ಲಿ ನಡೆಯಲಿದೆ.

ಹಾಕಿ ಫೈನಲ್‌ಗೆ ಭಾರತ ಲಗ್ಗೆ

ಮಸ್ಕತ್ (ಪಿಟಿಐ): ಹಾಲಿ ಚಾಂಪಿಯನ್ ಭಾರತ ವನಿತೆಯರ ತಂಡವು ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯ ಫೈನಲ್ ಪ್ರವೇಶಿಸಿತು.

ಶನಿವಾರ ಇಲ್ಲಿ ನಡೆದ ಸೆಮಿಫೈನಲ್‌ನಲ್ಲಿ ಭಾರತ ತಂಡವು 3–1ರಿಂದ ಜಪಾನ್ ಎದುರು ಜಯಿಸಿತು.

ಮುಮ್ತಾಜ್ ಖಾನ್ (4ನೇ ನಿಮಿಷ), ಸಾಕ್ಷಿ ರಾಣಾ (5ನಿ), ದೀಪಿಕಾ (13ನಿ) ಅವರು ಗೋಲು ಹೊಡೆದು ಭಾರತ ತಂಡದ ಗೆಲುವಿಗೆ ಕಾರಣರಾದರು. ಜಪಾನ್ ತಂಡದ ನಿಕೊ ಮರುಯಾಮಾ 23ನೇ ನಿಮಿಷದಲ್ಲಿ ಗೋಲು ಗಳಿಸಿದರು.

ಪಂದ್ಯದ ಆರಂಭದಿಂದಲೂ ಭಾರತ ತಂಡವು ಪಾರಮ್ಯ ಮೆರೆಯಿತು. ಕೊನೆಯವರೆಗೂ ಪಂದ್ಯದ ಅವಧಿಯು ಏಕಪಕ್ಷೀಯವಾಗಿತ್ತು.

ಮೊದಲ ಕ್ವಾರ್ಟರ್‌ನಲ್ಲಿ ಜಪಾನ್ ತಂಡಕ್ಕೆ ಡ್ರ್ಯಾಗ್ ಫ್ಲಿಕ್ ಅವಕಾಶ ಒದಗಿತ್ತು. ಆದರೆ ಅದು ಗೋಲಿನಲ್ಲಿ ಪರಿವರ್ತನೆಯಾಗಲು ಸುನಿಲಿತಾ ಟೊಪ್ಪೊ ಬಿಡಲಿಲ್ಲ.

ಬೆಂಗಳೂರಿನಲ್ಲಿ ಡಬ್ಲ್ಯುಪಿಎಲ್ ಬಿಡ್ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳಾ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಆಟಗಾರ್ತಿಯರ ಬಿಡ್ ಪ್ರಕ್ರಿಯೆ ಭಾನುವಾರ ನಡೆಯಲಿದೆ. ಒಟ್ಟು 120 ಆಟಗಾರ್ತಿಯರು ಸ್ಪರ್ಧೆಯಲ್ಲಿದ್ದಾರೆ. ಒಟ್ಟು ಐದು ಫ್ರ್ಯಾಂಚೈಸಿಗಳು ಬಿಡ್ ಮಾಡಲಿವೆ.

ಇದರಲ್ಲಿ 91 ಭಾರತೀಯ ಮತ್ತು 29 ವಿದೇಶಿ ಆಟಗಾರ್ತಿಯರು ಇದ್ದಾರೆ.

ಬಹುತೇಕ ಎಲ್ಲ ಫ್ರ್ಯಾಂಚೈಸಿಗಳು ತಮ್ಮ ತಂಡಗಳ ಪ್ರಮುಖ ಆಟಗಾರ್ತಿಯರನ್ನು ರಿಟೇನ್ ಮಾಡಿಕೊಂಡಿವೆ.

ಅದರಿಂದಾಗಿ 19 ಆಟಗಾರ್ತಿಯರಿಗಾಗಿ ಅವಕಾಶ ಇದೆ. ಇದರಲ್ಲಿ ಐವರು ವಿದೇಶಿ ಆಟಗಾರ್ತಿಯರಿದ್ದಾರೆ.

ಈ ಬಿಡ್‌ನಲ್ಲಿ ಪ್ರಮುಖ ಆಟಗಾರ್ತಿಯರಾದ ತೇಜಲ್ ಹಸಬ್ನಿಸ್, ಸ್ನೇಹ ರಾಣಾ (ಭಾರತ), ದಿಯಾಂದ್ರ ಡಾಟಿನ್ (ವೆಸ್ಟ್ ಇಂಡೀಸ್), ಹೀಥರ್ ನೈಟ್ (ಇಂಗ್ಲೆಂಡ್), ಒರ್ಲಾ ಪ್ರೆಂಡರ್‌ಗಸ್ಟ್ (ಐರ್ಲೆಂಡ್), ಲಾರೆನ್ ಬೆಲ್ (ಇಂಗ್ಲೆಂಡ್), ಕಿಮ್ ಗಾರ್ತ್ (ಆಸ್ಟ್ರೇಲಿಯಾ) ಮತ್ತು ಡೇನೀಲ್ ಗಿಬ್ಸನ್ (ಇಂಗ್ಲೆಂಡ್) ಅವರು ಇದ್ದಾರೆ.

ಸ್ನೇಹ ರಾಣಾ

ಪರ್ಸ್ ಮೌಲ್ಯ (₹ ಕೋಟಿ)

ತಂಡ	ಮೌಲ್ಯ
ಡೆಲ್ಲಿ ಕ್ಯಾಪಿಟಲ್ಸ್	2.5
ಗುಜರಾತ್ ಜೈಂಟ್ಸ್	4.4
ಮುಂಬೈ ಇಂಡಿಯನ್ಸ್	2.65
ಯುಪಿ ವಾರಿಯರ್ಸ್	3.9
ಆರ್‌ಸಿಬಿ	3.25

ಆರಂಭ: ಮಧ್ಯಾಹ್ನ 2.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಮಿಂಚಿದ ಪವನ್; ಟೈಟನ್ಸ್‌ಗೆ ಜಯ

ಪುಣೆ (ಪಿಟಿಐ): ಒಂದು ಹಂತದಲ್ಲಿ 9 ಅಂಕಗಳ ಹಿನ್ನಡೆಯಲ್ಲಿದ್ದ ಪವನ್ ಸೆಹ್ರಾವತ್ ನೇತೃತ್ವದ ತೆಲುಗು ಟೈಟನ್ಸ್ ತಂಡ ಸಕಾಲದಲ್ಲಿ ಚೇತರಿಸಿಕೊಂಡು ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಶನಿವಾರ ಗುಜರಾತ್ ಜೈಂಟ್ಸ್ ತಂಡವನ್ನು 36–32ರಲ್ಲಿ ನಾಲ್ಕು ಪಾಯಿಂಟ್‌ಗಳಿಂದ ಸೋಲಿಸಿತು. ಈ ಗೆಲುವಿನೊಡನೆ ಪ್ಲೇ ಆಫ್ ಅವಕಾಶವನ್ನು ಜೀವಂತವಾಗಿರಿಸಿಕೊಂಡಿತು.

ಉತ್ಸಾಹದಿಂದ ಆಡಿದ ಪವನ್ 12 ಅಂಕ ಗಳಿಸಿದರು. ವಿಜಯ್ ಮಲಿಕ್ (8) ಮತ್ತು ಆಶಿಶ್ ನರ್ವಾಲ್ (6) ಬೆಂಬಲ ನೀಡಿದರು. ಗುಜರಾತ್ ತಂಡಕ್ಕೆ ರಾಕೇಶ್ 12 ಪಾಯಿಂಟ್ಸ್ ಗಳಿಸಿಕೊಟ್ಟರೆ, ಗುಮನ್ ಸಿಂಗ್ 9 ಅಂಕ ಕಲೆಹಾಕಿದರು. ಮೊದಲಾರ್ಧದಲ್ಲಿ ಪವನ್ ಅವನ್ನು ಅಂಕೆಯಲ್ಲಿಟ್ಟಿದ್ದ ಗುಜರಾತ್ ತಂಡ ವಿರಾಮದ ವೇಳೆ 18–11 ರಿಂದ ಮುಂದೆ ಸಾಗಿತ್ತು.

ದಬಾಂಗ್ ಡೆಲ್ಲಿ ಕೆ.ಸಿ. ತಂಡ ದಿನದ ಎರಡನೇ ಪಂದ್ಯದಲ್ಲಿ 44–37 ಅಂಕಗಳಿಂದ ಅಗ್ರಸ್ಥಾನದಲ್ಲಿರುವ ಹರಿಯಾಣ ಸ್ಟೀಲರ್ಸ್ ತಂಡವನ್ನು ಸೋಲಿಸಿತು. ಈ ಗೆಲುವಿನೊಡನೆ ಮೂರನೇ ಸ್ಥಾನದಿಂದ ಎರಡನೇ ಸ್ಥಾನಕ್ಕೆ ಬಡ್ತಿ ಪಡೆಯಿತು. ಡೆಲ್ಲಿ ನಾಯಕ ಆಶು ಮಲಿಕ್ 15 ಪಾಯಿಂಟ್ಸ್ ಗಳಿಸಿ ಮಿಂಚಿದರು.

ಭಾನುವಾರದ ಪಂದ್ಯಗಳು: ತಮಿಳ್ ತಲೈವಾಸ್– ಜೈಪುರ ಪಿಂಕ್ ಪ್ಯಾಂಥರ್ಸ್ (ರಾತ್ರಿ 8); ಯು ಮುಂಬಾ– ಯುಪಿ ಯೋಧಾಸ್ (ರಾತ್ರಿ 9)

ಗುಲ್ಬದಿನ್ ನೈಬ್‌ಗೆ ದಂಡ

ದುಬೈ (ಪಿಟಿಐ): ಜಿಂಬಾಬ್ವೆ ವಿರುದ್ಧ ಶುಕ್ರವಾರ ಎರಡನೆ ಟಿ20 ಪಂದ್ಯದ ವೇಳೆ ಅಂಪೈರ್ ನಿರ್ಧಾರದ ವಿರುದ್ಧ ಅನುಚಿತ ನಡವಳಿಕೆ ತೋರಿದ ಅಫ್ಗಾನಿಸ್ತಾನ ತಂಡದ ಆಲ್‌ರೌಂಡರ್ ಗುಲ್ಬದಿನ್ ನೈಬ್ ಅವರಿಗೆ ಪಂದ್ಯ ಸಂಭಾವನೆಯ ಶೇ 15ರಷ್ಟು ದಂಡ ವಿಧಿಸಲಾಗಿದೆ.

ಅಫ್ಗಾನಿಸ್ತಾನ ಆ ಪಂದ್ಯ ಗೆದ್ದು ಸರಣಿಯನ್ನು 1–1 ಸಮಬಲ ಮಾಡಿಕೊಂಡಿತ್ತು. ‘ಐಸಿಸಿ ನೀತಿಸಂಹಿತೆಯ ಲೆವೆಲ್ 1 ಉಲ್ಲಂಘನೆಗಾಗಿ ಅಫ್ಗಾನಿಸ್ತಾನದ ಗುಲ್ಬದಿನ್ ನೈಬ್ ಅವರಿಗೆ ಪಂದ್ಯ ಸಂಭಾವನೆಯ 15ರಷ್ಟು ದಂಡ ವಿಧಿಸಲಾಗಿದೆ’ ಎಂದು ಐಸಿಸಿ ಹೇಳಿಕೆಯಲ್ಲಿ ತಿಳಿಸಿದೆ. ‘ಕ್ರಿಕೆಟರ್ ತಪ್ಪೊಪ್ಪಿಕೊಂಡಿದ್ದು, ದಂಡನೆಗೆ ಸಮ್ಮತಿಸಿದ್ದಾರೆ’ ಎಂದು ಮ್ಯಾಚ್ ರೆಫ್ರಿ ಆ್ಯಂಡಿ ಪೈಕ್ರಾಫ್ಟ್ ತಿಳಿಸಿದ್ದಾರೆ.

ಗುಲ್ಬದಿನ್ ನೈಬ್

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮೊಹಮ್ಮದ್ ಆಮೀರ್ ವಿದಾಯ

ಕರಾಚಿ (ಎಎಫ್‌ಪಿ): ಪಾಕಿಸ್ತಾನದ ವಿವಾದಾತ್ಮಕ ಎಡಗೈ ವೇಗದ ಬೌಲರ್ ಮೊಹಮ್ಮದ್ ಆಮೀರ್ ಅವರು ಶನಿವಾರ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಮತ್ತೆ ವಿದಾಯ ಹೇಳಿದರು.

2010ರಲ್ಲಿ ಇಂಗ್ಲೆಂಡ್ ವಿರುದ್ಧ ಟೆಸ್ಟ್ ಪಂದ್ಯದಲ್ಲಿ ಸ್ಪಾಟ್ ಫಿಕ್ಸಿಂಗ್ ಆರೋಪದ ಮೇಲೆ ಸಲ್ಮಾನ್ ಬಟ್, ಮೊಹಮ್ಮದ್ ಆಸಿಫ್ ಜೊತೆ ಐದು ವರ್ಷ ಜೈಲು ಶಿಕ್ಷೆ ಅನುಭವಿಸಿದ್ದ ಅವರು 2016ರಲ್ಲಿ ಕ್ರಿಕೆಟ್‌ಗೆ ಮರಳಿದ್ದರು.

32 ವರ್ಷ ವಯಸ್ಸಿನ ಬೌಲರ್ ಈ ವರ್ಷದ ಮಧ್ಯದಲ್ಲಿ ನಿವೃತ್ತಿಯಿಂದ ಹೊರಬಂದು ಅಮೆರಿಕದಲ್ಲಿ ನಡೆದ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದರು. 2021ರ ಡಿಸೆಂಬರ್‌ನಲ್ಲಿ ಮೊದಲ ಬಾರಿ ನಿವೃತ್ತಿ ಘೋಷಿಸಿದ್ದರು. 2016ರಲ್ಲಿ ಅವರು ರಾಷ್ಟ್ರೀಯ ತಂಡಕ್ಕೆ ಮರಳಿದ್ದರು. ಆಮೀರ್ 36 ಟೆಸ್ಟ್‌ಗಳನ್ನು ಆಡಿದ್ದು 119 ವಿಕೆಟ್‌ಗಳನ್ನು ಪಡೆದಿದ್ದಾರೆ.

ಮೊದಲ ಟಿ20 ಪಂದ್ಯ ಇಂದು:ಒತ್ತಡದಲ್ಲಿ ಭಾರತ ತಂಡ

ಕೌರ್ ಪಡೆಗೆ ವಿಂಡೀಸ್ ಸವಾಲು

ನವಿಮುಂಬೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ಅವರ ನಾಯಕತ್ವ ಈಗ ಆಯ್ಕೆಗಾರರ ಕಣ್ಗಾವಲಿನಲ್ಲಿದೆ. ಆಸ್ಟ್ರೇಲಿಯಾ ಪ್ರವಾಸದಲ್ಲಿ ಏಕದಿನ ಸರಣಿಯನ್ನು 0–3 ರಿಂದ ಕಳೆದುಕೊಂಡ ನಂತರ ತಂಡ ಒತ್ತಡದಲ್ಲಿದ್ದು, ತಕ್ಷಣ ಹೊಸ ಸವಾಲಿಗೆ ಅಣಿಯಾಗಬೇಕಿದೆ. ಭಾನುವಾರ ಕೌರ್ ಪಡೆ ಪ್ರವಾಸಿ ವೆಸ್ಟ್ ಇಂಡೀಸ್ ತಂಡದ ವಿರುದ್ಧ ಇಲ್ಲಿನ ಡಿ.ವೈ.ಪಾಟೀಲ ಕ್ರೀಡಾಂಗಣದಲ್ಲಿ ಮಹಿಳಾ ಟಿ20 ಕ್ರಿಕೆಟ್ ಸರಣಿಯ ಮೊದಲ ಪಂದ್ಯವನ್ನು ಆಡಲಿದೆ.

ಭಾರತ ತಂಡವು 2019ರ ನವೆಂಬರ್‌ನಿಂದ ವೆಸ್ಟ್ ಇಂಡೀಸ್ ವಿರುದ್ಧ ಚುಟುಕು ಮಾದರಿಯ ಎಲ್ಲಾ ಎಂಟು ಪಂದ್ಯಗಳನ್ನು ಗೆದ್ದುಕೊಂಡಿದೆ. ಆದರೆ ಅದೇ ಲಹರಿಯಲ್ಲಿ ಈಗ ಮುಂದುವರಿಯುವುದು ತಂಡಕ್ಕೆ ಸವಾಲು ಎನಿಸಿದೆ. ತಂಡದ ಸಂಪನ್ಮೂಲ, ವಿಶ್ವಾಸದ ಮಟ್ಟ ಮೊದಲಿನಂತಿಲ್ಲ. ಆಸ್ಟ್ರೇಲಿಯಾ ಪ್ರವಾಸದ ವೇಳೆ ಹರ್ಮನ್‌ಪ್ರೀತ್ ಕೌರ್ ಅವರ ಕೆಲವು ನಿರ್ಧಾರಗಳು ಪ್ರಶ್ನಾರ್ಹವಾಗಿದ್ದವು.

ನಾಯಕಿ ಹರ್ಮನ್‌ಪ್ರೀತ್ ಕೌರ್

ಟಿ20 ವಿಶ್ವಕಪ್‌ನಿಂದ ಬೇಗನೇ ಹೊರಬಿದ್ದ ನಂತರ ಇದು ಭಾರತ ಆಡುತ್ತಿರುವ ಮೊದಲ ಚುಟುಕು ಕ್ರಿಕೆಟ್ ಸರಣಿಯಾಗಿದೆ. ವಿಶ್ವಕಪ್ ನಂತರ ಭಾರತ ಮಹಿಳೆಯರ ತಂಡ ನ್ಯೂಜಿಲೆಂಡ್ ವಿರುದ್ಧ ತವರಿನಲ್ಲಿ ಏಕದಿನ ಪಂದ್ಯಗಳ ಸರಣಿ ಜಯಿಸಿತ್ತು. ಆದರೆ ಆಸ್ಟ್ರೇಲಿಯಾ ಪ್ರವಾಸದ ವೇಳೆ ಏಕದಿನ ಸರಣಿಯಲ್ಲಿ ಆತಿಥೇಯ ತಂಡದಿಂದ ಕ್ಲೀನ್‌ಸ್ವೀಪ್‌ಗೆ ಒಳಗಾಗಿತ್ತು.

ಭಾರತ ತಂಡವು ಈಗ ಆಸ್ಟ್ರೇಲಿಯಾ ಪ್ರವಾಸದ ಹಿನ್ನಡೆಯ ಗುಂಗಿನಿಂದ ತುರ್ತಾಗಿ ಹೊರಬೇಕಾಗಿದೆ. ಕಳೆದ ಬುಧವಾರವಷ್ಟೇ ಅಲ್ಲಿ ಕೊನೆಯ ಏಕದಿನ ಪಂದ್ಯ ಆಡಿದ್ದ ಭಾರತಕ್ಕೆ ತವರಿಗೆ ಬಂದು ಸುಧಾರಿಸಿಕೊಳ್ಳಲು ಸಮಯ ಸಿಕ್ಕಿಲ್ಲ.

ಮೂರು ಪಂದ್ಯಗಳ ಟಿ20 ಸರಣಿಯ ಪ್ರತಿ ಪಂದ್ಯದ ಮಧ್ಯೆ ಒಂದೊಂದು ವಿಶ್ರಾಂತಿ ದಿನಗಳಿವೆ. ಹೀಗಾಗಿ ತಂಡದ ಫಿಟ್ನೆಸ್ ಮತ್ತು ನೈತಿಕ ಸ್ಥೈರ್ಯ ಪರೀಕ್ಷೆಗೊಳಪಡಲಿದೆ.

ಪ್ರಮುಖ ಆಟಗಾರ್ತಿಯರಾದ ಪೂಜಾ ವಸ್ತ್ರಾಕರ್, ಶ್ರೇಯಾಂಕ ಪಾಟೀಲ, ಯಷ್ಟಿಕಾ ಭಾಟಿಯಾ, ಪ್ರಿಯಾ ಪೂನಿಯಾ, ಎಲ್ಲಕ್ಕಿಂತ ಮುಖ್ಯವಾಗಿ ಶಫಾಲಿ ತಂಡದಲ್ಲಿಲ್ಲ.

ವೆಸ್ಟ್ ಇಂಡೀಸ್ ಕೂಡ ಪ್ರಮುಖ ಟೂರ್ನಿಗಳಲ್ಲಿ ಉತ್ತಮ ನಿರ್ವಹಣೆ ತೋರಿಲ್ಲ. ಆದರೆ ಈ ವರ್ಷ ಆಡಿದ 13 ಟಿ20 ಪಂದ್ಯಗಳಲ್ಲಿ ಕೆರಿಬಿಯನ್ ಆಟಗಾರ್ತಿಯರು 9ರಲ್ಲಿ ಜಯಗಳಿಸಿದ್ದಾರೆ. ಟಿ

ವೆಸ್ಟ್ ಇಂಡೀಸ್ ತಂಡ, ಡಿಯಾಂಡ್ರ ಡಾಟಿನ್ ಅವರನ್ನು ಸೇರ್ಪಡೆ ಮಾಡಿಕೊಂಡಿದೆ. ಆದರೆ ಅನುಭವಿ ಆಲ್‌ರೌಂಡರ್ ಸ್ಟಫಾನಿ ಟೇಲರ್ ಗಾಯಾಳಾಗಿರುವ ಕಾರಣ ತಂಡದಲ್ಲಿಲ್ಲ.

ಪಂದ್ಯ ಆರಂಭ: ರಾತ್ರಿ 7.00

ನೀರಜ್ ಜರ್ಸಿ ಸೇರ್ಪಡೆ

ಮೊನಾಕೊ: ಭಾರತದ ತಾರಾ ಜಾವೆಲಿನ್ ಪಟು ನೀರಜ್ ಚೋಪ್ರಾ ಸೇರಿ ವಿಶ್ವದ ಅಗ್ರ 23 ಅಥ್ಲೀಟ್‌ಗಳ ಜೆರ್ಸಿಗಳನ್ನ ವಿಶ್ವ ಅಥ್ಲೆಟಿಕ್ಸ್ ಪಾರಂಪರಿಕಾ ಸಂಗ್ರಹಾಲಯದಲ್ಲಿ ಸೇಪರ್ಡೆಗೊಳಿಸಲಾಗಿದೆ. ಸದ್ಯ ವಿಶ್ವ ಅಥ್ಲೆಟಿಕ್ಸ್‌ನ ವಸ್ತು ಸಂಗ್ರಹಾಲಯದ ಆನ್‌ಲೈನ್ 3ಡಿ ವೇದಿಕೆಯಲ್ಲಿ ಪ್ರದರ್ಶಿಲಾಗುತ್ತಿದೆ. ಪ್ಯಾರಿಸ್ ಒಲಿಂಪಿಕ್ಸ್ ಕ್ರೀಡಾ ಕೂಟದಲ್ಲಿ ಭಾರತದ ಅಥ್ಲೀಟ್ ನೀರಜ್ ಚೋಪ್ರಾ ಜಾವೆಲಿನ್ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

ಸೈಯದ್ ಮುಷ್ತಾಕ್ ಅಲಿ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿ ಫೈನಲ್ ಇಂದು

ಮುಂಬೈ, ಮಧ್ಯಪ್ರದೇಶ ಮುಖಾಮುಖಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶ್ರೇಯಸ್ ಅಯ್ಯರ್ ನಾಯಕತ್ವದ ಮುಂಬೈ ತಂಡವನ್ನು ಒಂದು ಬಾರಿ ನೋಡಿದರೆ ಈ ಬಾರಿಯ ಸೈಯದ್ ಮುಷ್ತಾಕ್ ಅಲಿ ಟಿ20 ಚಾಂಪಿಯನ್ ಆಗುವುದು ಖಚಿತ ಎಂಬ ದೃಢವಾದ ಭಾವನೆ ಬರುವುದು ಖಚಿತ.

ಇಡೀ ಟೂರ್ನಿಯಲ್ಲಿ ಅಬ್ಬರಿಸುತ್ತಿರುವ ಈ ತಂಡದ ತಾರಾ ಬ್ಯಾಟರ್‌ಗಳು ಇಂತಹ ಭಾವನೆ ಮೂಡಲು ಕಾರಣರಾಗಿದ್ದಾರೆ. ಅದರಿಂದಲೇ ಭಾನುವಾರ ಮಧ್ಯಪ್ರದೇಶ ಎದುರು ನಡೆಯಲಿರುವ ಫೈನಲ್ ಪಂದ್ಯದಲ್ಲಿ ಮುಂಬೈ ತಂಡವು ಜಯಿಸುವ ನೆಚ್ಚಿನ ತಂಡವಾಗಿ ಕಣಕ್ಕಿಳಿಯಲಿದೆ.

ಟೂರ್ನಿಯಲ್ಲಿ ಅತಿ ಹೆಚ್ಚು ರನ್ ಗಳಿಸಿರುವ ಹಾಗೂ ಕ್ವಾರ್ಟರ್‌ಫೈನಲ್, ಸೆಮಿಫೈನಲ್ ಪಂದ್ಯಗಳಲ್ಲಿ ಅಲ್ಪ ಅಂತರದಲ್ಲಿ ಶತಕ ತಪ್ಪಿಸಿಕೊಂಡಿದ್ದ ಅಜಿಂಕ್ಯ ರಹಾನೆ (436 ರನ್) ಅವರಿಗೆ ಮರುಜನ್ಮ ನೀಡಿದ ಟೂರ್ನಿ ಇದಾಗಿದೆ. ಅವರು ಐದು ಅರ್ಧಶತಕಗಳನ್ನು ಹೊಡೆದಿದ್ದಾರೆ. 170ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದ್ದಾರೆ.

ಮಧ್ಯಪ್ರದೇಶ ತಂಡದ ನಾಯಕ ರಜತ್ ಪಾಟೀದಾರ್

ಮುಂಬೈ ತಂಡದ ನಾಯಕ ಶ್ರೇಯಸ್ ಅಯ್ಯರ್

ನಾಯಕ ಶ್ರೇಯಸ್ 3ನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿ 329 ರನ್‌ಗಳನ್ನು ಪೇರಿಸಿದ್ದಾರೆ. 189ರ ಸ್ಟ್ರೈಕ್ ರೇಟ್ ಅವರದ್ದಾಗಿದೆ. ಇವರಿಬ್ಬರ ಆಟದಿಂದಾಗಿ ತಂಡದ ಉಳಿದ ಬ್ಯಾಟರ್‌ಗಳ ಸಾಧಾರಣ ಪ್ರದರ್ಶನ ಮರೆಮಾಚಿದೆ. ಅದರಲ್ಲೂ ಸೂರ್ಯಕುಮಾರ್ ಯಾದವ್, ಶಿವಂ ದುಬೆ ಮತ್ತು ಪೃಥ್ವಿ ಶಾ ಅವರೂ ಉತ್ತಮ ಲಯಕ್ಕೆ ಮರಳಿದರೆ ಎದುರಾಳಿಗಳಿಗೆ ಹಾದಿ ಕಠಿಣವಾಗಬಹುದು.

ಬೌಲರ್‌ಗಳೂ ಪಂದ್ಯವನ್ನು ಗೆಲ್ಲಿಸಿಕೊಡಬಲ್ಲ ಸಮರ್ಥರಾಗಿದ್ದಾರೆ. ಸೆಮಿಫೈನಲ್‌ನಲ್ಲಿ ಬರೋಡಾ ಎದುರು ಮೋಹಿತ್ ಅವಸ್ಥಿ, ಶಾರ್ದೂಲ್ ಠಾಕೂರ್, ದುಬೆ, ಸ್ಪಿನ್ನರ್‌ಗಳಾದ ತನುಷ್ ಕೋಟ್ಯಾನ್, ಸೂರ್ಯಾಂಶ್ ಶೆಡಗೆ ಮತ್ತು ಅಥರ್ವ್ ಅಂಕೋಲೇಕರ್ ಅವರು ಉತ್ತಮವಾಗಿ ಬೌಲಿಂಗ್ ಮಾಡಿದ್ದರು. ಆದರೆ ಮಧ್ಯಪ್ರದೇಶ ತಂಡವು ಅಚ್ಚರಿಯ ಫಲಿತಾಂಶ ನೀಡಲು ಕಾತುರವಾಗಿದೆ. ನಾಲ್ಕರ ಘಟ್ಟದ ಪಂದ್ಯದಲ್ಲಿ ನಾಯಕ ರಜತ್ ಪಾಟೀದಾರ್ ಅಬ್ಬರದ ಬ್ಯಾಟಿಂಗ್ ಮಾಡಿದ್ದರು.

ಮಧ್ಯಮ ಕ್ರಮಾಂಕದಲ್ಲಿರುವ ಆಲ್‌ರೌಂಡರ್ ವೆಂಕಟೇಶ್ ಅಯ್ಯರ್ (210 ರನ್) ಉತ್ತಮ ಲಯದಲ್ಲಿದ್ದಾರೆ. ಅವರು ಈಚೆಗೆ ಐಪಿಎಲ್ ಹರಾಜಿನಲ್ಲಿ ₹ 23.75 ಕೋಟಿಗೆ ಬಿಡ್ ಆಗಿದ್ದರು.

ಬೌಲಿಂಗ್‌ನಲ್ಲಿ ಆವೇಶ್ ಖಾನ್ (10 ವಿಕೆಟ್), ತ್ರಿಪುರೇಶ್ ಸಿಂಗ್ (7 ವಿಕೆಟ್) ಮತ್ತು ಸ್ಪಿನ್ನರ್ ಕುಮಾರ ಕಾರ್ತಿಕೇಯ (16 ವಿಕೆಟ್) ಅವರು ಮುಂಬೈ ಬ್ಯಾಟಿಂಗ್ ಪಡೆಗೆ ಸವಾಲೊಡ್ಡಬಲ್ಲ ಸಮರ್ಥರಾಗಿದ್ದಾರೆ.

ಪಂದ್ಯ ಆರಂಭ: ಸಂಜೆ 4.30
ನೇರಪ್ರಸಾರ: ಸ್ಪೋರ್ಟ್ಸ್ 18